ಸೋಮವಾರ, ಅಕ್ಟೋಬರ್ 11, 2021 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನವರಾತ್ರಿ ಸಂಭ್ರಮ

ನವರಾತ್ರಿ ಉತ್ಸವದ ಅಂಗವಾಗಿ ಕಲಬುರಗಿಯಲ್ಲಿ ಭಾನುವಾರ ಇನ್ನರ್‌ವೀಲ್ ಕ್ಲಬ್ ಆಫ್ ನಾರ್ತ್ ಆಯೋಜಿಸಿದ್ದ ‘ಸನ್‌ಸಿಟಿ ದಾಂಡಿಯಾ ಉತ್ಸವ–2021ರಲ್ಲಿ’ ಹೆಣ್ಣುಮಕ್ಕಳು ಲಂಬಾಣಿ ದಿರಿಸಿನಲ್ಲಿ ಗಮನ ಸೆಳೆದರು

ಒಂದೇ ಕಟ್ಟಡದಲ್ಲಿ ಪ್ರೌಢಶಾಲೆ ಹಾಗೂ ಕಾಲೇಜು ವಿದ್ಯಾರ್ಥಿಗಳ ಕಲಿಕೆ • ಕೆಲ ಶಾಲೆಗಳಿಗೆ ಹೈಟೆಕ್ ಸ್ಪರ್ಶ • ಬಹುಪಾಲು ಶಾಲೆಗಳು ಸುಣ್ಣ–ಬಣ್ಣವನ್ನೇ ಕಂಡಿಲ್ಲ

ಸೋರುತಿವೆ ಬಿಬಿಎಂಪಿ ಶಾಲೆಗಳು



ಆಸ್ಟಿಂಗ್ ಟೌನ್‌ನಲ್ಲಿರುವ ಬಿಬಿಎಂಪಿ ಪ್ರೌಢ ಶಾಲೆ ಮತ್ತು ಕಾಲೇಜಿನ ಹಳೆಯ ಕಟ್ಟಡದ ಮುಂದೆ ಪೊದೆಗಳು ಬೆಳೆದಿದ್ದು, ನೀರು ಕೂಡ ನಿಂತಿದೆ. ಆದರಲ್ಲೇ ಮಕ್ಕಳು ಓಡಾಡಬೇಕಾದ ಸ್ಥಿತಿ ಇದೆ – ಪ್ರಜಾವಾಣಿ ಚಿತ್ರ

• ಜಿ.ಶಿವಕುಮಾರ

ಬೆಂಗಳೂರು: ಚಾವಣಿಯಿಂದ ಪಟಪಟನೆ ಉದುರುವ ಮಳೆ ನೀರಿನ ಹನಿಗಳು. ಗೋಡೆಗಳ ಮೇಲೆ ಚಾಚಿರುವ ಪಾಚಿ. ಅಲ್ಲಲ್ಲಿ ಒಡೆದಿರುವ ಕಿಟಕಿ ಗಾಜುಗಳು. ಕಾಲಿಟ್ಟರೆ ಜಾರುವ ಸಿಮೆಂಟ್ ನೆಲ. ತುಕ್ಕು ಹಿಡಿದಿರುವ ಕಿಟಕಿಯ ಸರಳುಗಳು...

ಉದ್ಯಾನನಗರಿಯಲ್ಲಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ಬಹುಪಾಲು ಶಾಲೆಗಳಲ್ಲಿ ಕಂಡ ದೃಶ್ಯಗಳಿವು.

ಬಡ ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದು ಎಂಬ ಕಾರಣಕ್ಕೆ ಪಾಲಿಕೆಯು ನಗರದಲ್ಲಿ ಸುಮಾರು 146 ಶಾಲೆ, ಕಾಲೇಜು ಹಾಗೂ ನರ್ಸರಿಗಳನ್ನು ಆರಂಭಿಸಿದೆ. ಈ ಪೈಕಿ ಹಲವು ಶಾಲೆಗಳ ಸ್ಥಿತಿ ಶೋಚನೀಯವಾಗಿದೆ. ಬೆಂಗಳೂರು ಉತ್ತರ, ದಕ್ಷಿಣ ಹಾಗೂ ಪೂರ್ವ ವಲಯಗಳಲ್ಲಿರುವ ಅನೇಕ ಶಾಲಾ ಕಟ್ಟಡಗಳು 50, 60 ವರ್ಷಗಳಷ್ಟು ಹಳೆಯದಾಗಿವೆ. ಇವು ಸುಣ್ಣ ಬಣ್ಣ ಕಾಣದೆ ವರ್ಷಗಳೇ ಉರುಳಿವೆ. ಶಿಥಿಲಾವಸ್ಥೆಯಲ್ಲಿರುವ ಈ ಕಟ್ಟಡಗಳಲ್ಲಿ ವಿದ್ಯಾರ್ಥಿಗಳು ಉಸಿರು ಬಿಗಿಹಿಡಿದೇ ಪಾಠ ಕೇಳಬೇಕಾದ ಪರಿಸ್ಥಿತಿ ಇದೆ.

ಕೆಲ ಕಟ್ಟಡಗಳ ನವೀಕರಣವಾಗಿದ್ದರೂ ಪರಿಸ್ಥಿತಿ ಮಾತ್ರ ಬದಲಾಗಿಲ್ಲ. ಮಳೆ ನೀರು ಸರಾಗವಾಗಿ ಸಾಗಲು ಸರಿಯಾದ ವ್ಯವಸ್ಥೆಯನ್ನೇ ಮಾಡಿಲ್ಲ. ಹೀಗಾಗಿ ಚಾವಣಿಯಲ್ಲೇ ನೀರು ಸಂಗ್ರಹವಾಗುತ್ತದೆ. ಇದರಿಂದ ಕೆಲವೆಡೆ ತರಗತಿ ಕೊಠಡಿಗಳಲ್ಲಿ ಮಳೆ ನೀರು ಸೋರುತ್ತಿವೆ. ತೇವಾಂಶದಿಂದ ಗೋಡೆಯ ಮೇಲ್ಪದರವೇ ಕಿತ್ತುಹೋಗಿವೆ. ಜೋರು ಮಳೆ ಸುರಿದರೆ ಶಾಲೆಗಳ ಆವರಣ ಕೆರೆಯಂತಾಗಿಬಿಡುತ್ತದೆ. ಆ ನೀರಿನಲ್ಲಿ ಹಾದು ಹೋಗಲು ಮಕ್ಕಳು ಹರಸಾಹಸ ಪಡುವ ಸ್ಥಿತಿಯೂ ಇದೆ.

ಪಡ್ಡೆ ಹುಡುಗರ ಅಡ್ಡೆ: ‘ಕೊಳೆಗೇರಿಗಳು ಹಾಗೂ ಬಡವರೇ ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುವ ಪ್ರದೇಶಗಳಲ್ಲಿ ಇರುವ ಶಾಲಾ ಕಟ್ಟಡಗಳು ಪಡ್ಡೆ ಹುಡುಗರ ಅಡ್ಡೆಗಳಾಗಿವೆ. ಸಂಜೆಯಾದರೆ ಶಾಲಾ ಆವರಣ ಪ್ರವೇಶಿಸುವ ಪುಂಡರು ಅಲ್ಲೇ ಗಾಂಜಾ ಸೇದುತ್ತಾರೆ. ರಾತ್ರಿ ಮದ್ಯಪಾನ ಮಾಡಿ ಬಾಟಲಿಗಳನ್ನು ಒಡೆದು ಹಾಕುತ್ತಾರೆ. ಕಾಂಪೌಂಡ್ ಹಾರಿ ಬಂದು ಶಾಲೆ ಹಾಗೂ ಕಾಲೇಜಿನ ವಿದ್ಯಾರ್ಥಿನಿಯರನ್ನು ಚುಡಾಯಿಸುತ್ತಾರೆ’ ಎಂದು ಆಸ್ಟಿನ್ ಟೌನ್‌ನ ನಿವಾಸಿಯೊಬ್ಬರು ದೂರಿದರು.

‘ಕೆಲವರು ಸಾಕು ನಾಯಿಗಳನ್ನು ತಂದು ಶಾಲಾ ಆವರಣದಲ್ಲಿ ಬಿಡುತ್ತಾರೆ. ಅವು ಅಲ್ಲೇ ಮಲ ಮೂತ್ರ ವಿಸರ್ಜಿಸುತ್ತವೆ. ಇನ್ನೂ ಕೆಲವರು ದನಗಳನ್ನೂ ತಂದು ಮೈದಾನದಲ್ಲಿ ಬಿಟ್ಟು ಹೋಗುತ್ತಾರೆ. ಆ ಬಗ್ಗೆ ಪ್ರಶ್ನಿಸಿದರೆ ನಮ್ಮ ಮೇಲೆ ಹಲ್ಲೆಗೆ ಮುಂದಾಗುತ್ತಾರೆ. ಗೇಟಿಗೆ ಬೀಗ ಹಾಕಿದರೆ ಅದನ್ನು ಒಡೆದು ಒಳ ನುಗ್ಗುತ್ತಾರೆ. ಪೊಲೀಸ್ ಠಾಣೆಗೆ ದೂರು ನೀಡಿದರೂ ಅವರ ಹಾವಳಿ ತಪ್ಪಿಲ್ಲ. ಪಾಲಿಕೆಯ ಸದಸ್ಯರು ಹಾಗೂ ಸ್ಥಳೀಯ ಮುಖಂಡರು ಅವರ ಬೆಂಬಲಕ್ಕೆ ನಿಲ್ಲುತ್ತಾರೆ. ಪ್ರವೇಶ ನಿರಾಕರಿಸಿದರೆ ನಮಗೆ ಕರೆ ಮಾಡಿ ಅವಾಚ್ಯ ಶಬ್ದಗಳಿಂದ ನಿಂದಿಸುತ್ತಾರೆ. ಹೀಗಾಗಿ ಯಾರನ್ನೂ ತಡೆಯುವ ಗೋಜಿಗೆ ಹೋಗುತ್ತಿಲ್ಲ’ ಎಂದು ಕಾಲೇಜೊಂದರ ಭದ್ರತಾ ಸಿಬ್ಬಂದಿ ಹೇಳಿದರು.

ಇಂಟರ್‌ನೆಟ್ ಸೌಕರ್ಯವೇ ಇಲ್ಲ: ಶಾಲಾ ಹಂತದಿಂದಲೇ ಮಕ್ಕಳನ್ನು ತಂತ್ರಜ್ಞಾನ ಲೋಕಕ್ಕೆ ಅಣಿಗೊಳಿಸುವುದಾಗಿ ಸರ್ಕಾರ ಹೇಳುತ್ತಿದೆ. ಈ ದಿಸೆಯಲ್ಲಿ ಡಿಜಿಟಲ್ ಕಲಿಕೆಗೆ ಒತ್ತು ನೀಡುವುದಾಗಿ ತಿಳಿಸಿದೆ. ಅದಕ್ಕೆ ಅಗತ್ಯವಿರುವ ಮೂಲ ಸೌಕರ್ಯಗಳನ್ನು ಕಲ್ಪಿಸುವುದಾಗಿಯೂ ಹೇಳಿದೆ. ಆದರೆ, ಬಿಬಿಎಂಪಿಯ ಕೆಲ ಶಾಲೆ ಹಾಗೂ ಕಾಲೇಜುಗಳು ಈಗಲೂ ಇಂಟರ್‌ನೆಟ್ ಸೌಲಭ್ಯದಿಂದ ವಂಚಿತವಾಗಿವೆ.

‘ನಮ್ಮಲ್ಲಿ ಕಂಪ್ಯೂಟರ್ ಲ್ಯಾಬ್ ಇದೆ. ವಿದ್ಯಾರ್ಥಿಗಳಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ಇಂಟರ್‌ನೆಟ್ ಸಂಪರ್ಕ ಕಲ್ಪಿಸಿದ್ದೆವು. ಅದಕ್ಕಾಗಿ ಮಾಸಿಕ ₹3,500 ಹಣ ಪಾವತಿಸಬೇಕಿತ್ತು. ಈ ಮೊತ್ತ ನೀಡಲು ಬಿಬಿಎಂಪಿ ಅಧಿಕಾರಿಗಳು ನಿರಾಕರಿಸಿದರು. ಪ್ರತಿ ತಿಂಗಳು ಅಷ್ಟು ಮೊತ್ತ ಪಾವತಿಸಲು ನಮ್ಮಿಂದ ಸಾಧ್ಯವಿಲ್ಲ. ಹೀಗಾಗಿ ಇಂಟರ್‌ನೆಟ್ ಸಂಪರ್ಕವನ್ನೇ ಕಡಿತಗೊಳಿಸಿದ್ದೇವೆ. ನಮ್ಮಲ್ಲಿ ಗ್ರಂಥಾಲಯ ಕೂಡ ಇಲ್ಲ’ ಎಂದು ಕಾಲೇಜೊಂದರ ಉಪನ್ಯಾಸಕರು ಅಸಮಾಧಾನ ವ್ಯಕ್ತಪಡಿಸಿದರು.

‘ಕಾಲೇಜಿನ ಅವ್ಯವಸ್ಥೆ ಸರಿಪಡಿಸುವಂತೆ ಅಧಿಕಾರಿಗಳಿಗೆ ಹಲವು ಬಾರಿ ಮನವಿ ಮಾಡಿದ್ದೇವೆ. ಅದಕ್ಕೆ ಯಾರೂ ಸಕಾರಾತ್ಮಕವಾಗಿ ಸ್ಪಂದಿಸಿಲ್ಲ. ಹೀಗಾಗಿ ಅವ್ಯವಸ್ಥೆಯ ನಡುವೆಯೂ ತರಗತಿಗಳನ್ನು ನಡೆಸುವುದು ಅನಿವಾರ್ಯವಾಗಿದೆ’ ಎಂದರು.

ಗುಣಮಟ್ಟದ ಶಿಕ್ಷಣದ ಕೊರತೆ: ‘ಶಾಲೆಗಳಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ನಿರ್ವಹಿಸುತ್ತಿರುವ ಶಿಕ್ಷಕರಿಗೆ ಸರಿಯಾಗಿ ಸಂಬಳವನ್ನೇ ಪಾವತಿಸುತ್ತಿಲ್ಲ. ಹೀಗಾಗಿ ಅವರು ಪಾಠ ಮಾಡುವತ್ತ ಚಿತ್ತ ಹರಿಸುತ್ತಿಲ್ಲ. ಕೆಲ ಶಿಕ್ಷಕರು ಸರಿಯಾಗಿ ತರಗತಿಗಳನ್ನೇ ನಡೆಸುವುದಿಲ್ಲ. ಬೇಕಾಬಿಟ್ಟಿ ರಜೆ ಹಾಕುತ್ತಾರೆ. ಊರಿಗೆ ಹೋದರೆ ವಾರ ಕಳೆದರೂ ಬರುವುದಿಲ್ಲ. ಶಿಕ್ಷಕರ ವರ್ಗಾವಣೆಯೂ ಎಗ್ಗಿಲ್ಲದೆ ನಡೆಯುತ್ತದೆ. ಹೀಗಾಗಿ ಮಕ್ಕಳು ಕಲಿಕೆಯಲ್ಲಿ ಹಿಂದುಳಿಯುತ್ತಿದ್ದಾರೆ’ ಎಂದು ಶಾಂತಿನಗರದ ಮಂಜುನಾಥ್ ಹೇಳಿದರು.

ಕೆಲವೆಡೆ ಕೊಠಡಿಗಳ ಅಭಾವ

ಕೋವಿಡ್ ಬಳಿಕ ಅನೇಕರ ಬದುಕು ತಲ್ಲಣಗೊಂಡಿದೆ. ಖಾಸಗಿ ಶಾಲೆಗಳಿಗೆ ಲಕ್ಷಾಂತರ ರೂಪಾಯಿ ಶುಲ್ಕ ಕಟ್ಟಲಾಗದ ಸ್ಥಿತಿಗೆ ತಲುಪಿರುವ ಹಲವು ಪೋಷಕರು ಮಕ್ಕಳನ್ನು ಬಿಬಿಎಂಪಿ ಶಾಲೆಗಳಿಗೆ ಸೇರಿಸುತ್ತಿದ್ದಾರೆ. ಹೀಗಾಗಿ ಪಾಲಿಕೆಯ ಶಾಲೆಗಳಲ್ಲಿ ದಾಖಲಾತಿ ಏರುತ್ತಿದೆ. ಆದರೆ, ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಕೊಠಡಿಗಳನ್ನು ಹೆಚ್ಚಿಸುವ ಕೆಲಸ ಆಗಿಲ್ಲ.

‘30 ಮಂದಿಯ ಸಾಮರ್ಥ್ಯವಿರುವ ಕೊಠಡಿಗಳಲ್ಲಿ 50ಕ್ಕೂ ಹೆಚ್ಚು ವಿದ್ಯಾರ್ಥಿಗಳು ಕುಳಿತು ಪಾಠ ಕೇಳುವುದು ಅನಿವಾರ್ಯವಾಗಿದೆ. ಹೆಚ್ಚುವರಿ ಕೊಠಡಿಗಳನ್ನು ನಿರ್ಮಿಸುವಂತೆ ಅಧಿಕಾರಿಗಳಿಗೆ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ’ ಎಂದು ಪ್ರಾಂಶುಪಾಲರೊಬ್ಬರು ಬೇಸರ ವ್ಯಕ್ತಪಡಿಸಿದರು.

ಬೆಂಗಳೂರಿನ ಬನ್ನಪ್ಪ ಪಾರ್ಕ್ ಬಳಿ ಇರುವ ಬಿಬಿಎಂಪಿ ಸಂಯುಕ್ತ ಪದವಿ ಪೂರ್ವ ಕಾಲೇಜು ಮತ್ತು ಪ್ರೌಢ ಶಾಲಾ ವಿಭಾಗ ಕಟ್ಟಡದ ಗೋಡೆ ಮೇಲೆ ಪಾಚಿ ಬೆಳೆದಿರುವುದು ಪ್ರಜಾವಾಣಿ ಚಿತ್ರ/ ರಂಜು ಪಿ.

34	14	4	80	14	12 ಸಾವಿರ,
ಬಿಬಿಎಂಪಿ ಪ್ರೌಢಶಾಲೆಗಳು	ಪಿಯು ಕಾಲೇಜುಗಳು	ಪ್ರಥಮ ದರ್ಜೆ ಕಾಲೇಜುಗಳು	ನರ್ಸರಿ ಶಾಲೆಗಳು	ಪ್ರಾಥಮಿಕ ಶಾಲೆಗಳು	2020–2021ನೇ ಸಾಲಿನಲ್ಲಿ ಬಿಬಿಎಂಪಿ ಶಾಲೆ, ಕಾಲೇಜುಗಳಿಗೆ ದಾಖಲಾಗಿದ್ದ ವಿದ್ಯಾರ್ಥಿಗಳ ಅಂದಾಜು ಸಂಖ್ಯೆ

ಫಲ ನೀಡದ ರೋಶನಿ

ತನ್ನ ಅಧೀನದ ಶಾಲಾ, ಕಾಲೇಜುಗಳ ವಿದ್ಯಾರ್ಥಿಗಳನ್ನು 21ನೇ ಶತಮಾನದ ಸವಾಲುಗಳನ್ನು ಸಮರ್ಥವಾಗಿ ಎದುರಿಸುವಂತೆ ಸಜ್ಜುಗೊಳಿಸಲು ಪಾಲಿಕೆಯು 2018ರಲ್ಲಿ ‘ಬಿಬಿಎಂಪಿ ರೋಶನಿ’ ಯೋಜನೆ ಜಾರಿಗೊಳಿಸಿತ್ತು.

ಕಲಿಕಾ ಸಮುದಾಯದ ಜಾಲ ರೂಪಿಸಿಕೊಂಡು ಗುಣಮಟ್ಟದ ಶಿಕ್ಷಣ ಒದಗಿಸುವ ಈ ಯೋಜನೆಗೆ ಅಂದಿನ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಚಾಲನೆ ನೀಡಿದ್ದರು.

ಮೈಕ್ರೊಸಾಫ್ಟ್ ಹಾಗೂ ಟೆಕ್ ಅವಂತ್ ಸಂಸ್ಥೆಗಳ ಸಹಯೋಗದಲ್ಲಿ ಜಾರಿಗೊಂಡಿದ್ದ ಈ ಯೋಜನೆ ಫಲ ನೀಡಿದಂತೆ ಕಾಣುತ್ತಿಲ್ಲ.

ಸಾಮಾಜಿಕ ಕಲಿಕಾ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಿ ಶಾಲೆಗಳನ್ನು ವಿಶ್ವದರ್ಜೆಗೇರಿಸುವ, ವಿದ್ಯಾರ್ಥಿಗಳನ್ನು ಸ್ಪರ್ಧಾತ್ಮಕ ಜಗತ್ತಿಗೆ ಪರಿಚಯಿಸುವ ಈ ಯೋಜನೆಯ ಆಶಯ ಮರೆಯಾದಂತಿದೆ. ಏಕೆಂದರೆ ಈಗಲೂ ಬಹುಪಾಲು ಶಾಲೆಗಳಿಗೆ ಡಿಜಿಟಲ್ ಬೋರ್ಡ್‌ಗಳು ಕಾಲಿಟ್ಟಿಲ್ಲ. ಇಂಟರ್‌ನೆಟ್ ಸಂಪರ್ಕವೂ ಇಲ್ಲ.

‘ಹೆಚ್ಚುವರಿ ಕಟ್ಟಡ ನಿರ್ಮಾಣಕ್ಕೆ ಕ್ರಮ’

‘ಪಾಲಿಕೆ ಅಧೀನದ ಶಾಲಾ, ಕಾಲೇಜುಗಳಲ್ಲಿ ದಾಖಲಾತಿ ಹೆಚ್ಚುತ್ತಿರುವುದರಿಂದ ಹೆಚ್ಚುವರಿ ಕೊಠಡಿಗಳ ನಿರ್ಮಾಣಕ್ಕೆ ಬೇಡಿಕೆ ಬಂದಿದೆ. ವಿಶೇಷ ಆಯುಕ್ತರು ಈ ಕೆಲಸಕ್ಕಾಗಿ ಕಾರ್ಯನಿರ್ವಾಹಕ ಎಂಜಿನಿಯರ್ ಒಬ್ಬರನ್ನು ನೇಮಿಸಿದ್ದಾರೆ. ಅವರು ಶಾಲೆ ಹಾಗೂ ಕಾಲೇಜುಗಳಿಗೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಲಿದ್ದಾರೆ. ಯಾವ ಶಾಲೆ ಹಾಗೂ ಕಾಲೇಜಿಗೆ ಹೆಚ್ಚುವರಿ ಕೊಠಡಿಯ ಅಗತ್ಯವಿದೆ, ಯಾವ ಕಟ್ಟಡಗಳನ್ನು ನವೀಕರಣಗೊಳಿಸಬೇಕು ಎಂಬುದರ ಕುರಿತು ವಿಶೇಷ ಆಯುಕ್ತರಿಗೆ ವರದಿ ಸಲ್ಲಿಸಲಿದ್ದಾರೆ’ ಎಂದು ಬಿಬಿಎಂಪಿ ಶಿಕ್ಷಣಾಧಿಕಾರಿ ಹನುಮಂತಪ್ಪ ತಿಳಿಸಿದರು.

‘ಶಿವಾಜಿನಗರದ ಟಾಸ್ಕರ್ ಟೌನ್‌ನ ಶಾಲಾ ಆವರಣದಲ್ಲಿ ಯುವಕರು ಮದ್ಯಪಾನ, ಗಾಂಜಾ ಸೇವನೆ ಮಾಡುತ್ತಾರೆ ಎಂಬ ದೂರು ಕೇಳಿಬಂದಿತ್ತು. ಈ ಸಂಬಂಧ ಸ್ಥಳೀಯ ಠಾಣೆಗೆ ದೂರು ನೀಡಲಾಗಿತ್ತು. ಪ್ರಾಥಮಿಕ ಹಾಗೂ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರು ಹಾಗೂ ಕಾಲೇಜಿನ ಪ್ರಾಂಶುಪಾಲರಿಗೆ ನೋಟಿಸ್ ಕೂಡ ನೀಡಲಾಗಿತ್ತು. ಬೇರೆ ಶಾಲೆಗಳಲ್ಲೂ ಈ ರೀತಿಯ ಸಮಸ್ಯೆ ಇದ್ದರೆ ಸಂಬಂಧಪಟ್ಟವರು ನಮ್ಮ ಗಮನಕ್ಕೆ ತರಬೇಕು. ಪುಂಡರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ’ ಎಂದರು.

‘ಈಗಲಾದರೂ ಮೂಲ ಸೌಕರ್ಯ ಒದಗಿಸಿ’



‘ಕೋವಿಡ್ ಬಳಿಕ ಪೋಷಕರು ತಮ್ಮ ಮಕ್ಕಳನ್ನು ಬಿಬಿಎಂಪಿ ಶಾಲೆಗಳಿಗೆ ಸೇರಿಸುವುದು ಸಾಮಾನ್ಯವಾಗಿದೆ. ಹೀಗಾಗಿ ಈಗಲಾದರೂ ಅಗತ್ಯ ಮೂಲ ಸೌಕರ್ಯ ಕಲ್ಪಿಸಲು ಅಧಿಕಾರಿಗಳು ಕ್ರಮ ವಹಿಸಬೇಕು’.

‘ಸರ್ಕಾರವು ಸರ್ವರಿಗೂ ಕಡ್ಡಾಯ ಶಿಕ್ಷಣ ನೀಡುವುದಾಗಿ ಹೇಳುತ್ತಿದೆ. ಮಕ್ಕಳೇ ಶಾಲೆಗೆ ಹೋಗದಿದ್ದರೆ ಈ ಆಶಯ ಸಾಕಾರಗೊಳ್ಳುವುದಾದರೂ ಹೇಗೆ. ಕೆಲ ಬಿಬಿಎಂಪಿ ಶಾಲೆಗಳ ಸ್ಥಿತಿ ಶೋಚನೀಯವಾಗಿದೆ. ಅಲ್ಲಿ ಸ್ವಚ್ಛತೆಯೇ ಮರೆಯಾಗಿದೆ. ಅಂತಹ ಶಾಲೆಗಳಿಗೆ ಹೋಗಲು ಮಕ್ಕಳು ಹಿಂದೇಟು ಹಾಕುತ್ತಾರೆ. ಕೆಲ ಶಾಲೆಗಳಲ್ಲಿ ಶೌಚಾಲಯಗಳೇ ಇಲ್ಲ. ಕೆಲವೆಡೆ ಇದ್ದರೂ ಅವು ಬಳಕೆಗೆ ಯೋಗ್ಯವಾಗಿಲ್ಲ. ದುರ್ನಾತ ಬೀರುವ ಆ ಶೌಚಾಲಯಗಳಿಂದ ಮಕ್ಕಳು ಸಾಂಕ್ರಾಮಿಕ ರೋಗಗಳಿಗೆ ತುತ್ತಾಗುವ ಅಪಾಯವಿದೆ’.

‘ಕೆಲ ಶಾಲೆಗಳಲ್ಲಿ ಸ್ವಚ್ಛತಾ ಸಿಬ್ಬಂದಿಯೇ ಇಲ್ಲ. ಹೀಗಾಗಿ ಶಾಲಾ ಕೊಠಡಿಗಳ ಸ್ವಚ್ಛತೆಗೆ ಮಕ್ಕಳನ್ನೇ ಬಳಸಿಕೊಳ್ಳಲಾಗುತ್ತಿದೆ. ಇದು ತಪ್ಪಬೇಕು’.

ದರ್ಶನ್, ಚಾಮರಾಜಪೇಟೆ ನಿವಾಸಿ

ಕೆಲ ಶಾಲೆಗಳಿಗೆ ಹೈಟೆಕ್ ಸ್ಪರ್ಶ

ನಗರದ ಕೆಲವೆಡೆ ಕಾಲೇಜು ಕಟ್ಟಡದಲ್ಲೇ ಪ್ರೌಢಶಾಲೆಗಳನ್ನು ನಡೆಸಲಾಗುತ್ತಿದೆ. ಈ ಪೈಕಿ ಕೆಲ ಕಟ್ಟಡಗಳಿಗೆ ಹೈಟೆಕ್ ಸ್ಪರ್ಶ ನೀಡಲಾಗಿದೆ.

ಚಾಮರಾಜಪೇಟೆಯ ಈದ್ಗಾ ಮೈದಾನದ ಎದುರು ಇರುವ ಕಾಲೇಜು, ಪಾದರಾಯನಪುರ, ಗಂಗಾನಗರ, ಸುಂಕೇನಹಳ್ಳಿ ಸೇರಿದಂತೆ ವಿವಿಧೆಡೆ ಸುಸಜ್ಜಿತ ಕಟ್ಟಡಗಳಿವೆ. ಅಲ್ಲಿ ವಿದ್ಯಾರ್ಥಿಗಳ ದಾಖಲಾತಿಯೂ ಹೆಚ್ಚಿದೆ.

ಎನ್.ಆರ್.ಕಾಲೊನಿಯ ಬಸ್ ನಿಲ್ದಾಣದ ಮೇಲಿನ ಮಹಡಿಯಲ್ಲಿ ಬಿಬಿಎಂಪಿ ಪ್ರೌಢಶಾಲೆ ಆರಂಭಿಸಲಾಗಿದೆ.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ಕಳವಳ • 227 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

‘ಮಾನಸಿಕ ಒತ್ತಡ: 1.36 ಲಕ್ಷ ಮಂದಿ ಆತ್ಮಹತ್ಯೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಾನಸಿಕ ಒತ್ತಡ ಸೇರಿದಂತೆ ವಿವಿಧ ಕಾರಣಗಳಿಂದ ದೇಶದಲ್ಲಿ ವಾರ್ಷಿಕ 1.36 ಲಕ್ಷ ಮಂದಿ ಆತ್ಮಹತ್ಯೆಗೆ ಒಳಗಾಗುತ್ತಿದ್ದಾರೆ. ಇವರಲ್ಲಿ ಶೇ 70ರಷ್ಟು ಮಂದಿ ಯುವಜನರಾಗಿದ್ದಾರೆ’ ಎಂದು ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ಕಳವಳ ವ್ಯಕ್ತಪಡಿಸಿದರು.

ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯು (ನಿಮ್ಹಾನ್ಸ್) ನಗರದಲ್ಲಿ ಭಾನುವಾರ ಹಮ್ಮಿಕೊಂಡ 25ನೇ ಘಟಿಕೋತ್ಸವದಲ್ಲಿ ವಿವಿಧ ವಿಭಾಗಗಳ 227 ವಿದ್ಯಾರ್ಥಿಗಳಿಗೆ ಪದವಿ ಹಾಗೂ 13 ವಿದ್ಯಾರ್ಥಿಗಳಿಗೆ ಪ್ರಶಂಸನೀಯ ಪುರಸ್ಕಾರ ಪ್ರದಾನ ಮಾಡಿದರು.

‘ವಿವಿಧ ಮಾನಸಿಕ ಕಾಯಿಲೆಗಳಿಂದ ಯುವಜನರು ಆತ್ಮಹತ್ಯೆಗೆ ಶರಣಾಗತರಾಗುತ್ತಿರುವುದು ಆತಂಕಕಾರಿ. ಆತ್ಮಹತ್ಯೆ ಮಾಡಿಕೊಳ್ಳುತ್ತಿರುವವರಲ್ಲಿ ಹೆಚ್ಚಿನವರು 18ರಿಂದ 45 ವರ್ಷದೊಳಗಿನವರಾಗಿದ್ದಾರೆ. ದೈಹಿಕ ಆರೋಗ್ಯಕ್ಕೆ ನೀಡುತ್ತಿರುವ ಮಹತ್ವವನ್ನು ಮಾನಸಿಕ ಆರೋಗ್ಯಕ್ಕೆ ನೀಡದಿರುವುದೇ ಇದಕ್ಕೆ ಕಾರಣ. ದೈಹಿಕ ಮತ್ತು ಮಾನಸಿಕ ಆರೋಗ್ಯ ಸಮತೋಲನದಲ್ಲಿ ಇದ್ದರೆ ಮಾತ್ರ ವ್ಯಕ್ತಿ ಸಂತೋಷದಿಂದ ಇರಲು ಸಾಧ್ಯ’ ಎಂದು ಅವರು ಹೇಳಿದರು.

‘ಕೋವಿಡ್ ನಿಯಂತ್ರಣಕ್ಕೆ ಶ್ರಮಿಸುತ್ತಿರುವವರಿಗೆ ಚಪ್ಪಾಳೆ ತಟ್ಟಿ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದಾಗ ಕೆಲವರು ಟೀಕೆ ಮಾಡಿದರು. ಚಪ್ಪಾಳೆ ತಟ್ಟುವುದರಿಂದ ಕೋವಿಡ್ ಹೋಗುತ್ತದೆಯೇ ಎಂದು ಪ್ರಶ್ನಿಸಿದರು. ದೇಶದ ಜನತೆ ಚಪ್ಪಾಳೆ ತಟ್ಟಿ, ಪ್ರೋತ್ಸಾಹ ನೀಡಿದ್ದರಿಂದ ಕೊರೊನಾ ಯೋಧರು ಇನ್ನಷ್ಟು ಪರಿಣಾಮಕಾರಿಯಾಗಿ ಕೆಲಸ ಮಾಡಲು ಸಾಧ್ಯವಾಯಿತು. ವೈದ್ಯಕೀಯ ಕ್ಷೇತ್ರದಲ್ಲಿ ದೇಶವು ವೇಗವಾಗಿ ಪ್ರಗತಿ ಹೊಂದುತ್ತಿದೆ. ನವಭಾರತ ನಿರ್ಮಾಣಕ್ಕೆ ಪ್ರತಿಯೊಬ್ಬರೂ ಕೊಡುಗೆ ನೀಡಬೇಕು’ ಎಂದರು.

ಪ್ರತ್ಯೇಕ ಕೋರ್ಸ್ ಪ್ರಾರಂಭಿಸಿ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ‘ಪ್ರತಿಯೊಬ್ಬರೂ ಮಾನಸಿಕ ವಿಜ್ಞಾನವನ್ನು ಅರಿತುಕೊಳ್ಳಬೇಕಾಗಿದೆ. ದೈಹಿಕ ಒತ್ತಡ ಇಲ್ಲದವರಿಗೆ ಮಾನಸಿಕ ಒತ್ತಡ ಜಾಸ್ತಿ ಇರಲಿದೆ. ತನ್ನ ಮನಸ್ಸಿಗೆ ಅನಿಸಿದ್ದನ್ನು ಮಾಡಲು ಅವಕಾಶ ಇರುವ ವ್ಯಕ್ತಿ ಸಂತೋಷದಿಂದ ಜೀವನ ಸಾಗಿಸಲು ಸಾಧ್ಯ. ಇತ್ತೀಚಿನ ವರ್ಷಗಳಲ್ಲಿ ಹೆಣ್ಣುಮಕ್ಕಳು ಹೆಚ್ಚಾಗಿ ಮಾನಸಿಕ ಒತ್ತಡವನ್ನು ಎದುರಿಸುತ್ತಿದ್ದಾರೆ. ಕುಟುಂಬ ನಿರ್ವಹಣೆ, ಉದ್ಯೋಗದ ಜೊತೆಗೆ ವಿವಿಧ ಜವಾಬ್ದಾರಿಗಳನ್ನು ನಿಭಾಯಿಸಬೇಕಾಗಿದೆ. ಮಹಿಳೆಯರಲ್ಲಿನ ಒತ್ತಡ ಹೋಗಲಾಡಿಸಲು ಸಂಸ್ಥೆಯು ಪ್ರತ್ಯೇಕ ಕೋರ್ಸ್ ಪ್ರಾರಂಭಿಸಬೇಕು’ ಎಂದು ತಿಳಿಸಿದರು.

ಆರೋಗ್ಯ ಸಚಿವ ಡಾ.ಕೆ. ಸುಧಾಕರ್, ‘ನಮ್ಮಲ್ಲಿ ವೈದ್ಯರನ್ನು ಜನರು ದೇವರಂತೆ ಕಾಣುತ್ತಾರೆ. ದೇವರಿಗೆ ಇರುವ ಜವಾಬ್ದಾರಿ ಪ್ರತಿಯೊಬ್ಬ ವೈದ್ಯರ ಮೇಲಿದೆ ಎಂಬುದನ್ನು ಅರಿತು ಕೆಲಸ ಮಾಡಬೇಕು. ಕೋವಿಡ್ ಕಾಣಿಸಿಕೊಂಡ ಪ್ರಾರಂಭಿಕ ದಿನಗಳಲ್ಲಿ ಕೆಲ ಹಿರಿಯ ವೈದ್ಯರು ಚಿಕಿತ್ಸೆಗೆ ಹಿಂದೇಟು ಹಾಕಿದರು. ಆ ವೇಳೆ ಕಿರಿಯ ವೈದ್ಯರು ಮುಂದೆ ಬಂದು ಆರೈಕೆ ಮಾಡಿದರು’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ನಿಮ್ಹಾನ್ಸ್‌ನ 25ನೇ ಘಟಿಕೋತ್ಸವದಲ್ಲಿ ಮುಸ್ತಫಾ ಇಕ್ಬಾಲ್ ಅಹ್ಮದ್ ಚಾಂದ್ ಶಾ, ಪವನ್ ಕುಮಾರ್, ಶಮಿಕ್ ಬಿಸ್ವಾಸ್, ಅಮಿತ್ ಗೋಯಲ್, ಸುಶೀಲ್ ಕುಮಾರ್ ಜೆ., ಭವಿಕಾ ವಜವತ್, ರೇಷ್ಮಾ ಸುಲ್ತಾನಾ ಶೇಕ್, ಶುಭಾ ಆರ್., ಅಧರಸ ಅಜಯನ್, ಮೃಣಾಲಿನಿ ಮಹಾಜನ್, ಪವಿತ್ರಾ ಜೆ., ಲಕ್ಷ್ಮಿ ಶ್ರವಂತಿ ಹಾಗೂ ಶ್ರುತಿ ಎಸ್. ಶರ್ಮಾ ಅವರು ಪ್ರಶಂಸನೀಯ ಪುರಸ್ಕಾರದೊಂದಿಗೆ ಸಂಭ್ರಮಿಸಿದರು – ಪ್ರಜಾವಾಣಿ ಚಿತ್ರ

‘100 ವೆಂಟಿಲೇಟರ್‌ಗಳ ಪೂರೈಕೆ’

‘ದೂರದ ಊರುಗಳಿಂದ ನಿಮ್ಹಾನ್ಸ್‌ಗೆ ಬರುವವರು ಚಿಕಿತ್ಸೆ ಸಿಗದೆಯೇ ವಾಪಸ್ ತೆರಳುವಂತೆ ಆಗಬಾರದು. ಎಕ್ಸ್–ರೇ ಸೇರಿದಂತೆ ಸಣ್ಣ ಸಣ್ಣ ಪರೀಕ್ಷೆಗಳಿಗೂ ಎರಡರಿಂದ ಮೂರು ದಿನಗಳವರೆಗೆ ಕಾಯುವಂತಾಗಬಾರದು. ಅತ್ಯಾಧುನಿಕ ತಂತ್ರಜ್ಞಾನಗಳ ನೆರವಿನಿಂದ ನಿಮಿಷಗಳಲ್ಲಿಯೇ ಪರೀಕ್ಷೆ ಮಾಡುವ ವ್ಯವಸ್ಥೆಯಿದೆ. ಅದನ್ನು ಅಳವಡಿಕೊಳ್ಳಬೇಕಿದೆ. ರಾಜ್ಯ ಸರ್ಕಾರ ಅಗತ್ಯ ನೆರವು ನೀಡಲು ಸಿದ್ಧವಿದೆ’ ಎಂದು ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು.

‘ಕೆಲದಿನಗಳ ಹಿಂದಷ್ಟೇ ವ್ಯಕ್ತಿಯೊಬ್ಬರಿಗೆ ವೆಂಟಿಲೇಟರ್ ಸಿಗದ ಘಟನೆ ಸಂಸ್ಥೆಯಲ್ಲಿ ನಡೆದಿತ್ತು. ಮುಂದೆ ಇಂತಹ ಘಟನೆಗಳು ಸಂಭವಿಸಬಾರದು. ಹಾಗಾಗಿ, 6 ತಿಂಗಳ ಒಳಗೆ ಎರಡು ಹಂತಗಳಲ್ಲಿ 100 ವೆಂಟಿಲೇಟರ್‌ಗಳನ್ನು ಪೂರೈಸಲಾಗುವುದು. ಅಗತ್ಯ ಸಿಬ್ಬಂದಿಯನ್ನೂ ನೀಡಲಾಗುವುದು. ಯಾರು ಕೂಡ ಚಿಕಿತ್ಸೆಗಾಗಿ ಕಾಯುತ್ತಾ ಕುಳಿತುಕೊಳ್ಳುವಂತಾಗಬಾರದು’ ಎಂದರು.

‘ಪ್ರಾದೇಶಿಕ ಕೇಂದ್ರ ಅಗತ್ಯ’

‘ನಿಮ್ಹಾನ್ಸ್‌ಗೆ ಚಿಕಿತ್ಸೆ ಪಡೆಯಲು ದೇಶದ ವಿವಿಧೆಡೆಯಿಂದ ರೋಗಿಗಳು ಬರುತ್ತಾರೆ. ಇದರಿಂದಾಗಿ ರೋಗಿಗಳ ದಟ್ಟಣೆ ಉಂಟಾಗುತ್ತಿದೆ. ಈ ಸಮಸ್ಯೆಗೆ ಪರಿಹಾರ ಒದಗಿಸಲು ಸಂಸ್ಥೆಯ ಪ್ರಾದೇಶಿಕ ಕಚೇರಿಗಳನ್ನು ರಾಜ್ಯದ ವಿವಿಧೆಡೆ ಪ್ರಾರಂಭಿಸಬೇಕಿದೆ. ಜಯದೇವ ಹೃದ್ರೋಗ ಆಸ್ಪತ್ರೆಯ ಪ್ರಾದೇಶಿಕ ಕೇಂದ್ರಗಳನ್ನು ಈಗಾಗಲೇ ಪ್ರಾರಂಭಿಸಲಾಗಿದೆ. ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ಕೇಂದ್ರವೂ ರಾಜ್ಯದ ವಿವಿಧೆಡೆ ಪ್ರಾರಂಭವಾಗಲಿದೆ. ಮುಂದಿನ ಬಜೆಟ್‌ನಲ್ಲಿ ಮಾನಸಿಕ ಕೇಂದ್ರಗಳ ಸ್ಥಾಪನೆಗೆ ಅನುದಾನ ಮೀಸಲಿಡಲಾಗುವುದು’ ಎಂದು ಬಸವರಾಜ ಬೊಮ್ಮಾಯಿ ತಿಳಿಸಿದರು.

ಇನ್‌ಸ್ಟಿಟ್ಯೂಟ್ ಆಫ್ ಗ್ಯಾಸ್ಟ್ರೊಎಂಟ್ರಾಲಜಿ ಸೈನ್ಸಸ್ ಆ್ಯಂಡ್ ಆರ್ಗನ್ ಟ್ರಾನ್ಸ್‌ಪ್ಲಾಂಟ್ ಆಸ್ಪತ್ರೆಯನ್ನು ಮನ್‌ಸುಖ್ ಮಾಂಡವೀಯ ಉದ್ಘಾಟಿಸಿದರು. (ಎಡದಿಂದ) ಬಸವರಾಜ ಬೊಮ್ಮಾಯಿ ಮತ್ತು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಇದ್ದರು –ಪ್ರಜಾವಾಣಿ ಚಿತ್ರ

‘ಆರೋಗ್ಯ ವಿಷನ್ ಶೀಘ್ರ ಅನುಷ್ಠಾನ’

ಬೆಂಗಳೂರು: ‘ರಾಜ್ಯದ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಕ್ಷೇತ್ರದ ಸಮಗ್ರ ಸುಧಾರಣೆಗೆ ಆರೋಗ್ಯ ವಿಷನ್ (ಮುನ್ನೋಟ) ಸಿದ್ಧಪಡಿಸಲಾಗಿದ್ದು, ಶೀಘ್ರದಲ್ಲಿಯೇ ಅನುಷ್ಠಾನ ಮಾಡಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸ್ವಸ್ತಿಕ್ಸ್ ಸಮೂಹದ ಸಹಕಾರದಲ್ಲಿ ರಾಜ್ಯ ಸರ್ಕಾರವು ವಿಕ್ಟೋರಿಯಾ ಆಸ್ಪತ್ರೆ ಆವರಣದಲ್ಲಿ ನಿರ್ಮಿಸಿರುವ ಇನ್‌ಸ್ಟಿಟ್ಯೂಟ್ ಆಫ್ ಗ್ಯಾಸ್ಟ್ರೊಎಂಟ್ರಾಲಜಿ ಸೈನ್ಸಸ್ ಆ್ಯಂಡ್ ಆರ್ಗನ್ ಟ್ರಾನ್ಸ್‌ಪ್ಲಾಂಟ್ ಆಸ್ಪತ್ರೆಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ರಾಜ್ಯವನ್ನು ಆರೋಗ್ಯ ಕರ್ನಾಟಕವನ್ನಾಗಿಸಲು ಸಂಕಲ್ಪ ಮಾಡಿದ್ದೇವೆ. ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ನೇತೃತ್ವದಲ್ಲಿ ಆರೋಗ್ಯ ವಿಷನ್ ರೂಪಿಸಲಾಗಿದೆ. ಎಲ್ಲರಿಗೂ ಗುಣಮಟ್ಟದ ವೈದ್ಯಕೀಯ ಸೌಲಭ್ಯ ಒದಗಿಸಲು ಸರ್ಕಾರ ಶ್ರಮಿಸುತ್ತಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಬಡತನ ರೇಖೆಗಿಂತ ಕೆಳಗಿರುವ ರೋಗಿಗಳಿಗೆ ಈ ಆಸ್ಪತ್ರೆಯಲ್ಲಿ ಉಚಿತ ಅಂಗಾಂಗ ಕಸಿ ಚಿಕಿತ್ಸೆ ದೊರೆಯಲಿದೆ’ ಎಂದರು.

‘ಪಾಶ್ಚಾತ್ಯ ಆಹಾರ ಪದ್ಧತಿ, ಬದಲಾದ ಜೀವಶೈಲಿಯಿಂದಾಗಿ ಗ್ಯಾಸ್ಟ್ರೋಎಂಟರಾಲಜಿ (ಉದರ ಸಂಬಂಧಿ) ರೋಗಗಳಿಗೆ ಒಳಪಡುವವರ ಸಂಖ್ಯೆ ಹೆಚ್ಚಾಗುತ್ತಿದೆ. ಈ ಕಾಯಿಲೆಗಳ ಚಿಕಿತ್ಸೆಗೆ ನೂತನ ಆಸ್ಪತ್ರೆಯು ಸಹಕಾರಿಯಾಗಲಿದೆ. ಅಂಗಾಂಗ ಕಸಿ ಇತ್ತೀಚಿನ ದಿನಗಳಲ್ಲಿ ಹೆಚ್ಚಿನ ಪ್ರಾಮುಖ್ಯತೆ ಪಡೆದುಕೊಂಡಿದೆ. ಹಾಗಾಗಿ, ಅಂಗಾಂಗ ಕಸಿಗೂ ಆದ್ಯತೆ ನೀಡಲಾಗಿದೆ’ ಎಂದರು.

ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ, ‘ದೇಶದ ನಾಗರಿಕರು ಸ್ವಸ್ಥರಾಗಿದ್ದರೆ ದೇಶ ಸ್ವಸ್ಥವಾಗಿರುತ್ತದೆ. ಸ್ವಸ್ಥ ಸಮಾಜ ದೇಶದ ಅಭಿವೃದ್ಧಿಗೆ ಸಹಕಾರಿ. ಹಾಗಾಗಿ, ಬಡವರ ಆರೋಗ್ಯದ ಹಿತದೃಷ್ಟಿಯಿಂದ ಅಂತ್ಯೋದಯ ಆಧಾರದಲ್ಲಿ ‘ಆಯುಷ್ಮಾನ್ ಭಾರತ’ ಯೋಜನೆಯನ್ನು ಜಾರಿ ಮಾಡಲಾಗಿದೆ. ಈ ಯೋಜನೆಯು ಸಮಾಜದ ಕಟ್ಟಕಡೆಯ ವ್ಯಕ್ತಿಯನ್ನೂ ತಲುಪಬೇಕು. ಯಕೃತ್ತು ಕಸಿಯು ಖಾಸಗಿ ಆಸ್ಪತ್ರೆಗಳಲ್ಲಿ ದುಬಾರಿ. ಇದನ್ನು ರಾಜ್ಯ ಸರ್ಕಾರವು ಬಡ ರೋಗಿಗಳಿಗೆ ಉಚಿತವಾಗಿ ಒದಗಿಸಲು ಮುಂದಾಗಿರುವುದು ಶ್ಲಾಘನೀಯ’ ಎಂದು ಮೆಚ್ಚುಗೆ ಸೂಚಿಸಿದರು.

ಎಂ.ಸಿ. ಪ್ರಕಾಶ್ ಅನುವಾದಿತ ಗುಹಾ ಅವರ ಪುಸ್ತಕ ಬಿಡುಗಡೆ

‘ಗಾಂಧಿ ರೂಪುಗೊಂಡ ಕ್ರಮ ಕಟ್ಟಿಕೊಡುವ ಕೃತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಹಾತ್ಮ ಗಾಂಧೀಜಿ ಅವರು ರೂಪುಗೊಂಡ ಕ್ರಮವನ್ನು ಸಾಧ್ಯವಾದಷ್ಟು ಪ್ರಾಯೋಗಿಕ ಹಾಗೂ ವಸ್ತುನಿಷ್ಠ ನೆಲೆಯಲ್ಲಿ ಕಟ್ಟಿಕೊಡುವ ಕೃತಿ ಇದು. ಈ ಕಾರ್ಯಕ್ಕೆ ಅಸಾಧಾರಣ ಸಂಯಮ ಬೇಕು. ಅದನ್ನು ರಾಮಚಂದ್ರ ಗುಹಾ ಅವರು ಸಾಧಿಸಿಕೊಂಡಂತಿದೆ’ ಎಂದು ವಿಮರ್ಶಕಿ ಎಂ.ಎಸ್.ಆಶಾದೇವಿ ಹೇಳಿದರು.

ಎಂ.ಸಿ.ಪ್ರಕಾಶ್ ಅವರು ಕನ್ನಡಕ್ಕೆ ಅನುವಾದಿಸಿರುವ ರಾಮಚಂದ್ರ ಗುಹಾ ಅವರ ‘ಗಾಂಧಿ: ಪ್ರಪಂಚವನ್ನು ಬದಲಾಯಿಸಿದ ಆ ವರ್ಷಗಳು 1914–1948’ ಎರಡು ಸಂಪುಟಗಳ ಬಿಡುಗಡೆ ಕಾರ್ಯಕ್ರಮದಲ್ಲಿ ಭಾನುವಾರ ಮಾತನಾಡಿದರು.

‘ತೀರ್ಮಾನಗಳನ್ನು ಹೇಳದೆಯೇ ಗಾಂಧಿ ನಡೆದು ಬಂದ ಹಾದಿಯನ್ನು ಪುಸ್ತಕದಲ್ಲಿ ಕಟ್ಟಿಕೊಡಲಾಗಿದೆ. ಅದನ್ನು ಗುರುತಿಸುವ ಕ್ರಮವೇ ಕರಾರುವಾಕ್ಕಾಗಿದೆ. ಗಾಂಧಿ ಮತ್ತು ಮಹಿಳೆ ಕುರಿತ ಸಂಕೀರ್ಣ ಸಂದರ್ಭವನ್ನು ತುಂಬಾ ಸೂಕ್ಷ್ಮವಾಗಿ ಪ್ರಸ್ತಾಪ ಮಾಡಲಾಗಿದೆ. ಮನುಷ್ಯರಾಗಿ ಗಾಂಧಿ ಪಡೆದ ವಿಕಾಸವನ್ನು ಕಟ್ಟಿಕೊಡಲಾಗಿದೆ’ ಎಂದರು.

‘ಅತ್ಯಂತ ಬಿಕ್ಕಟ್ಟಿನ ಈ ಕಾಲದಲ್ಲಿ ಗಾಂಧಿಯವರನ್ನು ಹೇಗೆ ಅರ್ಥೈಸಿಕೊಳ್ಳಬೇಕೆಂಬ ನಿರೂಪಣೆಯೂ ಪುಸ್ತಕದಲ್ಲಿದೆ. ಇತ್ತೀಚಿನ ವರ್ಷಗಳಲ್ಲಿ ಗಾಂಧಿ ಬಗ್ಗೆ ನಡೆದಿರುವಷ್ಟು ಪರ ಮತ್ತು ವಿರೋಧದ ಚರ್ಚೆಗಳು ಜಗತ್ತಿನ ಬೇರೆ ಯಾವ ವ್ಯಕ್ತಿಯ ಕುರಿತೂ ನಡೆದಿಲ್ಲ. ಗಾಂಧಿಯವರನ್ನು ಮಾದರಿ ಹಾಗೂ ಆದರ್ಶವಾಗಿ ನೋಡಿದಾಗ ಅಲ್ಲಿ ಸಾಕಷ್ಟು ತೊಡಕುಗಳಿದ್ದಂತೆ ಕಾಣುತ್ತವೆ. ಅವರನ್ನು ಜೀವನ ಕ್ರಮವನ್ನಾಗಿ ನೋಡಲು ಹೊರಟಾಗ ಅವರ ಜೊತೆಯಲ್ಲಿ ಆಗಬಹುದಾದ ಗೆಳೆತನ ಹಾಗೂ ಜಗಳ ಬಹಳ ಅರ್ಥಪೂರ್ಣವೆನಿಸುತ್ತದೆ’ ಎಂದರು.

ಲೇಖಕ ಅಗ್ರಹಾರ ಕೃಷ್ಣಮೂರ್ತಿ, ‘ಗಾಂಧಿಯ ದೃಷ್ಟಿ ಬಿದ್ದ ಬಳಿಕ ಒಣಗಿದ ಮರವೊಂದು ಚಿಗುತು ನಿಲ್ಲುತ್ತದೆ ಎಂಬ ಆಸಕ್ತಿಕರ ಕಥೆ ಈ ಪುಸ್ತಕದಲ್ಲಿದೆ. ಗಾಂಧಿ ಕುರಿತು ವ್ಯಂಗ್ಯವಾಡಿದ ಕಾರಣಕ್ಕೆ ಹಾಲು ಮಾರುವವನ ಗಡಿಗೆಯಲ್ಲಿದ್ದ ತುಪ್ಪ ಹಾಳಾಗಿಬಿಡುತ್ತದೆ ಎಂಬ ಉಲ್ಲೇಖವಿದೆ. ಮನುಷ್ಯನೊಬ್ಬನ ಬದುಕಿನ ಕಾಲಘಟ್ಟದಲ್ಲೇ ಹುಟ್ಟಿದ ದಂತಕಥೆಗಳು ಚರಿತ್ರೆಯನ್ನಷ್ಟೇ ಬೆಂಬಲಿಸದೆ ಭವಿಷ್ಯವನ್ನು ಕಾಪಾಡುತ್ತವೆ’ ಎಂದರು.

ಇತಿಹಾಸಕಾರ ರಾಮಚಂದ್ರ ಗುಹಾ, ‘ಮಹಿಳೆಯರು ಹಾಗೂ ಪುರುಷರು ಬದಲಾದಾಗ ಮಾತ್ರ ಜಗತ್ತಿನಲ್ಲಿ ಲಿಂಗ ಸಮಾನತೆ ಅಸ್ತಿತ್ವಕ್ಕೆ ಬರಲು ಸಾಧ್ಯ. ಭಾರತಕ್ಕೆ ಗಾಂಧಿ ಹಾಗೂ ಅಂಬೇಡ್ಕರ್ ಇಬ್ಬರೂ ಬೇಕು. ಗಾಂಧೀಜಿ ಮೇಲ್ಜಾತಿಯ ಹಿಂದೂಗಳನ್ನು ಬದಲಿಸಲು ಪ್ರಯತ್ನಿಸಿದರು’ ಎಂದರು.

ವಸಂತ ಪ್ರಕಾಶನ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಎಂ.ಎಸ್.ಆಶಾದೇವಿ (ಬಲತುದಿ) ಪುಸ್ತಕ ಬಿಡುಗಡೆ ಮಾಡಿದರು. (ಎಡದಿಂದ) ಪತ್ರಕರ್ತ ಸತೀಶ್ ಚಪ್ಪರಿಕೆ, ಅಗ್ರಹಾರ ಕೃಷ್ಣಮೂರ್ತಿ ಹಾಗೂ ರಾಮಚಂದ್ರ ಗುಹಾ ಇದ್ದಾರೆ –ಪ್ರಜಾವಾಣಿ ಚಿತ್ರ

ಭಾರತೀಯ ವಿಜ್ಞಾನ ಸಂಸ್ಥೆ ಜೊತೆ ಡಾನ್‌ಫೋಸ್ ಇಂಡಿಯಾ ಒಪ್ಪಂದ

ಚೆನ್ನೈ (ಪಿಟಿಐ): ಹವಾನಿಯಂತ್ರಣ ವ್ಯವಸ್ಥೆ, ವೆಂಟಿಲೇಷನ್ ಪರಿಕರಗಳ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವ ಡಾನ್‌ಫೋಸ್ ಇಂಡಿಯಾ ಸಂಸ್ಥೆಯು, ಜಾಗತಿಕ ತಾಪಮಾನ ತಡೆಗೆ ಪೂರಕವಾದ ರೆಫ್ರಿಜರೇಟರ್ ಅಭಿವೃದ್ಧಿ ಕುರಿತ ಸಂಶೋಧನೆ ಹಾಗೂ ತರಬೇತಿ ಕೇಂದ್ರವನ್ನು ಸ್ಥಾಪಿಸುವ ಸಂಬಂಧ ಭಾರತೀಯ ವಿಜ್ಞಾನ ಸಂಸ್ಥೆಯ ಜೊತೆಗೆ ಒಡಂಬಡಿಕೆಯನ್ನು ಮಾಡಿಕೊಂಡಿದೆ.

ಈ ಒಡಂಬಡಿಕೆಯ ಅವಧಿ ನಾಲ್ಕು ವರ್ಷ. ಶಿಕ್ಷಕರು, ವಿದ್ಯಾರ್ಥಿಗಳು, ನಿರ್ವಹಣಾ ಎಂಜಿನಿಯರುಗಳು, ತಂತ್ರಜ್ಞರಿಗೆ ಈ ಅವಧಿಯಲ್ಲಿ ವಿವಿಧ ಹಂತದಲ್ಲಿ ತರಬೇತಿ ನೀಡಲಾಗುತ್ತದೆ ಎಂದು ಕಂಪನಿಯ ಹೇಳಿಕೆಯು ತಿಳಿಸಿದೆ.

ಪ್ರಾತ್ಯಕ್ಷಿಕೆಯ ಪರಿಕರಗಳನ್ನು ಆಧರಿಸಿ ಭಾರತೀಯ ವಿಜ್ಞಾನ ಸಂಸ್ಥೆ ಮತ್ತು ಡಾನ್‌ಫೋಸ್ ಕ್ಯಾಂಪಸ್ ಎರಡೂ ಕಡೆಯು ತರಬೇತಿ ನೀಡಲಾಗುತ್ತದೆ.

ಡಾನ್‌ಫೋಸ್ ಇಂಡಿಯಾ ಅಧ್ಯಕ್ಷ ರವಿಚಂದ್ರನ್ ಪುರುಷೋತ್ತಮನ್ ಮತ್ತು ಐಐಎಸ್‌ಸಿ ನಿರ್ದೇಶಕ, ಪ್ರೊ.ಗೋವಿಂದನ್ ರಂಗರಾಜನ್ ಅವರು ಒಡಂಬಡಿಕೆಯ ದಾಖಲೆಗಳನ್ನು ಇತ್ತೀಚೆಗೆ ನವದೆಹಲಿಯಲ್ಲಿ ವಿನಿಮಯ ಮಾಡಿಕೊಂಡರು.

ಈ ಸಂದರ್ಭದಲ್ಲಿ ಡೆನ್ಮಾರ್ಕ್ ಪ್ರಧಾನಿ ಮೆಟೆ ಫ್ರೆಡೆರಿಕ್ಸನ್ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರು ಉಪಸ್ಥಿತರಿದ್ದರು.

www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ

ಎಂಜಿನಿಯರಿಂಗ್‌ಗೆ ಸೇರುವ ಮುನ್ನ ಯಾವುದಕ್ಕೆ ಬೇಡಿಕೆ ಇದೆ ಎಂದು ತಿಳಿದುಕೊಳ್ಳುವುದು ಅಗತ್ಯ. ಬಯೊಮೆಡಿಕಲ್, ನ್ಯಾನೊ ತಂತ್ರಜ್ಞಾನ ಮೊದಲಾದ ಕೋರ್ಸ್‌ಗಳಿಗೆ ಬೇಡಿಕೆ ಹೆಚ್ಚಿದೆ

ಆಳ-ಅಗಲ
ಕಾಶ್ಮೀರ: ನಾಗರಿಕರ ಹತ್ಯೆ ಉಗ್ರರ ಷಡ್ಯಂತ್ರ
ವರ್ತಕರಿಗೆ ಮಾರ್ಚ್ 31ರವರೆಗೆ ಖಾದ್ಯತೈಲ ದಾಸ್ತಾನು ಮಿತಿ 10
ಕಲಬುರಗಿ, ಬೀದರ್ ಜಿಲ್ಲೆಯಲ್ಲಿ ಭಾರಿ ಮಳೆ 4
ಲಖಿಂಪುರ-ಖೇರಿ ಹಿಂಸಾಚಾರ ಪ್ರಕರಣ
2ನೇ ಎಫ್‌ಐಆರ್: ರೈತರ ಹತ್ಯೆ ಉಲ್ಲೇಖವಿಲ್ಲ 9

ಪೋಷಕ ನಟ ಸತ್ಯಜಿತ್ ಇನ್ನಿಲ್ಲ

ಬೆಂಗಳೂರು: ಕನ್ನಡ ಚಿತ್ರರಂಗದ ಖ್ಯಾತ ಪೋಷಕ ನಟ ಸತ್ಯಜಿತ್ (72) ಭಾನುವಾರ ಬೆಳಗಿನ ಜಾವ ನಿಧನರಾದರು.

ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ಅವರ ಆರೋಗ್ಯ ಸ್ಥಿತಿ ಇತ್ತೀಚೆಗೆ ಗಂಭೀರವಾಗಿತ್ತು. ಹೀಗಾಗಿ ಚಿಕಿತ್ಸೆಗಾಗಿ ಅವರನ್ನು ಕೆಲ ದಿನಗಳ ಹಿಂದೆ ನಗರದ ಬೌರಿಂಗ್ ಆಸ್ಪತ್ರೆಗೆ ದಾಖಲಿಸಲಾಗಿತ್ತು.

4ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ

ವಾಟ್ಸ್‌ಆ್ಯಪ್ ಸಂದೇಶಗಳಲ್ಲಿತ್ತು ಹಣದ ಕೈ ಬದಲಾವಣೆಯ ಸುಳಿವು

ಕೋಟ್ಯಂತರ ಅಕ್ರಮಕ್ಕೆ ಸಾಕ್ಷ್ಯ!

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: 2019ರಿಂದ ಈಚೆಗೆ ಜಲಸಂಪನ್ಮೂಲ, ಲೋಕೋಪಯೋಗಿ ಇಲಾಖೆಗಳ ಬೃಹತ್ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ನಡೆಯುವಾಗಲೇ ಗುತ್ತಿಗೆದಾರರು, ಅಧಿಕಾರಿಗಳು ಮತ್ತು ಅಧಿಕಾರಸ್ಥರ ಮಧ್ಯವರ್ತಿಗಳ ನಡುವೆ ನೂರಾರು ಕೋಟಿ ರೂಪಾಯಿ ಕೈ ಬದಲಾವಣೆ ಆಗಿರುವ ಸುಳಿವು ಕೆಲವರ ವಾಟ್ಸ್‌ಆ್ಯಪ್ ಸಂದೇಶಗಳ ಪರಿಶೀಲನೆ ವೇಳೆ ಆದಾಯ ತೆರಿಗೆ (ಐ.ಟಿ) ಇಲಾಖೆಗೆ ಲಭಿಸಿದೆ.

ಕಾಮಗಾರಿಗಳ ಗುತ್ತಿಗೆಗೆ ಟೆಂಡರ್ ಪ್ರಕ್ರಿಯೆ, ಅಂದಾಜು ಪಟ್ಟಿ ಪರಿಷ್ಕರಣೆ, ಬಿಲ್ ಪಾವತಿ ಮತ್ತಿತರ ಸಂದರ್ಭಗಳಲ್ಲಿ ಹಿರಿಯ ಅಧಿಕಾರಿಗಳು, ಗುತ್ತಿಗೆದಾರರು ಮತ್ತು ಮಧ್ಯವರ್ತಿಗಳ ನಡುವೆ ವಾಟ್ಸ್ ಆ್ಯಪ್ ಮೂಲಕ ವಿನಿಮಯವಾಗಿರುವ ಸಂದೇಶಗಳನ್ನು ಐ.ಟಿ ಅಧಿಕಾರಿಗಳು ಸಂಗ್ರಹಿಸಿದ್ದಾರೆ. 1,500 ಪುಟಗಳಿಗೂ ಹೆಚ್ಚು ಮಾಹಿತಿಯನ್ನು ತನಿಖಾ ತಂಡ ಡೌನ್‌ಲೋಡ್ ಮಾಡಿದ್ದು, ಬೃಹತ್ ಕಾಮಗಾರಿಗಳ ಗುತ್ತಿಗೆಯ ಸಮಯದಲ್ಲಿ ತೆರೆಮರೆಯಲ್ಲಿ ನಡೆಯುತ್ತಿದ್ದ 'ವ್ಯವಹಾರ'ದ ಕುರಿತು ಪ್ರಬಲ ಸಾಕ್ಷ್ಯಗಳು ಲಭಿಸಿವೆ ಎಂದು ಉನ್ನತ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಬೃಹತ್ ಕಾಮಗಾರಿಗಳ ಗುತ್ತಿಗೆಯಲ್ಲಿ ತೆರಿಗೆ ವಂಚನೆ, ಭ್ರಷ್ಟಾಚಾರ ಮತ್ತು ಅಕ್ರಮ ಹಣದ ವರ್ಗಾವಣೆ ಆರೋಪಗಳ ಕುರಿತು ಐ.ಟಿ ಇಲಾಖೆ ತನಿಖೆ ನಡೆಸುತ್ತಿದೆ. ಬಿಜೆಪಿ ನಾಯಕ ಬಿ.ಎಸ್. ಯಡಿಯೂರಪ್ಪ ಕುಟುಂಬದ ಅತ್ಯಾಪ್ತ ಹಾಗೂ ಮುಖ್ಯಮಂತ್ರಿಯವರ ಸಚಿವಾಲಯದಲ್ಲಿ ಸಿಬ್ಬಂದಿಯಾಗಿದ್ದ ಆಯನೂರು ಉಮೇಶ್, ಯಡಿಯೂರಪ್ಪ ಅವರ ಮಗ ಬಿ.ವೈ. ವಿಜಯೇಂದ್ರ ಸಹಪಾಠಿ ಅರವಿಂದ್, ಬೃಹತ್ ಕಾಮಗಾರಿಗಳ ಗುತ್ತಿಗೆ ಪಡೆದಿರುವ 31 ಗುತ್ತಿಗೆದಾರರು, ಹಲವು ಮಂದಿ ಲೆಕ್ಕಪರಿಶೋಧಕರ ಮೇಲೆ ಗುರುವಾರ ದಾಳಿ ಮಾಡಿದ್ದ ಐ.ಟಿ ಅಧಿಕಾರಿಗಳು, ಸತತ ಮೂರು ದಿನ ಶೋಧ ನಡೆಸಿದ್ದಾರೆ.

ಪ್ರಜಾವಾಣಿ ವಿಶೇಷ

ಆಯನೂರು ಉಮೇಶ್, ಅರವಿಂದ್ ಹಾಗೂ ಮುಖ್ಯಮಂತ್ರಿಯವರ ಸಚಿವಾಲಯದಲ್ಲಿದ್ದ ಯಡಿಯೂರಪ್ಪ ಅವರ ಸಂಬಂಧಿ ಶಶಿಧರ ಮರಡಿ ಎಂಬುವವರ ಜತೆ ಜಲ ಸಂಪನ್ಮೂಲ ಇಲಾಖೆಯ ನೀರಾವರಿ ನಿಗಮಗಳ ವ್ಯವಸ್ಥಾಪಕ ನಿರ್ದೇಶಕರು, ಮುಖ್ಯ ಎಂಜಿನಿಯರ್‌ಗಳು, ಲೋಕೋಪಯೋಗಿ ಇಲಾಖೆಯ ಕೆಲವು ಮುಖ್ಯ ಎಂಜಿನಿಯರ್‌ಗಳು, ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯ ಯೋಜನಾ ಅನುಷ್ಠಾನ ಘಟಕದ ನಿರ್ದೇಶಕರ ಹುದ್ದೆಯಲ್ಲಿದ್ದ ಅಧಿಕಾರಿಗಳು, ಆದಾಯ ತೆರಿಗೆ ಇಲಾಖೆಯ ದಾಳಿಗೊಳಗಾಗಿರುವ ಗುತ್ತಿಗೆದಾರರು, ಅವರ ಕಂಪನಿಗಳ ಪ್ರತಿನಿಧಿಗಳು ಸೇರಿದಂತೆ ಹಲವು ಮಂದಿ ವಾಟ್ಸ್ ಆ್ಯಪ್ ಮೂಲಕ ಮಾತುಕತೆ ನಡೆಸಿದ್ದಾರೆ. ಈ ವಿವರಗಳನ್ನು ಪರಿಶೀಲಿಸುತ್ತಿರುವ ಆದಾಯ ತೆರಿಗೆ ಇಲಾಖೆಯ ತನಿಖಾ ತಂಡ, ಹಣ ಸಂದಾಯಕ್ಕೆ ಸಂಬಂಧಿಸಿದಂತೆ ಇರುವ ಮಾಹಿತಿಯನ್ನು ಪ್ರತ್ಯೇಕಿಸಿ ಪಟ್ಟಿ ಸಿದ್ಧಪಡಿಸುತ್ತಿದೆ ಎಂದು ಮೂಲಗಳು ಹೇಳಿವೆ.

8ನೇ ಪುಟ ನೋಡಿ

ಅಳಿಸಿದ ಸಂದೇಶಗಳಲ್ಲೇನಿದೆ?

ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ವಶಕ್ಕೆ ಪಡೆದಿದ್ದ ಮೊಬೈಲ್‌ಗಳ ಪೈಕಿ ಕೆಲವರು ತಮ್ಮ ವಾಟ್ಸ್‌ಆ್ಯಪ್ ಸಂಭಾಷಣೆಯ ವಿವರಗಳನ್ನು ಅಳಿಸಿ ಹಾಕಿರುವುದು ಕಂಡುಬಂದಿದೆ. ಕೆಲವರು ನಿರ್ದಿಷ್ಟ ವ್ಯಕ್ತಿಯ ಜತೆಗಿನ ಮಾತುಕತೆಯ ಕೆಲವು ಅಂಶಗಳನ್ನು ಅಳಿಸಿ ಹಾಕಿದ್ದಾರೆ. ಅಳಿಸಿದ ಸಂದೇಶಗಳಲ್ಲಿ ಏನು ಮಾಹಿತಿ ಇತ್ತು ಎಂಬುದನ್ನು ಅರಿಯಲು ತಂತ್ರಜ್ಞರ ನೆರವು ಪಡೆಯಲು ಆದಾಯ ತೆರಿಗೆ ಅಧಿಕಾರಿಗಳು ಮುಂದಾಗಿದ್ದಾರೆ.

ಸಚಿವರ ಕಚೇರಿಗಳಿಗೂ ನಂಟು?

ಆಯನೂರು ಉಮೇಶ್, ಅರವಿಂದ್ ಮತ್ತು ಶಶಿಧರ ಮರಡಿ ಜತೆಗೆ ಕಾಮಗಾರಿಗಳ ಗುತ್ತಿಗೆಗೆ ಸಂಬಂಧಿಸಿದಂತೆ ವಾಟ್ಸ್‌ಆ್ಯಪ್ ಮೂಲಕ ನಡೆದಿರುವ ಮಾತುಕತೆಗಳಲ್ಲಿ ರಾಜ್ಯದ ಕೆಲವು ಸಚಿವರ ಕಚೇರಿಯ ಸಿಬ್ಬಂದಿಯೂ ಭಾಗಿಯಾಗಿದ್ದಾರೆ. ಸಚಿವರ ಕಚೇರಿಯಲ್ಲಿನ ಕೆಲವು ಸಿಬ್ಬಂದಿ ನಿರಂತರವಾಗಿ ಈ ಮೂವರ ಜತೆ ಸಂಪರ್ಕದಲ್ಲಿದ್ದು, ಕಾಮಗಾರಿಗಳ ಗುತ್ತಿಗೆ ಕುರಿತು ಚರ್ಚಿಸಿರುವುದು ಕಂಡುಬಂದಿದೆ ಎಂದು ಮೂಲಗಳು ತಿಳಿಸಿವೆ.

ಲಖಿಂಪುರ – ಖೇರಿ: ಸತತ ವಿಚಾರಣೆ ನಂತರ ಬಂಧನ

ಆಶಿಶ್ ಮಿಶ್ರಾ ನ್ಯಾಯಾಂಗ ವಶಕ್ಕೆ

ಲಖಿಂಪುರ-ಖೇರಿ (ಪಿಟಿಐ): ಕೇಂದ್ರ ಗೃಹ ಖಾತೆಯ ರಾಜ್ಯ ಸಚಿವ ಅಜಯ್ ಮಿಶ್ರಾ ಅವರ ಮಗ, ಲಖಿಂಪುರ-ಖೇರಿ ಹಿಂಸಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಶನಿವಾರ ರಾತ್ರಿ ಬಂಧಿಸಲಾಗಿರುವ ಆಶಿಶ್ ಮಿಶ್ರಾ ಅವರನ್ನು ಭಾನುವಾರ 14 ದಿನಗಳ ನ್ಯಾಯಾಂಗ ವಶಕ್ಕೆ ನೀಡಲಾಗಿದೆ.

ಲಖಿಂಪುರ-ಖೇರಿಯಲ್ಲಿ ಅ.3ರಂದು ಪ್ರತಿಭಟನನಿರತ ರೈತರ ಮೇಲೆ ವಾಹನ ಹರಿಸಿದ್ದರಿಂದ ನಾಲ್ವರು ಮೃತಪಟ್ಟಿದ್ದರು. ನಂತರದ, ಹಿಂಸಾಚಾರದಲ್ಲಿ ನಾಲ್ವರು ಮೃತಪಟ್ಟಿದ್ದರು. ರೈತರ ಮೇಲೆ ಹರಿದ ವಾಹನವನ್ನು ಆಶಿಶ್ ಅವರೇ ಚಲಾಯಿಸುತ್ತಿದ್ದರು ಎಂದು ರೈತರು ಆರೋಪಿಸಿದ್ದಾರೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಆಶಿಶ್ ಅವರನ್ನು ಶನಿವಾರ ಸುಮಾರು 12 ಗಂಟೆಗಳ ಕಾಲ ವಿಚಾರಣೆ ನಡೆಸಿದ ಪೊಲೀಸರು, ಬಳಿಕ ಬಂಧಿಸಿ ಮ್ಯಾಜಿಸ್ಟ್ರೇಟ್ ಎದುರು ಹಾಜರುಪಡಿಸಿದರು.

9ನೇ ಪುಟ ನೋಡಿ

'ವಿದ್ಯುತ್ ಬಳಕೆ ಇಳಿಕೆ, ಕಲ್ಲಿದ್ದಲು ಕೊರತೆ ಇಲ್ಲ'

ನವದೆಹಲಿ (ಪಿಟಿಐ): ದೇಶದಲ್ಲಿ ಶನಿವಾರ ವಿದ್ಯುತ್ ಬಳಕೆ ಶೇ 2ರಷ್ಟು ಇಳಿಕೆಯಾಗಿದೆ. ಜತೆಗೆ ಉಷ್ಣ ವಿದ್ಯುತ್ ಸ್ಥಾವರಗಳಿಗೆ ಕಲ್ಲಿದ್ದಲು ಪೂರೈಕೆಯಾಗುತ್ತಿದೆ. ಹೀಗಾಗಿ ಕಲ್ಲಿದ್ದಲು ಕೊರತೆಯಿಂದ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗುತ್ತದೆ ಎಂದು ಯಾರೂ ಆತಂಕ ಪಡುವ ಅವಶ್ಯಕತೆ ಇಲ್ಲ ಎಂದು ಕೇಂದ್ರ ಇಂಧನ ಸಚಿವಾಲಯ ಮತ್ತು ಕಲ್ಲಿದ್ದಲು ಸಚಿವಾಲಯ ಹೇಳಿವೆ.

9

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ: peoplesproblem@prajavani.co.in. ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.



ಕೊಡಿಗೇಹಳ್ಳಿ ಅಂಡರ್‌ಪಾಸ್‌ನಲ್ಲಿ ಮಳೆ ನೀರು ನಿಂತಿರುವ ದೃಶ್ಯ.

ಮಳೆಗಾಲದಲ್ಲಿ ಕೆರೆಯಾಗುವ ಅಂಡರ್‌ಪಾಸ್

ಕೊಡಿಗೇಹಳ್ಳಿಯ ರೈಲ್ವೆ ಅಂಡರ್ ಪಾಸ್ ಮಳೆ ಬಂತೆಂದರೆ, ಅಕ್ಷರಶಃ ಸಣ್ಣ ಕೆರೆಯಂತೆ ನೀರಿನಿಂದ ಕೂಡಿರುತ್ತದೆ. ಇದು, ಶಾಸಕ ಕೃಷ್ಣಬೈರೇಗೌಡ ಹಾಗೂ ಸಂಸದ ಸದಾನಂದಗೌಡರ ಕ್ಷೇತ್ರವೂ ಹೌದು. ವಿದ್ಯಾರಣ್ಯಪುರ, ದೊಡ್ಡಬೊಮ್ಮಸಂದ್ರ, ತಿಂಡ್ಲು, ಧನಲಕ್ಷ್ಮಿ ಬಡಾವಣೆ, ಬಳ್ಳಾರಿ ರಸ್ತೆ, ಟೆಲಿಕಾಂ ಬಡಾವಣೆ, ಕೆಂಪೇಗೌಡ ನಗರ ಸೇರಿದಂತೆ ವಿವಿಧ ರಸ್ತೆಗಳನ್ನು ಸಂಪರ್ಕಿಸಲು ಈ ಅಂಡರ್‌ಪಾಸ್ ಮೂಲಕ ಸಂಚರಿಸಬೇಕು.

ಸಾಮಾನ್ಯ ದಿನಗಳಲ್ಲಿ ವಾಹನ ಸಂಚಾರ ಎಂದಿನಂತೆ ಇರುತ್ತದೆ. ಆದರೆ, ಮಳೆಗಾಲದಲ್ಲಿ ಈ ಅಂಡರ್‌ಪಾಸ್ ಇದ್ದೂ ಇಲ್ಲದಂತೆ ಜಲಾವೃತಗೊಳ್ಳುತ್ತದೆ. ಈ ಸಮಸ್ಯೆ ಎದುರಾದಾಗ ಹತ್ತಿರದಲ್ಲೇ ಇರುವ ನಿವಾಸಗಳಿಗೆ ತಲುಪಲು ಸುತ್ತಿಬಳಸಿ ಬೇರೆ ರಸ್ತೆಗಳನ್ನು ಬಳಸಬೇಕಾಗಿದೆ.

ವರ್ಷದಲ್ಲಿ ಆರು ತಿಂಗಳು ಮಾತ್ರ ಬಳಸಲು ಯೋಗ್ಯವಾದ ಈ ಅಂಡರ್‌ಪಾಸ್ ನಿರ್ಮಿಸಿರುವುದು ಅವೈಜ್ಞಾನಿಕ. ಪೆಟ್ರೋಲ್ ದರ ಏರಿಕೆ ವಿರುದ್ಧ ಪ್ರತಿಭಟಿಸುವ ಇಲ್ಲಿನ ನಾಯಕರಿಗೆ ಅಂಡರ್‌ಪಾಸ್ ಬಳಸಲಾಗದೆ, ಸುತ್ತಿಕೊಂಡು ಸಂಚರಿಸುವ ಜನರ ಸಮಸ್ಯೆಯ ಅರಿವೂ ಇರಲಿ.

ಶೀಲಾ ನಟರಾಜ್

ದಂಡ ಕಟ್ಟಲೇಬೇಕೇ?

ನಾನು ಕೃಷ್ಣರಾಜಪುರದ ದೇವಸಂದ್ರದ ಗೋಕುಲ ಬಡಾವಣೆಯಲ್ಲಿ ಮನೆಯೊಂದನ್ನು ಕಟ್ಟಿಕೊಂಡಿದ್ದೇನೆ. ಅಲ್ಲಿ ಮಳೆ ನೀರು ಸಂಗ್ರಹ ವ್ಯವಸ್ಥೆ ಕಲ್ಪಿಸಿಲ್ಲ ಎಂದು ಜಲಮಂಡಳಿಯವರು ನನ್ನಿಂದ ಒಂದು ವರ್ಷದಿಂದ ದಂಡ ಕಟ್ಟಿಸಿಕೊಳ್ಳುತ್ತಿದ್ದಾರೆ. ಪ್ರತಿ ತಿಂಗಳು ನೀರಿನ ಬಳಕೆಯ ಶುಲ್ಕದೊಂದಿಗೆ ₹326 ದಂಡ ಕಟ್ಟುತ್ತಿದ್ದೇನೆ.

ಈ ಬಗ್ಗೆ ಕೇಳಿದರೆ,'ಈಗ ಎಲ್ಲರೂ ದಂಡ ಕಟ್ಟಬೇಕು.. ಬೇಕಾದರೆ ಕಚೇರಿಯಲ್ಲಿ ಕೇಳ್ಕೊಳ್ಳಿ' ಎಂದು ದಬಾಯಿಸುತ್ತಾರೆ. ಆದರೆ, ಈ ನಿಯಮ ಜಾರಿಗೂ ಮುನ್ನವೇ ಮನೆ ಕಟ್ಟಲಾಗಿದೆ. ಆದರೂ ದಂಡ ಕಟ್ಟಿಸಿಕೊಳ್ಳುತ್ತಿದ್ದಾರೆ. ದಂಡ ವಸೂಲಾತಿಯ ಬಗ್ಗೆ ಸೂಕ್ತ ಮಾಹಿತಿ ಪ್ರಕಟಿಸಬೇಕು.

ಲಕ್ಷ್ಮೀನಾರಾಯಣ ರಾವ್, ಗೋಕುಲ ಬಡಾವಣೆ

ಮಳೆ ಬಂದಾಗ ಜಲಾವೃತಗೊಳ್ಳುವ ಪ್ರಮೋದ್ ಬಡಾವಣೆ

ಬಡಾವಣೆಗೆ ನೀರು ನುಗ್ಗದಂತೆ ತಡೆಯಿರಿ

ಮಳೆಯಿಂದ ವೃಷಭಾವತಿ ನದಿ ಹರಿವಿನ ತಡೆಗೋಡೆಗಳು ಒಡೆದು, ನಾಯಂಡಹಳ್ಳಿ ಪಕ್ಕದ ಪ್ರಮೋದ್ ಬಡಾವಣೆಯ ಮನೆಗಳಿಗೆ ನೀರು ನುಗ್ಗುತ್ತದೆ. ಮಳೆ ಬಂದಾಗ ಇಲ್ಲಿನ ನಿವಾಸಿಗಳು ಅಭದ್ರತೆ ಎದುರಿಸುತ್ತಾರೆ. ಮನೆಗಳಲ್ಲಿನ ಟಿವಿ, ಫ್ರಿಡ್ಜ್, ಕಂಪ್ಯೂಟರ್ ಸೇರಿದಂತೆ ಅನೇಕ ಬೆಲೆ ಬಾಳುವ ವಸ್ತುಗಳಿಗೆ ಹಾನಿಯಾಗುತ್ತದೆ.

ಇಷ್ಟೆಲ್ಲ ನಡೆದರೂ ಇಲ್ಲಿ ಮುಖಂಡರು ಬಡಾವಣೆಯತ್ತ ಮುಖ ಮಾಡುವುದಿಲ್ಲ. ಸಮಸ್ಯೆ ಹೇಳಿಕೊಳ್ಳಲು ತೆರಳಿದರೆ, ನೀವು ಬೇರೆ ಪಕ್ಷಕ್ಕೆ ಮತ ಹಾಕಿದ್ದೀರಿ ಎಂದು ಅದರಲ್ಲೂ ರಾಜಕೀಯದ ಮಾತುಗಳನ್ನಾಡುತ್ತಾರೆ. ಸ್ಥಳೀಯ ಶಾಸಕರು ಬಡಾವಣೆ ಅಭಿವೃದ್ಧಿಗೆ ಯಾವ ಕೆಲಸವನ್ನೂ ಮಾಡುತ್ತಿಲ್ಲ. ಈ ಬಡಾವಣೆಯನ್ನು ಬೇರೆ ಕ್ಷೇತ್ರಕ್ಕಾದರೂ ಸೇರ್ಪಡೆ ಮಾಡಿ. ಅದಕ್ಕೂ ಬಡಾವಣೆಯ ಮನೆಗಳಿಗೆ ಮಳೆ ನೀರು ನುಗ್ಗದಂತೆ ಕ್ರಮ ಜರುಗಿಸಬೇಕು.

ಚಿಕ್ಕವೀರೇಗೌಡ, ಬಡಾವಣೆ ನಿವಾಸಿ

ಕಸ ಹಾಕುವವರ ವಿರುದ್ಧ ಕ್ರಮ ಕೈಗೊಳ್ಳಿ

ಬನಶಂಕರಿ ಎರಡನೇ ಹಂತದ ಕನಕ ಬಡಾವಣೆಯಲ್ಲಿ ಬೇರೆ ಬಡಾವಣೆಗಳ ನಿವಾಸಿಗಳು ಪ್ರತಿದಿನ ವಾಹನಗಳಲ್ಲಿ ಬಂದು ಕಸ ಬಿಸಾಡಿ ಹೋಗುತ್ತಾರೆ. ನನ್ನ ಕಣ್ಣಿಗೆ ಕಂಡವರನ್ನು ದಬಾಯಿಸುತ್ತೇನೆ. ಮರುದಿನ ಬಂದು ನೋಡಿದಾಗ ಅಲ್ಲಿ ಮತ್ತೆ ಕಸದ ರಾಶಿ ಬಿದ್ದಿರುತ್ತದೆ.

ಸಾರ್ವಜನಿಕರು ಸಂಚರಿಸುವ ರಸ್ತೆಯಲ್ಲೇ ಈ ಸ್ಥಿತಿ ಎದುರಾಗಿದೆ. ವಿಲೇವಾರಿಯಾಗದ ಕಸದ ರಾಶಿಯಿಂದ ಈ ರಸ್ತೆಯಲ್ಲಿ ಮೂಗು ಮುಚ್ಚಿ ಸಂಚರಿಸಬೇಕಾಗಿದೆ. ಈಗ ರಸ್ತೆಯವರೆಗೆ ರಾಶಿ ಬೀಳುತ್ತಿದ್ದು, ಇಲ್ಲಿ ಕಸ ಹಾಕದಂತೆ ಪಾಲಿಕೆ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು. ಕಸ ಹಾಕುವವರ ವಿರುದ್ಧ ದಂಡ ವಿಧಿಸಬೇಕು.

ವಿ.ವಿಜಯೇಂದ್ರ ರಾವ್, ಕನಕ ಬಡಾವಣೆ

ಕನಕ ಬಡಾವಣೆಯ ರಸ್ತೆಯಲ್ಲಿ ಕಸದ ರಾಶಿ

ರಸ್ತೆ ವಿಭಜಕಗಳಿಗೆ ಬೇಲಿ ನಿರ್ಮಿಸಿ

ನಗರದ ರಸ್ತೆಗಳಲ್ಲಿ ವಾಹನಗಳ ಸುಗಮ ಸಂಚಾರಕ್ಕಾಗಿ ವಿಭಜಕಗಳನ್ನು ನಿರ್ಮಿಸಿರುವುದು ಸ್ವಾಗತಾರ್ಹ. ಆದರೆ, ಪಾದಚಾರಿಗಳು ಕಿರಿದಾದ ವಿಭಜಕಗಳನ್ನು ಹಾರಿ ರಸ್ತೆಗಳನ್ನು ದಾಟುತ್ತಿರುವುದು ಅಪಾಯಕಾರಿ ಬೆಳವಣಿಗೆ. ಕೆಲವು ವಿಭಜಕಗಳಿಗೆ ಈಗಾಗಲೇ ತಂತಿ ಬೇಲಿಗಳನ್ನು ಅಳವಡಿಸಿರುವುದರಿಂದ ಇಂತಹ ಜಾಗಗಳಲ್ಲಿ ಜನರು ವಿಭಜಕ ದಾಟುವುದು ನಿಯಂತ್ರಣಕ್ಕೆ ಬಂದಿದೆ.

ಇದೇ ರೀತಿಯಲ್ಲಿ ವಿಭಜಕಗಳಿಲ್ಲದ ರಸ್ತೆಗಳನ್ನು ಪರಿಶೀಲಿಸಿ, ಅಲ್ಲಿ ತಂತಿ ಬೇಲಿಗಳನ್ನು ಅಡ್ಡಲಾಗಿ ನಿರ್ಮಿಸುವ ಕೆಲಸಕ್ಕೆ ಪಾಲಿಕೆ ಮುಂದಾಗಬೇಕು. ಇದರಿಂದ ಅಪಘಾತಗಳನ್ನು ತಪ್ಪಿಸಬಹುದು ಹಾಗೂ ಜನರ ಪ್ರಾಣ ರಕ್ಷಿಸಬಹುದು.

ಬಸವರಾಜ ಹುಡೇದಗಡ್ಡಿ, ರಾಜಾಜಿನಗರ

ಮಲ್ಲತ್ತಹಳ್ಳಿಯ ಕೆಂಗುಂಟೆ ಗ್ರಾಮದ ರಾಜಕಾಲುವೆಯಲ್ಲಿ ಹೂಳು ತುಂಬಿಕೊಂಡಿರುವುದು.

ರಾಜಕಾಲುವೆಯಲ್ಲಿ ಸಂಗ್ರಹವಾಗಿರುವ ಹೂಳು ತೆಗೆಯಿರಿ

ಮಲ್ಲತ್ತಹಳ್ಳಿ ಸಮೀಪದ ಕೆಂಗುಂಟೆ ಗ್ರಾಮದಲ್ಲಿರುವ ರಾಜಕಾಲುವೆಯಲ್ಲಿ ಹೂಳು ತುಂಬಿಕೊಂಡಿರುವ ಕಾರಣ ಕೊಳಚೆ ನೀರು ಸರಾಗವಾಗಿ ಹರಿಯಲು ಸಾಧ್ಯವಾಗದೆ, ಮೂಗು ಮುಚ್ಚಿ ಓಡಾಡುವ ಪರಿಸ್ಥಿತಿ ನಿರ್ಮಾಣ ಆಗಿದೆ.

ರಾಜಕಾಲುವೆ ಸಮೀಪದಲ್ಲೇ ಸೂರು ಕಟ್ಟಿಕೊಂಡಿರುವ ಬಡವರು, ನಿರ್ಗತಿಕರು, ಕೂಲಿ ಕಾರ್ಮಿಕರಿಗೂ ಇದು ದೊಡ್ಡ ತಲೆನೋವಾಗಿ ಪರಿಣಮಿಸಿದೆ. ಮಳೆ ಬಿದ್ದರಂತೂ ರಾಜಕಾಲುವೆ ಅಕ್ಕಪಕ್ಕದ ಮನೆಗಳು ಮಳೆ ನೀರಿನಿಂದ ಜಲಾವೃತಗೊಳ್ಳುತ್ತವೆ. ಈ ವೇಳೆ ಹಾವು, ಚೇಳಿನಂತಹ ಜೀವಿಗಳೂ ಪ್ರತ್ಯಕ್ಷವಾಗುತ್ತವೆ. ಇದರಿಂದ ಇಲ್ಲಿನ ಜನ ನೆಮ್ಮದಿ ಜೀವನ ನಡೆಸಲು ಸಾಧ್ಯವಾಗುತ್ತಿಲ್ಲ.

ಇದೇ ಜಾಗದಲ್ಲಿ ಪಾಲಿಕೆಯವರು ಕಸ ಸುರಿಯುತ್ತಾರೆ. ಚಿಕ್ಕ ಮಕ್ಕಳು, ವೃದ್ಧರು ಸಮೀಪದ ರಸ್ತೆಗಳಲ್ಲಿ ಓಡಾಡಲು ಹೆಣಗಾಡಬೇಕಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ರಾಜಕಾಲುವೆ ಸಮಸ್ಯೆ ಬಗೆಹರಿಸಬೇಕು ಹಾಗೂ ಇಲ್ಲಿ ಕಸ ಹಾಕುವುದನ್ನು ನಿಯಂತ್ರಿಸಬೇಕು.

ಎಚ್.ತುಕಾರಾಂ, ಮಲ್ಲತ್ತಹಳ್ಳಿ

ಬೈರತಿ ರಸ್ತೆಗಳಿಗೆ ಡಾಂಬರು ಭಾಗ್ಯ ಯಾವಾಗ?

ಹೆಣ್ಣೂರು-ಬಾಗಲೂರು ಮುಖ್ಯರಸ್ತೆಯಲ್ಲಿರುವ ಬೈರತಿ, ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ ಹಾಗೂ ಹೆಬ್ಬಾಳ ಶಾಸಕ ಬಿ.ಎಸ್. ಸುರೇಶ್ ಅವರ ತವರೂರು. ಇಷ್ಟೆಲ್ಲ ರಾಜಕೀಯ ಹಿನ್ನೆಲೆಯುಳ್ಳ ಬೈರತಿ ಗ್ರಾಮವು ಮೂಲಸೌಕರ್ಯಗಳಿಂದ ವಂಚಿತವಾಗಿರುವುದು ಶೋಚನೀಯ.

ಕಾಮಗಾರಿಗಳ ಹೆಸರಲ್ಲಿ ಇಲ್ಲಿನ ರಸ್ತೆಗಳನ್ನೆಲ್ಲ ಅಗೆಯಲಾಗಿದೆ. ಮಳೆಗಾಲದಲ್ಲಿ ರಸ್ತೆಗಳೆಲ್ಲ ಕೆಸರುಮಯ. ವಾಹನಗಳು ಮತ್ತು ಜನರು ಸಂಚರಿಸಲಾಗದ ಸ್ಥಿತಿಗೆ ರಸ್ತೆಗಳು ತಲುಪಿವೆ. ಇದರಿಂದ ಬೈರತಿ ರಸ್ತೆಗಳಿಗೆ ಬರಲು ಆಟೊ ಮತ್ತು ಕ್ಯಾಬ್ ಚಾಲಕರು ಹಿಂದೇಟು ಹಾಕುತ್ತಾರೆ. ವಿದ್ಯಾರ್ಥಿಗಳು, ಹಿರಿಯರು ಹಾಗೂ ಮಕ್ಕಳು ಬಸ್ ನಿಲ್ದಾಣದವರೆಗೆ ಈ ಕೆಸರು ರಸ್ತೆಗಳಲ್ಲೇ ನಡೆಯುವುದು ಅನಿವಾರ್ಯವಾಗಿದೆ.

ಬೈರತಿ–ಗೆದ್ದಲಹಳ್ಳಿ ಸಂಪರ್ಕ ರಸ್ತೆಗೆ ಡಾಂಬರು ಹಾಕಿಸಿ, ಎರಡು ತಿಂಗಳೂ ಕಳೆದಿಲ್ಲ. ಕಳಪೆ ಕಾಮಗಾರಿಯಿಂದಾಗಿ ರಸ್ತೆಯಲ್ಲಿ ಗುಂಡಿಗಳು ಬಿದ್ದಿವೆ. ಈ ಕುರಿತು ಸ್ಥಳೀಯ ಶಾಸಕ ಅರವಿಂದ ಲಿಂಬಾವಳಿ ಅವರಿಗೆ ಹಲವು ಬಾರಿ ಮನವಿ ಮಾಡಿಕೊಂಡರೂ ಪ್ರಯೋಜನವಾಗಲಿಲ್ಲ. ಲಕ್ಷದಲ್ಲಿ ಇದೂ ಒಂದು ಸಮಸ್ಯೆ ಎಂಬಂತೆ ಪಾಲಿಕೆಯಿಂದ ಸ್ಪಂದನೆ ಸಿಗುವುದಿಲ್ಲ. ಬೈರತಿ ರಸ್ತೆಗಳಿಗೆ ಶೀಘ್ರವಾಗಿ ಡಾಂಬರು ಕಲ್ಪಿಸಿದರೆ, ನಿವಾಸಿಗಳು ನಿಟ್ಟುಸಿರು ಬಿಡುತ್ತಾರೆ.

ಅಜಯ್ ರಾಜ್, ಬೈರತಿ

ಕೆಸರುಮಯವಾಗಿರುವ ಬೈರತಿ ರಸ್ತೆ

ಪರಸ್ಪರ ಅಂತರ ಕಾಯ್ದುಕೊಳ್ಳಿ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಮನ್‌ಸುಖ್ ಮಾಂಡವಿಯಾ

‘ಜನೌಷಧಿ ಮಳಿಗೆಯಿಂದ ಅತ್ಯುತ್ತಮ ಸೇವೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜನೌಷಧಿ ಮಳಿಗೆಗಳಲ್ಲಿನ ಔಷಧಗಳು ಉತ್ತಮ ಗುಣಮಟ್ಟದಿಂದ ಕೂಡಿದ್ದು, ಔಷಧ ನಿಯಂತ್ರಕರಿಂದ ಸೂಕ್ತ ತಪಾಸಣೆಗೆ ಒಳಪಡುತ್ತಿವೆ. ಇದರಿಂದಾಗಿ ಕೇಂದ್ರ ಸರ್ಕಾರ ಆರೋಗ್ಯ ವಲಯದಲ್ಲಿ ಅತ್ಯುತ್ತಮ ಸೇವೆ ಒದಗಿಸುತ್ತಿದೆ’ ಎಂದು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಮನ್‌ಸುಖ್ ಮಾಂಡವಿಯಾ ತಿಳಿಸಿದರು.

ಭಾರತೀಯ ಔಷಧ ಮತ್ತು ವೈದ್ಯಕೀಯ ಸಾಧನಗಳ ಬ್ಯೂರೋ (ಪಿಎಂಬಿಐ) ವತಿಯಿಂದ ಬಸವನಗುಡಿಯಲ್ಲಿ ಭಾನುವಾರ ಆಯೋಜಿಸಿದ್ದ ಆಜಾದಿ ಕಾ ಅಮೃತ ಮಹೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಜನೌಷಧಿ ಮಳಿಗೆ ಕಾರ್ಯಕ್ರಮದಡಿ ಜನರಿಗೆ ಅಗತ್ಯ ಔಷಧಿಗಳು ಸೂಕ್ತ ರೀತಿಯಲ್ಲಿ ತಲುಪುತ್ತಿದೆ. ಹೃದಯ ಶಸ್ತ್ರಚಿಕಿತ್ಸೆಗೆ ಒಳಗಾದವರಿಗೆ ತಿಂಗಳಿಗೆ ಕನಿಷ್ಠ ₹4 ಸಾವಿರ ಬೆಲೆಯ ಔಷಧ ಅಗತ್ಯ. ಆದರೆ, ಜನೌಷಧಿ ಮಳಿಗೆಗಳಲ್ಲಿ ಕಡಿಮೆ ಬೆಲೆಗೆ ಔಷಧಗಳು ಲಭ್ಯವಾಗುತ್ತಿವೆ. ದೇಶದಲ್ಲಿ ಪ್ರಸ್ತುತ ಎಂಟು ಸಾವಿರಕ್ಕೂ ಹೆಚ್ಚು ಮಳಿಗೆಗಳು ಕಾರ್ಯನಿರ್ವಹಿಸುತ್ತಿವೆ’ ಎಂದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ‘ಪ್ರಧಾನಿ ಮೋದಿ ಅವರು, ಕೇವಲ ಯೋಜನೆಗಳನ್ನು ಘೋಷಿಸುವುದಿಲ್ಲ. ಅದನ್ನು ಸೂಕ್ತ ರೀತಿಯಲ್ಲಿ ಜನರಿಗೆ ತಲುಪಿಸುವಂತೆ ಸೂಕ್ತ ಕಾರ್ಯ ಹಾಗೂ ಪ್ರಚಾರಕ್ಕೂ ಆದ್ಯತೆ ನೀಡುತ್ತಿದ್ದಾರೆ’ ಎಂದು ಶ್ಲಾಘಿಸಿದರು.

ಶಾಸಕ ಎಲ್.ಎ.ರವಿ ಸುಬ್ರಹ್ಮಣ್ಯ, ಅದಮ್ಯ ಚೇತನ ಪ್ರತಿಷ್ಠಾನದ ವ್ಯವಸ್ಥಾಪಕ ಟ್ರಸ್ಟಿ ತೇಜಸ್ವಿನಿ ಅನಂತಕುಮಾರ್, ಪಿಎಂಬಿಐನ ಉಪ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪಾರ್ಥ್ ಗೌತಮ್ ಶರ್ಮ ಹಾಗೂ ಇತರರು ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವಿಯಾ ಅವರು ಹಿರಿಯ ನಾಗರಿಕರಿಗೆ ಔಷಧ ಕಿಟ್‌ಗಳನ್ನು ವಿತರಿಸಿದರು. ಆರೋಗ್ಯ ಸಚಿವ ಕೆ.ಸುಧಾಕರ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಂಸದ ತೇಜಸ್ವಿ ಸೂರ್ಯ ಇದ್ದಾರೆ — ಪ್ರಜಾವಾಣಿ ಚಿತ್ರ

ಮಕ್ಕಳನ್ನು ಬಯಸದ ಆಧುನಿಕ ಮಹಿಳೆ: ಸಚಿವ ಕೆ.ಸುಧಾಕರ್

ಪ್ರಜಾವಾಣಿ ವಾರ್ತೆ

ಬೆಂಗಳೂರು:‘ದೇಶದಲ್ಲಿನ ಆಧುನಿಕ ಮಹಿಳೆಯರು ಒಬ್ಬರೇ ಜೀವನ ನಡೆಸಲು ಬಯಸುತ್ತಿದ್ದಾರೆ. ವಿವಾಹವಾದರೂ ಮಕ್ಕಳಿಗೆ ಜನ್ಮ ನೀಡಲು ಇಷ್ಟಪಡುತ್ತಿಲ್ಲ. ಬದಲಾಗಿ ಬಾಡಿಗೆ ತಾಯ್ತನವನ್ನು ಅನುಸರಿಸುತ್ತಿದ್ದಾರೆ’ ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ತಿಳಿಸಿದರು.

ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯು (ನಿಮ್ಹಾನ್ಸ್) ಭಾನುವಾರ ಹಮ್ಮಿಕೊಂಡಿದ್ದ ವಿಶ್ವ ಮಾನಸಿಕ ಆರೋಗ್ಯ ದಿನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ನಮ್ಮ ಆಲೋಚನೆಗಳಲ್ಲಿನ ಇಂತಹ ಬದಲಾವಣೆ ಸರಿಯಲ್ಲ. ಪಾಶ್ಚಿಮಾತ್ಯ ಸಂಸ್ಕೃತಿಯ ಹಾದಿಯಲ್ಲಿ ಸಾಗುತ್ತಿರುವ ನಾವು, ತಂದೆ–ತಾಯಿಯ ಜೊತೆಗೆ ಇರಲೂ ಇಷ್ಟಪಡುತ್ತಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

‘ಮಾನಸಿಕ ಆರೋಗ್ಯ ಹೊಂದಿಲ್ಲದ ವ್ಯಕ್ತಿ ಆರೋಗ್ಯಕರವಾಗಿರಲು ಸಾಧ್ಯವಿಲ್ಲ. ದೇಶದಲ್ಲಿ ಪ್ರತಿ ಏಳು ಮಂದಿಯಲ್ಲಿ ಒಬ್ಬರು ವಿವಿಧ ರೀತಿಯ ಮಾನಸಿಕ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಐಟಿ, ಕೃಷಿ ಸೇರಿದಂತೆ ಪ್ರತಿ ವೃತ್ತಿಯಲ್ಲೂ ಜನ ಒತ್ತಡಗಳನ್ನು ಎದುರಿಸುತ್ತಾರೆ. ನಮ್ಮ ಪೂರ್ವಜರು ಕೊಡುಗೆಯಾಗಿ ನೀಡಿರುವ ಯೋಗ, ಧ್ಯಾನ ಮತ್ತು ಪ್ರಾಣಾಯಾಮ ಅದ್ಭುತವಾದ ಸಾಧನಗಳು. ಪ್ರತಿ ಮಾನಸಿಕ ಸಮಸ್ಯೆಗೂ ನಮ್ಮಲ್ಲಿ ಚಿಕಿತ್ಸೆ ಇದೆ’ ಎಂದರು.

‘ದೇಶದಲ್ಲಿ ಒತ್ತಡ, ಖಿನ್ನತೆ ಸೇರಿದಂತೆ ವಿವಿಧ ಮಾನಸಿಕ ಸಮಸ್ಯೆಗಳಿಂದ ಬಳಲುತ್ತಿರುವವರು ಮನೋವೈದ್ಯರ ಬಳಿಗೆ ಬರಲು ಹಿಂಜರಿಯುತ್ತಾರೆ. ಆದರೆ, ವಿದೇಶಗಳಲ್ಲಿ ಈ ರೀತಿಯ ಸಮಸ್ಯೆ ಎದುರಾದರೆ, ಕೂಡಲೇ ಮನೋವೈದ್ಯರನ್ನು ಭೇಟಿಯಾಗಿ ಸಲಹೆ ಪಡೆಯುತ್ತಾರೆ. ದೇಶದ ಜನ ಹಿಂಜರಿಕೆ ಮನೋಭಾವವನ್ನು ದೂರ ಇಡಬೇಕು’ ಎಂದು ಸಲಹೆ ನೀಡಿದರು.

ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವಿಯಾ, ‘ಮಾನಸಿಕ ಆರೋಗ್ಯ ಪ್ರಕರಣಗಳ ಇತ್ತೀಚಿನ ಏರಿಕೆಗೆ ನಮ್ಮ ಜೀವನಶೈಲಿ ಮತ್ತು ಕುಟುಂಬ ರಚನೆಯಲ್ಲಿನ ಬದಲಾವಣೆ ಪ್ರಮುಖ ಕಾರಣ. ಮಾನಸಿಕ ಆರೋಗ್ಯ ಸಮಸ್ಯೆಗಳು ಮಧುಮೇಹದಂತೆ ನಿಧಾನವಾಗಿ ಕೊಲ್ಲುವ ಕೊಲೆಗಾರ’ ಎಂದು ಅವರು ಎಚ್ಚರಿಸಿದರು.

‘ಮಾನಸಿಕ ಆರೋಗ್ಯ ಸಂಬಂಧ ದೇಶದಲ್ಲಿ ಸಂಶೋಧನೆಗಳು ಹೆಚ್ಚಾಗಿ ನಡೆಯಬೇಕಿದೆ. ಸಂಶೋಧನೆಗಳೊಂದಿಗೆ ಸರ್ಕಾರಕ್ಕೆ ಸಲಹೆಗಳನ್ನು ನೀಡುವ ಮೂಲಕ ಆರೋಗ್ಯ ಕ್ಷೇತ್ರದಲ್ಲಿ ಹೊಸ ಬದಲಾವಣೆಗಳನ್ನು ತರಬಹುದು’ ಎಂದೂ ಹೇಳಿದರು.

‘ತಂಬಾಕು ಬಿಟ್ಟುಬಿಡಿ..ಹೀರೋ ಆಗಿ’ ಜಾಗೃತಿ ಅಭಿಯಾನಕ್ಕೆ ಕಾರ್ಯಕ್ರಮದಲ್ಲಿ ಚಾಲನೆ ನೀಡಲಾಯಿತು. ನಿಮ್ಹಾನ್ಸ್ ನಿರ್ದೇಶಕಿ ಪ್ರತಿಮಾ ಮೂರ್ತಿ ಹಾಗೂ ಸಂಸ್ಥೆಯ ಸಿಬ್ಬಂದಿ ಭಾಗವಹಿಸಿದ್ದರು.

ಮಲಬಾರ್ ಗೋಲ್ಡ್ ಆಕರ್ಷಕ ಕೊಡುಗೆ

ಬೆಂಗಳೂರು: ‘ಮಲಬಾರ್ ಗೋಲ್ಡ್ ಮತ್ತು ಡೈಮಂಡ್ಸ್’ನ ಕಲಾತ್ಮಕ ಆಭರಣಗಳ ಪ್ರದರ್ಶನ ಮತ್ತು ಮಾರಾಟದಲ್ಲಿ ಆಕರ್ಷಕ ಕೊಡುಗೆ ಘೋಷಿಸಲಾಗಿದೆ.

₹50 ಸಾವಿರ ಮೌಲ್ಯದ ಪ್ರತಿಯೊಂದು ವಜ್ರದ ಆಭರಣಗಳು ಮತ್ತು ಮುತ್ತು ರತ್ನಗಳನ್ನು ಖರೀದಿಸಿದಾಗ ಚಿನ್ನದ ನಾಣ್ಯ ಕೊಡುಗೆಯಾಗಿ ದೊರೆಯಲಿದೆ.

ಜಯನಗರ ಮತ್ತು ರಾಜಾಜಿನಗರ ಷೋ ರೂಮ್‌ಗಳಲ್ಲಿ ಪ್ರದರ್ಶನ ಮತ್ತು ಮಾರಾಟಕ್ಕೆ ಶನಿವಾರ ಚಾಲನೆ ನೀಡಲಾಗಿದ್ದು, ಅಕ್ಟೋಬರ್ 17ರ ತನಕ ನಡೆಯಲಿದೆ.

ಪೆಟ್ರೋಲ್, ಡೀಸೆಲ್ ದರ ಏರಿಕೆ ನಿಯಂತ್ರಣಕ್ಕೆ ಆಗ್ರಹ

ಬೆಂಗಳೂರು: ‘ಡೀಸೆಲ್ ದರ ಶತಕ ಬಾರಿಸುವ ಮೂಲಕ ಬಡವರು, ಮಧ್ಯಮ ವರ್ಗದ ಜನರು ಬೆಚ್ಚಿ ಬೀಳಿಸುವ ವಾತಾವರಣ ಉಂಟಾಗಿದೆ’ ಎಂದು ಜೆಡಿಎಸ್ ಮುಖಂಡ ಟಿ.ಎ.ಶರವಣ ಖಂಡನೆ ವ್ಯಕ್ತಪಡಿಸಿದ್ದಾರೆ.

‘ಕಳೆದ ವಾರವಷ್ಟೇ ಅಡುಗೆ ಅನಿಲ ದರ ಏರಿಕೆಯಾಗಿದೆ. ಈಗ ಡೀಸೆಲ್ ದರ ಏರಿಕೆಯಿಂದ ಜನ ಸಾಮಾನ್ಯರ ಬದುಕು ಛಿದ್ರವಾಗಿದೆ. ಬಡವರ ಬದುಕನ್ನು ದುಸ್ತರ ಮಾಡುವುದೇ ಪ್ರಧಾನಿ ನರೇಂದ್ರ ಮೋದಿ ಅವರ ಅಚ್ಛೆ ದಿನ್ ಇರಬಹುದೇ’ ಎಂದು ಟೀಕಿಸಿದ್ದಾರೆ.

‘ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ತಕ್ಷಣ ಮಧ್ಯಪ್ರವೇಶಿಸಿ ಜನರ ನೆರವಿಗೆ ಮುಂದಾಗಬೇಕು. ದರ ಏರಿಕೆ ನಿಯಂತ್ರಿಸಬೇಕು’ ಎಂದೂ ಆಗ್ರಹಿಸಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080 - 45557160 /161/ 162/ 163/ 164 9845114560 / 9731810277/ 9886213331

PUBLIC NOTICE

PUBLIC NOTICE
The general public are hereby informed that my client intends to purchase the property described in the schedule herein below from the present owner M.A.Christu Raja S/o Sri.Ananthaiah Naidu Any persons having any claim or right, title and interest or any sough of objections for the said purchase may file their objections in writing, along with copies of supporting documents to the undersigned within 15 days from this publication failing which it shall be deemed that there are no claims over the Schedule property and my client shall be advise to complete the sale.

SCHEDULE
All that piece and parcel of property bearing Site NO. 10, measuring East to West 50 Feet and North to South 32 Feet, totally 1600 Sqare Feet, Municipal Katha No.63, formed in a converted piece of land in Sy. NO. 46/2, Vide order NO. ALN(KRTH)SR/22/2014-15, dated 14-11-2014, Situated at Kalikere Village, K.R.Puram Hobli, Bengaluru East Taluk, Taluk, Bangalore, presently under BBMP Limits Ward No.26, and bounded on.
East - Site No.6
West - Road
North - Site No.9
South - Site No.11
G.Ravi Kumar Advocate
No.46 Bellary Main Road,
Ganganagar, Bangalore-5600032
Mobile:
9663893540/9886475003

BUSINESS

Business Offers

Finance

NRI'S INVESTMENT And Finance Available On Low Interest Against Properties, Land & Building, Sites, Flats, Converted & Agriculture Lands Call: 7411265189

EDUCATIONAL

Admission

ALAGAPPA UNIVERSITY DDE (ONLINE ADMISSION) by Daranisri Academy, Courses Offered: All UG/ PG/ MBA/ MCA/ PG Diploma. 9842721540, 04344-220910, 04344-221540

DIRECT FINAL: LLB (Can Practice) B.Tech/ M.Tech/ Diploma/ B.Pharm/ D.Pharm/ MBA/ BBA/ BCA/ B.Sc (IT, CS)/ B.Com. LIMITED SEATS. Call: 9448460103/ 7093438248.

RENTAL PROPERTIES

Accommodation Available

Commercial

1500 SQFT Ground floor, 3000 sqft Ground floor Or together 4500 sqft suitable for retail, office Next to Indian oil petrol bunk R.V. Main Road contact owner: 9740854716.

REAL ESTATE SELLING

Sites

Kanakapura Road

SALE 2800 sft. Anjanadri Layout, Konankunte Rs. 7500 Call 7729895272.

JOB OPPORTUNITIES

General

JOB OPPORTUNITY, for Retired, Men, House wife, Work from home/ office, SSLC, PUC, Degree, in Reputed Company, Age 40-75, Bangalorians only, Earn up to 40000, Call: 9741401834

Marketing & Sales

LOOKING FOR Sales Staff in Bangalore Showroom with 6 to 8 years experience in Jewellery. Salary starting from 25000 up to 35000. Food and Accommodation shall be provided by the Company. Contact B.B. Jewellers 9986577790

Multiple Vacancy

XIME Bangalore needs Administrative Personnel
• Librarian M.L.I.Sc.
• IT Support - Dip / Degree in Engg.
• Officers: Placement / Programmes / Corporate Relations - Master's Degree with a consistently good academic record.
• Minimum 7 years experience for all positions.
Apply within 7 days to: secretary@xime.org
Xavier Institute of Management & Entrepreneurship
Electronics City, Phase II, Hosur Road, Bangalore-100
Tel: +91 80 28528597/98
Mob.9845280734
Website: www.xime.org

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH DECCAN HERALD
SELL, RENT, BUY PROPERTY THROUGH PROPERTY CLASSIFIEDS ADS IN DECCAN HERALD & PRAJAVANI NEWS PAPER
BOOK YOUR CLASSIFIEDS ADS ONLINE
WWW.DHCLASSIFIEDS.COM

ಪ್ರಜಾವಾಣಿ ಕ್ಲಾಸಿಫೈಡ್ಸ್
FOR MORE INFORMATION
CONTACT 9880856233 | 9886213331
Email: santhoshkumar@deccanherald.co.in

ಇನ್ನೂ ಎರಡು ದಿನ ಮುಂದುವರಿಯಲಿದೆ ಮಳೆ: ಮಾಹಿತಿ ನೀಡಿದ ಹವಾಮಾನ ಇಲಾಖೆ

ಮುಂದುವರಿದ ಮಳೆ; ಗುಡುಗು–ಸಿಡಿಲು ಅಬ್ಬರ

ಪ್ರಜಾವಾಣಿ ವಾರ್ತೆ

ನಗರದ ಜೆ.ಸಿ. ರಸ್ತೆಯಲ್ಲಿ ಮಳೆ ಸುರಿಯುತ್ತಿದ್ದ ಸಂದರ್ಭದಲ್ಲಿ ಬಂಡಿ ಸಮೇತ ಹೆಜ್ಜೆ ಹಾಕಿದ ಕುದುರೆಗಳು – ಪ್ರಜಾವಾಣಿ ಚಿತ್ರ

ನಗರದ ರೈಲು ನಿಲ್ದಾಣ ಬಳಿ ಮಗುವಿನ ಸಮೇತ ಮಹಿಳೆಯರು ಕೊಡೆ ಆಶ್ರಯ ಪಡೆದರು

ಬೆಂಗಳೂರು: ನಗರದಲ್ಲಿ ಕೆಲ ದಿನಗಳಿಂದ ಮಳೆ ಸುರಿಯುತ್ತಿದ್ದು, ಭಾನುವಾರವೂ ಗುಡುಗು– ಸಿಡಿಲು ಸಹಿತ ಮಳೆ ಅಬ್ಬರ ಜೋರಾಗಿತ್ತು.

ನಗರದಲ್ಲಿ ಮೋಡ ಕವಿದ ವಾತಾವರಣವೂ ಮುಂದುವರಿದಿದೆ. ಭಾನುವಾರ ಬೆಳಿಗ್ಗೆಯಿಂದಲೇ ಬಹುತೇಕ ಕಡೆ ಜಿಟಿ ಜಿಟಿ ಮಳೆ ಶುರುವಾಯಿತು. ಸಮಯ ಕಳೆದಂತೆ ಬಿಡುವು ಕೊಡುತ್ತಲೇ ಮಳೆ ಜೋರಾಗಿ ಸುರಿಯಿತು.

ರಾಜಾಜಿನಗರದ, ವಿಜಯನಗರ, ಮಹಾಲಕ್ಷ್ಮಿ ಲೇಔಟ್, ಬಸವೇಶ್ವರನಗರ, ಶಿವಾಜಿನಗರ, ಇಂದಿರಾನಗರ, ಹಲಸೂರು, ಮಲ್ಲೇಶ್ವರ, ಯಶವಂತಪುರ, ಪೀಣ್ಯ, ಸಂಪಂಗಿರಾಮನಗರ, ನಾಗರಬಾವಿ, ಕೆಂಗೇರಿ, ರಾಜರಾಜೇಶ್ವರಿನಗರ, ಅನ್ನಪೂರ್ಣೇಶ್ವರಿನಗರ, ಬನಶಂಕರಿ, ಆರ್.ಟಿ.ನಗರ, ಹೆಬ್ಬಾಳ, ಸಂಜಯನಗರ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಮಳೆ ಆಯಿತು.

ರಾಜಾಜಿನಗರದ ನವರಂಗ್ ವೃತ್ತ, ಹಲಸೂರು ಬಳಿಯ ಗಂಗಾಧರ ಚೆಟ್ಟಿ ರಸ್ತೆ ಹಗೂ ರಾಜರಾಜೇಶ್ವರಿನಗರದಲ್ಲಿ ಮರದ ಕೊಂಬೆಗಳು ಬಿದ್ದಿದ್ದವು. ಇದರಿಂದ ಈ ಮಾರ್ಗದಲ್ಲಿ ವಾಹನಗಳ ಓಡಾಟ ಕೆಲ ನಿಮಿಷ ಸ್ಥಗಿತವಾಗಿತ್ತು. ಮರದ ಕೊಂಬೆ ತೆರವು ಮಾಡಿದ ಬಳಿಕ ವಾಹನಗಳು ಸಂಚರಿಸಿದವು.

ಭಾನುವಾರ ರಜೆ ದಿನವಾಗಿದ್ದರಿಂದ ಹೆಚ್ಚು ಜನ ಮನೆ ಬಿಟ್ಟು ಹೊರಗೆ ಬಂದಿರಲಿಲ್ಲ. ಮಳೆಯೂ ನಿರಂತರವಾಗಿ ಸುರಿಯುತ್ತಿದ್ದರಿಂದ ರಸ್ತೆಯಲ್ಲಿ ಜನರ ಓಡಾಟವೂ ಕಡಿಮೆ ಇತ್ತು. ಕೆಲವರು, ಕೊಡೆ ಹಿಡಿದು ರಸ್ತೆಯಲ್ಲಿ ಹೆಜ್ಜೆ ಹಾಕಿದರು.

ನಗರದ ಮಾರುಕಟ್ಟೆಗಳಲ್ಲಿ ಬಹುತೇಕ ಅಂಗಡಿಗಳು ತೆರೆದಿದ್ದವು. ಮಳೆಯಿಂದಾಗಿ ಜನರು ಅಂಗಡಿಗಳತ್ತ ಬರಲಿಲ್ಲ. ಹೀಗಾಗಿ, ವ್ಯಾಪಾರವೂ ಕಡಿಮೆ ಇತ್ತು.

ಪ್ರಮುಖ ರಸ್ತೆ ಹಾಗೂ ಹೊರ ವರ್ತುಲ ರಸ್ತೆಗಳಲ್ಲೂ ನೀರು ಹರಿಯಿತು. ಮಳೆ ಸುರಿಯುತ್ತಿದ್ದ ವೇಳೆಯಲ್ಲಿ ಸವಾರರು ತಮ್ಮ ದ್ವಿಚಕ್ರ ವಾಹನಗಳನ್ನು ರಸ್ತೆ ಬದಿಯಲ್ಲಿ ನಿಲ್ಲಿಸಿ ಅಂಗಡಿಗಳಲ್ಲಿ ಆಶ್ರಯ ಪಡೆದಿದ್ದು ಕಂಡುಬಂತು. ಮಳೆ ನಿಲ್ಲುವ ಲಕ್ಷಣ ಗೋಚರಿಸದಿದ್ದಾಗ ಕೆಲವರು, ಮಳೆಯಲ್ಲೇ ವಾಹನ ಚಲಾಯಿಸಿಕೊಂಡು ಹೋದರು.

'ನಗರದಲ್ಲಿ ಉತ್ತಮ ಮಳೆಯಾಗುತ್ತಿದ್ದು, ಇನ್ನು ಎರಡು ದಿನ ಮುಂದುವರಿಯುವುದಾಗಿ ಹವಾಮಾನ ಇಲಾಖೆ ತಿಳಿಸಿದೆ. ಮಳೆಯಿಂದಾಗಿ ನಗರದ ಹಲವೆಡೆ ಮರದ ಕೊಂಬೆಗಳು ಬಿದ್ದಿದ್ದವು. ದೊಡ್ಡ ಗಾತ್ರದ ಮರಗಳು ಬಿದ್ದಿದ್ದ ಬಗ್ಗೆ ಯವುದೇ ದೂರುಗಳು ಬಂದಿಲ್ಲ' ಎಂದು ಬಿಬಿಎಂಪಿ ಸಹಾಯವಾಣಿ ಸಿಬ್ಬಂದಿ ಹೇಳಿದರು.

'ನಗರದ ಕಾಲುವೆಗಳಲ್ಲಿ ನೀರು ತುಂಬಿ ಹರಿದಿದೆ. ರಸ್ತೆಗಳಲ್ಲೂ ನೀರು ಹರಿದಿದ್ದು, ವಾಹನಗಳ ಸಂಚಾರಕ್ಕೆ ತೊಂದರೆ ಆಗಿತ್ತು. ಅಲ್ಲಲ್ಲ ನೀರು ತೆರವು ಮಾಡುವ ಕೆಲಸ ನಡೆಯುತ್ತಿದೆ. ಪ್ರತಿಯೊಂದು ವಾರ್ಡ್‌ನಲ್ಲಿ ಬಿಬಿಎಂಪಿ ಸಿಬ್ಬಂದಿ ಸಂಚರಿಸುತ್ತಿದ್ದು, ದೂರುಗಳು ಬಂದ ಕೂಡಲೇ ಸ್ಥಳಕ್ಕೆ ಹೋಗುತ್ತಿದ್ದಾರೆ' ಎಂದೂ ತಿಳಿಸಿದರು.

ಸುದ್ದಿ 2 ನಿಮಿಷ

2022ರ ಹಜ್ ಯಾತ್ರೆ: ಭಾರತದಲ್ಲಿನ ಎಲ್ಲ ಪ್ರಕ್ರಿಯೆಗಳು ಡಿಜಿಟಲ್

ಮುಂಬೈ (ಪಿಟಿಐ): 'ಮುಂದಿನ ವರ್ಷದ ಹಜ್ ಯಾತ್ರೆಗೆ ಸಂಬಂಧಿಸಿ ಭಾರತದಲ್ಲಿನ ಪ್ರಕ್ರಿಯೆಗಳು ಸಂಪೂರ್ಣ ಡಿಜಿಟಲ್ ವಿಧಾನದ ಮೂಲಕವೇ ನಡೆಯಲಿವೆ' ಎಂದು ಕೇಂದ್ರ ಅಲ್ಪಸಂಖ್ಯಾತರ ವ್ಯವಹಾರಗಳ ಸಚಿವ ಮುಖ್ತಾರ್ ಅಬ್ಬಾಸ್ ನಖ್ವಿ ಹೇಳಿದ್ದಾರೆ.

ಇಲ್ಲಿನ 'ಹಜ್ ಹೌಸ್'ನಲ್ಲಿ ಆನ್‌ಲೈನ್ ಮೂಲಕ ಬುಕ್ಕಿಂಗ್ ಸೌಲಭ್ಯಕ್ಕೆ ಚಾಲನೆ ನೀಡುವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ವಿವಿಧ ಇಲಾಖೆಗಳೊಂದಿಗೆ ಸಮಾಲೋಚನೆ ನಡೆಸಿದ ನಂತರ ಮುಂದಿನ ವರ್ಷದ ಹಜ್ ಯಾತ್ರೆ ಕುರಿತು ಘೋಷಣೆ ಮಾಡಲಾಗುವುದು. ಈ ಸಂಬಂಧ ಚರ್ಚಿಸಲು ಅ.21ರಂದು ನವದೆಹಲಿಯಲ್ಲಿ ಪರಿಶೀಲನಾ ಸಭೆ ನಡೆಸಲು ನಿರ್ಧರಿಸಲಾಗಿದೆ' ಎಂದೂ ಅವರು ಹೇಳಿದರು.

'ಇಂಡೊನೇಷ್ಯಾ ನಂತರ ಭಾರತದಿಂದಲೇ ಅತಿ ಹೆಚ್ಚಿನ ಸಂಖ್ಯೆಯ ಯಾತ್ರಿಗಳು ಹಜ್‌ಗೆ ತೆರಳುತ್ತಾರೆ ಎಂದು ಸಚಿವ ನಖ್ವಿ ಹೇಳಿದರು' ಎಂದು ಕಾರ್ಯಕ್ರಮದ ನಂತರ ಬಿಡುಗಡೆಯಾದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

'ಕೋವಿಡ್–19 ಪಿಡುಗಿನ ಕಾರಣದಿಂದಾಗಿ ಸೌದಿ ಅರೇಬಿಯಾ ಸರ್ಕಾರ ಕೈಗೊಂಡ ನಿರ್ಧಾರದಂತೆ 2020 ಹಾಗೂ ಪ್ರಸಕ್ತ ವರ್ಷ ಹಜ್ ಯಾತ್ರೆ ನಡೆಯಲಿಲ್ಲ' ಎಂದೂ ಹೇಳಿದರು.

ಪರಿಶಿಷ್ಟ ಜಾತಿಯ ವ್ಯಕ್ತಿ ಹತ್ಯೆ: ಬಂಧನ

ಜೈಪುರ: ಪ್ರೇಮಪ್ರಕರಣದ ಆರೋಪಕ್ಕೆ ಸಂಬಂಧಿಸಿದಂತೆ ಪರಿಶಿಷ್ಟ ಜಾತಿಯ ವ್ಯಕ್ತಿಯೊಬ್ಬನನ್ನು ರಾಜಸ್ಥಾನದ ಹನುಮಗಡದಲ್ಲಿ ಥಳಿಸಿ ಕೊಂದಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಲ್ವರು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಭಾನುವಾರ ಪೊಲೀಸರು ತಿಳಿಸಿದ್ದಾರೆ.

ಹತ್ಯೆಗೀಡಾದ ವ್ಯಕ್ತಿಯನ್ನು ಜಗದೀಶ್ ಮೇಘವಾಲ್ ಎಂದು ಗುರುತಿಸಲಾಗಿದೆ. ಈತ ನೆರೆಮನೆಯಾತನ ಪತ್ನಿಯೊಂದಿಗೆ ಸಂಬಂಧ ಹೊಂದಿದ್ದ ಎನ್ನಲಾಗಿದೆ. ಬಂಧಿತರಲ್ಲಿ ಒಬ್ಬ ಬಾಲಪರಾಧಿಯೂ ಸೇರಿದ್ದಾನೆ.

'ಆಕೆಯ ಪತಿ ಮತ್ತು ಇತರ 10 ಜನರ ಗುಂಪು ಜಗದೀಶ್‌ನನ್ನು ಅಪಹರಿಸಿ ತೋಟದ ಮನೆಗೆ ಒಯ್ದು ಚೆನ್ನಾಗಿ ಥಳಿಸಿದೆ. ನಂತರ ಆವರನ್ನು ಮನೆಯ ಎದುರಿಗೆ ಎಸೆಯಲಾಗಿತ್ತು. ಕುಟುಂಬದವರು ಚಿಕಿತ್ಸೆ ಕೊಡಿಸುವ ಮುನ್ನವೇ ಜಗದೀಶ್ ಸಾವಿಗೀಡಾಗಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

ಸಂತ್ರಸ್ತನ ಕುಟುಂಬಕ್ಕೆ ಜಿಲ್ಲಾಧಿಕಾರಿಯು ₹ 4.12 ಲಕ್ಷ ಪರಿಹಾರ ಮಂಜೂರು ಮಾಡಿದ್ದಾರೆ ಎಂದು ಡಿಜಿಪಿ ಎಂ.ಎಲ್. ಲ್ಯಾಥರ್ ತಿಳಿಸಿದ್ದಾರೆ.

ಐಸಿಸ್ ಜತೆ ಸಂಪರ್ಕ: ಬಂಧನ

ಶ್ರೀನಗರ (ಪಿಟಿಐ): ನಿಷೇಧಿತ ಇಸ್ಲಾಮಿಕ್ ಸ್ಟೇಟ್ ಆಫ್ ಇರಾಕ್, ಸಿರಿಯಾ (ಐಸಿಸ್) ಉಗ್ರ ಸಂಘಟನೆಯೊಂದಿಗೆ ಸಂಪರ್ಕ ಹೊಂದಿರುವ ಆರೋಪದ ಮೇಲೆ ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಭಾನುವಾರ ಮೂವರನ್ನು ಬಂಧಿಸಿದೆ.

ಶ್ರೀನಗರ, ಅನಂತನಾಗ್ ಜಿಲ್ಲೆಯ ಎಂಟು ಸ್ಥಳಗಳಲ್ಲಿ ಶೋಧ ನಡೆಸಲಾಯಿತು. ನಿಷೇಧಿತ ಐಸಿಸ್ ಉಗ್ರಸಂಘಟನೆಗೆ ಯುವಕರನ್ನು ಸೇರಿಸಲು ಪ್ರಚೋದಿಸುತ್ತಿದ್ದ ಮಾಹಿತಿ ಲಭ್ಯವಾಗಿತ್ತು ಎಂದು ಎನ್‌ಐಎ ವಕ್ತಾರ ತಿಳಿಸಿದ್ದಾರೆ.

ತಮ್ಮನ್ನು ಹುಡುಕದಂತೆ ಪತ್ರ ಬರೆದಿಟ್ಟಿರುವ ಬಾಲಕರು: ಪೋಷಕರಿಗೆ ಆತಂಕ

ಒಂದೇ ದಿನ ಯುವತಿ, ಆರು ಮಕ್ಕಳು ನಾಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಉತ್ತರ ವಿಭಾಗ ವ್ಯಾಪ್ತಿಯಲ್ಲಿ ಬಿಸಿಎ ವಿದ್ಯಾರ್ಥಿನಿ ಹಾಗೂ ಆರು ಮಕ್ಕಳು ಒಂದೇ ದಿನ ನಾಪತ್ತೆಯಾಗಿದ್ದು, ಈ ಬಗ್ಗೆ ಪೋಷಕರು ಠಾಣೆಗೆ ದೂರು ನೀಡಿದ್ದಾರೆ.

'ನಗರದ ಸೋಲದೇವನಹಳ್ಳಿ ಹಾಗೂ ಬಾಗಲಗುಂಟೆ ಠಾಣೆ ವ್ಯಾಪ್ತಿಯಲ್ಲಿ ವಾಸವಿದ್ದ ಏಳು ಮಂದಿ ನಾಪತ್ತೆಯಾದ ಬಗ್ಗೆ ಪೋಷಕರು ಪ್ರತ್ಯೇಕ ದೂರು ನೀಡಿದ್ದಾರೆ. ನಾಪತ್ತೆ ಹಾಗೂ ಅಪಹರಣ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಬಿಸಿಎ 3ನೇ ವರ್ಷದ ವಿದ್ಯಾರ್ಥಿನಿ ಅಮೃತವರ್ಷಿಣಿ (21), 12 ವರ್ಷ ವಯಸ್ಸಿನ ರಾಯನ್ ಸಿದ್ಧಾರ್ಥ್, ಚಿಂತನ, ಭೂಮಿ, 15 ವರ್ಷ ವಯಸ್ಸಿನ ಪರೀಕ್ಷಿತ್, ನಂದನ್ ಹಾಗೂ ಕಿರಣ್ ನಾಪತ್ತೆಯಾದವರು. ಬಹುತೇಕ ಮಕ್ಕಳು, ಅಪಾರ್ಟ್‌ಮೆಂಟ್ ಸಮುಚ್ಚಯಗಳ ಫ್ಲ್ಯಾಟ್‌ಗಳಲ್ಲಿ ಪೋಷಕರ ಜೊತೆ ವಾಸವಿದ್ದರು' ಎಂದೂ ತಿಳಿಸಿದರು.

ಬ್ಯಾಗ್ ಸಮೇತ ಮನೆ ತೊರೆದ ಮಕ್ಕಳು:: 'ಬಟ್ಟೆಗಳು, ಚಪ್ಪಲಿ, ಬ್ರಷ್, ನೀರಿನ ಬಾಟಲಿ, ಹಣ, ಕ್ರೀಡಾ ಸಾಮಗ್ರಿಗಳನ್ನು ಬ್ಯಾಗ್‌ನಲ್ಲಿ ಹಾಕಿಕೊಂಡು ಮಕ್ಕಳು ಮನೆ ತೊರೆದಿದ್ದಾರೆ. ಕೆಲ ಮಕ್ಕಳು ಒಟ್ಟಿಗೆ ಮಾತನಾಡಿಕೊಂಡು ಪೋಷಕರಿಗೆ ಏನನ್ನೂ ಹೇಳದೇ ಮನೆ ಬಿಟ್ಟು ಹೋಗಿದ್ದಾರೆ. ಕೆಲವರು ವಾಯುವಿಹಾರಕ್ಕೆಂದು ಹೋಗಿ ನಾಪತ್ತೆಯಾಗಿದ್ದಾರೆ' ಎಂದೂ ಹೇಳಿದರು.

'ಬೆಳಿಗ್ಗೆ ಆಟವಾಡಲು ಮಕ್ಕಳು ಹೊರಗಡೆ ಹೋಗಿರಬಹುದೆಂದು ಪೋಷಕರು ತಿಳಿದಿದ್ದರು. ಆದರೆ, ರಾತ್ರಿಯಾದರೂ ಮಕ್ಕಳು ಮನೆಗೆ ವಾಪಸು ಬಂದಿರಲಿಲ್ಲ. ಇದರಿಂದ ಗಾಬರಿಗೊಂಡ ಪೋಷಕರು, ಠಾಣೆಗೆ ಬಂದು ದೂರು ನೀಡಿದ್ದಾರೆ. ನಾಪತ್ತೆಯಾದ ಕೆಲ ಮಕ್ಕಳು, ಸಹಪಾಠಿಗಳೆಂದು ಗೊತ್ತಾಗಿದೆ. ಎಲ್ಲರೂ ಒಂದೇ ಕಡೆ ಹೋಗಿರುವ ಮಾಹಿತಿಯೂ ಇದೆ' ಎಂದೂ ಮಾಹಿತಿ ನೀಡಿದರು.

ಪತ್ರ ಬರೆದಿಟ್ಟಿರುವ ಬಾಲಕರು: ನಾಪತ್ತೆಯಾಗಿರುವ ಮಕ್ಕಳ ಪೈಕಿ ಇಬ್ಬರು ಬಾಲಕರು, ತಮ್ಮ ಮನೆಗಳಲ್ಲಿ ಪತ್ರ ಬರೆದಿಟ್ಟಿರುವುದಾಗಿ ಪೊಲೀಸ್ ಮೂಲಗಳು ಹೇಳಿವೆ.

'ನಮಗೆ ಓದಿಗಿಂತ ಕ್ರೀಡೆಯಲ್ಲಿ ಸಾಧನೆ ಮಾಡುವ ಆಸೆ ಇದೆ. ಕ್ರೀಡೆಯಿಂದಲೇ ಉತ್ತಮ ಹೆಸರು ಹಾಗೂ ಹಣ ಸಂಪಾದಿಸುವ ಇಚ್ಛೆ ಇದೆ. ನೀವು (ಪೋಷಕರು) ಹೇಳಿದಂತೆ ನಿತ್ಯವೂ ಓದಲು ಆಗುವುದಿಲ್ಲ. ಹೀಗಾಗಿ, ಮನೆ ಬಿಟ್ಟು ಹೋಗುತ್ತಿದ್ದೇವೆ. ನಮ್ಮನ್ನು ಹುಡುಕಾಡಬೇಡಿ' ಎಂದು ಪತ್ರದಲ್ಲಿ ಮಕ್ಕಳು ಬರೆದಿರುವುದಾಗಿ ಮೂಲಗಳು ತಿಳಿಸಿವೆ.

'ಬಸ್, ರೈಲು ನಿಲ್ದಾಣದಲ್ಲಿ ಹುಡುಕಾಟ'

ಒಂದೇ ದಿನ ಏಳು ಮಂದಿ ನಾಪತ್ತೆಯಾದ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿರುವ ಉತ್ತರ ವಿಭಾಗದ ಪೊಲೀಸರು, ಬಸ್ ಹಾಗೂ ರೈಲು ನಿಲ್ದಾಣದಲ್ಲಿ ಶನಿವಾರ ಹುಡುಕಾಟ ನಡೆಸಿದರು.

'ನಾಪತ್ತೆಯಾದ ಮಕ್ಕಳ ಫೋಟೊವನ್ನು ಎಲ್ಲ ಠಾಣೆಗಳಿಗೆ ಕಳುಹಿಸಲಾಗಿದೆ. ಎಲ್ಲರೂ ಎಲ್ಲಿದ್ದಾರೆ ಎಂಬ ಬಗ್ಗೆ ಮಾಹಿತಿ ಕಲೆಹಾಕಲು ವಿಶೇಷ ತಂಡ ರಚಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಆನ್‌ಲೈನ್ ತರಗತಿ ಹಾಗೂ ಪೋಷಕರ ಒತ್ತಡದಿಂದ ಮಾನಸಿಕವಾಗಿ ನೊಂದು ಮಕ್ಕಳು ಮನೆ ಬಿಟ್ಟು ಹೋಗಿರುವ ಸಾಧ್ಯತೆಯೂ ಇದೆ' ಎಂದೂ ತಿಳಿಸಿದರು.

ಅಪರಾಧ ಸುದ್ದಿ

ಪಾದಚಾರಿ ಸಾವು; ಆರೋಪಿ ಪತ್ತೆಗೆ 58 ದೃಶ್ಯ ಪರಿಶೀಲನೆ

ಬೆಂಗಳೂರು: ಕೆ.ಆರ್. ಪುರ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಅಪಘಾತವನ್ನುಂಟು ಮಾಡಿ ಪಾದಚಾರಿ ಸಾವಿಗೆ ಕಾರಣವಾಗಿದ್ದ ಆರೋಪಿಯನ್ನು 58 ಸಿ.ಸಿ. ಟಿ.ವಿ ಕ್ಯಾಮೆರಾ ದೃಶ್ಯಗಳ ಪರಿಶೀಲನೆಯಿಂದ ಪೊಲೀಸರು ಪತ್ತೆ ಮಾಡಿದ್ದಾರೆ.

'ಕಸ್ತೂರಿನಗರ 2ನೇ ಮುಖ್ಯರಸ್ತೆಯಲ್ಲಿ ಇತ್ತೀಚೆಗೆ ಅಪಘಾತ ಸಂಭವಿಸಿತ್ತು. ಪಾದಚಾರಿಗೆ ಕಾರು ಗುದ್ದಿಸಿದ್ದ ಚಾಲಕ, ಸ್ಥಳದಿಂದ ಪರಾರಿಯಾಗಿದ್ದ. ಗಾಯಗೊಂಡಿದ್ದ ಪಾದಚಾರಿಯನ್ನು ಸ್ಥಳೀಯರು ಬೌರಿಂಗ್ ಆಸ್ಪತ್ರೆಗೆ ದಾಖಲಿಸಿದ್ದರು. ಚಿಕಿತ್ಸೆಗೆ ಸ್ಪಂದಿಸದೇ ಪಾದಚಾರಿ ಮೃತಪಟ್ಟಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಅಪಘಾತದ ಬಗ್ಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಲಾಗಿತ್ತು. ಆದರೆ, ಆರೋಪಿ ಯಾರೆಂದು ಮಾಹಿತಿ ಇರಲಿಲ್ಲ. ಘಟನಾ ಸ್ಥಳ ಹಾಗೂ ಸುತ್ತಮುತ್ತಲಿನ 58 ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಸಂಗ್ರಹಿಸಿ ಪರಿಶೀಲಿಸಲಾಯಿತು. ಕಾರು ಚಲಾಯಿಸಿದ್ದ ಆರೋಪಿ ಶ್ರೀಧರ್ ಎಂಬುವರ ಸುಳಿವು ಸಿಕ್ಕಿತ್ತು' ಎಂದೂ ತಿಳಿಸಿವೆ.

'ಎಚ್‌ಎಎಲ್ ನಿವೃತ್ತ ನೌಕರ ಶ್ರೀಧರ್, ಏರ್ಟಿಗಾ ಕಾರು ಚಲಾಯಿಸಿಕೊಂಡು ಹೊರಟಿದ್ದಾಗ ಅಪಘಾತವಾಗಿತ್ತು. ಪ್ರಕರಣದ ವಿಚಾರಣೆಗೆ ಬರುವಂತೆ ಅವರಿಗೆ ನೋಟಿಸ್ ನೀಡಲಾಗಿತ್ತು. ಬಂಧನದ ಭೀತಿಯಲ್ಲಿದ್ದ ಅವರು, ವಕೀಲರ ಮೂಲಕ ನ್ಯಾಯಾಲಯಕ್ಕೆ ಶರಣಾಗಿ ಜಾಮೀನು ಪಡೆದುಕೊಂಡಿದ್ದಾರೆ. ಠಾಣೆಗೆ ವಿಚಾರಣೆಗೆ ಬಂದು ಹೇಳಿಕೆ ನೀಡಿದ್ದಾರೆ' ಎಂದೂ ಪೊಲೀಸ್ ಮೂಲಗಳು ಹೇಳಿವೆ.

ವಿದೇಶಿ ಪ್ರಜೆ ಮೇಲೆ ಹಲ್ಲೆ; ಚಾಲಕ ಬಂಧನ

ಬೆಂಗಳೂರು: ತಾನು ಕೇಳಿದಷ್ಟು ಬಾಡಿಗೆ ಕೊಡಲಿಲ್ಲವೆಂಬ ಕಾರಣಕ್ಕೆ ಆಟೊ ಚಾಲಕನೊಬ್ಬ, ಆಸ್ಟ್ರೇಲಿಯಾ ಪ್ರಜೆಯೊಬ್ಬರ ಮೇಲೆ ಹಲ್ಲೆ ಮಾಡಿರುವ ಘಟನೆ ಬೈಯಪ್ಪನಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

'ಅ. 6ರಂದು ನಡೆದಿರುವ ಘಟನೆ ಸಂಬಂಧ ಆಸ್ಟ್ರೇಲಿಯಾ ಪ್ರಜೆ ಗ್ರೇ ಜಾನ್ ನ್ಯೂಮನ್ ಎಂಬುವವರು ದೂರು ನೀಡಿದ್ದಾರೆ. ಆರೋಪಿಯಾದ ಆಟೊ ಚಾಲಕ ಶರತ್‌ನನ್ನು ಬಂಧಿಸಲಾಗಿದೆ. ಸದ್ಯ ಆತ ನ್ಯಾಯಾಂಗ ಬಂಧನದಲ್ಲಿದ್ದಾನೆ' ಎಂದು ಪೊಲೀಸರು ಹೇಳಿದರು.

'ಪ್ರವಾಸಕ್ಕೆಂದು ಬೆಂಗಳೂರಿಗೆ ಬಂದಿರುವ ಗ್ರೇನ್ ಜಾನ್ ನ್ಯೂಮನ್, ಅ. 6ರಂದು ಚರ್ಚ್‌ಸ್ಟ್ರೀಟ್‌ನಲ್ಲಿ ಸುತ್ತಾಡಿದ್ದರು. ನಂತರ ಸಿ.ವಿ.ರಾಮನ್ ನಗರದಲ್ಲಿರುವ ಸ್ನೇಹಿತರೊಬ್ಬರ ಮನೆಗೆ ಹೋಗಲು ಚರ್ಚ್‌ಸ್ಟ್ರೀಟ್‌ನಲ್ಲಿ ಆಟೊ ಹತ್ತಿದ್ದರು.'

'₹ 200 ಬಾಡಿಗೆಗೆ ಮಾತುಕತೆ ನಡೆಸಿದ್ದ ಚಾಲಕ ಶರತ್, ಆಟೊದಲ್ಲಿ ಗ್ರೇ ಜಾನ್ ಅವರನ್ನು ಹತ್ತಿಸಿಕೊಂಡು ಹೊರಟಿದ್ದ. ಹಲಸೂರು ಬಳಿ ಆಟೊ ಚಕ್ರ ಪಂಕ್ಚರ್ ಆಗಿತ್ತು. ರಸ್ತೆ ಬದಿಯಲ್ಲಿದ್ದ ಗ್ಯಾರೇಜ್‌ನಲ್ಲಿ ಪಂಕ್ಚರ್ ತಿದ್ದಿಸಿದ್ದ ಆರೋಪಿ, ಅದಾದ ನಂತರ ಗ್ರೇನ್ ಜಾನ್ ಅವರನ್ನು ಕರೆದುಕೊಂಡು ನಿಗದಿತ ಸ್ಥಳದಲ್ಲಿ ಬಿಟ್ಟಿದ್ದ' ಎಂದೂ ಪೊಲೀಸರು ತಿಳಿಸಿದರು.

'ಮೊದಲೇ ಮಾತನಾಡಿದಂತೆ ಗ್ರೇ ಜಾನ್, ಚಾಲಕ ಶರತ್‌ಗೆ ₹ 200 ಬಾಡಿಗೆ ಹಾಗೂ ₹ 100 ಟಿಪ್ಸ್ ಕೊಟ್ಟಿದ್ದ. ಅದನ್ನು ಸ್ವೀಕರಿಸಲು ಒಪ್ಪದ ಚಾಲಕ, ₹ 700 ನೀಡುವಂತೆ ಒತ್ತಾಯಿಸಿದ್ದ. ಕೇಳಿದಷ್ಟು ಹಣ ನೀಡಲು ಸಾಧ್ಯವಿಲ್ಲವೆಂದು ವಿದೇಶಿ ಪ್ರಜೆ ಹೇಳಿದ್ದರು. ಅಷ್ಟಕ್ಕೆ ಜಗಳ ತೆಗೆದ ಚಾಲಕ, ಗ್ರೇ ಜಾನ್ ಮೇಲೆ ಹಲ್ಲೆ ಮಾಡಿದ್ದ. ಮೊಬೈಲ್ ಕಸಿದುಕೊಳ್ಳಲು ಯತ್ನಿಸಿ ಪರಾರಿಯಾಗಿದ್ದ.'

'ವಿದೇಶಿ ಪ್ರಜೆ, ಘಟನೆ ಬಗ್ಗೆ ಸ್ನೇಹಿತರಿಗೆ ವಿಷಯ ತಿಳಿಸಿದ್ದರು. ಸ್ಥಳಕ್ಕೆ ಬಂದಿದ್ದ ಸ್ನೇಹಿತರು, ವಿದೇಶಿ ಪ್ರಜೆಯನ್ನು ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿದ್ದರು. ಆರೋಗ್ಯದಲ್ಲಿ ಚೇತರಿಕೆ ಕಂಡುಬಂದ ನಂತರ ಗ್ರೇ ಜಾನ್ ಠಾಣೆಗೆ ಬಂದು ದೂರು ನೀಡಿದ್ದರು. ಅದರನ್ವಯ ಚಾಲಕ ಶರತ್ ವಿರುದ್ಧ ಎಫ್‌ಐಆರ್ ಸಹ ದಾಖಲಿಸಿಕೊಳ್ಳಲಾಗಿತ್ತು' ಎಂದೂ ಪೊಲೀಸರು ಹೇಳಿದರು.

ಪೀಠೋಪಕರಣ ತಯಾರಿಕೆ ಮಳಿಗೆಯಲ್ಲಿ ಬೆಂಕಿ ಅವಘಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ರಸ್ತೆಯಲ್ಲಿರುವ ಪೀಠೋಪಕರಣ ತಯಾರಿಕೆ ಮಳಿಗೆಯಲ್ಲಿ ಬೆಂಕಿ ಅವಘಡ ಸಂಭವಿಸಿದ್ದು, ಲಕ್ಷಾಂತರ ರೂಪಾಯಿ ಮೌಲ್ಯದ ಪೀಠೋಪಕರಣಗಳು ಸುಟ್ಟಿವೆ.

ಬ್ಯಾಟರಾಯನಪುರ ಬಳಿಯ ಟಿಂಬರ್ ಬಡಾವಣೆಯಲ್ಲಿರುವ 'ಲಕ್ಷ್ಮಿ ಎಂಟರ್‌ಪ್ರೈಸಸ್' ಮಳಿಗೆಯಲ್ಲಿ ಶನಿವಾರ ತಡರಾತ್ರಿ ಈ ಅವಘಡ ಸಂಭವಿಸಿದೆ.

'ಮಳಿಗೆಯಲ್ಲಿ ಸಣ್ಣದಾಗಿ ಕಾಣಿಸಿಕೊಂಡಿದ್ದ ಬೆಂಕಿ ಕೆನ್ನಾಲಗೆ, ಕೆಲವೇ ನಿಮಿಷಗಳಲ್ಲಿ ಧಗ ಧಗ ಉರಿಯಲಾರಂಭಿಸಿತ್ತು. ಇಡೀ ಮಳಿಗೆಯಲ್ಲಿ ಬೆಂಕಿ ಆವರಿಸಿಕೊಂಡಿತ್ತು. ಮಳಿಗೆಯಲ್ಲಿ ತಯಾರಿಸಿದ್ದ ಪೀಠೋಪಕರಣಗಳು ಹಾಗೂ ಸಲಕರಣೆಗಳು ಸುಟ್ಟು ಹೋಗಿವೆ' ಎಂದು ಪೊಲೀಸರು ಹೇಳಿದರು.

'ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಬಂದು ಮೂರು ಗಂಟೆ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದರು. ಬೆಂಕಿ ಹೊತ್ತಿಕೊಳ್ಳಲು ಕಾರಣವೇನು ಎಂಬುದು ಗೊತ್ತಾಗಿಲ್ಲ. ಅವಶೇಷಗಳ ಮಾದರಿಗಳನ್ನು ಸಂಗ್ರಹಿಸಲಾಗಿದ್ದು, ಪರಿಶೀಲನೆ ನಡೆಸಬೇಕಿದೆ' ಎಂದೂ ತಿಳಿಸಿದರು.

ನಗರದಲ್ಲಿ ಇಂದು

ಜಯಪ್ರಕಾಶ್ ನಾರಾಯಣ್ ಅವರ ಜನ್ಮದಿನ ಹಾಗೂ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ: ಆಯೋಜನೆ–ಗಾಂಧಿ ಪಾರ್ಕ್ ನಡಿಗೆದಾರರ ಕೂಟ, ಭಾರತ ಯಾತ್ರಾ ಕೇಂದ್ರ, ಸ್ಥಳ–ಗಾಂಧಿ ಪಾರ್ಕ್, ಭಾರತ್ ನಗರ, ಬೆಳಿಗ್ಗೆ 7

'ಸಂಘರ್ಷ ಪರಿಹಾರ ಮತ್ತು ಶಾಂತಿ ಕಾಪಾಡುವಲ್ಲಿ ಸಾಮಾಜಿಕ ಕಾರ್ಯಕರ್ತರ ಪಾತ್ರ' ಕುರಿತು ಸಂವಾದ: ಭಾಗವಹಿಸುವವರು–ಪ್ರೊ.ಡಿ.ಡಾಮಿನಿಕ್, ಪ್ರೊ.ಕೋದಂಡ ರಾಮ, ಸಿ.ವಿ.ವೇದಾ, ಆಲ್ಬರ್ಟ್ ಕ್ಸೇವಿಯರ್, ಆಯೋಜನೆ, ಸ್ಥಳ–ಸಮಾಜ ಕಾರ್ಯ ವಿಭಾಗದ ಸಭಾಂಗಣ, ಬೆಂಗಳೂರು ವಿ.ವಿ, ಜ್ಞಾನಭಾರತಿ, ಬೆಳಿಗ್ಗೆ 10.30

ಕೆಪಿಟಿಸಿಎಲ್ ಕಿರಿಯ ಮಾರ್ಗದಾಳು ಮತ್ತು ಕಿರಿಯ ಸ್ಟೇಷನ್ ಪರಿಚಾರಕರುಗಳಿಗೆ ನೇಮಕಾತಿ ಆದೇಶ ನೀಡುವ ಕಾರ್ಯಕ್ರಮ: ಅಧ್ಯಕ್ಷತೆ–ಇಂಧನ ಸಚಿವ ವಿ.ಸುನಿಲ್ ಕುಮಾರ್, ಇಂಧನ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಿ.ಕುಮಾರ ನಾಯಕ್, ಸ್ಥಳ–ಸಮ್ಮೇಳನ ಸಭಾಂಗಣ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಳಿಗ್ಗೆ 10.30

'ರಾಷ್ಟ್ರೀಯ ಶಿಕ್ಷಣ ನೀತಿ–ವಾಣಿಜ್ಯ ಮತ್ತು ನಿರ್ವಹಣೆ ಉಪಕ್ರಮಗಳು' ಕಾರ್ಯಾಗಾರ: ಅತಿಥಿಗಳು–ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಕುಲಪತಿಗಳಾದ ಪ್ರೊ.ಕೆ.ಆರ್.ವೇಣುಗೋಪಾಲ್, ಡಿ.ಕುಮುದಾ, ಲಿಂಗರಾಜು ಗಾಂಧಿ, ಆಯೋಜನೆ–ಬೆಂಗಳೂರು ವಿಶ್ವವಿದ್ಯಾಲಯದ ವಾಣಿಜ್ಯ, ನಿರ್ವಹಣೆ ಶಿಕ್ಷಕರ ಕೌನ್ಸಿಲ್, ಸ್ಥಳ–ಜ್ಞಾನಜ್ಯೋತಿ ಸಭಾಂಗಣ, ಬೆಳಿಗ್ಗೆ 11

ಬಸವರಾಜ ಹೊರಟ್ಟಿ

ಜನತಾ ಪರಿವಾರದ ಮುಖಂಡರ ಸ್ಮರಣೆ ಹಾಗೂ ಜಯಪ್ರಕಾಶ್ ನಾರಾಯಣ್ ಅವರ ಜನ್ಮದಿನ: ಅಧ್ಯಕ್ಷತೆ–ಎಂ.ಪಿ. ನಾಡಗೌಡ, ಪುಷ್ಪನಮನ–ಪಿ.ಎಸ್. ಪ್ರಕಾಶ್, ಅತಿಥಿಗಳು–ತ್ರಿಶೂಲ್ ಪಾಣಿ ಪಟೇಲ್, ದೊಡ್ಡಣ್ಣಯ್ಯ, ಲಕ್ಷ್ಮೀನಾರಾಯಣ, ಧನಂಜಯ ಲಕ್ಷ್ಮಿಕಾಂತ, ಆಯೋಜನೆ–ಜನತಾ ಪರಿವಾರ, ಸ್ಥಳ–ಎಂ.ಪಿ.ನಾಡಗೌಡರ ಕಚೇರಿ, ಕುಮಾರ ಪಾರ್ಕ್, ಗಾಂಧಿನಗರ ಹೈಸ್ಕೂಲ್ ಎದುರು, ಸುಬ್ರಹ್ಮಣ್ಯ ದೇವಸ್ಥಾನದ ರಸ್ತೆ, ಬೆಳಿಗ್ಗೆ 11

ಭಾಷಾಂತರ ಕೋರ್ಸ್ ತರಗತಿಗಳ ಉದ್ಘಾಟನೆ: ಸಿ.ಬಿ. ಅನ್ನಪೂರ್ಣಮ್ಮ, ಅಧ್ಯಕ್ಷತೆ– ಎ.ಎಚ್. ರಾಮರಾವ್, ಅತಿಥಿ– ಎಂ.ಎಸ್.ಚೈತ್ರಾ, ಪಿ.ಸದಾನಂದ ಮಯ್ಯ, ಎಸ್.ಎನ್. ನಾಗರಾಜರೆಡ್ಡಿ, ಆಯೋಜನೆ–ನ್ಯಾಷನಲ್ ಕಾಲೇಜು, ಸಹಯೋಗ– ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಸ್ಥಳ– ಎಚ್.ಎನ್.ಮಲ್ಟಿಮೀಡಿಯಾ ಹಾಲ್, ಮಧ್ಯಾಹ್ನ 12

ನವರಾತ್ರಿ ಸಾಂಸ್ಕೃತಿಕ ಉತ್ಸವ: ಉದ್ಘಾಟನೆ– ಎ.ರಾಧಾಕೃಷ್ಣ ರಾಜು, ಅತಿಥಿ–ಡಿ.ಗಣೇಶ್ ಶಂಕರ್, ಆಯೋಜನೆ, ಸ್ಥಳ–ಶ್ರೀಪದ್ಮಾವತಿ ಕಲಾನಿಕೇತನ, ಮತ್ತಿಕೆರೆ ಬಡಾವಣೆ, ಸಂಜೆ 6

ಹೊಸದುರ್ಗ ತಾಲ್ಲೂಕಿನಲ್ಲಿ ಹಿಂದೂ ಧರ್ಮಕ್ಕೆ ಮರಳಿದ ಕ್ರಿಶ್ಚಿಯನ್ನರು

ನಾಲ್ಕು ಕುಟುಂಬಗಳ 'ಘರ್ ವಾಪಸಿ'

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಹೊಸದುರ್ಗ ತಾಲ್ಲೂಕಿನ ಬಲ್ಲಾಳಸಮುದ್ರ ಗ್ರಾಮದ ನಾಲ್ಕು ಕ್ರಿಶ್ಚಿಯನ್ ಕುಟುಂಬಗಳು ಶಾಸಕ ಗೂಳಿಹಟ್ಟಿ ಡಿ.ಶೇಖರ್ ನೇತೃತ್ವದಲ್ಲಿ ಭಾನುವಾರ ಹಿಂದೂ ಧರ್ಮಕ್ಕೆ ಮರು ಮತಾಂತರಗೊಂಡಿವೆ.

ಹಾಲುರಾಮೇಶ್ವರ ಕ್ಷೇತ್ರದ ಹಾಲು ರಾಮೇಶ್ವರ ಸ್ವಾಮಿಗೆ ಪೂಜೆ ಸಲ್ಲಿಸುವ ಮೂಲಕ 8 ಜನರು ಹಿಂದೂ ಧರ್ಮಕ್ಕೆ ಮರಳಿದರು. ಪುರುಷರಿಗೆ ಕೇಸರಿ ಶಲ್ಯ, ಮಹಿಳೆಯರಿಗೆ ಸೀರೆ ನೀಡುವ ಮೂಲಕ ಹಿಂದೂ ಧರ್ಮಕ್ಕೆ ಬರಮಾಡಿಕೊಳ್ಳಲಾಯಿತು. ಪೂಜೆ ಸಲ್ಲಿಸುವ ವೇಳೆ ಗೌರಮ್ಮ ಎಂಬುವರು ಕಣ್ಣೀರಿಟ್ಟರು.

ಬಲ್ಲಾಳಸಮುದ್ರದ ಮಾರುತಿ ನಗರದ ನಿವಾಸಿಗಳಾದ ಅಣ್ಣಪ್ಪ, ನಾರಾಯಣಪ್ಪ, ಗೌರಮ್ಮ ಹಾಗೂ ಮಾರಪ್ಪ ಕುಟುಂಬಗಳು ನಾಲ್ಕು ವರ್ಷಗಳ ಹಿಂದೆ ಕೇರಳದಲ್ಲಿ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡಿದ್ದವು. ಹೊಸದುರ್ಗ ತಾಲ್ಲೂಕಿನಲ್ಲಿ ನಡೆಯುತ್ತಿರುವ ಮತಾಂತರದ ಬಗ್ಗೆ ವಿಧಾನಮಂಡಲದ ಅಧಿವೇಶನದಲ್ಲಿ ಧ್ವನಿ ಎತ್ತಿದ ಶಾಸಕ ಗೂಳಿಹಟ್ಟಿ ಶೇಖರ್, ಮರು ಮತಾಂತರಕ್ಕೆ ಇವರನ್ನು ಮನವೊಲಿಸಿದ್ದಾರೆ.

> ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರ ಆಗಿರುವವರನ್ನು ಹಿಂದೂ ಧರ್ಮಕ್ಕೆ ಮರಳಿ ತರುವ ಪ್ರಕ್ರಿಯೆ ಆರಂಭವಾಗಿದೆ. ಇದರಲ್ಲಿ ರಾಜಕೀಯ ಉದ್ದೇಶವಿಲ್ಲ.
> **ಗೂಳಿಹಟ್ಟಿ ಡಿ.ಶೇಖರ್,** ಶಾಸಕ

'ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರ ಆಗಿದ್ದ ಹಿಂದೂ ಧರ್ಮೀಯರ ಘರ್ ವಾಪಸಿ ಆರಂಭವಾಗಿದೆ. ನನ್ನ ತಾಯಿಯಿಂದಲೇ ಇದು ಶುರುವಾಗಿದೆ. ತಾಯಿ ಹಿಂದೂ ಧರ್ಮಕ್ಕೆ ಮರಳಿದ್ದು, ನನ್ನೊಂದಿಗೆ ವಾಸವಾಗಿದ್ದಾರೆ. ಇನ್ನೂ 20ಕ್ಕೂ ಹೆಚ್ಚು ಕುಟುಂಬಗಳು ಹಿಂದೂ ಧರ್ಮಕ್ಕೆ ಮರಳಲು ಆಸಕ್ತಿ ತೋರಿವೆ. ಹಂತ ಹಂತವಾಗಿ ಎಲ್ಲರನ್ನೂ ಮರು ಮತಾಂತರ ಮಾಡಲಾಗುವುದು' ಎಂದು ಶಾಸಕ ಗೂಳಿಹಟ್ಟಿ ಶೇಖರ್ ಮಾಧ್ಯಮಗಳಿಗೆ ಮಾಹಿತಿ ನೀಡಿದರು.

ಹೊಸದುರ್ಗ ತಾಲ್ಲೂಕಿನ ಹಾಲುರಾಮೇಶ್ವರ ಕ್ಷೇತ್ರದಲ್ಲಿ ಕ್ರಿಶ್ಚಿಯನ್ ಧರ್ಮದಿಂದ ಹಿಂದೂ ಧರ್ಮಕ್ಕೆ ಮರು ಮತಾಂತರ ಪ್ರಕ್ರಿಯೆ ಭಾನುವಾರ ನಡೆಯಿತು. ಅರ್ಚಕರು ತೀರ್ಥ ಪ್ರೋಕ್ಷಣೆ ಮಾಡಿದರು.

ಆರೋಗ್ಯ ಸುಧಾರಣೆಗೆ ಮತಾಂತರ

'ಹದಗೆಟ್ಟಿದ್ದ ತಂದೆಯ ಆರೋಗ್ಯ ಸುಧಾರಣೆಗೆ ತಾಯಿ ಮತ್ತು ತಂಗಿ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡಿದ್ದರು. ಇಬ್ಬರು ಹಿಂದೂ ಧರ್ಮಕ್ಕೆ ಮರಳಿದ್ದರಿಂದ ನೆಮ್ಮದಿ ಸಿಕ್ಕಿದೆ' ಎಂದು ಬಲ್ಲಾಳಸಮುದ್ರ ಗ್ರಾಮದ ಪ್ರದೀಪ್ ಅಭಿಪ್ರಾಯ ಹಂಚಿಕೊಂಡರು.

ಬೆಂಗಳೂರು ವಿ.ವಿ ಹೊರಗುತ್ತಿಗೆ ನೌಕರರ ಕರ್ತವ್ಯ ಬಿಡುಗಡೆ ಪ್ರಕರಣ

ಕುಲಸಚಿವರ ಆದೇಶ ರದ್ದುಪಡಿಸಿದ ಕುಲಪತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದ ನೌಕರರನ್ನು ಕರ್ತವ್ಯದಿಂದ ಬಿಡುಗಡೆ ಮಾಡಿ ಕುಲಸಚಿವರಾದ (ಆಡಳಿತ) ಕೆ. ಜ್ಯೋತಿ ಅವರು ಹೊರಡಿಸಿದ್ದ ಆದೇಶವನ್ನು ಕುಲಪತಿ ಕೆ.ಆರ್. ವೇಣುಗೋಪಾಲ್ ಅವರು ರದ್ದುಪಡಿಸಿದ್ದಾರೆ.

ತಮ್ಮ ಅನುಮೋದನೆ ಇಲ್ಲದೆಯೇ ಕುಲಸಚಿವರು ಈ ನಿರ್ಧಾರ ಕೈಗೊಂಡಿದ್ದಾರೆ ಎಂದು ಕುಲಪತಿ ಅವರು ಹೊರಡಿಸಿರುವ ಆದೇಶದಲ್ಲಿ ತಿಳಿಸಿದ್ದಾರೆ.

ಈ ವಿಷಯದ ಬಗ್ಗೆ ಉನ್ನತ ಶಿಕ್ಷಣ ಸಚಿವರು ಮತ್ತು ಸರ್ಕಾರ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯೊಂದಿಗೆ ಚರ್ಚಿಸಲಾಗಿದೆ. ಸಿಂಡಿಕೇಟ್ ನಿರ್ಣಯ ಕೈಗೊಳ್ಳುವವರೆಗೆ ಕುಲಸಚಿವರು ಹೊರಡಿಸಿರುವ ಆದೇಶವನ್ನು ತಕ್ಷಣದಿಂದಲೇ ರದ್ದುಪಡಿಸಲಾಗಿದೆ ಎಂದು ಆದೇಶದಲ್ಲಿ ಉಲ್ಲೇಖಿಸಿದ್ದಾರೆ.

2008ರಿಂದ ಅಗತ್ಯಕ್ಕೆ ತಕ್ಕಂತೆ ತಾತ್ಕಾಲಿಕವಾಗಿ ಹೊರಗುತ್ತಿಗೆ ಆಧಾರದ ಮೇಲೆ ನೌಕರರನ್ನು ನೇಮಕಾತಿ ಮಾಡಿಕೊಳ್ಳಲಾಗಿದ್ದು, ಕಾಲಕಾಲಕ್ಕೆ ಮುಂದುವರಿಸುತ್ತಾ ಬರಲಾಗಿದೆ. ಪ್ರಸ್ತುತ ವಿಶ್ವವಿದ್ಯಾಲಯದಲ್ಲಿ 1,383 ಮಂಜೂರಾದ ಶಿಕ್ಷಕೇತರ ಹುದ್ದೆಗಳಿದ್ದು, 532 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. 851 ಹುದ್ದೆಗಳು ವಿವಿಧ ವೃಂದಗಳಲ್ಲಿ ಖಾಲಿ ಉಳಿದಿದ್ದು, ಇದರಲ್ಲಿ 494 ನೌಕರರನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದೆ ಎಂದು ಆದೇಶದಲ್ಲಿ ವಿವರಿಸಿದ್ದಾರೆ.


ವೇಣುಗೋಪಾಲ್

ಮಂಜೂರಾದ ಹುದ್ದೆಗಳಿಗಿಂತ ಹೆಚ್ಚುವರಿಯಾಗಿ ಗುತ್ತಿಗೆ ನೌಕರರನ್ನು ನೇಮಕ ಮಾಡಿದ್ದರೆ ಅವರನ್ನು ಕರ್ತವ್ಯದಿಂದ ಬಿಡುಗಡೆ ಮಾಡುವಂತೆ ಸರ್ಕಾರ ಎಲ್ಲ ವಿಶ್ವವಿದ್ಯಾಲಯಗಳಿಗೂ ಆದೇಶಿಸಿತ್ತು. ಆದರೆ, ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಖಾಲಿ ಇರುವ 851 ಹುದ್ದೆಗಳಿಗೆ 494 ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಲಾಗಿದ್ದು, ಇನ್ನೂ 357 ಹುದ್ದೆಗಳು ಖಾಲಿ ಉಳಿದಿವೆ. ಹೀಗಾಗಿ ವಿಶ್ವವಿದ್ಯಾಲಯದಲ್ಲಿ ಹೆಚ್ಚುವರಿ ನೌಕರರು ಇರುವುದಿಲ್ಲ ಎಂದು ವಿವರಿಸಿದ್ದಾರೆ.

ವಿವಿಧ ವಿಭಾಗಗಳಲ್ಲಿ ಹಾಗೂ ಪ್ರಯೋಗಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಿದರೆ ವಿಶ್ವವಿದ್ಯಾಲಯದ ಶೈಕ್ಷಣಿಕ ಮತ್ತು ಕಚೇರಿ ಕಾರ್ಯಗಳಿಗೆ ತೊಂದರೆಯಾಗುತ್ತದೆ ಎಂದು ಆದೇಶದಲ್ಲಿ ಉಲ್ಲೇಖಿಸಿದ್ದಾರೆ.

2021–2022ನೇ ಸಾಲಿನಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಜಾರಿಗೊಳಿಸಿರುವುದರಿಂದ ವಿಶ್ವವಿದ್ಯಾಲಯದಲ್ಲಿ ಶೈಕ್ಷಣಿಕ ಚಟುವಟಿಕೆಗಳು ಹೆಚ್ಚು ನಡೆಯುತ್ತಿವೆ. ಈ ಕಾರಣಗಳಿಂದ ಪರ್ಯಾಯ ವ್ಯವಸ್ಥೆಯಾಗುವವರೆಗೂ ಹೊರಗುತ್ತಿಗೆ ನೌಕರರ ಕರ್ತವ್ಯ ಪಡೆದುಕೊಳ್ಳುವುದು ಅಗತ್ಯವಾಗಿದೆ ಎಂದು ತಿಳಿಸಿದ್ದಾರೆ.

ಹೊರಗುತ್ತಿಗೆ ನೌಕರರ ವಜಾ ವಿರೋಧಿಸಿ ಇಂದು ಮುಷ್ಕರ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸುಮಾರು 500 ಹೊರಗುತ್ತಿಗೆ ನೌಕರರನ್ನು ಏಕಾಏಕಿ ಕರ್ತವ್ಯದಿಂದ ಬಿಡುಗಡೆ ಮಾಡಿರುವುದನ್ನು ವಿರೋಧಿಸಿ ಸೋಮವಾರ ಮುಷ್ಕರ ನಡೆಸಲು ಬೆಂಗಳೂರು ವಿಶ್ವವಿದ್ಯಾಲಯದ ನೌಕರರ ಸಂಘವು ನಿರ್ಧರಿಸಿದೆ.

ನೌಕರರ ಸಂಘದ ಮುಷ್ಕರಕ್ಕೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಶಿಕ್ಷಕೇತರ ನೌಕರರ ಒಕ್ಕೂಟವು ಬೆಂಬಲ ವ್ಯಕ್ತಪಡಿಸಿದೆ. ಅಖಿಲ ಭಾರತ ವಿಶ್ವವಿದ್ಯಾಲಯಗಳ ಶಿಕ್ಷಕೇತರ ನೌಕರರ ಕಾನ್ಫೆಡರಷನ್‌ನ ಮಹಾ ಪ್ರಧಾನ ಕಾರ್ಯದರ್ಶಿ ಎಂ.ಬಿ. ಸಜ್ಜನ್ ಅವರು ಈ ಮುಷ್ಕರದ ನೇತೃತ್ವ ವಹಿಸಲಿದ್ದಾರೆ ಎಂದು ಒಕ್ಕೂಟದ ಅಧ್ಯಕ್ಷ ಶಂಕರ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಕಷ್ಟದಲ್ಲಿರುವ ಹೊರಗುತ್ತಿಗೆ ನೌಕರರಿಗೆ ಆತ್ಮಸ್ಥೈರ್ಯ ತುಂಬಲು ಮುಷ್ಕರ ನಡೆಸಲಾಗುತ್ತಿದೆ. ಹಲವಾರು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದ ಹೊರಗುತ್ತಿಗೆ ನೌಕರರನ್ನು ಕರ್ತವ್ಯದಿಂದ ಬಿಡುಗಡೆ ಮಾಡಿರುವುದು ಖಂಡನೀಯ. ಇಂತಹ ಆದೇಶ ಹೊರಡಿಸಿರುವ ಕುಲಸಚಿವರನ್ನು ಬದಲಾಯಿಸಬೇಕು ಎಂದು ಒತ್ತಾಯಿಸಿದ್ದಾರೆ.

ಲಂಚ: ಗ್ರಾಮ ಲೆಕ್ಕಿಗನ ಮಗನ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಮೀನಿನ ಖಾತೆ ಬದಲಾವಣೆ ಮಾಡಲು ಅಪ್ಪನ ಪರವಾಗಿ ₹ 5 ಲಕ್ಷ ಲಂಚದ ಹಣ ಪಡೆದ ಯಲಹಂಕ ಹೋಬಳಿಯ ಗ್ರಾಮಲೆಕ್ಕಿಗ ಮಹೇಶ್ ಅವರ ಮಗ ವಿನೋದ್‌ನನ್ನು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಶನಿವಾರ ಬಂಧಿಸಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಶಿವಕೋಟೆ ಗ್ರಾಮದ ಪ್ರಕಾಶ್ ಎಂಬುವವರು ಯಲಹಂಕ ಹೋಬಳಿಯಲ್ಲಿ 24 ಗುಂಟೆ ಜಮೀನು ಖರೀದಿಸಿದ್ದರು. ಅದರ ಖಾತೆಯನ್ನು ತನ್ನ ಹೆಸರಿಗೆ ಬದಲಾವಣೆ ಮಾಡಿಕೊಡುವಂತೆ ಯಲಹಂಕ ತಹಶೀಲ್ದಾರ್ ಕಚೇರಿಗೆ ಅರ್ಜಿ ಸಲ್ಲಿಸಿದ್ದರು. ಯಲಹಂಕ ಹೋಬಳಿಯ ಕಂದಾಯ ನಿರೀಕ್ಷಕ ಪುರುಷೋತ್ತಮ್ ಈ ಅರ್ಜಿಯನ್ನು ಗ್ರಾಮಲೆಕ್ಕಿಗ ಮಹೇಶ್‌ಗೆ ವರ್ಗಾಯಿಸಿದ್ದರು.

ನಂತರ ಪ್ರಕಾಶ್ ವಿಚಾರಿಸಿದಾಗ ₹ 10 ಲಕ್ಷ ಲಂಚ ಕೊಡುವಂತೆ ಪುರುಷೋತ್ತಮ್ ಮತ್ತು ಮಹೇಶ್ ಬೇಡಿಕೆ ಇಟ್ಟಿದ್ದರು. ಮತ್ತೆ ಚರ್ಚೆ ಮಾಡಿದಾಗ ₹ 5 ಲಕ್ಷ ನೀಡಿದರೆ ಖಾತೆ ಬದಲಾವಣೆ ಪ್ರಕ್ರಿಯೆ ಪೂರ್ಣಗೊಳಿಸುವುದಾಗಿ ತಿಳಿಸಿದ್ದರು. ಈ ಕುರಿತು ಅರ್ಜಿದಾರರು ಎಸಿಬಿ ಬೆಂಗಳೂರು ನಗರ ಘಟಕಕ್ಕೆ ದೂರು ನೀಡಿದ್ದರು.

ಲಂಚದ ಹಣವನ್ನು ಮಹೇಶ್ ಅವರ ಮಗ ವಿನೋದ್‌ಗೆ ತಲುಪಿಸುವಂತೆ ಆರೋಪಿ ಅಧಿಕಾರಿಗಳು ಸೂಚಿಸಿದ್ದರು. ಶನಿವಾರ ಸಂಜೆ ನಗರದ ಹೋಟೆಲ್ ಒಂದರ ಬಳಿ ಬಂದು ಪ್ರಕಾಶ್ ಅವರಿಂದ ಲಂಚದ ಹಣ ಪಡೆಯುತ್ತಿದ್ದ ಯುವಕನನ್ನು ಎಸಿಬಿ ಅಧಿಕಾರಿಗಳು ಬಂಧಿಸಿದರು.

ಬಂಧಿತ ಯುವಕನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಪುರುಷೋತ್ತಮ್ ತಲೆಮರೆಸಿಕೊಂಡಿದ್ದು, ಶೋಧ ನಡೆಯುತ್ತಿದೆ ಕಾರ್ಯಾಚರಣೆ ಎಂದು ಎಸಿಬಿ ಅಧಿಕಾರಿಗಳು ತಿಳಿಸಿದ್ದಾರೆ.

ಮಹಾರಾಷ್ಟ್ರ: ಕಳ್ಳನೆಂದು ಭಾವಿಸಿ ಯುವಕನ ಹತ್ಯೆ

ಪ್ರಜಾವಾಣಿ ವಾರ್ತೆ

ಠಾಣೆ: ಮಹಾರಾಷ್ಟ್ರದ ಠಾಣೆ ಜಿಲ್ಲೆಯ ಭಿವಂಡಿಯಲ್ಲಿ ಯುವಕನೊಬ್ಬನನ್ನು ಕಳ್ಳ ಎಂದು ತಪ್ಪಾಗಿ ಭಾವಿಸಿದ ಜನರು ಆತನನ್ನು ಹತ್ಯೆ ಮಾಡಿರುವುದಾಗಿ ಪೊಲೀಸರು ಭಾನುವಾರ ತಿಳಿಸಿದ್ದಾರೆ.

ಶನಿವಾರ ಮಧ್ಯರಾತ್ರಿ 1.30ರ ವೇಳೆ ಈ ಘಟನೆ ನಡೆದಿದೆ. ಆಟೊ ಚಾಲಕನ ಮಗನಾದ ರಮೇಶ್ ಮುರಳಿ ಎಂಬುವರನ್ನು ಕಳ್ಳ ಎಂದು ಭಾವಿಸಿದ್ದಾಗಿ ಆರೋಪಿಯೊಬ್ಬರು ಹೇಳಿದ್ದಾರೆ. ಆತನನ್ನು ಹಿಡಿದು ಕಬ್ಬಿಣದ ಸರಳು ಮತ್ತು ಕೋಲಿನಿಂದ ಹೊಡೆದು ಪರಾರಿಯಾಗಿದ್ದಾಗಿ ಹೇಳಿದ್ದಾರೆ.

ಯುವಕ ಸ್ಥಳದಲ್ಲೇ ಸಾವಿಗೀಡಾಗಿದ್ದಾನೆ. ಆರೋಪಿಗಳಲ್ಲಿ ಕೆಲವರನ್ನು ಪತ್ತೆ ಹಚ್ಚಲಾಗಿದೆ. ಆದರೆ ಈವರೆಗೆ ಯಾರನ್ನೂ ಬಂಧಿಸಿಲ್ಲ. ಪ್ರಕರಣ ದಾಖಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಕನ್ನಡದಲ್ಲಿ ಯುಪಿಎಸ್‌ಸಿ' ಟ್ವಿಟರ್ ಅಭಿಯಾನಕ್ಕೆ ಬೆಂಬಲ

ಬೆಂಗಳೂರು: ಯುಪಿಎಸ್‌ಸಿ ಪರೀಕ್ಷೆಗಳನ್ನು ಈ ಬಾರಿಯೂ ಕನ್ನಡದಲ್ಲಿ ಬರೆಯಲು ಅವಕಾಶ ನೀಡದ ಕೇಂದ್ರ ಸರ್ಕಾರದ ವಿರುದ್ಧ ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ ಟಿ.ಎ.ನಾರಾಯಣಗೌಡ ಅವರು ಭಾನುವಾರ ಕರೆ ನೀಡಿದ್ದ 'ಕನ್ನಡದಲ್ಲಿ ಯುಪಿಎಸ್‌ಸಿ' ಟ್ವಿಟರ್ ಅಭಿಯಾನಕ್ಕೆ ರಾಜ್ಯದಾದ್ಯಂತ ಉತ್ತಮ ಸ್ಪಂದನೆ ವ್ಯಕ್ತವಾಯಿತು.

#ಕನ್ನಡದಲ್ಲಿUPSC, #UPSCInKannada ಎಂಬ ಹ್ಯಾಶ್ ಟ್ಯಾಗ್ ಬಳಸುವ ಮೂಲಕ ಸಾವಿರಾರು ಜನ ಅಭಿಯಾನಕ್ಕೆ ಸಹಮತ ವ್ಯಕ್ತಪಡಿಸಿದರು.

ಕನ್ನಡಪರ ಕಾರ್ಯಕರ್ತ ಅರುಣ್ ಜಾವಗಲ್,'ಪ್ರಶ್ನೆಪತ್ರಿಕೆ ಇಂಗ್ಲಿಷ್/ಹಿಂದಿಯಲ್ಲಿದ್ದರೆ ಹೇಗೆ ಕನ್ನಡದಲ್ಲಿ ಬರೆಯುವವರಿಗೆ ಕಷ್ಟ ಎಂದು ಪ್ರಶ್ನೆಯೊಂದರ ಇಂಗ್ಲಿಷ್ ಪದ ಉಲ್ಲೇಖಿಸಿ, ಈ ಪದ ಎಷ್ಟು ಜನ ಕನ್ನಡ ಮಾಧ್ಯಮದ ಯುವಕರು ಅರ್ಥಮಾಡಿಕೊಳ್ಳಲು ಸಾಧ್ಯ?' ಎಂದು ಟ್ವೀಟ್ ಮಾಡುವ ಮೂಲಕ ಅಭಿಯಾನ ಬೆಂಬಲಿಸಿದರು.

'ಮೇಲಿನ ಹಂತದ ಕೆಲಸಗಳಿಗೆ ಕನ್ನಡದಲ್ಲಿ ಮುಖ್ಯ ಪರೀಕ್ಷೆ ಆಯ್ಕೆ ಇಲ್ಲ. ನ್ಯಾಯವಾಗಿ ಎಲ್ಲ ಕಡೆ ಕನ್ನಡದ ಆಯ್ಕೆ ಕೊಡಬೇಕು' ಎಂದು ಹಲವರು ಪ್ರಶ್ನೆಗಳ ಸುರಿಮಳೆ ಹರಿಸಿದರು.

ನಮ್ಮ ಮೆಟ್ರೊ ಕಾಮಗಾರಿ– ಬಿಬಿಎಂಪಿಯಿಂದ ಬಿಎಂಆರ್‌ಸಿಎಲ್ ಸುಪರ್ದಿಗೆ ವಹಿಸಲಾಗಿದ್ದ ರಸ್ತೆ

ಕೆಂಗೇರಿ ರಸ್ತೆ ಹಸ್ತಾಂತರಕ್ಕೆ ತಕರಾರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಮ್ಮ ಮೆಟ್ರೊ ಎರಡನೇ ಹಂತದ ವಿಸ್ತರಣೆ ಕಾಮಗಾರಿ ಸಲುವಾಗಿ ಬೆಂಗಳೂರು ಮೆಟ್ರೊ ರೈಲು ನಿಗಮದ (ಬಿಎಂಆರ್‌ಸಿಎಲ್) ಸುಪರ್ದಿಗೆ ವಹಿಸಲಾಗಿದ್ದ ನಾಯಂಡಹಳ್ಳಿಯಿಂದ ಕೆಂಗೇರಿವರೆಗಿನ ರಸ್ತೆಯನ್ನು ಮರಳಿ ಹಸ್ತಾಂತರ ಮಾಡಿಕೊಳ್ಳಲು ಬಿಬಿಎಂಪಿ ತಕರಾರು ತೆಗೆದಿದೆ. ತಾಂತ್ರಿಕ ದೋಷಗಳಿಂದಾಗಿ ಈ ರಸ್ತೆಯು ಪದೇ ಪದೇ ಹದಗೆಡುತ್ತಿರುವುದು ಬಿಬಿಎಂಪಿ ಚಿಂತೆಗೆ ಕಾರಣವಾಗಿದೆ.

ಏಳು ವರ್ಷಗಳ ಹಿಂದೆ ಮೈಸೂರು ರಸ್ತೆ– ಕೆಂಗೇರಿ ನಡುವಿನ ನಮ್ಮ ಮೆಟ್ರೊ ಎತ್ತರಿಸಿದ ಮಾರ್ಗದ ಕಾಮಗಾರಿ ಶುರುವಾದಾಗ ಮೈಸೂರು ರಸ್ತೆಯಲ್ಲಿ ನಾಯಂಡಹಳ್ಳಿ– ಕೆಂಗೇರಿವರೆಗಿನ ಸುಮಾರು 8 ಕಿ.ಮೀ ಉದ್ದದ ಭಾಗವನ್ನು ಬಿಎಂಆರ್‌ಸಿಎಲ್ ಸುಪರ್ದಿಗೆ ಬಿಬಿಎಂಪಿ ಬಿಟ್ಟುಕೊಟ್ಟಿತ್ತು. ಆ ಬಳಿಕ ಈ ರಸ್ತೆಯನ್ನು ಬಿಎಂಆರ್‌ಸಿಎಲ್ ನಿರ್ವಹಣೆ ಮಾಡುತ್ತಿದೆ.

ಇತ್ತೀಚೆಗೆ ಸುರಿದ ಮಳೆಗೆ ಜ್ಞಾನಭಾರತಿ ಮೆಟ್ರೊ ನಿಲ್ದಾಣದ ಬಳಿ ಮೈಸೂರು ರಸ್ತೆಯ ಡಾಂಬರು ಕಿತ್ತುಹೋಗಿ ಗುಂಡಿಗಳು ನಿರ್ಮಾಣವಾಗಿವೆ

ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.

ಮೈಸೂರು ರಸ್ತೆಯಲ್ಲಿ 'ನಮ್ಮ ಮೆಟ್ರೊ' ಎರಡನೇ ಹಂತದ ವಿಸ್ತರಣೆಯ ಕಾಮಗಾರಿ ಕೆಂಗೇರಿವರೆಗೆ ಪೂರ್ಣಗೊಂಡಿದೆ. ಮೈಸೂರು ರಸ್ತೆ ಮೆಟ್ರೊ ನಿಲ್ದಾಣದಿಂದ ಕೆಂಗೇರಿ ನಿಲ್ದಾಣದವರೆಗೆ ಇತ್ತೀಚೆಗೆ ಮೆಟ್ರೊ ರೈಲು ಸೇವೆಯೂ ವಿಸ್ತರಣೆಗೊಂಡಿದೆ. ಹಾಗಾಗಿ ಈ ರಸ್ತೆಯನ್ನು ಮತ್ತೆ ಬಿಬಿಎಂಪಿಗೆ ಹಸ್ತಾಂತರ ಮಾಡಿಕೊಳ್ಳಬೇಕು ಎಂದು ಕೋರಿ ಬಿಎಂಆರ್‌ಸಿಎಲ್‌ನ ಕಾರ್ಯಕಾರಿ ನಿರ್ದೇಶಕ (ಸಿವಿಲ್–3) ಅವರು ಪಾಲಿಕೆಗೆ ಸೆ 15ರಂದು ಪತ್ರ ಬರೆದಿದ್ದರು. ಆ ಬಳಿಕ ಬಿಬಿಎಂಪಿಯ ಕೆಂಗೇರಿ ವಲಯದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಹಾಗೂ ಸಹಾಯಕ ಎಂಜಿನಿಯರ್ ಅವರು ಈ ರಸ್ತೆಯ ತಪಾಸಣೆ ನಡೆಸಿದ್ದರು.

ಈ ರಸ್ತೆಯಲ್ಲಿ ನಿರ್ಮಾಣವಾಗಿರುವ ಮೆಟ್ರೊ ಪಿಲ್ಲರ್‌ಗಳ ಬಳಿ ತಳಪಾಯ ಭರ್ತಿ ಮಾಡಿರುವ ಸ್ಥಳಗಳಲ್ಲಿ ರಸ್ತೆಗೆ ಡಾಂಬರೀಕರಣ ಮಾಡಲಾಗಿದ್ದು, ಇಂತಹ ಕೆಲವು ಕಡೆ ಕುಸಿತ ಕಂಡುಬಂದಿದೆ. ರಸ್ತೆಯಿಂದ ನೀರು ಚರಂಡಿಗೆ ಹರಿದು ಹೋಗುವಂತೆ ನಿರ್ಮಿಸುವ ಕಿಂಡಿಗಳು ರಸ್ತೆ ಮಟ್ಟಕ್ಕಿಂತ ಎತ್ತರದಲ್ಲಿವೆ. ಹಾಗಾಗಿ ನೀರು ಸರಾಗವಾಗಿ ಹರಿದು ಚರಂಡಿಯನ್ನು ಸೇರುತ್ತಿಲ್ಲ. ರಸ್ತೆಯಲ್ಲೇ ನೀರು ನಿಲ್ಲುತ್ತಿರುವುದರಿಂದ ಅದರ ಡಾಂಬರು ಕಿತ್ತು ಹೋಗಿ ಗುಂಡಿಗಳು ನಿರ್ಮಾಣವಾಗುತ್ತಿವೆ. ಈಗಾಗಲೇ ಈ ರಸ್ತೆಯಲ್ಲಿ ಅನೇಕ ಕಡೆ ಡಾಂಬರು ಕಿತ್ತುಹೋಗಿದ್ದು ವಾಹನಗಳ ಸುಗಮ ಸಂಚಾರಕ್ಕೆ ಅಡ್ಡಿ ಉಂಟಾಗುತ್ತಿದೆ ಎಂಬುದು ಬಿಬಿಎಂಪಿಯ ತಕರಾರು.

ಈ ಕುರಿತು ಆರ್‌.ಆರ್‌.ನಗರ ವಲಯ ಕಾರ್ಯಪಾಲಕ ಎಂಜಿನಿಯರ್ ನಂದೀಶ್ ಅವರು ಬಿಎಂಆರ್‌ಸಿಎಲ್‌ನ ಸಿವಿಲ್–3 ವಿಭಾಗದ ಕಾರ್ಯಕಾರಿ ನಿರ್ದೇಶಕರಿಗೆ ಪತ್ರ ಬರೆದಿದ್ದಾರೆ. ಮೈಸೂರು ರಸ್ತೆಯ ನಾಯಂಡಹಳ್ಳಿ–ಕೆಂಗೇರಿವರೆಗಿನ ರಸ್ತೆಯಲ್ಲಿರುವ ಈ ನ್ಯೂನತೆಗಳನ್ನು ಸರಿಪಡಿಸಿದಲ್ಲಿ ಜಂಟಿ ತಪಾಸಣೆ ನಡೆಸಬಹುದು. ಆ ಬಳಿಕವಷ್ಟೇ ರಸ್ತೆಯನ್ನು ಹಸ್ತಾಂತರಿಸಿಕೊಳ್ಳುವ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಬಹುದು ಎಂದು ಅವರು ತಿಳಿಸಿದ್ದಾರೆ.

'ಮಳೆ ಬಂದಾಗಲೆಲ್ಲಾ ಈ ರಸ್ತೆಯಲ್ಲಿ ನೀರು ನಿಲ್ಲುತ್ತಿದೆ. ಈ ರಸ್ತೆ ವಾಹನಗಳ ಸುಗಮ ಸಂಚಾರಕ್ಕೆ ಪೂರಕವಾಗಿಲ್ಲ. ಅನೇಕ ಕಡೆ ನೀರು ಚರಂಡಿಯ ಕಡೆಗೆ ಹರಿಯುವ ಬದಲು ರಸ್ತೆ ವಿಭಜಕದತ್ತ ಹರಿಯುತ್ತಿದೆ. ಪಾದಚಾರಿ ಮಾರ್ಗವೂ ಎತ್ತರದಲ್ಲಿದೆ. ರಸ್ತೆಯ ನೀರು ಸರಾಗವಾಗಿ ಚರಂಡಿಗೆ ಹರಿದು ಹೋಗುವಂತೆ ಸಮರ್ಪಕ ವ್ಯವಸ್ಥೆಗಳನ್ನೂ ಕಲ್ಪಿಸಿಲ್ಲ. ಹಾಗಾಗಿ ಈ ರಸ್ತೆಯನ್ನು ಈಗಿರುವ ಸ್ಥಿತಿಯಲ್ಲೇ ಮತ್ತೆ ಬಿಬಿಎಂಪಿಗೆ ಹಸ್ತಾಂತರ ಮಾಡಿಕೊಳ್ಳಲು ಸಾಧ್ಯವಿಲ್ಲ' ಎಂದು ನಂದೀಶ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಈ ರಸ್ತೆಯ ಕಾಮಗಾರಿ ನಡೆಸಿರುವ ಗುತ್ತಿಗೆದಾರರು ಬಿಎಂಆರ್‌ಸಿಎಲ್ ಅಧೀನದಲ್ಲಿರುತ್ತಾರೆ. ಹಾಗಾಗಿ ಕಾಮಗಾರಿಯ ದೋಷಮುಕ್ತ ಅವಧಿಯಲ್ಲೂ ಅವರ ಮೇಲೆ ಬಿಬಿಎಂಪಿಗೆ ಯಾವುದೇ ನಿಯಂತ್ರಣ ಇರುವುದಿಲ್ಲ. ಹಾಗಾಗಿ ಬಿಎಂಆರ್‌ಸಿಎಲ್‌ನವರು ಈ ರಸ್ತೆಯನ್ನು ಅಭಿವೃದ್ಧಿಪಡಿಸಿ, ಅದರ ಗುಣಮಟ್ಟವು ಖಾತರಿಯಾದರೆ ಮಾತ್ರ ನಾವು ಅದನ್ನು ಹಸ್ತಾಂತರ ಮಾಡಿಕೊಳ್ಳಬಹುದು' ಎಂದು ಅವರು ಸ್ಪಷ್ಟಪಡಿಸಿದರು.

'ಪ್ರಜಾವಾಣಿ'ಯು ಭಾನುವಾರದ ಸಂಚಿಕೆಯಲ್ಲಿ ಈ ರಸ್ತೆಯ ದುರವಸ್ಥೆಯ ಬಗ್ಗೆ 'ದುರಸ್ತಿ ಬಳಿಕವೂ ಕಿತ್ತು ಬಂದ ರಸ್ತೆ' ಎಂಬ ಶೀರ್ಷಿಕೆಯ ವರದಿ ಪ್ರಕಟಿಸಿ ಗಮನ ಸೆಳೆದಿತ್ತು. ದುರಸ್ತಿ ಕಾಮಗಾರಿ ನಡೆಸಿದ ಬಳಿಕವೂ ರಸ್ತೆ ಹದಗೆಟ್ಟಿರುವ ಬಗ್ಗೆ ವರದಿಯಲ್ಲಿ ವಿವರಿಸಲಾಗಿತ್ತು.

ಫ್ಲೋರೆನ್ಸ್ ನೈಟಿಂಗೇಲ್ ಭಾವಚಿತ್ರಕ್ಕೆ ಬೆಂಗಳೂರಿನ ರಾಮಯ್ಯ ಆಸ್ಪತ್ರೆಯ ಡಾ.ಕೆ.ಸಿ.ಗುರುದೇವ್ ಗೌರವ ಸಮರ್ಪಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು. ಚಿತ್ರದಲ್ಲಿ ಹರ್ಷ ಸಮೂಹ ಅಧ್ಯಕ್ಷ ಎಸ್‌.ಶಿವಕುಮಾರ್, ಕೆಂಪೇಗೌಡ ನರ್ಸಿಂಗ್ ಸೈನ್ಸ್ ಸಂಸ್ಥೆಯ ಪ್ರಾಂಶುಪಾಲರಾದ ಡಾ.ವಿ.ಟಿ.ಲಕ್ಷ್ಮಮ್ಮ, ನಿರ್ದೇಶಕಿ ಗಿರಿಜಾ, ಪ್ರಾಂಶುಪಾಲರಾದ ಜಸಿಂತಾ ಮರಿಯಪ್ಪ, ಜಯಪ್ರಕಾಶ್ ಇದ್ದಾರೆ.

'ಜ್ಞಾನವಂತರಾದರೆ ವೈದ್ಯರಿಗೂ ಹೇಳಿಕೊಡಬಹುದು'

ನೆಲಮಂಗಲ: ಶುಶ್ರೂಷಕರು ಸಮರ್ಥರಾಗಿದ್ದರೆ ಚಿಕಿತ್ಸಾವಿಧಾನಗಳನ್ನು ವೈದ್ಯರಿಗೂ ಹೇಳಿಕೊಡಬಹುದು. ಅಷ್ಟು ಸಮರ್ಥರಾಗಬೇಕಾದರೆ ಪರಿಶ್ರಮದಿಂದ ಶಿಕ್ಷಣ ಪಡೆದು ಜ್ಞಾನವಂತರಾಗಬೇಕಾಗುತ್ತದೆ ಎಂದು ಬೆಂಗಳೂರಿನ ರಾಮಯ್ಯ ಆಸ್ಪತ್ರೆಯ ಡಾ.ಕೆ.ಸಿ.ಗುರುದೇವ್ ತಿಳಿಸಿದರು.

ಪಟ್ಟಣದ ಹರ್ಷ ಸಮೂಹ ಸಂಸ್ಥೆ ಹಮ್ಮಿಕೊಂಡಿದ್ದ ವಾರ್ಷಿಕೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, 'ಕೋವಿಡ್ ಸಂದರ್ಭದಲ್ಲಿ ಶುಶ್ರೂಷಕರು ಎದೆಗುಂದದೆ ವಿಶ್ರಮಿಸದೆ ನಿರಂತರ ಸೇವೆ ಮಾಡಿ ವೈದ್ಯರಿಗೂ ಮಾದರಿಯಾದರು' ಎಂದರು.

ಕೆಂಪೇಗೌಡ ನರ್ಸಿಂಗ್ ಸೈನ್ಸ್‌ನ ಪ್ರಾಂಶುಪಾಲರಾದ ಡಾ.ವಿ.ಟಿ.ಲಕ್ಷ್ಮಮ್ಮ ಶುಶ್ರೂಷಕರಿಗೆ ಪ್ರತಿಜ್ಞಾ ವಿಧಿ ಬೋಧಿಸಿದರು. ಕೊರೊನಾ ಸಂದರ್ಭದಲ್ಲಿ ಉತ್ತಮ ಸೇವೆ ಸಲ್ಲಿಸಿದ ಸಿಬ್ಬಂದಿಯನ್ನು ಹರ್ಷ ಸಮೂಹ ಸಂಸ್ಥೆಯ ಅಧ್ಯಕ್ಷ ಎಸ್‌.ಶಿವಕುಮಾರ್ ಪುರಸ್ಕರಿಸಿದರು. ಸಿಇಒ ನಾರಾಯಣಗೌಡ, ನಿರ್ದೇಶಕಿ ಗಿರಿಜಾ, ಪ್ರಾಂಶುಪಾಲರಾದ ಜಸಿಂತಾ ಮರಿಯಮ್ಮ, ಮಮತಾ ರೆಡ್ಡಿ, ಜಯಪ್ರಕಾಶ್ ಇದ್ದರು.

ಬಡತನ, ಹಸಿವು, ರೋಗ ಕಾಂಗ್ರೆಸ್ ಕೊಡುಗೆ: ನಳಿನ್ ಕುಮಾರ್ ಕಟೀಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾತಂತ್ರ್ಯದ ನಂತರ ಬಹುತೇಕ ವರ್ಷ ಆಡಳಿತ ನಡೆಸಿದ ಕಾಂಗ್ರೆಸ್ ಬಡತನ, ಹಸಿವು, ರೋಗ ಮತ್ತು ನಿರುದ್ಯೋಗವನ್ನು ದೇಶದ ಜನರಿಗೆ ಕೊಡುಗೆಯಾಗಿ ನೀಡಿತು ಎಂದು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೇಳಿದರು.

ನಗರದ ಬಿಟಿಎಂ ಬಡಾವಣೆಯಲ್ಲಿ ಯುವ ಮೋರ್ಚಾ ಸಂಘಟಿಸಿದ ನವಭಾರತ ಮೇಳದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ನರೇಂದ್ರ ಮೋದಿಯವರು ಭವಿಷ್ಯದ ಬೆಳಕು ನೀಡಿದ ನಾಯಕ. ದೇಶದಲ್ಲಿ 2014 ರವರೆಗೆ ಯುವಕರು ಸ್ವಾಮಿ ವಿವೇಕಾನಂದರನ್ನು ಪೂಜಿಸಿ ಆರಾಧಿಸಿದರು. ಅಮಿತಾಬ್ ಬಚ್ಚನ್, ಶಾರುಖ್ ಖಾನ್ ಅವರನ್ನು ಪ್ರೀತಿಸಿದ್ದು ಕಂಡಿದ್ದೇವೆ. 2014 ರ ಬಳಿಕ ದೇಶದ ಯುವಕರು ಮೋದಿಯರವನ್ನು ಆರಾಧಿಸುತ್ತಿದ್ದಾರೆ. ಅವರನ್ನೇ ಪ್ರೀತಿಸುತ್ತಿದ್ದಾರೆ. ಅವರು ಈ ದೇಶದ ಐಕಾನ್ ಆಗಿ ಹೊರ ಹೊಮ್ಮಿದ್ದಾರೆ ಎಂದರು.

ಬಿಟಿಎಂ ಬಡಾವಣೆಯಲ್ಲಿ ಬಿಜೆಪಿ ಯುವ ಮೋರ್ಚಾ ಸಂಘಟಿಸಿದ ನವಭಾರತ ಮೇಳದ ಸಮಾರೋಪ ಸಮಾರಂಭದಲ್ಲಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಚರಕವನ್ನು ವೀಕ್ಷಿಸಿದರು. ಸಚಿವ ಮುನಿರತ್ನ ಮತ್ತು ಬಿಜೆಪಿ ಕಾರ್ಯಕರ್ತರು ಇದ್ದರು

ಸ್ವಾಮಿ ವಿವೇಕಾನಂದರು ಭಾರತದ ಬಗ್ಗೆ ಕಂಡಿದ್ದ ಕನಸನ್ನು ನನಸು ಮಾಡಲು ದೃಢ ಸಂಕಲ್ಪ ಮಾಡಿದ್ದಾರೆ. ಬಡತನ, ಹಸಿವು, ರೋಗ ಮುಕ್ತ ಭಾರತದ ನಿರ್ಮಾಣ ಮಾಡಲು ಶ್ರಮಿಸುತ್ತಿದ್ದಾರೆ. ರಾಮಮಂದಿರಕ್ಕೆ ಮಾತ್ರ ಶಿಲಾನ್ಯಾಸ ಮಾಡಿಲ್ಲ, ಸದೃಢ ಮತ್ತು ಸಮೃದ್ಧ ಭಾರತ ನಿರ್ಮಾಣಕ್ಕೆ ಅವರು ಶಿಲಾನ್ಯಾಸ ಮಾಡಿದ್ದಾರೆ ಎಂದು ನಳಿನ್ ಕುಮಾರ್ ಹೇಳಿದರು.

ಆರ್‌.ಆರ್‌.ನಗರದಲ್ಲಿ ಕಮಲ ಅರಳಿದೆ. ಇಲ್ಲಿ ಕಮಲ ಅರಳಿದ ಮೇಲೆ ಇನ್ನು ಬಿಟಿಎಂ ಲೇಔಟ್ ಬಾಕಿ ಉಳಿದೀತೇ? ಮುಂದಿನ ದಿನಗಳಲ್ಲಿ ಸಿದ್ರಾಮಣ್ಣ, ರಾಮಲಿಂಗಾರೆಡ್ಡಿ ಅವರಿಗೆ ಚುನಾವಣೆಗೆ ನಿಲ್ಲಲು ಜಾಗ ಇಲ್ಲದ ಸ್ಥಿತಿ ಉಂಟಾಗಲಿದೆ ಎಂದರು.

ಕಾರ್ಯಕ್ರಮದಲ್ಲಿ ಸಂಸದ ತೇಜಸ್ವಿ ಸೂರ್ಯ, ಸಚಿವ ಮುನಿರತ್ನ, ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಸಂದೀಪ್ ಕುಮಾರ್ ಮುಂತಾದವರು ಇದ್ದರು.

ಭಾರತ–ಚೀನಾ ನಡುವೆ 13ನೇ ಸುತ್ತಿನ ಮಾತುಕತೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಭಾರತ ಮತ್ತು ಚೀನಾ ನಡುವಿನ ಸೇನಾ ಕಮಾಂಡರ್‌ಗಳ ಮಟ್ಟದ 13ನೇ ಸುತ್ತಿನ ಮಾತುಕತೆ ಭಾನುವಾರ ನಡೆಯಿತು.

ವಾಸ್ತವ ಗಡಿ ರೇಖೆಗೆ ಹೊಂದಿಕೊಂಡಂತೆ ಇರುವ ಗಸ್ತು ಠಾಣ 15ರ (ಹಾಟ್ ಸ್ಪ್ರಿಂಗ್ಸ್) ಬಳಿಯಿಂದ ಸೇನಾಪಡೆಗಳನ್ನು ಹಿಂದಕ್ಕೆ ಕರೆಸಿಕೊಳ್ಳುವ ಬಗ್ಗೆ ಈ ಮಾತುಕತೆ ಕೇಂದ್ರೀಕೃತವಾಗಿತ್ತು ಎಂದು ಮೂಲಗಳು ತಿಳಿಸಿವೆ. ಬೆಳಿಗ್ಗೆ 10.30ರಿಂದ ಸಂಜೆ 7 ಗಂಟೆವರೆಗೆ ಚುಷುಲ್ ಗಡಿಯಲ್ಲಿ ಮಾತುಕತೆ ನಡೆಸಲಾಗಿದೆ.

ಮಾತುಕತೆಯ ಫಲಶ್ರುತಿಯ ಬಗ್ಗೆ ಎರಡು ದೇಶಗಳು ಜಂಟಿ ಹೇಳಿಕೆ ನೀಡುವ ನಿರೀಕ್ಷೆ ಇದೆ.

ಲೆ.ಜ.ಪಿ.ಜಿ.ಕೆ.ಮೆನನ್ ಮತ್ತು ಮೇಜರ್ ಜನರಲ್ ಲೈಯು ಲಿನ್ ಅವರು ಮಾತುಕತೆಯ ನೇತೃತ್ವ ವಹಿಸಿದ್ದರು. 12ನೇ ಸುತ್ತಿನ ಸೇನಾ ಮಾತುಕತೆ ಜುಲೈ31ರಂದು ಮೊಲ್ಡೊ ಗಡಿ ಠಾಣೆಯಲ್ಲಿ ನಡೆದಿತ್ತು.

ವಸುಧೇಂದ್ರಗೆ 'ಗಳಗನಾಥ', ಪ್ರೊ. ತೆಲಗಾವಿಗೆ 'ರಾಜಪುರೋಹಿತ' ಪ್ರಶಸ್ತಿ ಪ್ರದಾನ

'ಪುಸ್ತಕ ಸಮೃದ್ಧಿ ಇದ್ದಲ್ಲಿ ಶಾಂತಿ ನೆಲೆ'

ಪ್ರಜಾವಾಣಿ ವಾರ್ತೆ

ಗದಗ: 'ಯಾವ ಊರು, ದೇಶದಲ್ಲಿ ಪುಸ್ತಕ ಪ್ರಕಟಣೆ, ಓದು, ಪ್ರಶಸ್ತಿ, ಪುರಸ್ಕಾರ, ಲೇಖಕರಿಗೆ ಮೆಚ್ಚುಗೆಯ ಮಾತುಗಳು ಸಮೃದ್ಧವಾಗಿ ಸಿಗುತ್ತವೆಯೋ ಅಲ್ಲಿ ಶಾಂತಿ ನೆಲೆಸಿರುತ್ತದೆ' ಎಂದು ಲೇಖಕ ವಸುಧೇಂದ್ರ ಅಭಿಪ್ರಾಯಪಟ್ಟರು.

ನಗರದ ಕೆ.ಎಚ್‌.ಪಾಟೀಲ ಸಭಾಂಗಣದಲ್ಲಿ ಹಾವೇರಿಯ ಗಳಗನಾಥ ಮತ್ತು ರಾಜಪುರೋಹಿತ ಪ್ರತಿಷ್ಠಾನದ ವತಿಯಿಂದ ಭಾನುವಾರ ಆಯೋಜಿಸಿದ್ದ ಗಳಗನಾಥ ಮತ್ತು ರಾಜಪುರೋಹಿತ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು 'ಗಳಗನಾಥ' ಪ್ರಶಸ್ತಿ ಸ್ವೀಕರಿಸಿ ಮಾತನಾಡಿದರು.

'100 ವರ್ಷಗಳ ಕೆಳಗೆ ಕನ್ನಡ ಸಾಹಿತ್ಯ ಮತ್ತು ಸಂಶೋಧನಾ ಕ್ಷೇತ್ರದಲ್ಲಿ ಗಳಗನಾಥ ಮತ್ತು ರಾಜಪುರೋಹಿತರು ಅಂತರ್ಜಾಲದಂತೆ ಕೆಲಸ ನಿರ್ವಹಿಸಿದ್ದಾರೆ. ಈ ಇಬ್ಬರೂ ಮಹನೀಯರು ಜ್ಞಾನ ಸಂಪಾದನೆಗಾಗಿ ಊರೂರು ಅಲೆದಿದ್ದಾರೆ. ಗಳಗನಾಥರ ಬದುಕು ನೋಡಿದಾಗ ಅವರ ಜೀವನಕ್ಕೂ ನನ್ನ ಬದುಕಿಗೂ ಸಂಬಂಧವಿದೆ ಅಂತ ಅನಿಸುತ್ತದೆ. ಅವರ ಹೆಸರಿನಲ್ಲಿ ಪ್ರಶಸ್ತಿ ಸ್ವೀಕರಿಸಿದ್ದು ಖುಷಿ ನೀಡಿದೆ' ಎಂದರು.

ಗದಗ ನಗರದ ಕೆ.ಎಚ್‌.ಪಾಟೀಲ ಸಭಾಂಗಣದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಪ್ರೊ. ಲಕ್ಷ್ಮಣ ತೆಲಗಾವಿ ಅವರಿಗೆ 'ರಾಜಪುರೋಹಿತ' ಪ್ರಶಸ್ತಿ ಹಾಗೂ ಲೇಖಕ ವಸುಧೇಂದ್ರ ಅವರಿಗೆ 'ಗಳಗನಾಥ' ಪ್ರಶಸ್ತಿಯನ್ನು ಶಾಸಕ ಎಚ್‌.ಕೆ.ಪಾಟೀಲ ಪ್ರದಾನ ಮಾಡಿದರು. ಡಾ.ಕೆ.ಆರ್‌.ಕಮಲೇಶ್, ಪ್ರತಿಷ್ಠಾನದ ಅಧ್ಯಕ್ಷ ದುಷ್ಯಂತ ನಾಡಗೌಡ, ಕನ್ನಡ ಸಾಹಿತ್ಯ ಪರಿಷತ್ ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ್ ಇದ್ದಾರೆ

'ರಾಜಪುರೋಹಿತ' ಪ್ರಶಸ್ತಿ ಸ್ವೀಕರಿಸಿದ ಪ್ರೊ. ಲಕ್ಷ್ಮಣ ತೆಲಗಾವಿ ಮಾತನಾಡಿ, 'ಕನ್ನಡ ಸಾಹಿತ್ಯ ಕೃಷಿ ನಡೆಸಿದ ಗಳಗನಾಥ ಮತ್ತು ರಾಜಪುರೋಹಿತರನ್ನು ಜಗತ್ತಿಗೆ ಪರಿಚಯಿಸುವ ಪ್ರಯತ್ನ ಈವರೆಗೆ ಪೂರ್ಣಪ್ರಮಾಣದಲ್ಲಿ ಆಗಿಲ್ಲ. ಇದು ನೋವಿನ ಸಂಗತಿ. ರಾಜಪುರೋಹಿತರ ಕೆಲಸಗಳು ಚದುರಿ ಹೋಗಿದ್ದು, ಅವುಗಳನ್ನು ಸಂಶೋಧಿಸುವ ಅಗತ್ಯವಿದೆ' ಎಂದು ಹೇಳಿದರು.

'ಪ್ರಶಸ್ತಿಯ ಮೊತ್ತ ₹50 ಸಾವಿರವನ್ನು ಕರ್ನಾಟಕ ಇತಿಹಾಸ ಅಕಾಡೆಮಿಯಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಪ್ರಶಸ್ತಿಗೆ ನೀಡಲಾಗುವುದು' ಎಂದು ಪ್ರಕಟಿಸಿದರು.

ಡಾ. ಕೆ.ಕಮಲೇಶ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಕನ್ನಡ ಸಾಹಿತ್ಯ ಪರಿಷತ್ ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ ಮಾತನಾಡಿದರು. ಕಲಬುರಗಿ ಕೇಂದ್ರೀಯ ವಿಶ್ವವಿದ್ಯಾಲಯದ ಡಾ. ವಿಕ್ರಮ ವಿಸಾಜಿ ಹಾಗೂ ಚಿತ್ರದುರ್ಗದ ಪ್ರೊ. ಮಹಂತೇಶ್ ಎಸ್. ಪ್ರಶಸ್ತಿ ಪುರಸ್ಕೃತರ ಪರಿಚಯ ಮಾಡಿಕೊಟ್ಟರು.

ಗಳಗನಾಥ ಮತ್ತು ರಾಜಪುರೋಹಿತ ಪ್ರತಿಷ್ಠಾನದ ಅಧ್ಯಕ್ಷ ಪ್ರೊ. ದುಷ್ಯಂತ ನಾಡಗೌರ ಅಧ್ಯಕ್ಷತೆ ವಹಿಸಿದ್ದರು. ಪ್ರತಿಷ್ಠಾನದ ಸದಸ್ಯ ಜೆ.ಕೆ. ಜಮಾದಾರ ನಿರೂಪಿಸಿದರು. ಉಮೇಶ ಬಳಿಗಾರ ವಂದಿಸಿದರು.

ಮುಖ್ಯಾಂಶಗಳು

- ₹50 ಸಾವಿರ ನಗದು, ಫಲಕಗಳನ್ನು ಒಳಗೊಂಡ ಪ್ರಶಸ್ತಿ ಪ್ರದಾನ
- ಐತಿಹಾಸಿಕ ಮಹತ್ವದ ಜತೆಗೆ ಸಾಹಿತ್ಯಿಕವಾಗಿಯೂ ಶ್ರೀಮಂತ ಜಿಲ್ಲೆ ಗದಗ
- ಗಳಗನಾಥ, ರಾಜಪುರೋಹಿತರು ಮಾದರಿಯಾಗಲಿ: ಬಳಿಗಾರ

ಕೋವಿಡ್: 29.81 ಲಕ್ಷಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಭಾನುವಾರ 406 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದ್ದು, ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 29.81 ಲಕ್ಷ ದಾಟಿದೆ.

ಒಂದು ದಿನದ ಅವಧಿಯಲ್ಲಿ 1.14 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣವು ಶೇ 0.35 ರಷ್ಟು ವರದಿಯಾಗಿದೆ. 9 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 12 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬೀದರ್, ಚಿಕ್ಕಬಳ್ಳಾಪುರ, ಗದಗ, ಹಾವೇರಿ, ಕಲಬುರ್ಗಿ, ಕೊಪ್ಪಳ, ವಿಜಯಪುರ ಹಾಗೂ ಯಾದಗಿರಿಯಲ್ಲಿ ಹೊಸ ಪ್ರಕರಣಗಳು ವರದಿಯಾಗಿಲ್ಲ.



ಕೇರಳಕ್ಕೆ ಹೊಂದಿಕೊಂಡಿರುವ ಗಡಿ ಜಿಲ್ಲೆಗಳಾದ ಮೈಸೂರಿನಲ್ಲಿ 56 ಹಾಗೂ ದಕ್ಷಿಣ ಕನ್ನಡದಲ್ಲಿ 38 ಪ್ರಕರಣಗಳು ಪತ್ತೆಯಾಗಿವೆ. ಬೆಂಗಳೂರಿನಲ್ಲಿ 156 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 50ರ ಗಡಿಯೊಳಗೆ ಇವೆ.

ಕೋವಿಡ್ ಪೀಡಿತರಲ್ಲಿ 10 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ಆರು ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ. ಬೆಂಗಳೂರಿನಲ್ಲಿ ಐವರು, ಬೆಳಗಾವಿ, ದಕ್ಷಿಣ ಕನ್ನಡ, ತುಮಕೂರು, ಉಡುಪಿ ಹಾಗೂ ಉತ್ತರ ಕನ್ನಡದಲ್ಲಿ ತಲಾ ಒಬ್ಬರು ಸಾವಿಗೀಡಾಗಿದ್ದಾರೆ. ಮರಣ ಪ್ರಮಾಣ ದರವು ಶೇ 2.46 ರಷ್ಟು ದೃಢಪಟ್ಟಿದೆ. ಕೋವಿಡ್‌ನಿಂದ ಮೃತಪಟ್ಟವರ ಒಟ್ಟು ಸಂಖ್ಯೆ 37,885ಕ್ಕೆ ತಲುಪಿದೆ.

ಸೋಂಕಿತರಲ್ಲಿ 637 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 29.32 ಲಕ್ಷ ದಾಟಿದೆ. ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ 10,154ಕ್ಕೆ ಇಳಿಕೆಯಾಗಿದೆ.





ಬಿಜೆಪಿಯವರೇ ನನ್ನ ಸೋಲಿಸಿದರು: ಮಾಜಿ ಶಾಸಕ ಬಿ. ಸುರೇಶ್‌ಗೌಡ

ಪ್ರಜಾವಾಣಿ ವಾರ್ತೆ

ತುಮಕೂರು: 'ಕಳೆದ ವಿಧಾನಸಭಾ ಚುನಾವಣೆಯಲ್ಲಿ ನಮ್ಮದೇ ಪಕ್ಷದ ಕೆಲವರು ಸೇರಿಕೊಂಡು ಒಳಸಂಚು ನಡೆಸಿ ನನ್ನನ್ನು ಸೋಲಿಸಿದರು' ಎಂದು ಬಿಜೆಪಿ ಮಾಜಿ ಶಾಸಕ ಬಿ.ಸುರೇಶ್‌ಗೌಡ ಆರೋಪಿಸಿದರು.

ತಾಲ್ಲೂಕಿನ ಗೂಳೂರಿನಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಹುಟ್ಟು ಹಬ್ಬದ ಕಾರ್ಯಕ್ರಮದಲ್ಲಿ ಮಾತನಾಡಿ, 'ಅಭಿವೃದ್ಧಿ ಕೆಲಸಗಳನ್ನು ಮರೆತು ಜನರಿಗೆ ಮದ್ಯ ಕುಡಿಸಿ, ತಿನ್ನಿಸುವುದು, ಒಂದಿಷ್ಟು ಹಣಕೊಟ್ಟು ಬಡವರ ಸೇವೆ ಮಾಡುತ್ತಿದ್ದೇನೆ ಎಂದು ಪೋಸು ಕೊಟ್ಟುಕೊಂಡು ಬಂದಿದ್ದರೆ ಸೋಲುತ್ತಿರಲಿಲ್ಲ. ನಮ್ಮವರೂ ಸೇರಿಕೊಂಡು ಸೋಲಿಸಿದ್ದು ನೋವು ತರಿಸಿತು' ಎಂದರು.

'ಅಭಿವೃದ್ಧಿ ರಾಜಕಾರಣಿ ಆಗಬೇಕು ಎಂದುಕೊಂಡವನೇ ಹೊರತು. ಜನರನ್ನು ಪ್ರೇರೇಪಿಸಿ, ಕುಡಿಸಿ, ಜೂಜಾಡಿಸಿ, ಸುಳ್ಳು ಭರವಸೆಗಳನ್ನು ನೀಡಿ, ಅವರನ್ನು ಪ್ರಚೋದಿಸಿ ಮತ ಪಡೆದು ರಾಜಕಾರಣಿಯಾಗಿ ಅಧಿಕಾರ ನಡೆಸಬೇಕು ಎಂಬ ಯೋಚನೆಯನ್ನೂ ಮಾಡಿಲ್ಲ. ಜನರನ್ನು ಪೀಡಿಸುತ್ತಿದ್ದ ಗುತ್ತಿಗೆದಾರರು, ಅಧಿಕಾರಿಗಳು, ವೈದ್ಯರು, ಸರ್ಕಾರಿ ಶಾಲೆಯ ಶಿಕ್ಷಕರು, ಕೆಲವು ಗ್ರಾಮಗಳ ಮುಖಂಡರ ಜತೆಗೆ ಕಠಿಣವಾಗಿ ನಡೆದುಕೊಂಡೆ. ಇದೇ ಕಾರಣಕ್ಕೆ ಚುನಾವಣೆಯಲ್ಲಿ ಇವರೆಲ್ಲ ಅಪಪ್ರಚಾರ ಮಾಡಿದರು' ಎಂದು ನೆನಪಿಸಿಕೊಂಡರು.

ಹೇಮಾವತಿ ನೀರು ಹಂಚಿಕೆಯಲ್ಲಿ ಗ್ರಾಮಾಂತರ ಕ್ಷೇತ್ರಕ್ಕೆ ಅನ್ಯಾಯ ಮಾಡಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಜೆ.ಸಿ.ಮಾಧುಸ್ವಾಮಿ ಅವರಿಗೆ ನೇರವಾಗಿ ಹೇಳುತ್ತಿದ್ದೇನೆ. ಕ್ಷೇತ್ರಕ್ಕೆ ಅನ್ಯಾಯ ಮಾಡಬೇಡಿ. ನೀರು ಬಿಡಿ ಎಂದು ಕೇಳುತ್ತಿದ್ದೇನೆ. ಅನ್ಯಾಯವಾದರೆ ಸಹಿಸುವುದಿಲ್ಲ, ನನಗೆ ಯಾವ ಪದವಿಯೂ ಬೇಕಿಲ್ಲ. ನನ್ನ ಜನರೇ ನನಗೆ ಮುಖ್ಯ ಎಂಬುದನ್ನು ಈಗಾಗಲೇ ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿ ತೋರಿಸಿದ್ದೇನೆ. ನೀರಿಗಾಗಿ ನಾನು ಯಾವ ತ್ಯಾಗಕ್ಕೂ ಸಿದ್ಧ' ಎಂದು ಸಚಿವರ ವಿರುದ್ಧ ಗುಡುಗಿದರು.

ಗೌಡರ ಮೇಲೆ ಸಿಟ್ಟು: 'ಮಾಜಿ ಪ್ರಧಾನಿ ಎಚ್‌.ಡಿ.ದೇವೇಗೌಡ, ಮಾಜಿ ಮುಖ್ಯಮಂತ್ರಿ ಎಚ್‌.ಡಿ.ಕುಮಾರಸ್ವಾಮಿ ಗ್ರಾಮಾಂತರ ಕ್ಷೇತ್ರಕ್ಕೆ ನಾನು ಕೇಳಿದಷ್ಟು ಹೇಮಾವತಿ ನೀರು ಹಂಚಿಕೆ ಮಾಡಿದ್ದರೆ ಅವರ ಬಗ್ಗೆ ಮಾತನಾಡುತ್ತಿರಲಿಲ್ಲ. ಕ್ಷೇತ್ರದ ನೀರಾವರಿ ಕೆಲಸಕ್ಕೆ ಅಡ್ಡಗಾಲು ಹಾಕಿದರು. ಯಾರದೋ ಮಾತು ಕೇಳಿ ನೀರು ಹಂಚಿಕೆಗೆ ತಡೆ ಮಾಡಿದರು' ಎಂದು ಆರೋಪಿಸಿದರು.

ಸುರೇಶ್‌ಗೌಡ ಅವರಿಗೆ ಅಭಿಮಾನಿಗಳು ಬೆಳ್ಳಿ ಗದೆ ನೀಡಿ ಗೌರವಿಸಿದರು. ಆದಿಚುಂಚನಗಿರಿ ಶಾಖಾ ಮಠದ ಮಂಗಳಾನಂದನಾಥ ಸ್ವಾಮೀಜಿ, ಕಾರದ ವೀರಬಸವ ಸ್ವಾಮೀಜಿ, ಜ್ಞಾನಾನಂದಪುರಿ ಸ್ವಾಮೀಜಿ, ಶಾಸಕರಾದ ಜ್ಯೋತಿ ಗಣೇಶ್, ಮಸಲೆ ಜಯರಾಮ್, ಮುಖಂಡರಾದ ಕೃಷ್ಣಕುಮಾರ್, ಆರ್‌.ಎಸ್‌.ಗೌಡ ಉಪಸ್ಥಿತರಿದ್ದರು.

ನವಬೆಂಗಳೂರು ಯೋಜನೆಯಡಿ ಮಂಜೂರಾಗಿದ್ದ ಅನುದಾನ ಅನ್ಯ ಕಾರ್ಯಕ್ಕೆ ಬಳಕೆ

ಕನ್ನಹಳ್ಳಿ, ಕಸ ಸಂಸ್ಕರಣಾ ಘಟಕಗಳ ಪುನರಾರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇವನಹಳ್ಳಿ, ನೆಲಮಂಗಲ, ಮಾಗಡಿ ಹಾಗೂ ರಾಮನಗರ ತಾಲ್ಲೂಕುಗಳಲ್ಲಿ ಬಿಬಿಎಂಪಿ ವ್ಯಾಪ್ತಿಯ ಕಸ ಸಂಸ್ಕರಣಾ ಘಟಕ ಸ್ಥಾಪಿಸಲು ಉದ್ದೇಶಿಸಿದ್ದ ಪ್ರದೇಶಗಳ ಅಭಿವೃದ್ಧಿ ಸಲುವಾಗಿ ಮಂಜೂರಾಗಿದ್ದ ₹ 50 ಕೋಟಿ ಅನುದಾನವನ್ನು ಕನ್ನಹಳ್ಳಿ ಮತ್ತು ಸೀಗೇಹಳ್ಳಿ ಕಸ ಸಂಸ್ಕರಣಾ ಘಟಕಗಳ ಪುನರಾರಂಭಕ್ಕೆ ಬಳಸಲು ಸರ್ಕಾರ ನಿರ್ಧರಿಸಿದೆ.

ಜೆಡಿಎಸ್– ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಈ ನಾಲ್ಕು ತಾಲ್ಲೂಕುಗಳಲ್ಲಿ ಕಸ ಸಂಸ್ಕರಣಾ ಘಟಕ ಸ್ಥಾಪಿಸಲು ನಿರ್ಧರಿಸಲಾಗಿತ್ತು. ಈ ಘಟಕಗಳಿಂದಾಗಿ ಬಾಧಿತವಾಗುವ ನಾಲ್ಕು ತಾಲ್ಲೂಕುಗಳ ಅಭಿವೃದ್ಧಿ ಸಲುವಾಗಿ ಮುಖ್ಯಮಂತ್ರಿಯವರ ನವ ಬೆಂಗಳೂರು ಯೋಜನೆ ಅಡಿ ₹ 120 ಕೋಟಿ ಅನುದಾನ ನಿಗದಿಪಡಿಸಲಾಗಿತ್ತು. ಆದರೆ, ಸಮ್ಮಿಶ್ರ ಸರ್ಕಾರ ಪತನವಾಗಿ ಬಿ.ಎಸ್‌. ಯಡಿಯೂರಪ್ಪ ನೇತೃತ್ವದ ಸರ್ಕಾರ ರಚನೆಯಾದ ಬಳಿಕ 'ಮುಖ್ಯಮಂತ್ರಿಯವರ ನವ ಬೆಂಗಳೂರು' ಯೋಜನೆಯು ರದ್ದುಪಡಿಸಿ 'ಮುಖ್ಯಮಂತ್ರಿಯವರ ನವನಗರೋತ್ಥಾನ' ಯೋಜನೆಯನ್ನು 2019ರ ಸೆ. 20ರಂದು ಜಾರಿಗೊಳಿಸಲಾಗಿತ್ತು. ಜೆಡಿಎಸ್ ಶಾಸಕರ ಕ್ಷೇತ್ರಗಳಿಗೆ ನೀಡಿದ್ದ ಅನುದಾನವನ್ನು ಕಿತ್ತುಕೊಂಡಿದ್ದನ್ನು ಪ್ರಶ್ನಿಸಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಅವರಿಗೆ ಪತ್ರ ಬರೆದಿದ್ದರು.

ಮುಖ್ಯಾಂಶಗಳು

- ಕಸ ಸಂಸ್ಕರಣಾ ಘಟಕದ ಪ್ರದೇಶಗಳ ಅಭಿವೃದ್ಧಿಗೆ ₹ 120 ಕೋಟಿ ಮಂಜೂರು
- ಬಿಜೆಪಿ ಸರ್ಕಾರದ ಆಡಳಿತಾವಧಿಯಲ್ಲಿ ಅನುದಾನ ₹ 50 ಕೋಟಿಗೆ ಇಳಿಕೆ
- ಈಗ ಆ ಅನುದಾನವನ್ನೂ ಬಿಬಿಎಂಪಿ ವ್ಯಾಪ್ತಿಯಲ್ಲೇ ಬಳಸಲು ನಿರ್ಧಾರ

ಬಿಜೆಪಿ ಸರ್ಕಾರದ ಅವಧಿಯಲ್ಲಿ ದೇವನಹಳ್ಳಿ, ನೆಲಮಂಗಲ, ಮಾಗಡಿ ಹಾಗೂ ರಾಮನಗರ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಕಸ ನಿರ್ವಹಣೆಗೆ ಸಂಬಂಧಿಸಿದ ಕಾಮಗಾರಿಗಳನ್ನು ₹ 50 ಕೋಟಿ ಮಿತಿಯಲ್ಲಿ ಕೈಗೊಳ್ಳಲು ಸರ್ಕಾರ 2020ರ ಅ.05ರಂದು ಅನುಮತಿ ನೀಡಿತ್ತು. ಇದರ ಕ್ರಿಯಾಯೋಜನೆ ತಯಾರಿಸಿ ಸಲ್ಲಿಸುವಂತೆ ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಸರ್ಕಾರ ಸೂಚಿಸಿತ್ತು. ಮಾಗಡಿ ಕ್ಷೇತ್ರದ ಬಿಡದಿಯಲ್ಲಿ ಕೆಪಿಸಿಎಲ್ ವತಿಯಿಂದ ಕಸದಿಂದ ವಿದ್ಯುತ್ ಉತ್ಪಾದಿಸುವ ಘಟಕ ಸ್ಥಾಪಿಸುವುದನ್ನು ಹೊರತುಪಡಿಸಿ ಬಿಬಿಎಂಪಿ ಹೊರಗಿನ ಬೇರೆ ಪ್ರದೇಶಗಳಲ್ಲಿ ಕಸ ವಿಲೇವಾರಿಗೆ ಸ್ಥಳ ನಿಗದಿಪಡಿಸಿಲ್ಲ. ಹಾಗಾಗಿ ₹ 50 ಕೋಟಿ ಬಳಕೆಗೆ ಕ್ರಿಯಾಯೋಜನೆ ತಯಾರಿಸಲು ಸಾಧ್ಯವಿಲ್ಲ ಎಂದು ಬಿಬಿಎಂಪಿ ಮುಖ್ಯ ಆಯುಕ್ತರು ಸರ್ಕಾರಕ್ಕೆ ವರದಿ ಸಲ್ಲಿಸಿದ್ದರು.

ಬಿಡದಿಯಲ್ಲಿ ಕಸದಿಂದ ವಿದ್ಯುತ್ ಉತ್ಪಾದಿಸುವ ಘಟಕ ಆರಂಭಿಸುವ ಬಗ್ಗೆ ಕೆಪಿಸಿಎಲ್ ಖಾಸಗಿ ಸಂಸ್ಥೆಗೆ ಟೆಂಡರ್ ಆಧಾರದಲ್ಲಿ ಗುತ್ತಿಗೆ ನೀಡಿದೆ. 11 ಮೆಗಾ ವಾಟ್ ಸಾಮರ್ಥ್ಯದ ಈ ಘಟಕದ ನಿರ್ಮಾಣದ ವೆಚ್ಚವನ್ನು ಕೆಪಿಸಿಎಲ್ ಹಾಗೂ ಬಿಬಿಎಂಪಿ 50: 50 ಅನುಪಾತದಲ್ಲಿ ಹಂಚಿಕೊಳ್ಳಲಿವೆ. ಈ ಘಟಕ ನಿರ್ಮಾಣಕ್ಕಾಗಿ ಬಿಬಿಎಂಪಿ ಈಗಾಗಲೇ ₹ 10 ಕೋಟಿಯನ್ನು ಕೆಪಿಸಿಎಲ್‌ಗೆ ಪಾವತಿಸಿದೆ. ಈ ಘಟಕವು ಕಾರ್ಯಾರಂಭವಾಗಿ ಕಸದಿಂದ ವಿದ್ಯುತ್ ಉತ್ಪಾದಿಸಲು ಇನ್ನೂ ಎರಡು ವರ್ಷಗಳ ಕಾಲಾವಕಾಶ ನಿಗದಿಪಡಿಸಲಾಗಿದೆ. ಈ ಘಟಕಕ್ಕೆ ಪಾಲಿಕೆಯ ಕಸವನ್ನು ಸ್ವೀಕರಿಸುವ ಕಾರ್ಯವೂ ಇನ್ನೂ ಶುರುವಾಗಿಲ್ಲ. ಹಾಗಾಗಿ ಈ ನಾಲ್ಕು ಕ್ಷೇತ್ರಗಳಿಗೆ ಮಂಜೂರಾಗಿದ್ದ ₹ 50 ಕೋಟಿ ಅನುದಾನವನ್ನು ಅನ್ಯ ಉದ್ದೇಶಕ್ಕೆ ಬಳಸಲಾಗುತ್ತಿದೆ.

'ಈ ನಾಲ್ಕು ಕ್ಷೇತ್ರಗಳು ಬಿಬಿಎಂಪಿ ವ್ಯಾಪ್ತಿಯಿಂದ ಹೊರಗಿವೆ. ಇಲ್ಲಿ ಬಿಬಿಎಂಪಿ ವ್ಯಾಪ್ತಿಯ ಕಸವನ್ನು ವಿಲೇವಾರಿ ಮಾಡುತ್ತಿಲ್ಲ. ಹಾಗಾಗಿ ಈ ಕ್ಷೇತ್ರಗಳಿಗೆ ಕಸ ವಿಲೇವಾರಿ ಸಂಬಂಧ ಯಾವುದೇ ಅನುದಾನವನ್ನು ನವ ನಗರೋತ್ಥಾನ ಯೋಜನೆಯಡಿ ನಿಗದಿಪಡಿಸಿಲ್ಲ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮಾಗಡಿ ಶಾಸಕ ಎ.ಮಂಜುನಾಥ್ ಅವರ ಪ್ರಶ್ನೆಗೆ ವಿಧಾನಸಭೆಯಲ್ಲಿ ಉತ್ತರಿಸಿದ್ದಾರೆ.

ಮುಖ್ಯಮಂತ್ರಿಯವರ ನವನಗರೋತ್ಥಾನ ಯೋಜನೆಯಡಿ ಕಸ ನಿರ್ವಹಣೆ ಸಂಬಂಧಿಸಿದ ಕಾಮಗಾರಿಗಳಿಗಾಗಿ ಕಾಯ್ದಿರಿಸಿದ್ದ ₹ 50 ಕೋಟಿಯನ್ನು ಕನ್ನಹಳ್ಳಿ ಮತ್ತು ಸೀಗೇಹಳ್ಳಿಗಳಲ್ಲಿ ಸ್ಥಗಿತಗೊಂಡಿರುವ ಕಸ ಸಂಸ್ಕರಣಾ ಘಟಕಗಳ ಪುನರಾರಂಭಕ್ಕೆ ಬಳಸುವ ಬಿಬಿಎಂಪಿಯ ಪ್ರಸ್ತಾವಕ್ಕೆ ಸರ್ಕಾರ ಒಪ್ಪಿಗೆ ಸೂಚಿಸಿದೆ.

ಈ ಎರಡೂ ಘಟಕಗಳು ಸಹಕಾರ ಸಚಿವ ಎಸ್‌.ಟಿ.ಸೋಮಶೇಖರ್ ಪ್ರತಿನಿಧಿಸುವ ಯಶವಂತಪುರದ ಕ್ಷೇತ್ರದ ವ್ಯಾಪ್ತಿಯಲ್ಲಿವೆ.

ರಾಕೆಟ್ ಎಂಜಿನ್ ಪರೀಕ್ಷಾರ್ಥ ಪ್ರಯೋಗ ಮುಂದೂಡಿದ ರಷ್ಯಾ

ಮಾಸ್ಕೊ (ರಾಯಿಟರ್ಸ್): ರಷ್ಯಾದ ವೊರೊನೆಜ್ ನಗರದಲ್ಲಿ ಕೋವಿಡ್ ಪೀಡಿತರಿಗಾಗಿ ಆಮ್ಲಜನಕ ಪೂರೈಕೆಯನ್ನು ವ್ಯವಸ್ಥಿತವಾಗಿಡುವ ಉದ್ದೇಶದಿಂದ ಮಾಸಾಂತ್ಯದವರೆಗೆ ರಾಕೆಟ್ ಎಂಜಿನ್‌ಗಳ ಪರೀಕ್ಷಾರ್ಥ ಪ್ರಯೋಗವನ್ನು ತಾತ್ಕಾಲಿಕವಾಗಿ ಕೈಬಿಡಲು ರಷ್ಯಾ ನಿರ್ಧರಿಸಿದೆ.

ಹಿರಿಯ ಅಧಿಕಾರಿಗಳು ಈ ಕುರಿತು ಮಾಹಿತಿ ನೀಡಿದ್ದಾರೆ. ರಷ್ಯಾದಲ್ಲಿ ಕೋವಿಡ್ ಪ್ರಕರಣಗಳು ಗಣನೀಯವಾಗಿ ಏರಿಕೆಯಾಗುತ್ತಿವೆ. ಶನಿವಾರ ಗಣನೀಯ ಸಂಖ್ಯೆಯಲ್ಲಿ ಸಾವು ದಾಖಲಾಗಿದ್ದು, ಕೋವಿಡ್ ಪಿಡುಗು ಕಾಣಿಸಿಕೊಂಡ ನಂತರ ಇದು ಅತ್ಯಧಿಕ ಸಂಖ್ಯೆಯ ಪ್ರಕರಣವಾಗಿದೆ.

ಸೋಂಕಿತರಿಗೆ ಚಿಕಿತ್ಸೆ ಒದಗಿಸಲು ವೈದ್ಯಕೀಯ ಆಮ್ಲಜನಕಕ್ಕೆ ಬೇಡಿಕೆ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ರಾಕೆಟ್ ಎಂಜಿನ್‌ನ ಪರೀಕ್ಷಾರ್ಥ ಪ್ರಯೋಗವನ್ನು ಮಾಸಾಂತ್ಯದವರೆಗೆ ಮುಂದೂಡಲು ನಿರ್ಧರಿಸಲಾಗಿದೆ ಎಂದು ರಷ್ಯಾದ ಬಾಹ್ಯಾಕಾಶ ಸಂಸ್ಥೆಯ ಮುಖ್ಯಸ್ಥರು ಭಾನುವಾರ ಟ್ವೀಟ್ ಮಾಡಿದ್ದಾರೆ.



'ಶ್ರೀ ಲಕ್ಷ್ಮೀ ನರಸಿಂಹ ಪ್ರಕಾಶನ' ಸಂಸ್ಥೆ ಪ್ರಕಟಿಸಿರುವ ಲೇಖಕಿ ವಿಜಯಲಕ್ಷ್ಮಿ ಸತ್ಯಮೂರ್ತಿ ಅವರ 'ಅಮೂಲ್ಯ' ಹಾಗೂ 'ಮಳೆಯಲ್ಲಿ ಬಂದ ಅಪ್ಸರೆ' ಕಾದಂಬರಿಗಳನ್ನು ಲೇಖಕ ಡಾ. ವಡ್ಡಗೆರೆ ನಾಗರಾಜಯ್ಯ ನಗರದಲ್ಲಿ ಬಿಡುಗಡೆ ಮಾಡಿದರು. ಲೇಖಕರಾದ ಉದಂತ ಶಿವಕುಮಾರ್, ಡಾ.ಬಿಮೆಲ್ ಸೆಲ್ವಕುಮಾರ್ , ಮಾತಿನ ಮನೆಯ ರಾ ಸು ವೆಂಕಟೇಶ ಇದ್ದರು

ಪುಸಕ ಬಹುಮಾನಕ್ಕೆ ಕೃತಿಗೆಳ ಆಹ್ವಾನ

ಬೆಂಗಳೂರು: ಕನ್ನಡ ಗೆಳೆಯರ ಬಳಗವು ಡಾ.ಹಾ.ಮಾ. ನಾಯಕ ಅವರ ನೆನಪಿನಲ್ಲಿ ನೀಡುವ 'ಹಾಮಾನಾ ಕನ್ನಡ ಚಿಂತನೆ ಪುಸ್ತಕ ಬಹುಮಾನ'ಕ್ಕೆ ಕೃತಿಗಳನ್ನು ಆಹ್ವಾನಿಸಲಾಗಿದೆ.

2019–20ನೇ ಸಾಲಿನಲ್ಲಿ ಪ್ರಕಟವಾದ ಕೃತಿಗಳನ್ನು ಬಹುಮಾನಕ್ಕೆ ಪರಿಗಣಿಸಲಾಗುತ್ತದೆ. ಬಹುಮಾನವು ₹ 3 ಸಾವಿರ ಒಳಗೊಂಡಿದೆ. ಲೇಖಕರು ಪ್ರಕಟವಾದ ಎರಡು ಕೃತಿಗಳನ್ನು ಅ.31ರೊಳಗೆ ರಾ.ನಂ ಚಂದ್ರಶೇಖರ, ಸಂಚಾಲಕ ಕನ್ನಡ ಗೆಳೆಯರ ಬಳಗ , # 1, ಶ್ರೀನಿಲಯ, ಮಾರಮ್ಮ ದೇವಸ್ಥಾನದ ರಸ್ತೆ, ಕತ್ರಿಗುಪ್ಪೆ, ಬೆಂಗಳೂರು–560085 ಈ ವಿಳಾಸಕ್ಕೆ ಕಳುಹಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ಕುಕ್ಕೆ: ಲಸಿಕೆ, ನೆಗೆಟಿವ್ ವರದಿ ಕಡ್ಡಾಯ

ಸುಬ್ರಹ್ಮಣ್ಯ: ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ದೇವರ ದರ್ಶನ ಮತ್ತು ಸೇವೆಗಳನ್ನು ನೆರವೇರಿಸಲು ಕೋವಿಡ್-19 ತಡೆ ಮಾರ್ಗಸೂಚಿ ಪಾಲನೆ ಕಡ್ಡಾಯಗೊಳಿಸಲಾಗಿದೆ. 2 ಡೋಸ್ ಕೋವಿಡ್ ತಡೆ ಲಸಿಕೆ ಪಡೆದಿರಬೇಕು, 72 ಗಂಟೆ ಮುಂಚಿತ ಆರ್‌ಟಿಪಿಸಿಆರ್ ನೆಗೆಟಿವ್ ವರದಿ ಹೊಂದಿದ್ದರೆ ಮಾತ್ರ ಸೇವೆಗೆ ಅವಕಾಶ ನೀಡಲಾಗುತ್ತದೆ.

ಲಸಿಕಾ ಕೇಂದ್ರ: ದೇವಳದ ರಾಜಗೋಪುರದ ಬಳಿ ಭಕ್ತರಿಗಾಗಿ ಕೋವಿಡ್ ಲಸಿಕಾ ಕೇಂದ್ರವನ್ನು ಸ್ಥಾಪಿಸಲಾಗಿದೆ. ಇಲ್ಲಿಯೇ ಆರ್‌ಟಿಪಿಸಿಆರ್ ಪರೀಕ್ಷಾ ಕೇಂದ್ರವನ್ನೂ ತೆರೆಯಲಾಗಿದೆ.

ಹೊಸಪೇಟೆ: ತುಂಗಭದ್ರಾ ನದಿ ನೀರಿನ ಹರಿವು ಇಳಿಮುಖ • ಇಳಕಲ್: 40ಕ್ಕೂ ಹೆಚ್ಚು ಮನೆಗಳಿಗೆ ನುಗ್ಗಿದ ನೀರು

ಕಲಬುರಗಿ, ಬೀದರ್ ಜಿಲ್ಲೆಯಲ್ಲಿ ಭಾರಿ ಮಳೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ಕಲಬುರಗಿ ಮತ್ತು ಬೀದರ್ ಜಿಲ್ಲೆಯಲ್ಲಿ ಭಾನುವಾರ ಬಿರುಸಿನ ಮಳೆಯಾಗಿದ್ದು, ಕಲಬುರಗಿ ಜಿಲ್ಲೆಯ ಕಮಲಾಪುರ ತಾಲ್ಲೂಕಿನಲ್ಲಿ ಸಿಡಿಲು ಬಡಿದು ಎತ್ತು ಮತ್ತು ಹಸು ಮೃತಪಟ್ಟಿವೆ.

ಕಲಬುರಗಿ ನಗರದಲ್ಲಿ 40 ನಿಮಿಷಕ್ಕೂ ಹೆಚ್ಚು ಹೊತ್ತು ಮಳೆಯಾದ ಪರಿಣಾಮ ಬಹುತೇಕ ರಸ್ತೆಗಳಲ್ಲಿ ನೀರು ನಿಂತು ವಾಹನಗಳ ಸಂಚಾರಕ್ಕೆ ಅಡ್ಡಿಯಾಯಿತು. ಚಿಂಚೋಳಿ ಮತ್ತು ಕಾಳಗಿ ತಾಲ್ಲೂಕುಗಳಲ್ಲೂ ಮಳೆಯಾಗಿದ್ದು, ಕಾಳಗಿ ತಾಲ್ಲೂಕಿನ ಸುಂಠಾಣ ಗ್ರಾಮದಲ್ಲಿ ಮನೆಯೊಂದು ಕುಸಿದಿದೆ.

ಬೀದರ್ ಜಿಲ್ಲೆಯ ಕೆಲವೆಡೆ ಸಾಧಾರಣ ಮಳೆಯಾಗಿದೆ. ಬೀದರ್, ಹುಮನಾಬಾದ್, ಚಿಟಗುಪ್ಪ ಹಾಗೂ ಹುಲಸೂರು ತಾಲ್ಲೂಕಿನಲ್ಲಿ ಮಳೆ ಸುರಿದಿದೆ.

ನೆರೆಯ ಮಹಾರಾಷ್ಟ್ರದ ಲಾತೂರ್ ಜಿಲ್ಲೆಯಲ್ಲಿ ಮಳೆಯಾಗುತ್ತಿದ್ದು, ಧಣೆಗಾಂವ ಜಲಾಶಯದಿಂದ ನೀರು ಹೊರಗೆ ಬಿಡಲಾಗಿದೆ. ಹುಲಸೂರು ಸಮೀಪದ ವಾಜರಖೇಡ ನೆಲ ಮಟ್ಟದ ಸೇತುವೆ ಮುಳುಗಡೆಯಾಗಿದ್ದು, ವಾಹನ ಸಂಚಾರ ಸ್ಥಗಿತಗೊಂಡಿದೆ.

ಉತ್ತಮ ಮಳೆ: ಬಾಗಲಕೋಟೆ, ಬೆಳಗಾವಿ, ಗದಗ, ಹೊಸಪೇಟೆ ಸೇರಿದಂತೆ ಹಲವೆಡೆ ಆಗಾಗ ಮಳೆಯಾಗಿದೆ.

ಹೊಸಪೇಟೆಯ ತುಂಗಭದ್ರಾ ನದಿ ನೀರಿನ ಹರಿವು ಸ್ವಲ್ಪ ಇಳಿಮುಖಗೊಂಡಿದೆ. ನೀರಿನ ಹರಿವು ಕಡಿಮೆಯಾಗಿದ್ದರಿಂದ ಪುರಂದರ ಮಂಟಪ, ಕಾಲು ಸೇತುವೆ ಗೋಚರಿಸಿದವು. ವಿಜಯನಗರ ಜಿಲ್ಲೆಯ ಹೆಚ್ಚಿನ ಭಾಗಗಳಲ್ಲಿ ಶನಿವಾರ ರಾತ್ರಿ ಆರಂಭಗೊಂಡ ಮಳೆ ಭಾನುವಾರ ಬೆಳಗಿನ ಜಾವದವರೆಗೆ ಸುರಿದಿದೆ.

ಬಾಗಲಕೋಟೆ ಜಿಲ್ಲೆಯ ಇಳಕಲ್ ಹಾಗೂ ಹುನಗುಂದದಲ್ಲಿ ಶನಿವಾರ ತಡರಾತ್ರಿ ಹಾಗೂ ಬೆಳಗಿನ ಜಾವ ಭಾರಿ ಮಳೆಯಾಗಿದೆ. ಇಳಕಲ್ ನಗರದ ಗೌಳೇರಗುಡಿ (ನವನಗರ)ಯಲ್ಲಿ 40ಕ್ಕೂ ಹೆಚ್ಚು ಮನೆಗಳಿಗೆ ಮಳೆ ನೀರು ನುಗ್ಗಿತ್ತು. ಶನಿವಾರ ರಾತ್ರಿ ಹುನಗುಂದದಲ್ಲಿ ಸುರಿದ ಭಾರಿ ಮಳೆಗೆ, ರಾಜ್ಯ ಹೆದ್ದಾರಿಯಲ್ಲಿ ಬರುವ ಬೇಕಮಲದಿನ್ನಿ ಹಳ್ಳ ತುಂಬಿ ಹರಿದು, ಸಾರಿಗೆ ಬಸ್ ಹಳ್ಳದ ಮಧ್ಯದಲ್ಲಿ ಸಿಲುಕಿತ್ತು. ಬಳಿಕ ಅದನ್ನು ಟ್ರ್ಯಾಕ್ಟರ್ ಸಹಾಯದಿಂದ ಹೊರಗೆ ತರಲಾಯಿತು.

ಗದಗ ಜಿಲ್ಲೆಯಲ್ಲಿ ಗುಡುಗು ಸಹಿತ ಉತ್ತಮ ಮಳೆ ಸುರಿಯಿತು. ಚಿತ್ರದುರ್ಗ ಜಿಲ್ಲೆಯಲ್ಲಿ ಉತ್ತಮ ಮಳೆಯಾಗಿದೆ. ಹೊಸದುರ್ಗ ತಾಲ್ಲೂಕಿನಲ್ಲಿ ಜಮೀನುಗಳು ಜಲಾವೃತಗೊಂಡಿವೆ.

ಕಲಬುರಗಿಯ ಸಾರಿಗೆ ಸದನದ ಬಳಿ ಭಾನುವಾರ ಸುರಿಯುತ್ತಿದ್ದ ಮಳೆಯಲ್ಲೇ ವಾಹನಗಳು ಸಾಗಿದವು

20 ಜಿಲ್ಲೆಗಳಲ್ಲಿ ‘ಯೆಲ್ಲೊ ಅಲರ್ಟ್’ ಮುಂದುವರಿಕೆ

ಬೆಂಗಳೂರು: ರಾಜ್ಯದ ದಕ್ಷಿಣ ಮತ್ತು ಉತ್ತರ ಒಳನಾಡಿನ ಬಹುತೇಕ ಜಿಲ್ಲೆಗಳಲ್ಲಿ ಅ.11 ಮತ್ತು 12ರಂದು ಗುಡುಗು, ಸಿಡಿಲು ಸಹಿತ ಧಾರಾಕಾರ ಮಳೆಯಾಗುವ ಮುನ್ಸೂಚನೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಬಾಗಲಕೋಟೆ, ಬೆಳಗಾವಿ, ಧಾರವಾಡ, ಗದಗ, ಹಾವೇರಿ, ಕೊಪ್ಪಳ, ರಾಯಚೂರು, ವಿಜಯಪುರ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಕೊಡಗು, ಕೋಲಾರ, ಮಂಡ್ಯ, ಮೈಸೂರು, ರಾಮನಗರ, ಶಿವಮೊಗ್ಗ, ತುಮಕೂರು ಜಿಲ್ಲೆಗಳಲ್ಲಿ ಭಾರಿ ಮಳೆಯ ಮುನ್ಸೂಚನೆ ಇರುವುದರಿಂದ ಎರಡೂ ದಿನ ‘ಯೆಲ್ಲೊ ಅಲರ್ಟ್’ ಘೋಷಿಸಲಾಗಿದೆ.

ಕರಾವಳಿಯ ಉತ್ತರ ಕನ್ನಡ, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಅ.13 ರಿಂದ 15ರವರೆಗೆ ಹೆಚ್ಚು ಮಳೆಯಾಗುವ ಸೂಚನೆ ಇದೆ. ಉಳಿದ ಜಿಲ್ಲೆಗಳಲ್ಲಿ ಗುಡುಗು ಮತ್ತು ಸಿಡಿಲು ಹೆಚ್ಚಾಗಿ ಇರಲಿದ್ದು, ಕೆಲವೆಡೆ ಸಾಧಾರಣ ಮಳೆಯಾಗುವ ಸಂಭವ ಇರುವುದಾಗಿ ಇಲಾಖೆ ಮಾಹಿತಿ ನೀಡಿದೆ.

ಮಳೆ ಎಲ್ಲಿ, ಎಷ್ಟು?: ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ಹಾಗೂ ಕೊಪ್ಪಳ ಜಿಲ್ಲೆಯ ಮುನಿರಾಬಾದ್‌ನಲ್ಲಿ ಭಾನುವಾರ ತಲಾ 8 ಸೆಂ.ಮೀ ಗರಿಷ್ಠ ಮಳೆಯಾಗಿದೆ.

ಅಥಣಿ 7, ಶಿಡ್ಲಘಟ್ಟ 5, ಕಾರವಾರ, ಚಿಂತಾಮಣಿ, ಶಿರಾ 4, ಮಾನ್ವಿ, ಗೌರಿಬಿದನೂರು, ಮಾಗಡಿ 3, ತೊಂಡೆಬಾವಿ 2, ಮಂಗಳೂರು, ಉಡುಪಿ, ಕೊಪ್ಪಳ, ಚಿಕ್ಕೋಡಿ, ಕಲಬುರಗಿ, ರಾಯಚೂರು, ಬೆಂಗಳೂರು ನಗರ, ನೆಲಮಂಗಲ, ಹಿರಿಯೂರು ಹಾಗೂ ಮಧುಗಿರಿಯಲ್ಲಿ ತಲಾ 1 ಸೆಂ.ಮೀ ಮಳೆಯಾಗಿದೆ.

ಸಿಡಿಲು ಬಡಿದು ತರಕಾರಿ ವ್ಯಾಪಾರಿ ಸಾವು

ಬೆಂಗಳೂರು: ನಗರದಲ್ಲಿ ಭಾನುವಾರ ಮಳೆ ಸುರಿಯುತ್ತಿದ್ದ ಸಂದರ್ಭದಲ್ಲಿ ಮರದ ಕೆಳಗೆ ಆಶ್ರಯ ಪಡೆದಿದ್ದ ತಿಪ್ಪೇಸ್ವಾಮಿ (46) ಎಂಬುವರು ಸಿಡಿಲು ಬಡಿದು ಮೃತಪಟ್ಟಿದ್ದು, ಜೊತೆಗಿದ್ದ ಅವರ ಮಗ ಚಿದಾನಂದ (22) ತೀವ್ರವಾಗಿ ಗಾಯಗೊಂಡಿದ್ದಾರೆ.

ಚಿದಾನಂದ ಹಾಗೂ ತಿಪ್ಪೇಸ್ವಾಮಿ

‘ತುಮಕೂರಿನ ತಿಪ್ಪೇಸ್ವಾಮಿ, ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದರು. ಟಿ. ದಾಸರಹಳ್ಳಿಯಲ್ಲಿ ಪತ್ನಿ ಹಾಗೂ ಇಬ್ಬರು ಮಕ್ಕಳ ಜೊತೆ ನೆಲೆಸಿದ್ದರು. ತರಕಾರಿ ವ್ಯಾಪಾರ ಮಾಡುತ್ತಿದ್ದರು’ ಎಂದು ಪೊಲೀಸರು ಹೇಳಿದರು.

‘ಮಗ ಚಿದಾನಂದ ಜೊತೆಯಲ್ಲಿ ತಿಪ್ಪೇಸ್ವಾಮಿ ಅವರು ಚಿಕ್ಕಗೊಲ್ಲರಹಟ್ಟಿಯಲ್ಲಿರುವ ಸಂಬಂಧಿಕರ ಮನೆಗೆ ಭಾನುವಾರ ಬೆಳಿಗ್ಗೆ ಬೈಕ್‌ನಲ್ಲಿ ಹೋಗಿದ್ದರು. ಅಲ್ಲಿಂದ ವಾಪಸು ನೈಸ್ ರಸ್ತೆ ಮೂಲಕ ಸಂಜೆ ಮನೆಯತ್ತ ಬರುತ್ತಿದ್ದರು. ಇದೇ ಸಂದರ್ಭದಲ್ಲೇ ಜೋರು ಮಳೆ ಶುರುವಾಗಿತ್ತು. ಸಿಡಿಲು–ಗುಡುಗಿನ ಅಬ್ಬರವೂ ಹೆಚ್ಚಿತ್ತು’ ಎಂದರು.

‘ರಸ್ತೆ ಪಕ್ಕದಲ್ಲಿ ಬೈಕ್ ನಿಲ್ಲಿಸಿದ್ದ ತಂದೆ– ಮಗ, ಸಮೀಪದಲ್ಲಿದ್ದ ಮರದ ಕೆಳಗೆ ನಿಂತುಕೊಂಡಿದ್ದರು. ಇದೇ ಸಂದರ್ಭದಲ್ಲೇ ಸಿಡಿಲು ಬಡಿದು ತಿಪ್ಪೇಸ್ವಾಮಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಗಾಯಗೊಂಡು ಪ್ರಜ್ಞೆ ತಪ್ಪಿ ಬಿದ್ದಿದ್ದ ಚಿದಾನಂದ ಅವರನ್ನು ಗಸ್ತು ವಾಹನದ ಸಿಬ್ಬಂದಿ ಆಸ್ಪತ್ರೆಗೆ ಸೇರಿಸಿದ್ದು, ಅವರ ಆರೋಗ್ಯ ಸ್ಥಿತಿ ಗಂಭೀರವಾಗಿದೆ. ಬ್ಯಾಡರಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದೆ’ ಎಂದು ಪೊಲೀಸರು ಹೇಳಿದರು.

ಸೆಸ್ಕ್ ಕಚೇರಿ ಕಾಂಪೌಂಡ್ ಕುಸಿತ

ಮಂಡ್ಯ/ಮೈಸೂರು: ಮಂಡ್ಯ ಹಾಗೂ ಮೈಸೂರು ಜಿಲ್ಲೆಯ ಹಲವೆಡೆ ಭಾನುವಾರ ಮಧ್ಯಾಹ್ನ ಧಾರಾಕಾರ ಮಳೆಯಾಗಿದೆ.

ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನಲ್ಲಿ ಸುಮಾರು ಎರಡು ತಾಸು ಮಳೆ ಸುರಿದಿದೆ. ನಾಗಮಂಗಲ ಪಟ್ಟಣದಲ್ಲಿ ಸೆಸ್ಕ್ ಕಚೇರಿಯ ಕಾಂಪೌಂಡ್ ಕುಸಿದಿದ್ದು, ಅಂಗಡಿ, ಮಳಿಗೆಗಳಿಗೆ ನೀರು ನುಗ್ಗಿದೆ. ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಕೆರೆಯಂತಾಗಿದೆ.

ಹೊಣಕೆರೆ, ಬೆಳ್ಳೂರು, ದೇವಾಲಾಪುರ, ಬಿಂಡಿಗನವಿಲೆ ಹೋಬಳಿಯ ವ್ಯಾಪ್ತಿಯಲ್ಲೂ ಭಾರಿ ಮಳೆಯಾಗಿದೆ. ಮಳವಳ್ಳಿಯಲ್ಲಿ ಧಾರಾಕಾರ ಮಳೆಯಾಗಿದ್ದು, ಮರ ಬಿದ್ದು ಹಸು ಮೃತಪಟ್ಟಿದೆ.

ಮೈಸೂರು ನಗರ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ಮಧ್ಯಾಹ್ನ 3 ಗಂಟೆ ಸುಮಾರಿಗೆ ಆರಂಭವಾದ ಮಳೆ ರಾತ್ರಿವರೆಗೆ ಸುರಿಯುತ್ತಲೇ ಇತ್ತು. ದಸರೆ ಸಂಗೀತ ಕಾರ್ಯಕ್ರಮಕ್ಕೆ ಅಡ್ಡಿ ಉಂಟಾಯಿತು. ಅಲ್ಲದೇ, ಕೆಲ ರಸ್ತೆಗಳಲ್ಲಿ ದೀಪಾಲಂಕಾರ ಸ್ಥಗಿತಗೊಳಿಸಲಾಗಿತ್ತು. ಶಾರ್ಟ್ ಸರ್ಕಿಟ್‌ನಿಂದ ಬಲ್ಬುಗಳು ಸಿಡಿದವು.

ಚಿಂಚೋಳಿಯಲ್ಲಿ ಭೂಕಂಪನ

ಪ್ರಜಾವಾಣಿ ವಾರ್ತೆ

ಕಲಬುರಗಿ: ಚಿಂಚೋಳಿ ತಾಲ್ಲೂಕಿನ ಗಡಿಕೇಶ್ವಾರ ಸುತ್ತಮುತ್ತಲಿನ ಗ್ರಾಮಗಳಲ್ಲಿ ಭಾನುವಾರ ಬೆಳಿಗ್ಗೆ 6.05ಕ್ಕೆ ಮತ್ತೆ ಭೂಕಂಪನ ಸಂಭವಿಸಿದ್ದು, ಮನೆಗಳಲ್ಲಿನ ಪಾತ್ರೆಗಳು, ಗೋಡೆ ಗಡಿಯಾರ ಬಿದ್ದಿವೆ.

‘ಗಡಿಕೇಶ್ವಾರ, ಕುಪನೂರ, ಹಲಚೇರಾ, ತೇಗಲತಿಪ್ಪಿ, ಭಂಟನಳ್ಳಿ, ಬೆನಕಳ್ಳಿ, ರಾಯಕೋಡ, ಭೂತಪೂರ, ಚಿಂತಪಳ್ಳಿ, ರುದ್ನೂರು, ಹೊಸಳ್ಳಿ. ಎಚ್ ಮುಂತಾದ ಕಡೆ ಭೂಮಿಯು ನಡುಗಿದ ಅನುಭವವಾಗಿದೆ’ ಎಂದು ಹೊಸಳ್ಳಿ (ಎಚ್) ಗ್ರಾಮದ ವಿಜಯಕುಮಾರ ಚೇಂಗಟಿ ತಿಳಿಸಿದರು.

‘ಮೂರು ದಿನಗಳಿಂದ ಭೂಕಂಪನದ ಜತೆಗೆ ಭೂಮಿಯಿಂದ ಸದ್ದು ಕೇಳಿ ಬರುತ್ತಿದೆ. ಇದರ ನಿಖರ ಕಾರಣ ತಿಳಿಯಲು ಮತ್ತು ಪರಿಹಾರ ಕ್ರಮ ಕೈಗೊಳ್ಳಲು ಜಿಲ್ಲಾಡಳಿತ ಕ್ರಮ ಕೈಗೊಂಡಿಲ್ಲ’ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸರ್ಕಾರದ ಗಮನ ಸೆಳೆಯಲು ಸೋಮವಾರ (ಅ.11) ಅವರು ಪ್ರತಿಭಟನೆ ನಡೆಸಲು ನಿರ್ಧರಿಸಿದ್ದಾರೆ.

ನವೆಂಬರ್‌ನಲ್ಲಿ ತಜ್ಞರ ತಂಡ: ‘ಇದು ಸಣ್ಣ ಪ್ರಮಾಣದ ಭೂಕಂಪನವಾಗಿದ್ದು, ಯಾವುದೇ ಹಾನಿಯಾಗುವುದಿಲ್ಲ ಎಂದು ಭೂಗರ್ಭ ತಜ್ಞರು ತಿಳಿಸಿದ್ದಾರೆ. ಸೆಪ್ಟೆಂಬರ್‌ನಲ್ಲಿ ತಜ್ಞರ ತಂಡವು ಚಿಂಚೋಳಿ ತಾಲ್ಲೂಕಿಗೆ ಭೇಟಿ ನೀಡಿತ್ತು. ಇನ್ನೊಂದು ತಂಡವು ನವೆಂಬರ್‌ನಲ್ಲಿ ಜಿಲ್ಲೆಗೆ ಭೇಟಿ ನೀಡಲಿದೆ. ಗ್ರಾಮಸ್ಥರು ಆತಂಕಪಡುವ ಅಗತ್ಯವಿಲ್ಲ’ ಎಂದು ಜಿಲ್ಲಾಧಿಕಾರಿ ವಿ.ವಿ. ಜ್ಯೋತ್ಸ್ನಾ ‘ಪ್ರಜಾವಾಣಿ’ಗೆ ತಿಳಿಸಿದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	115.67	7,429	6,423
ಹಾರಂಗಿ	2,859	2,858.13	852	1,250
ಕಬಿನಿ	2,284	2,278.75	2,800	3,500
ಹೇಮಾವತಿ	2,922	2,912.20	2,286	4,673
ಲಿಂಗನಮಕ್ಕಿ	1,819	1,816	3,147	-
ಸೂಪಾ (ಮೀ)	564	557.03	1,878	1,431
ಮಾಣಿ	594.36	587.56	811	-
ತುಂಗಭದ್ರಾ	1,633	1,632.99	45,800	45,200
ಮಲಪ್ರಭಾ	2079.50	2,079.35	6,204	4,394
ಘಟಪ್ರಭಾ	2175	2,175.00	2,579	2,579
ಭದ್ರಾ	186	186	1,844	1,844
ಆಲಮಟ್ಟಿ (ಮೀ)	519.60	519.60	18,821	18,821
ನಾರಾಯಣಪುರ (ಮೀ)	492.25	492.23	40,000	44,600

* ನೆಲಮಟ್ಟದಿಂದ

भारतीय पैकेजिंग संस्थान
Indian Institute of Packaging
An autonomous body under the Ministry of Commerce & Industry, Govt. of India
Packaging for Better Living
ಘೋಷಿಸಲಾಗುತ್ತಿದೆ
ಪ್ಯಾಕೇಜಿಂಗ್ ವಿಷಯದಲ್ಲಿ ಶೈಕ್ಷಣಿಕ ಕೋರ್ಸ್‌ಗಳು

ಡಿಪ್ಲೋಮ ಇನ್ ಪ್ಯಾಕೇಜಿಂಗ್
27ನೇ ಬ್ಯಾಚ್ (2022-2023) ದೂರ ಶಿಕ್ಷಣದ ಮೂಲಕ (ಏಷಿಯನ್ ಪ್ಯಾಕೇಜಿಂಗ್ ಫೆಡರೇಶನ್ ಮಾನ್ಯತೆ ಪಡೆದ) ಕೋರ್ಸ್ ಅವಧಿ 18 ತಿಂಗಳು

ವಿದ್ಯಾರ್ಹತೆ: ಯುಜಿಸಿ ಮಾನ್ಯತೆ ಪಡೆದಿರುವ ವಿಶ್ವವಿದ್ಯಾಲಯದಿಂದ ವಿಜ್ಞಾನ, ಇಂಜಿನಿಯರಿಂಗ್, ತಂತ್ರಜ್ಞಾನ, ವಾಣಿಜ್ಯ ಮತ್ತು ಕಲಾ ವಿಭಾಗಗಳಲ್ಲಿನ ಪದವೀಧರರು/ಮಾನ್ಯತೆ ಪಡೆದ ತಾಂತ್ರಿಕ ಮಂಡಳಿಯಿಂದ ಡಿಪ್ಲೋಮ ಇಂಜಿನಿಯರಿಂಗ್/ಟೆಕ್ನಾಲಜಿ ಪದವಿ ಹೊಂದಿರುವವರು ಈ ಕೋರ್ಸ್‌ಗೆ ಅರ್ಹರಾಗಿರುತ್ತಾರೆ. ಅಭ್ಯರ್ಥಿಗಳು ಕಡ್ಡಾಯವಾಗಿ ಉತ್ಪಾದನೆ, ಖರೀದಿ, ಮಾರಾಟ, ಗುಣಮಟ್ಟ ನಿಯಂತ್ರಣ ಇತ್ಯಾದಿಗಳಂತಹ ಕ್ರಿಯಾತ್ಮಕ ಕಾರ್ಯಗಳಲ್ಲಿ ಕನಿಷ್ಠ ಒಂದು ವರ್ಷದ ಕೈಗಾರಿಕಾ ಅನುಭವ ಹೊಂದಿರಬೇಕು.
ಸಂಪೂರ್ಣ ಭರ್ತಿ ಮಾಡಿದ ಅರ್ಜಿಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ 30ನೇ ನವಂಬರ್, 2021.

ಪ್ಯಾಕೇಜಿಂಗ್ ವಿಷಯದಲ್ಲಿ ಇಂಟೆನ್ಸೀವ್ ಟ್ರೈನಿಂಗ್ ಕೋರ್ಸ್ (ಐಟಿಸಿ)
ಮೂರು ತಿಂಗಳ ಪೂರ್ಣಾವಧಿ ಕೋರ್ಸ್

ಈ ಕೋರ್ಸ್ 15ನೇ ನವೆಂಬರ್, 2021 ರಿಂದ ಮುಂಬೈನಲ್ಲಿ ಪ್ರಾರಂಭವಾಗುತ್ತದೆ.
ವಿದ್ಯಾರ್ಹತೆ: 12ನೇ ತರಗತಿ ಉತ್ತೀರ್ಣ/ಐಟಿಐ/ಡಿಪ್ಲೋಮ/ಯಾವುದೇ ವಿಭಾಗದಲ್ಲಿ ಪದವಿ ಮತ್ತು ಪ್ಯಾಕೇಜಿಂಗ್ ಕ್ಷೇತ್ರದಲ್ಲಿ ವೃತ್ತಿಭವಿಷ್ಯ ರೂಪಿಸಿಕೊಳ್ಳುವ ತುಡಿತ ಹೊಂದಿರಬೇಕು.
ಪ್ರವೇಶ: ಮೊದಲು ಬಂದವರಿಗೆ ಮೊದಲ ಆದ್ಯತೆ ಮೇರೆಗೆ.
ಅರ್ಜಿ ನಮೂನೆ ಮತ್ತು ವಿವರಣಾ ಕೈಪಿಡಿಯನ್ನು ಐಐಪಿ ಮುಂಬೈ ಇವರಿಗೆ ಪ್ರತಿ ಶೈಕ್ಷಣಿಕ ಕೋರ್ಸ್‌ಗೆ ರೂ. 100/– ನಗದು ಪಾವತಿಸಿ ಅಥವಾ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಪ್ಯಾಕೇಜಿಂಗ್ ರವರ ಹೆಸರಿಗೆ ಪಡೆಯಲಾದ ಡಿಮಾಂಡ್ ಡ್ರಾಫ್ಟ್ ರೂಪದಲ್ಲಿ ಶುಲ್ಕ ಪಾವತಿಸಿ ಪಡೆದುಕೊಳ್ಳಬಹುದು. ಅರ್ಜಿ ನಮೂನೆಗಳು ವೆಬ್‌ಸೈಟ್‌ನಲ್ಲಿ ಕೂಡ ಲಭ್ಯವಿರುತ್ತವೆ. ಅಭ್ಯರ್ಥಿಗಳು ಐಐಪಿ ರವರ www.iip-in.com ವೆಬ್‌ಸೈಟ್‌ಗೆ ಭೇಟಿ ನೀಡಿ ಆನ್‌ಲೈನ್ ಅರ್ಜಿ ಸಲ್ಲಿಸಬಹುದು.

ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ಸಂದರ್ಶಿಸಿ www.iip-in.com
ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಪ್ಯಾಕೇಜಿಂಗ್
ಇ–2, ರೋಡ್ ನಂ.8, ಎಂಐಡಿಸಿ ಏರಿಯಾ, ಅಂಧೇರಿ ಪೂರ್ವ, ಮುಂಬೈ 400 093. ಫೋನ್: 91–22–69192200, ಎಕ್ಸ್‌ಟೆನ್ಷನ್: 108/304/305/307, ಫ್ಯಾಕ್ಸ್: 91–22–28328178/28375302
ಇ–ಮೇಲ್: rneiip@iip-in.com/infoiip@iip-in.com

ಶ್ರೀ. ನಿತಿನ್ ರಾಯ್‌ಬೋಲೆ, ಟಿ & ಇ; +91 8692943727
ಮಿಸ್. ಶ್ರೀಜಾ ಬಾಲಾಜಿ, ಟಿ & ಇ; +91 8691853911
ಶ್ರೀ. ಎ.ಎಸ್.ರವಿ, ಎ.ಡಿ. ಟಿ & ಇ; +91 9869620990
ಶ್ರೀ. ಭೂಷನ್ ಸುರಪುರ, ಎ.ಡಿ. +91 9821022112
ಡಾ. ಬಾಬುರಾವ್ ಗುಡೂರಿ, ಜೆ.ಡಿ. & ಹೆಡ್ ಟಿ & ಇ; +91 7208119238

ನಿಧನ ವಾರ್ತೆ

ಶಿವಾನಂದ ಗುರುಮಠ

ಹಾವೇರಿ: ತಾಲ್ಲೂಕಿನ ಅಲದಕಟ್ಟಿ ಗ್ರಾಮದ ನಿವಾಸಿ, ಅಖಿಲ ಕರ್ನಾಟಕ ಕಬ್ಬು ಬೆಳೆಗಾರರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಶಿವಾನಂದ ಗುರುಮಠ (74) ಭಾನುವಾರ ನಿಧನರಾದರು.

ಅವರಿಗೆ ಪತ್ನಿ, ಪುತ್ರ, ಇಬ್ಬರು ಪುತ್ರಿಯರು ಇದ್ದಾರೆ.



ಪ್ರಗತಿಪರ ಕೃಷಿಕರಾಗಿದ್ದ ಅವರು ರೈತ ನಾಯಕ ಪ್ರೊ. ನಂಜುಂಡಸ್ವಾಮಿ ಅವರ ಒಡನಾಡಿಯಾಗಿದ್ದರು. ರಾಜ್ಯ ರೈತ ಸಂಘದ ಸಂಸ್ಥಾಪಕ ಸದಸ್ಯರಲ್ಲೊಬ್ಬರು. ಸಂಗೂರಿನ ಕರ್ನಾಟಕ ಸಹಕಾರ ಸಕ್ಕರೆ ಕಾರ್ಖಾನೆಯ ಕಬ್ಬು ಬೆಳೆಗಾರರ ಹಾಗೂ ಕಾರ್ಖಾನೆಯ ಕಾರ್ಮಿಕರ ಹಕ್ಕುಗಳಿಗೆ ಹಲವಾರು ಹೋರಾಟಗಳನ್ನು ನಡೆಸಿದ್ದರು.

ಎಂ.ಎಸ್ಸಿ ಪದವೀಧರರಾಗಿದ್ದ ಗುರುಮಠ ಅವರು ಕೆಲಕಾಲ ಉಪನ್ಯಾಸಕರಾಗಿಯೂ ಕಾರ್ಯನಿರ್ವಹಿಸಿದ್ದರು.

ಸೊಬಗು...

ಮೈಸೂರಿನ ಅರಮನೆ ಮುಂಭಾಗ ಭಾನುವಾರ ಪ್ರೇಮಿಗಳಿಬ್ಬರು ಸುರಿಯುತ್ತಿದ್ದ ಮಳೆಯ ನಡುವೆ ಅರಮನೆ ದೀಪಾಲಂಕಾರದ ಸೊಬಗನ್ನು ಕಣ್ತುಂಬಿಕೊಂಡರು –ಪ್ರಜಾವಾಣಿ ಚಿತ್ರ/ಸವಿತಾ ಬಿ.ಆರ್

16ರಿಂದ ‘ಮೈಸೂರು ಸಾಹಿತ್ಯ ಸಂಭ್ರಮ’

ಪ್ರಜಾವಾಣಿ ವಾರ್ತೆ

ಮೈಸೂರು: ಕೋವಿಡ್–19 ಕಾರಣ ಈ ಬಾರಿ ‘ಮೈಸೂರು ಸಾಹಿತ್ಯ ಸಂಭ್ರಮ–2021’ ವರ್ಚುವಲ್ ವೇದಿಕೆಯಲ್ಲಿ ಅ.16ರಿಂದ ನ.7ರವರೆಗೆ ವಾರಾಂತ್ಯದಲ್ಲಿ ನಡೆಯಲಿದೆ.

ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್ ಆಶ್ರಯದಲ್ಲಿ ನಡೆಯಲಿರುವ ಐದನೇ ಆವೃತ್ತಿಯಲ್ಲಿ ದೇಶ–ವಿದೇಶಗಳ ಹೆಸರಾಂತ ಸಾಹಿತಿಗಳು, ಚಿಂತಕರು, ಬರಹಗಾರರು, ಸಿನಿಮಾ ನಿರ್ದೇಶಕರು ಹಾಗೂ ವಿವಿಧ ಕ್ಷೇತ್ರಗಳ ತಜ್ಞರು ಪಾಲ್ಗೊಳ್ಳಲಿದ್ದಾರೆ. ಯೂಟ್ಯೂಬ್ ಹಾಗೂ ಫೇಸ್‌ಬುಕ್‌ನಲ್ಲಿ ನೇರಪ್ರಸಾರ ಮಾಡಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ. ಅ.11ರಿಂದ ನೋಂದಣಿ ಆರಂಭವಾಗಲಿದೆ. ಮಾಹಿತಿಗೆ http://www.mysuruliteraturefestival.com/

ನಿಜಾಮುದ್ದೀನ್ ಸತ್ಯಜಿತ್ ಆದ ಕಥೆ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹುಬ್ಬಳ್ಳಿಯ ನಾಗಶೆಟ್ಟಿಕೊಪ್ಪದಲ್ಲಿ ಹುಟ್ಟಿ ಬೆಳೆದಿದ್ದ ಸತ್ಯಜಿತ್ ಅವರ ಮೂಲ ಹೆಸರು ನಿಜಾಮುದ್ದೀನ್ ಎಂ.ಸೈಯದ್. ಆಟೊ, ಕಾರ್ ಡ್ರೈವರ್ ಆಗಿ ಕೆಲಸ ಮಾಡುತ್ತಿದ್ದ ಅವರು 1975ರಲ್ಲಿ ಕೆಎಸ್‌ಆರ್‌ಟಿಸಿ ಧಾರವಾಡ ಡಿಪೋದಲ್ಲಿ ಚಾಲಕ ಹುದ್ದೆಗೆ ಸೇರಿದ್ದರು. ಹವ್ಯಾಸಿ ರಂಗಭೂಮಿ ತಂಡದ ಜೊತೆಗೂಡಿ ಕಲಾಜೀವನ ಆರಂಭಿಸಿದ್ದರು. ನಾಟಕ ತಂಡದ ಸದಸ್ಯರೇ ನಿಜಾಮುದ್ದೀನ್ ಎಂ.ಸೈಯದ್ ಹೆಸರು ಉದ್ದವಾಯಿತೆಂದು ಸತ್ಯಜಿತ್ ಎಂದು ನಾಮಕರಣ ಮಾಡಿದ್ದರು. ಸತ್ಯಜಿತ್ ಅವರ ಮೊದಲ ಸಿನಿಮಾ ‘ಅಂಕುಶ್’. ಬಾಲಿವುಡ್ ನಟ ನಾನಾ ಪಾಟೇಕರ್ ಅವರು ನಾಯಕರಾಗಿದ್ದ ಈ ಹಿಂದಿ ಚಿತ್ರ ತೆರೆಕಂಡಿದ್ದು 1986ರಲ್ಲಿ. ಇದರಲ್ಲಿ ಸತ್ಯಜಿತ್ ಖಳನಾಯಕನ ಪಾತ್ರ ನಿರ್ವಹಿಸಿದ್ದರು.

ಅಲ್ಲಿಂದ ಸತ್ಯಜಿತ್ ಅವರಿಗೆ ಕನ್ನಡ ಚಿತ್ರಗಳಲ್ಲಿ ಬೇಡಿಕೆ ಆರಂಭವಾಯಿತು. 1986ರಲ್ಲಿ ತೆರೆಕಂಡ ಕೆ.ವಿ. ಜಯರಾಮ್ ಅವರ ‘ಅರುಣರಾಗ’ ಚಿತ್ರದ ಮುಖಾಂತರ ಚಂದನವನಕ್ಕೆ ಹೆಜ್ಜೆ ಇಟ್ಟಿದ್ದ ಅವರಿಗೆ ನಂತರ ಸಾಲು ಸಾಲು ಚಿತ್ರಗಳಲ್ಲಿ ಖಳನಾಯಕನ ಪಾತ್ರಗಳು ಅರಸಿಕೊಂಡು ಬಂದಿದ್ದವು. ಅನಂತನಾಗ್ ನಟನೆಯ ‘ವರ್ಣಚಕ್ರ’, ‘ತಾಯಿಗೊಬ್ಬ ಕರ್ಣ’, ‘ಬಂಧಮುಕ್ತ’, ‘ಪದ್ಮವ್ಯೂಹ’, ‘ಪುಟ್ನಂಜ’, ‘ಚೈತ್ರದ ಪ್ರೇಮಾಂಜಲಿ’, ‘ಅಪ್ಪು’, ‘ಅಭಿ’, ‘ಆಪ್ತಮಿತ್ರ’, ದರ್ಶನ್ ನಟನೆಯ ‘ದಾಸ’, ‘ಕುಟುಂಬ’ ಚಿತ್ರಗಳಲ್ಲಿ ಸತ್ಯಜಿತ್ ಅವರ ಪಾತ್ರ ಸಿನಿಪ್ರಿಯರ ಗಮನಸೆಳೆದಿದ್ದವು. ಅಂಬರೀಷ್ ಅವರು ನಾಯಕರಾಗಿ ನಟಿಸಿದ್ದ ‘ಅಂತಿಮ ತೀರ್ಪು’ ಚಿತ್ರದಲ್ಲಿನ ಪಾತ್ರ ಸತ್ಯಜಿತ್ ಅವರಿಗೆ ಹೆಚ್ಚು ಖ್ಯಾತಿ ತಂದುಕೊಟ್ಟಿತು. ರಾಜ್‌ಕುಮಾರ್ ಅವರ ಜೊತೆಗೆ ಸತ್ಯಜಿತ್ ನಟಿಸಿದ ಏಕೈಕ ಚಿತ್ರ ‘ಶಿವ ಮೆಚ್ಚಿದ ಕಣ್ಣಪ್ಪ’. ಹೀಗೆ ಸುಮಾರು ಮೂರು ದಶಕಗಳ ಕಾಲ ನೂರಾರು ಪಾತ್ರಗಳಿಗೆ ಜೀವತುಂಬಿದ್ದ ಸತ್ಯಜಿತ್ 650ಕ್ಕೂ ಅಧಿಕ ಸಿನಿಮಾಗಳಲ್ಲಿ ನಟಿಸಿದ್ದರು.

ಪೋಷಕ ನಟ ಸತ್ಯಜಿತ್ ಇನ್ನಿಲ್ಲ

ಒಂದನೇ ಪುಟದಿಂದ...

ಮೃತರು ಪತ್ನಿ, ಪುತ್ರಿ ಮತ್ತು ಇಬ್ಬರು ಪುತ್ರರನ್ನು ಅಗಲಿದ್ದಾರೆ.

2016ರಲ್ಲಿ ಸಕ್ಕರೆ ಕಾಯಿಲೆಯಿಂದಾಗಿ ಸತ್ಯಜಿತ್ ಅವರ ಎಡ ಕಾಲಿಗೆ ತೀವ್ರ ಸೋಂಕು ತಗುಲಿತ್ತು. ಹೀಗಾಗಿ ಒಂದು ಕಾಲನ್ನು ಸತ್ಯಜಿತ್ ಕಳೆದುಕೊಂಡಿದ್ದರು. ಈ ನಡುವೆಯೂ ಅವರು ವ್ಹೀಲ್‌ಚೇರ್‌ನಲ್ಲೇ ಕುಳಿತು ತಮ್ಮ ಸಿನಿ ಪಯಣವನ್ನು ಮುಂದುವರಿಸಿ ಐದಾರು ಸಿನಿಮಾಗಳಲ್ಲಿ ನಟಿಸಿದ್ದರು. ನಟ ಜಗ್ಗೇಶ್ ಅವರ ಪುತ್ರ ಗುರುರಾಜ್ ನಾಯಕನಾಗಿ ನಟಿಸಿರುವ, ಇತ್ತೀಚೆಗೆ ಬಿಡುಗಡೆಗೊಂಡ ‘ಕಾಗೆ ಮೊಟ್ಟೆ’ ಚಿತ್ರದಲ್ಲೂ ಸತ್ಯಜಿತ್ ಕಾಣಿಸಿಕೊಂಡಿದ್ದರು. ನೆನಪಿರಲಿ ಪ್ರೇಮ್ ನಟನೆಯ ‘ಪ್ರೇಮಂ ಪೂಜ್ಯಂ’ ಸಿನಿಮಾದಲ್ಲೂ ಸತ್ಯಜಿತ್ ನಟಿಸಿದ್ದು, ಇದು ಅವರ ಕೊನೆಯ ಚಿತ್ರವಾಗಿದೆ.

ಸತ್ಯಜಿತ್ ಅವರ ಪಾರ್ಥಿವ ಶರೀರವನ್ನು ಶಬರಿನಗರದ ಅವರ ಮನೆಯಲ್ಲಿ ಅಂತಿಮ ದರ್ಶನಕ್ಕೆ ಇಡಲಾಗಿತ್ತು. ಶಾಸಕ ಕೃಷ್ಣ ಬೈರೇಗೌಡ, ಕುಟುಂಬದ ಸದಸ್ಯರು, ಸ್ನೇಹಿತರು ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದರು. ಮಧ್ಯಾಹ್ನ ಹೆಗಡೆ ನಗರದ ಸ್ಮಶಾನದಲ್ಲಿ ಅಂತಿಮ ವಿಧಿವಿಧಾನ ನಡೆಯಿತು.

ಯುವಕನ ಮೇಲೆ ಲೈಂಗಿಕ ದೌರ್ಜನ್ಯ

ಪ್ರಜಾವಾಣಿ ವಾರ್ತೆ

ಅಥಣಿ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಗ್ರಾಮವೊಂದರಲ್ಲಿ ಯುವಕನೊಬ್ಬನ ಮೇಲೆ ಲೈಂಗಿಕ ದೌರ್ಜನ್ಯ ನಡೆದಿದ್ದು, ಅಥಣಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅ.5 ರಂದು ಘಟನೆ ನಡೆದಿದೆ. ಆರೋಪಿ ರಾಜು ಆಚಾರಟ್ಟಿಯನ್ನು ಪೊಲೀಸರು ಬಂಧಿಸಿದ್ದಾರೆ.

ಬಸ್ಸಿಗಾಗಿ ಕಾಯುತ್ತಿದ್ದ 24 ವರ್ಷದ ಯುವಕನನ್ನು ಆರೋಪಿ ತನ್ನ ವಾಹನದಲ್ಲಿ ಡ್ರಾಪ್ ಕೊಡುವುದಾಗಿ ಹೇಳಿ, ನಿರ್ಜನ ಪ್ರದೇಶಕ್ಕೆ ಕರೆದೊಯ್ದು ಲೈಂಗಿಕ ದೌರ್ಜನ್ಯವೆಸಗಿದ್ದಾನೆ. ಈ ಘಟನೆಯ ಬಗ್ಗೆ ಎಲ್ಲಿಯಾದರೂ ಬಾಯ್ಬಿಟ್ಟರೆ ಕೊಲೆ ಮಾಡುವುದಾಗಿಯೂ ಆತ ಬೆದರಿಕೆ ಹಾಕಿದ್ದಾಗಿ ಯುವಕ ದೂರಿನಲ್ಲಿ ತಿಳಿಸಿದ್ದಾನೆ.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಬೆಂಗಳೂರು ಜಲಮಂಡಳಿಯ ಕೆಳಕಂಡ ಕಾಮಗಾರಿಗಳಿಗೆ ನೋಂದಾಯಿತ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ / ಇಎಂಡಿ ಮೊತ್ತ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
ಮುಖ್ಯ ಅಭಿಯಂತರರ ಕಛೇರಿ (ಪೂರ್ವ), 7ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560009.					
1	ದಕ್ಷಿಣ	ಬೆಂಜಮಂ/ಕಾನಿಅ(ದ)/ಸಅ/1611/ 2021–22, ದಿನಾಂಕ: 04.10.2021 (ಪರಿಶಿಷ್ಟ ಜಾತಿಗೆ ಮೀಸಲಿರಿಸಿದೆ)	ರೂ. 25,29,101/– / ರೂ. 25,291/–	26.10.2021ರ ಸಂಜೆ 4:00 ಗಂಟೆವರೆಗೆ	28.10.2021ರ ಮಧ್ಯಾಹ್ನ 3:00 ಗಂಟೆ ನಂತರ
2		ಬೆಂಜಮಂ/ಕಾನಿಅ(ದ)/ಸಅ/1626/ 2021–22, ದಿನಾಂಕ: 05.10.2021	ರೂ. 65,94,326/– / ರೂ. 1,31,887/–		
3		ಬೆಂಜಮಂ/ಕಾನಿಅ(ದ)/ಸಅ/1627/ 2021–22, ದಿನಾಂಕ: 05.10.2021	ರೂ. 70,72,766/– / ರೂ. 1,41,456/–		
4		ಬೆಂಜಮಂ/ಕಾನಿಅ(ದ)/ಸಅ/1635/ 2021–22, ದಿನಾಂಕ: 07.10.2021	ರೂ. 16,00,678/– / ರೂ. 40,016/–	22.10.2021ರ ಸಂಜೆ 4:00 ಗಂಟೆವರೆಗೆ	26.10.2021ರ ಮಧ್ಯಾಹ್ನ 3:00 ಗಂಟೆ ನಂತರ
5		ಬೆಂಜಮಂ/ಕಾನಿಅ(ದ)/ಸಅ/1640/ 2021–22, ದಿನಾಂಕ: 07.10.2021 (ಪರಿಶಿಷ್ಟ ಪಂಗಡಕ್ಕೆ ಮೀಸಲಿರಿಸಿದೆ)	ರೂ. 21,19,712/– / ರೂ. 25,000/–	30.10.2021ರ ಸಂಜೆ 4:00 ಗಂಟೆವರೆಗೆ	04.11.2021ರ ಮಧ್ಯಾಹ್ನ 3:00 ಗಂಟೆ ನಂತರ
6		ಬೆಂಜಮಂ/ಕಾನಿಅ(ದ)/ಸಅ/1641/ 2021–22, ದಿನಾಂಕ: 07.10.2021	ರೂ. 80,21,145/– / ರೂ. 1,60,423/–		
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ದಕ್ಷಿಣ)					
ಮುಖ್ಯ ಅಭಿಯಂತರರ ಕಛೇರಿ (ವಿನ್ಯಾಸ), 9ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560 009.					
7	ಕೇಂದ್ರ ಉಗ್ರಾಣ	ಬೆಂಜಮಂ/ಕಾನಿಅ(ಕೇಂಉ)/ಸಕಾನಿಅ/ ಸಉಅ/ಸಅ/ಉಗ್ರಾಣ/391/2021–22, ದಿನಾಂಕ: 01.10.2021	ರೂ. 99,82,800/– / ರೂ. 1,99,660/–	26.10.2021ರ ಸಂಜೆ 4:00 ಗಂಟೆಯೊಳಗೆ	28.10.2021ರ ಅಪರಾಹ್ನ 12:00 ಗಂಟೆಗೆ
8		ಬೆಂಜಮಂ/ಕಾನಿಅ(ಕೇಂಉ)/ ಸಕಾನಿಅ/ ಸಉಅ/ಸಅ/ಉಗ್ರಾಣ/394/2021–22, ದಿನಾಂಕ: 04.10.2021	ರೂ. 58,14,900/– / ರೂ. 1,16,300/–	30.10.2021ರ ಸಂಜೆ 4:00 ಗಂಟೆಯೊಳಗೆ	02.11.2021ರ ಅಪರಾಹ್ನ 12:00 ಗಂಟೆಗೆ
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಕೇಂದ್ರ ಉಗ್ರಾಣ)					
ಮುಖ್ಯ ಅಭಿಯಂತರರ ಕಛೇರಿ (ತ್ಯಾನೀನಿ), 5ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560 009.					
9	ತ್ಯಾನೀನಿ– ಸಿ. ವ್ಯಾಲಿ	ಬೆಂಜಮಂ/ಕಾನಿಅತ್ಯಾನೀನಿ(ಸಿವಿ)/ ಪಿಬಿ/943/2021–22 ದಿನಾಂಕ: 07.10.2021	ರೂ.98.64 ಲಕ್ಷಗಳು / ರೂ.1,98 ಲಕ್ಷಗಳು	18.10.2021ರ ಸಂಜೆ 4:00 ಗಂಟೆವರೆಗೆ	19.10.2021ರ ಸಂಜೆ 4:10 ಗಂಟೆಗೆ
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ತ್ಯಾನೀನಿ–ಸಿ. ವ್ಯಾಲಿ)					

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು https://eproc.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ವಾ.ಸಾ.ಸಂ.ಇ/ಎಂಐಎ/1817/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೆಂಗಳೂರು: ಇ.ವಿ:ಗುರಿ ಈಡೇರಿತೇ?’ ಶೀರ್ಷಿಕೆಯಡಿ ‘ಪ್ರಜಾವಾಣಿ’ ಯಲ್ಲಿ ಭಾನುವಾರ (ಅ.10) ಪ್ರಕಟವಾದ ‘ಒಳನೋಟ’ ವರದಿಗೆ ರಾಜ್ಯದಾದ್ಯಂತ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

ಒಳನೋಟ

ಸರಾಗವಾಗಲಿದೆಯೇ ಇ.ವಿ. ಪಯಣ

ದೂರಾಲೋಚನೆ ಅಗತ್ಯ

ದೇಶದಲ್ಲಿ ವಿದ್ಯುತ್ ಚಾಲಿತ ವಾಹನಗಳ ಅನುಕೂಲ ಮತ್ತು ಅನಾನುಕೂಲಗಳನ್ನು ಗಮನಿಸಬೇಕು. ಎಲೆಕ್ಟ್ರಿಕ್ ಬಸ್‌ಗಳನ್ನು ಪರಿಚಯಿಸುವ ಹಾಗೂ ಅವುಗಳ ಕುರಿತು ಜನರಲ್ಲಿ ವಿಶ್ವಾಸ ಮೂಡಿಸುವ ಕೆಲಸವನ್ನು ಸರ್ಕಾರ ಮಾಡಬೇಕು. ವಿದ್ಯುತ್ ಚಾಲಿತ ವಾಹನಗಳ ಬಳಕೆಗೂ ಮುನ್ನ ಅದಕ್ಕೆ ಅಗತ್ಯವಿರುವ ಚಾರ್ಜಿಂಗ್ ಕೇಂದ್ರಗಳನ್ನು ಹೆಚ್ಚು ತೆರೆಯಬೇಕು.

ರವಿಕುಮಾರ ಜಾಧವ, ಹಂಪಿ

ಎಲ್‌ಪಿಜಿಯಂತೆ ದುಬಾರಿ ಆಗದಿರಲಿ

ಪೆಟ್ರೋಲ್ ಮತ್ತು ಡೀಸೆಲ್ ದರಗಳು ಗಗನಕ್ಕೇರಿರುವ ಪರಿಸ್ಥಿತಿಯಲ್ಲಿ ದೇಶಕ್ಕೆ ವಿದ್ಯುತ್ ಚಾಲಿತ ವಾಹನಗಳ ಅಗತ್ಯ ಎದುರಾಗಿದೆ. ನಾವು ಇದರ ಸಾಧಕ–ಬಾಧಕಗಳ ಬಗ್ಗೆಯೂ ಯೋಚಿಸುವುದು ಮುಖ್ಯ. ಈ ಹಿಂದೆ ಎಲ್‌ಪಿಜಿ ಪ್ರಾರಂಭದಲ್ಲಿ ಉಚಿತ ಮತ್ತು ಸಬ್ಸಿಡಿ ರೂಪದಲ್ಲಿ ದೇಶದೆಲ್ಲೆಡೆ ಹಂಚಿ, ಪ್ರಸ್ತುತ ದುಬಾರಿ ಮಾಡಿದ್ದಾರೆ. ಗ್ಯಾಸ್‌ಗೆ ಬಂದ ಸ್ಥಿತಿ ವಿದ್ಯುತ್ ಚಾಲಿತ ವಾಹನಗಳಿಗೆ ಬಾರದಿರಲಿ.

ಸಿದ್ದು, ಮೈಸೂರು

ಚಾರ್ಜಿಂಗ್ ಕೇಂದ್ರಗಳು ಹೆಚ್ಚಾಗಲಿ

ವಿದ್ಯುತ್ ಚಾಲಿತ ವಾಹನಗಳ ಬಳಕೆ ನಿಗದಿತ ಪ್ರಮಾಣದಲ್ಲಿ ಗುರಿ ಮುಟ್ಟಬೇಕಾದರೆ ಚಾರ್ಜಿಂಗ್ ವ್ಯವಸ್ಥೆಯನ್ನು ಬಲಪಡಿಸಬೇಕು. ಜನರ ಸಮೀಪಕ್ಕೆ ಈ ಚಾರ್ಜಿಂಗ್ ವ್ಯವಸ್ಥೆ ಲಭ್ಯವಾದರೆ, ವಿದ್ಯುತ್ ಚಾಲಿತ ಕ್ರಮೇಣ ವಾಹನಗಳ ಕನಸು ಸಾಕಾರಗೊಳ್ಳಲಿದೆ. ವಿದ್ಯುತ್ ಚಾಲಿತ ವಾಹನಗಳು ಗುಣಮಟ್ಟದಿಂದ ಕೂಡಿದ್ದರೆ, ಅವುಗಳ ಮೇಲೆ ವಿಶ್ವಾಸ ಮೂಡುತ್ತದೆ. ಕೈಗೆಟುಕುವ ದರದಲ್ಲಿ ವಾಹನಗಳು ಸಿಗುವಂತಿದ್ದರೆ, ಖರೀದಿಗೆ ಮುಂದಾಗುವುದು ಸಹಜ.

ಜಗದೀಶ, ಬಾಗಲಕೋಟೆ

ದೂರದ ಪ್ರಯಾಣಕ್ಕೆ ಯೋಗ್ಯವಲ್ಲ

ಪರಿಸರ ಸ್ನೇಹಿ ಇ.ವಿ ವಾಹನಗಳ ಬಳಕೆಯಿಂದ ವಾಯು ಮಾಲಿನ್ಯ ತಗ್ಗಿಸಬಹುದು. ಆದರೆ, ಈ ವಾಹನಗಳಲ್ಲಿ ದೂರದ ಪ್ರಯಾಣ ಸಾಧ್ಯವಾಗುತ್ತಿಲ್ಲ. ಒಂದು ಸೀಮಿತ ದೂರವರೆಗೆ ಮಾತ್ರ ಸಂಚರಿಸುವುದರಿಂದ ಇವುಗಳ ಬಳಕೆಗೆ ಹಿನ್ನಡೆ ಎದುರಾಗಿದೆ. ಈ ಸಮಸ್ಯೆಗೆ ಪರ್ಯಾಯ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸುವುದು ಸೂಕ್ತ.

ಕಾವೇರಿ ಬಡಿಗೇರ್, ರಾಯಚೂರು

ಇಂದಿನ ನಿರ್ಧಾರ ಭವಿಷ್ಯದಲ್ಲಿ ಸಾಕಾರ

ಸರ್ಕಾರದಿಂದ ಎಲ್ಲೆಡೆ ಚಾರ್ಜಿಂಗ್ ಕೇಂದ್ರಗಳ ಸ್ಥಾಪನೆ, ಅಡಚಣೆ ರಹಿತ ವಿದ್ಯುತ್ ಪೂರೈಕೆ ಹಾಗೂ ಗ್ರಾಮೀಣ ಪ್ರದೇಶದ ಜನರಿಗೂ ಇ. ವಿ ವಾಹನಗಳ ಲಭ್ಯತೆ ಮತ್ತು ಅರಿವು ಮೂಡಿಸುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಒಳ್ಳೆಯದು. ಇದರಿಂದ ಭವಿಷ್ಯದಲ್ಲಿ ಯಶಸ್ಸು ಕಟ್ಟಿಟ್ಟಬುತ್ತಿ.

ಶಿವರಾಜ, ಗದಗ

ಇ.ವಿ ಖರೀದಿಗೆ ಉತ್ತೇಜಿಸಿ

ವಿದ್ಯುತ್ ಚಾಲಿತ ವಾಹನಗಳ ಖರೀದಿಗೆ ಸರ್ಕಾರವು ಜನರನ್ನು ಆಕರ್ಷಿಸುವ ಕ್ರಮಗಳ ಮೂಲಕ ಉತ್ತೇಜಿಸಬೇಕು. ಇದು ನಗರ ಭಾಗಕ್ಕೆ ಮಾತ್ರ ಸೀಮಿತವಾಗದೆ, ಗ್ರಾಮೀಣ ಭಾಗಕ್ಕೂ ವ್ಯಾಪಿಸಲಿ. ಚಾರ್ಜಿಂಗ್ ಕೇಂದ್ರಗಳ ಸ್ಥಾಪನೆಗೆ ಹೆಚ್ಚಿನ ಆದ್ಯತೆ ನೀಡುವ ಮೂಲಕ ಪರಿಸರ ಸಂರಕ್ಷಣೆಗೆ ಮುಂದಾಗಲಿ.

ಕಿಶೋರ್, ಶಿವಮೊಗ್ಗ

ಎಂಜಿನಿಯರಿಂಗ್ ಕೋರ್ಸ್

ನ್ಯಾನೊ, ಬಯೊಮೆಡಿಕಲ್‌ನತ್ತ ವಿದ್ಯಾರ್ಥಿಗಳ ಚಿತ್ತ

ವಿದ್ಯಾರ್ಥಿಗಳು ಎಂಜಿನಿಯರಿಂಗ್ ಕೋರ್ಸ್‌ಗೆ ಸೇರುವ ಮುನ್ನ ಯಾವುದಕ್ಕೆ ಬೇಡಿಕೆ ಇದೆ ಎಂದು ತಿಳಿದುಕೊಳ್ಳುವುದು ಅಗತ್ಯ. ಬಯೊಮೆಡಿಕಲ್, ಏರೋಸ್ಪೇಸ್, ಕೆಮಿಕಲ್, ಸೋಲಾರ್, ರೋಬಾಟಿಕ್ಸ್, ನ್ಯಾನೊ ತಂತ್ರಜ್ಞಾನ ಮೊದಲಾದ ಕೋರ್ಸ್‌ಗಳಿಗೆ ಸದ್ಯ ಬೇಡಿಕೆ ಹೆಚ್ಚಿದೆ

ಎಸ್.ಜಿ. ಕೃಷ್ಣ

ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ)ಯ ಫಲಿತಾಂಶ ಪ್ರಕಟವಾಗಿದ್ದು, ರ್‍ಯಾಂಕಿಂಗ್ ಪಟ್ಟಿ ಪ್ರಕಾರ ವಿದ್ಯಾರ್ಥಿಗಳು ಮುಂದಿನ ಎಂಜಿನಿಯರಿಂಗ್ ಕೋರ್ಸ್, ಕಾಲೇಜಿನ ಆಯ್ಕೆಯಲ್ಲಿ ತೊಡಗಿದ್ದಾರೆ. ಎಂಜಿನಿಯರಿಂಗ್ ವಿಭಾಗದಲ್ಲಿ ಶಾಖೆಗಳು ಸಾಕಷ್ಟಿದ್ದು, ವಿದ್ಯಾರ್ಥಿಗಳಲ್ಲಿ ಹಲವರಿಗೆ ಯಾವ ಶಾಖೆಯನ್ನು ಆಯ್ಕೆ ಮಾಡಿಕೊಳ್ಳಬೇಕು ಎಂಬ ಗೊಂದಲ ಇರಬಹುದು. ಸದ್ಯಕ್ಕೆ ಯಾವುದಕ್ಕೆ ಬೇಡಿಕೆ ಇದೆ ಎನ್ನುವುದಕ್ಕಿಂತ ಅವರ ಪದವಿ ಮುಗಿಯುವ ಸಮಯದಲ್ಲಿ ಯಾವುದಕ್ಕೆ ಬೇಡಿಕೆ ಬರಬಹುದು ಎಂಬುದನ್ನು ತಿಳಿದುಕೊಳ್ಳುವುದು ಅಗತ್ಯ. ಇದು ಸ್ವಲ್ಪ ಕಷ್ಟಕರವಾದರೂ ಉದ್ಯೋಗ ಮಾರುಕಟ್ಟೆಯಲ್ಲಿನ ಏರಿಳಿತಗಳನ್ನು ಗಮನಿಸುವ ಮಾರ್ಗದರ್ಶಕರ ನೆರವನ್ನು ಕೋರಬಹುದು.

ಸಾಮಾನ್ಯವಾಗಿ ಹೇಳುವುದಾದರೆ ಬಹುತೇಕ ಎಲ್ಲಾ ಶಾಖೆಗಳಲ್ಲೂ ಸಾಕಷ್ಟು ಅವಕಾಶಗಳಿವೆ. ಆದರೆ ಕೆಲವು ಶಾಖೆಗಳಲ್ಲಿ ಹೆಚ್ಚು ಅವಕಾಶಗಳಿವೆ ಎನ್ನಬಹುದು. ಕಂಪ್ಯೂಟರ್ ವಿಜ್ಞಾನ, ಎಲೆಕ್ಟ್ರಾನಿಕ್ಸ್, ಎಲೆಕ್ಟ್ರಿಕಲ್, ಮೆಕ್ಯಾನಿಕಲ್, ಸಿವಿಲ್ ಮೊದಲಾದವುಗಳು ಸಾಂಪ್ರದಾಯಿಕ ಕೋರ್ಸ್‌ಗಳಾಗಿದ್ದು, ಕೆಲವು ಹೊಸ ಕೋರ್ಸ್‌ಗಳಿಗೆ ಹೆಚ್ಚಿನ ಬೇಡಿಕೆಯಿದೆ.

ಬಯೊಮೆಡಿಕಲ್, ಏರೋಸ್ಪೇಸ್, ಕೆಮಿಕಲ್, ಸೋಲಾರ್, ನ್ಯಾನೊ ತಂತ್ರಜ್ಞಾನ, ಟೆಲಿಕಮ್ಯೂನಿಕೇಶನ್, ರೋಬಾಟಿಕ್ಸ್, ಮಶೀನ್ ಲರ್ನಿಂಗ್, ಪೆಟ್ರೋಲಿಯಂ ಎನರ್ಜಿ, ಡೇಟಾ ಸೈನ್ಸ್, ಮೈನಿಂಗ್... ಮೊದಲಾದ ಹತ್ತು ಹಲವಾರು ಕೋರ್ಸ್‌ಗಳನ್ನು ಇತ್ತೀಚೆಗೆ ಆರಂಭಿಸಲಾಗಿದ್ದು, ವಿದ್ಯಾರ್ಥಿಗಳು ಈ ಹೊಸ ಕೋರ್ಸ್‌ಗಳ ಬಗ್ಗೆ ಆಸಕ್ತರಾಗಿದ್ದಾರೆ.

ನ್ಯಾನೊ ಟೆಕ್ನಾಲಜಿ: ಇದರಲ್ಲಿ ಹತ್ತಾರು ವಿಷಯಗಳನ್ನು ವಿದ್ಯಾರ್ಥಿ ಕಲಿಯಬಹುದು. ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ, ಗಣಿತ ಮೊದಲಾದವುಗಳು ಇದರಲ್ಲಿ ಸೇರಿವೆ. ಕ್ವಾಂಟಮ್ ಮೆಕ್ಯಾನಿಕ್ಸ್, ಮಟೀರಿಯಲ್ ಸೈನ್ಸ್, ಥರ್ಮೋಡೈನಮಿಕ್ಸ್, ಕಾರ್ಬನ್ ಮಟೀರಿಯಲ್, ಎಲೆಕ್ಟ್ರಾನಿಕ್ಸ್ ಮೊದಲಾದವುಗಳ ಬಗ್ಗೆ ಅಧ್ಯಯನ ನಡೆಸಬಹುದು. ಇದು ಬಹಳ ವಿಸ್ತಾರವಾದ ಕ್ಷೇತ್ರವಾಗಿದ್ದು, ಸಂಶೋಧನೆಗೆ ಸಾಕಷ್ಟು ಅವಕಾಶಗಳಿವೆ. ಔಷಧ ಕ್ಷೇತ್ರದಲ್ಲಿ ಕೂಡ ಸಂಶೋಧನೆ ನಡೆಸಬಹುದು. ಇದರಲ್ಲಿ ಪದವಿ ಪಡೆದವರು ನ್ಯಾನೊ ಟೆಕ್ನಾಲಜಿಸ್ಟ್, ಮೈಕ್ರೊಫ್ಯಾಬ್ರಿಕೇಶನ್ ಎಂಜಿನಿಯರ್ ಅಲ್ಲದೇ ಪ್ರಾಧ್ಯಾಪಕರಾಗಿ, ವಿಜ್ಞಾನಿಯಾಗಿ ಉದ್ಯೋಗಕ್ಕೆ ಸೇರಬಹುದು.

ಪೆಟ್ರೋಲಿಯಂ ಎಂಜಿನಿಯರಿಂಗ್: ಇದರಲ್ಲಿ ಫ್ಲ್ಯೂಡ್ ಮೆಕ್ಯಾನಿಕ್ಸ್, ಥರ್ಮೋಡೈನಮಿಕ್ಸ್ ಮೊದಲಾದ ವಿಷಯಗಳು ಅಡಕವಾಗಿವೆ. ವಿದ್ಯಾರ್ಥಿಗಳು ಪೆಟ್ರೋಲಿಯಂ ನಿಕ್ಷೇಪಗಳ ಬಗ್ಗೆ, ಬಾವಿ ಕೊರೆಯುವ ತಂತ್ರಜ್ಞಾನಗಳು, ಪೆಟ್ರೋಲಿಯಂ ಮೂಲಗಳ ಬಳಕೆ ಬಗ್ಗೆ ಕಲಿಯಬಹುದು. ಈ ಕೋರ್ಸ್‌ನಲ್ಲಿ ಪದವಿ ಪಡೆದವರು ಪ್ರೊಡಕ್ಷನ್ ಎಂಜಿನಿಯರ್, ರಿಸರ್ವೈರ್ ಎಂಜಿನಿಯರ್ ಮೊದಲಾದ ಹುದ್ದೆಗಳನ್ನು ಗಿಟ್ಟಿಸಬಹುದು.

ಬಯೊಮೆಡಿಕಲ್ ಎಂಜಿನಿಯರಿಂಗ್: ಹೆಸರೇ ಸೂಚಿಸುವಂತೆ ಈ ಎಂಜಿನಿಯರಿಂಗ್ ಕೋರ್ಸ್‌ನಲ್ಲಿ ವೈದ್ಯಕೀಯ ಹಾಗೂ ಜೀವಶಾಸ್ತ್ರದ ವಿಷಯಗಳು ಸೇರಿಕೊಂಡಿವೆ. ಇದನ್ನು ಓದಿದವರಿಗೆ ಆರೋಗ್ಯ ಕ್ಷೇತ್ರದಲ್ಲಿ ಸಾಕಷ್ಟು ಅವಕಾಶಗಳಿದ್ದು, ವಿದೇಶಗಳಲ್ಲಿ ಕೂಡ ಉದ್ಯೋಗಕ್ಕೆ ಸೇರಬಹುದು.

ವಿದ್ಯಾರ್ಥಿ ವೇತನ ಕೈಪಿಡಿ

ಎಸ್‌ಬಿಐ ಜನರಲ್ ಸಪೋರ್ಟ್ ಸ್ಕಾಲರ್‌ಶಿಪ್ ಪ್ರೋಗ್ರಾಮ್ 2021

ವಿವರ: ಕೋವಿಡ್‌ನಿಂದ ತೊಂದರೆಗೆ ಒಳಗಾದ 9ರಿಂದ 12ನೇ ತರಗತಿ, ಪದವಿ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಹತೆ: ಕೋವಿಡ್‌ನಿಂದ ಪೋಷಕರನ್ನು ಅಥವಾ ಕುಟುಂಬದ ದುಡಿಯುವ ಜೀವವನ್ನು ಕಳೆದುಕೊಂಡಿದ್ದರೆ, ಕೋವಿಡ್ ಕಾರಣದಿಂದ ಕೆಲಸ ಕಳೆದುಕೊಂಡಿದ್ದರೆ ಅಂಥ ಮನೆಯ ಮಕ್ಕಳು ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಕುಟುಂಬದ ವಾರ್ಷಿಕ ಆದಾಯವು ₹6 ಲಕ್ಷವನ್ನು ಮೀರಿರಬಾರದು.

ಆರ್ಥಿಕ ಸಹಾಯ: ₹ 38,500

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 31 ಅಕ್ಟೋಬರ್, 2021

ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಅರ್ಜಿಗಳು ಮಾತ್ರ

ಹೆಚ್ಚಿನ ಮಾಹಿತಿಗೆ: www.b4s.in/praja/SBIG1

ಕೃಪೆ: buddy4study.com

ಸರ್ಕಾರಿ ಉದ್ಯೋಗ ಅವಕಾಶ ಎಷ್ಟಿದೆ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿ. ಪ್ರದೀಪ್‌ಕುಮಾರ್

- **ನಾನು ಬಿಕಾಂ ಪದವಿ ಮುಗಿಸಿದ್ದೇನೆ. ಕೇಂದ್ರ ಮತ್ತು ರಾಜ್ಯ ಸರ್ಕಾರದ ಉದ್ಯೋಗಗಳ ಮಾಹಿತಿಯನ್ನು ಹೇಗೆ ಪಡೆಯಬೇಕು?**

ಶಿವರಾಜ್ ಬೆಲ್ಲೇರಿ, ಊರು ತಿಳಿಸಿಲ್ಲ.

ಕೇಂದ್ರ ಸರ್ಕಾರದ ಮಾಹಿತಿ ಮತ್ತು ಪ್ರಸಾರ ಸಚಿವಾಲಯದ ವತಿಯಿಂದ ಪ್ರಕಟವಾಗುವ ಎಂಪ್ಲಾಯ್‌ಮೆಂಟ್ ನ್ಯೂಸ್ ವಾರಪತ್ರಿಕೆಗೆ ನೀವು ಚಂದಾದಾರರಾಗಬಹುದು. ಈ ವಾರಪತ್ರಿಕೆ ಮುದ್ರಣ ಮಾಧ್ಯಮ ಮತ್ತು ಇ-ಪೇಪರ್ ಆವೃತ್ತಿಯಲ್ಲಿಯೂ ದೊರಕುತ್ತದೆ. ಇದಲ್ಲದೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಆಯಾ ಇಲಾಖೆಗಳ ವೆಬ್‌ಸೈಟ್ ಮತ್ತು ದಿನಪತ್ರಿಕೆಗಳಲ್ಲಿ ಅಧಿಸೂಚನೆಗಳ ಪ್ರಕಟಣೆಯೂ ಇರುತ್ತದೆ. ಸರ್ಕಾರಿ ಉದ್ಯೋಗ ವಿನಿಮಯ ಕಚೇರಿಗಳಲ್ಲಿ ನೋಂದಾಯಿಸಿಕೊಳ್ಳುವುದರಿಂದ ಉದ್ಯೋಗವನ್ನು ಅರಸಲು ಸಹಾಯವಾಗಬಹುದು ಹಾಗೂ ಉದ್ಯೋಗಗಳ ಮಾಹಿತಿ ಅನೇಕ ಖಾಸಗಿ ವೆಬ್‌ಸೈಟ್‌ಗಳಲ್ಲಿಯೂ ಲಭ್ಯ. ಹೆಚ್ಚಿನ ವಿವರಗಳಿಗಾಗಿ ಗಮನಿಸಿ: http://employmentnews.gov.in/

- **ಸರ್, ನನಗೆ 53 ವರ್ಷ ವಯಸ್ಸು. ನಾನು ಸರ್ಕಾರಿ ಶಾಲೆ ಶಿಕ್ಷಕನಾಗಿದ್ದು ಎಲ್‌ಎಲ್‌ಬಿ ಅಧ್ಯಯನ ನಡೆಸಲು ಇರುವ ಅವಕಾಶಗಳ ಬಗ್ಗೆ ದಯವಿಟ್ಟು ಮಾರ್ಗದರ್ಶನ ನೀಡಿ.**

ರವಿಕುಮಾರ್, ಬೆಂಗಳೂರು.

ನಮಗಿರುವ ಮಾಹಿತಿಯಂತೆ ಬಾರ್ ಕೌನ್ಸಿಲ್ ಆಫ್ ಇಂಡಿಯಾ ನಿಯಮಾವಳಿಯಂತೆ 3 ವರ್ಷದ ಎಲ್‌ಎಲ್‌ಬಿ ಕೋರ್ಸ್ ಮಾಡಲು ಇದ್ದ 30 ವರ್ಷದ ಗರಿಷ್ಠ ವಯೋಮಿತಿಯನ್ನು ಈಗ 45 ವರ್ಷದವರೆಗೆ ಸಡಿಲಿಸಲಾಗಿದೆ. ಆದರೂ, ಅನೇಕ ಕಾಲೇಜುಗಳಲ್ಲಿ ಹಳೆಯ ವಯೋಮಿತಿಯ ಉಲ್ಲೇಖವೇ ಇರುವುದು ನಮ್ಮ ಗಮನಕ್ಕೆ ಬಂದಿದೆ.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ.

ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ- 73

1001. ಲೋಕಸಭೆಯ ಸ್ಪೀಕರ್ ಯಾರಿಗೆ ರಾಜೀನಾಮೆ ಪತ್ರವನ್ನು ಸಲ್ಲಿಸಬಹುದು?
ಎ) ಉಪಸಭಾಪತಿ ಬಿ) ರಾಷ್ಟ್ರಪತಿ
ಸಿ) ಮುಖ್ಯ ನ್ಯಾಯಾಧೀಶರು
ಡಿ) ಪ್ರಧಾನಮಂತ್ರಿ

1002. ಯಾವ ನಟಿಗೆ ಪ್ರಥಮ ಲಿಂಗ-ತಟಸ್ಥ ನಟನಾ ಪ್ರಶಸ್ತಿಯನ್ನು ನೀಡಲಾಗಿದೆ?
ಎ) ಮೆರಿಲ್ ಸ್ಟ್ರೀಪ್ ಬಿ) ಜೆನ್ನಿ ಫರ್ಲಾರೆನ್ಸ್
ಸಿ) ಎಮ್ಮಾ ಸ್ಟೋನ್ ಡಿ) ಎಮ್ಮಾ ವ್ಯಾಟ್ಸನ್

1003. ಬಂಡೀಪುರ ರಾಷ್ಟ್ರೀಯ ಉದ್ಯಾನವು ಯಾವ ರಾಜ್ಯಗಳಲ್ಲಿ ವ್ಯಾಪಿಸಿದೆ?
ಎ) ಕೇರಳ, ತಮಿಳುನಾಡು, ಆಂಧ್ರಪ್ರದೇಶ
ಬಿ) ಕರ್ನಾಟಕ, ತೆಲಂಗಾಣ, ಆಂಧ್ರಪ್ರದೇಶ
ಸಿ) ಕರ್ನಾಟಕ, ಕೇರಳ, ತಮಿಳುನಾಡು
ಡಿ) ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು

1004. ಕೆಳಗಿನವುಗಳಲ್ಲಿ ಯಾವ ಕ್ರೀಡೆ ಕಾಮನ್‌ವೆಲ್ತ್ ಗೇಮ್ಸ್ ಭಾಗವಲ್ಲ?
ಎ) ಟೆನಿಸ್ ಬಿ) ಬಾಕ್ಸಿಂಗ್
ಸಿ) ಸ್ಕ್ವಾಶ್ ಡಿ) ಸೈಕ್ಲಿಂಗ್

1005. ಪ್ರವೀಣ ಗೋಡ್ಖಿಂಡಿ ನುಡಿಸುವ ವಾದ್ಯ ಯಾವುದು?
ಎ) ತಬಲಾ ಬಿ) ಪಿಯಾನೊ
ಸಿ) ವೀಣೆ ಡಿ) ಕೊಳಲು

1006. 'ಆಲಿವ್ ರಿಡ್ಲಿ' ಆಮೆಗಳ ಹೆಚ್ಚಿನ ಸಂಖ್ಯೆಯ ಗೂಡುಕಟ್ಟುವಿಕೆ ಯಾವ ರಾಜ್ಯದಲ್ಲಿ ಕಂಡುಬರುತ್ತದೆ?
ಎ) ಪಶ್ಚಿಮಬಂಗಾಳ ಬಿ) ಒಡಿಶಾ
ಸಿ) ಗುಜರಾತ್ ಡಿ) ತಮಿಳುನಾಡು

1007. 'ವಿಶ್ವ ಅಭಿವೃದ್ಧಿ ವರದಿ'ಯನ್ನು ಯಾವ ಸಂಸ್ಥೆಯು ಪ್ರಕಟಿಸುತ್ತದೆ?
ಎ) ವಿಶ್ವಬ್ಯಾಂಕ್
ಬಿ) ಅಂತರರಾಷ್ಟ್ರೀಯ ಹಣಕಾಸುನಿಧಿ
ಸಿ) ವಿಶ್ವಸಂಸ್ಥೆಯ ಔದ್ಯೋಗಿಕ ಅಭಿವೃದ್ಧಿ ಸಂಸ್ಥೆ
ಡಿ) ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ

1008. ಭಾರತದ ಸಂವಿಧಾನದ 1ನೇ ವಿಧಿಯು ಭಾರತವನ್ನು ಏನೆಂದು ಕರೆಯುತ್ತದೆ?
ಎ) ಯುನಿಟರಿ ಸ್ಟೇಟ್
ಬಿ) ಫೆಡರೇಶನ್
ಸಿ) ಕ್ವಾಸಿ-ಫೆಡರಲ್
ಡಿ) ಯೂನಿಯನ್ ಆಫ್ ಸ್ಟೇಟ್ಸ್

1009. ಕೆಳಗಿನ ಸರಣಿಯಲ್ಲಿ ಬಿಟ್ಟು ಹೋದ ಸಂಖ್ಯೆಯನ್ನು ಕಂಡುಹಿಡಿಯಿರಿ.
23, 45, 89, 177 ----
ಎ) 356 ಬಿ) 355
ಸಿ) 354 ಡಿ) 353

1010. ಗಿರೀಶನ ವಯಸ್ಸು ಸತೀಶನ ವಯಸ್ಸಿಗಿಂತ ಎರಡು ಪಟ್ಟು ಜಾಸ್ತಿ ಇದೆ. ಮೂರು ವರ್ಷಗಳ ಹಿಂದೆ ಗಿರೀಶನ ವಯಸ್ಸು ಸತೀಶನ ವಯಸ್ಸಿಗಿಂತ ಮೂರು ಪಟ್ಟು ಜಾಸ್ತಿ ಇತ್ತು. ಈಗ ಗಿರೀಶನ ವಯಸ್ಸೆಷ್ಟು?
ಎ) 6 ವರ್ಷಗಳು ಬಿ) 7 ವರ್ಷಗಳು
ಸಿ) 8 ವರ್ಷಗಳು ಡಿ) 12 ವರ್ಷಗಳು

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ 72ರ ಉತ್ತರಗಳು: 986. ಡಿ, 987. ಬಿ, 988. ಎ, 989. ಬಿ, 990. ಬಿ, 991. ಡಿ, 992. ಸಿ, 993. ಡಿ, 994. ಸಿ, 995. ಬಿ, 996. ಎ, 997. ಡಿ, 998. ಬಿ, 999. ಡಿ, 1000. ಬಿ

ಶಿಕ್ಷಣವೇ ಶಕ್ತಿ ಸ್ಪರ್ಧಾ ಕ್ರಿಯೇಟಿವ್ ಸ್ಪರ್ಧಾತ್ಮಕ ಪ್ರವೇಶ ಪರೀಕ್ಷೆಗಳ ತರಬೇತಿ ಕೇಂದ್ರ (ರಿ.), ಶಿವಮೊಗ್ಗ

SHIKSHANAVE SHAKTHI SPARDA CREATIVE CURRICULAR AND CO-CURRICULAR COMPETITIVE EXAMS COACHING & TUITION CENTRE

ಸತೀಶ್ ಟೈರ್ಸ್, ಮೊದಲನೇ ಮಹಡಿ, ಕುವೆಂಪು ರಸ್ತೆ, ಕೆನರಾ ಬ್ಯಾಂಕ್ ಎದುರು, ಜಿಲ್ಲಾ ಪಂಚಾಯಿತಿ ಕಛೇರಿ ಪಕ್ಕ, ಶಿವಮೊಗ್ಗ–577 202. ದೂ: 08182–357224, 72046 36072, 80507 30717

ಪ್ರೀತಿಯ ವಿದ್ಯಾರ್ಥಿಗಳೇ ಮತ್ತು ಆತ್ಮೀಯ ಪೋಷಕರೇ.... ನಮ್ಮ ಸಂಸ್ಥೆಯು ಕಳೆದ 15 ವರ್ಷಗಳಿಂದಲೂ ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಯ ವಿದ್ಯಾರ್ಥಿಗಳಿಗೆ ನವೋದಯ, ಮೊರಾರ್ಜಿ, ಸೈನಿಕ ಶಾಲೆ ಪ್ರವೇಶ ಪರೀಕ್ಷೆಯ ತರಬೇತಿಯನ್ನು ನೀಡಿ ಅತ್ಯುತ್ತಮ ಫಲಿತಾಂಶ ನೀಡುವುದರ ಮೂಲಕ ಹೆಸರುವಾಸಿಯಾಗಿರುವ ಏಕೈಕ ಸಂಸ್ಥೆಯಾಗಿದೆ.

ಇದರ ಜೊತೆಗೆ PC, PSI, PDO, SDA, FDA, NEET, CET, TET, TGT, GPSTR, BANKING, RRB, SSLC & PUC, 4th to 9th Tuitions, ABACUS, Speed Maths, Vedic Maths ತರಬೇತಿಯನ್ನೂ ನೀಡಲಾಗುತ್ತಿದೆ.

ಒಂದೇ ಸೂರಿನಡಿ ಸಹಪಠ್ಯ ತರಬೇತಿ: ತಬಲ, ಸಂಗೀತ, ನೃತ್ಯಯೋಗ, ಭರತನಾಟ್ಯ, ಚಿತ್ರಕಲೆಯಂತಹ ಸಹಪಠ್ಯ ತರಬೇತಿಗಳನ್ನು ನೀಡಲಾಗುತ್ತಿದೆ.

4ನೇ ತರಗತಿಯಿಂದ ತನ್ನ ಜೀವನ ರೂಪಿಸಿಕೊಳ್ಳುವವರೆಗೂ ಬೇಕಾಗಿರುವ ಎಲ್ಲಾ ರೀತಿಯ ಪಠ್ಯ ಮತ್ತು ಸಹಪಠ್ಯ ತರಬೇತಿಯನ್ನು ನೀಡಲಾಗುತ್ತದೆ.

ನವೋದಯ ತರಬೇತಿ ಕೇಂದ್ರಗಳು
ಶಿವಮೊಗ್ಗ । ಚಿಕ್ಕಮಗಳೂರು । ಚಿತ್ರದುರ್ಗ । ಹಾವೇರಿ । ದಾವಣಗೆರೆ ಜಿಲ್ಲೆಗಳ ಎಲ್ಲಾ ತಾಲ್ಲೂಕುಗಳು ಹಾಗೂ ರಾಜ್ಯದ ಎಲ್ಲಾ ಜಿಲ್ಲೆಗಳ 5ನೇ ತರಗತಿಯ ವಿದ್ಯಾರ್ಥಿಗಳಿಗೆ ಆನ್‌ಲೈನ್ ಹಾಗೂ ವಸತಿ ಸಹಿತ ತರಬೇತಿ ನೀಡಲಾಗುತ್ತಿದೆ.

ಸೌಲಭ್ಯಗಳು
- ಹಾಸ್ಟೆಲ್ ಸೌಲಭ್ಯ
- ಅನುಭವಿ ತರಬೇತುದಾರರು
- Study ಹಾಲ್ (ಲೈಬ್ರೆರಿ)
- ಶುದ್ಧ ಕುಡಿಯುವ ನೀರು
- ಹವಾ ನಿಯಂತ್ರಿತ (AC) ಕಲಿಕಾ ಕೊಠಡಿಗಳು, Free WiFi
- ಆಧುನೀಕರಣಗೊಂಡಿರುವ ಆಸನಗಳು (Desk)
- ನಿಖರವಾದ ಫಲಿತಾಂಶಗಳು
- ಎಲ್ಲಾ ಕಲಿಕಾ ಕೊಠಡಿಗಳು CC ಕ್ಯಾಮೆರಾದ ಕಣ್ಗಾವಲಿನಲ್ಲಿರುತ್ತವೆ.
- Subscribe: Youtube, Telegram as Shikshanave Shakthi Shimoga

ನಿರುದ್ಯೋಗಿ ಯುವಕ/ಯುವತಿಯರಿಗೆ ಸುವರ್ಣ ಅವಕಾಶ
Degree/DEd/BEd ಆದವರಿಗೆ ನಿಮ್ಮ ಜಿಲ್ಲೆ, ನಿಮ್ಮ ತಾಲ್ಲೂಕು ನಿಮ್ಮ ಊರಿನಲ್ಲಿ ಉದ್ಯೋಗ ಅವಕಾಶ. ನೇರವಾಗಿ ನಮ್ಮ ಕಛೇರಿಗೆ ಭೇಟಿ ನೀಡುವುದು.

2021–22ನೇ ಸಾಲಿನಲ್ಲಿ 5ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ನವೋದಯ/ಮೊರಾರ್ಜಿ/ಸೈನಿಕ ಶಾಲೆ ಪ್ರವೇಶ ಪರೀಕ್ಷೆಗೆ Online/Offline ಮತ್ತು Residential (ವಸತಿ ಸಹಿತ) ತರಬೇತಿ ಪ್ರಾರಂಭವಾಗಿದೆ.
ದಾಖಲಾತಿಗಾಗಿ ಸಂಪರ್ಕಿಸಿ: 08182–357224
ಸಂಪರ್ಕಿಸುವ ಸಮಯ– ಬೆಳಗ್ಗೆ 11ರಿಂದ ಸಂಜೆ 7:00

ವಿಶೇಷ ಸೂಚನೆ: ಈ ಪೇಪರ್ ಕತ್ತರಿಸಿಕೊಂಡು ಬಂದವರಿಗೆ ವಿಶೇಷ ರಿಯಾಯಿತಿ ಇರುತ್ತದೆ.

ನಮ್ಮಲ್ಲಿನ ಹೊಸ ಕೋರ್ಸ್: 1. ಗ್ರಾಫಾಲಜಿ (ಕೈ ಬರಹದ ಅನ್ವೇಷಣೆ ಹಾಗೂ ವಿಶ್ಲೇಷಣೆ) 2. ನ್ಯೂಮರಾಲಾಜಿ (ಸಂಖ್ಯಾಶಾಸ್ತ್ರ)

2021ನೇ ಸಾಲಿನ ನವೋದಯ ಪ್ರವೇಶ ಪರೀಕ್ಷೆಯಲ್ಲಿ ನಮ್ಮ ಸಂಸ್ಥೆಯಿಂದ ಆಯ್ಕೆಯಾದ ಹೆಮ್ಮೆಯ ವಿದ್ಯಾರ್ಥಿಗಳು.

Tapasya R. Bhat 1591129 Shimoga; Swastik Rathod 1643472 Udupi; Manish 1643065 Udupi; Sahithya R. 1590970 Shimoga; Keertiswaroop 1591078 Shimoga; Akash N. 1592396 Shimoga; Samarth A. 1593030 Shimoga; Sunil R. 1592741Shimoga; Vikhyath 1592067Shimoga; Jeevitha B.M. 1644477 Banglore; Jathin Gowda 1644653 Bangalore; Priyanka H.A. 1592109 Shimoga; Jeevan P. 1591593 Shimoga; Praful Gouda B. 1629468 Bellary; Roopa B.A. 1580618 Chikmagalur; Mansoor Bhasha N. 1603484 Kodagu; Prajwal N. 1642211 Tumkur; Gopika B.N. 1641783 Tumkur

Jayaprada M 1639794 Chamarajanagar; Aditya Kulkarni 1609185 Dharwad; Dhanush Rao N. 1591159 Shivamogga; Brunda 1652277 Raichur; Bindushree S. 1682488 Mysuru; Pratik S. 1579695 Bengaluru Rural; Tejaswi M.V. 1668818 Davangere; Deekshakumari 1579266 Bengaluru Rural; Sanjay T.R. 1632780 Chitradurga; Goutam D.K. 1581031 Chikkamagaluru; Shreeja T.R. 1634602 Chitradurga; Lavanya P.B. 1668271 Davangere; Spoorti Biradar 1604469 Yadagiri; Brunda M.S. 1688991 Kolar; Lavanya J.M. 1633721 Chitradurga; Dharshan K. Angadi 1594192 Uttara Kannada; Adarsha M. 1681145 Mysuru; Soumya 1587971 Koppal

Manoj 1587539; Charan Jaisheel Shet 1596282; RAJATH 1645860; Purnachandra D.T. 1633319; Kruthika K. 1668236; Jeevan M. 1636005; Akash K. 1596250 Koppal; Pankaja M.N. 1633419 Chitradurga; Amith Gowda 1586518 Mandya; Manish SN 1684158 Mysuru; Shivaprasad PT 1634243 Chitradurga; Mohith N. Raj 1599495 Hassan; Shreya Shetty M.P. 1600270 Hassan; Chandana M S 1663259 Haveri; Keerthana 1683279 Mysuru; Nagaraju L G 1670052 Dakshina Kannada; Tushar Nagesh Malagi 1645976 Banglore; Shubhashini Balakrishnan 1645311 Bengaluru Urban

Dhanush H A 1599631 Hassan; Pankaj Shrinivas K. S 1641896 Tumakuru; Jnana sagar H S 1599547 Hassan; Bhavana K S 1599876 Hassan; Rakshith gowda B S 1585986 Mandya; Yashwanth Basavaraj 1676534 Bagalkote; Rohan G K 1599035 Hassan; Hruthvik G 1676534 Bagalkote; Laxmi 1641654 Tumkur; D Bhavya 1641676 Tumkur; Chiranth K S 1645014 Banglore Urban; Nuthan V 1683048 Mysuru; Prajwal M 1599896 Hassan; A S Prajan Chand 158513 Mandya; Lava S Nayak 1684334 Mysore; Manya K V 1597211 Uttara Kannada

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

❦ ಸುಭಾಷಿತ ❦

ಬೇರೆಯವರನ್ನು ತೆಗಳುವುದರಿಂದ ನಿಮ್ಮ ವ್ಯಕ್ತಿತ್ವಕ್ಕೇ ಹೆಚ್ಚು ಕುಂದುಂಟಾಗುತ್ತದೆ. -ಶಿವರಾಮ ಕಾರಂತ

ಕಾಂಗ್ರೆಸ್: ನಿಶ್ಶಕ್ತಿ ನಿವಾರಣೆಗೆ ಬೇಕಿದೆ ಕಹಿ ಗುಳಿಗೆ

ಕಾಂಗ್ರೆಸ್ ಪಕ್ಷವು ಹಿಮ್ಮುಖವಾಗಿ ಚಲಿಸುತ್ತ ಇರುವ ಸುದ್ದಿಗಳು ಪ್ರತಿದಿನವೂ ದೇಶದ ಒಂದಲ್ಲ ಒಂದು ಕಡೆಯಿಂದ ವರದಿಯಾಗುತ್ತಿವೆ. ಪಕ್ಷವು ಅವನತಿಯ ಹಾದಿ ಹಿಡಿದಿದೆ ಎಂಬ ವಿವರಗಳು ಅಥವಾ ಯಾವುದಾದರೂ ಒಂದು ರಾಜ್ಯದಲ್ಲಿ ಕಾಂಗ್ರೆಸ್ಸಿನ ಪ್ರಾಬಲ್ಯ ಅಥವಾ ಪ್ರಭಾವ ಕುಂದುತ್ತಿದೆ ಎಂಬ ವಿವರಗಳು ಆ ವರದಿಯಲ್ಲಿ ಇರುತ್ತವೆ. ಒಂದು ಕಾಲಘಟ್ಟದಲ್ಲಿ ದೇಶದ ಅತಿದೊಡ್ಡ ರಾಜಕೀಯ ಪಕ್ಷವಾಗಿದ್ದ, ಜನರನ್ನು ಒಗ್ಗೂಡಿಸುವ ಹಾಗೂ ಆಡಳಿತದ ವಿಚಾರದಲ್ಲಿ ಬಹಳ ದೊಡ್ಡ ಪರಂಪರೆಯನ್ನು ಹೊಂದಿರುವ ಕಾಂಗ್ರೆಸ್, ತನ್ನನ್ನು ತಾನೇ ಒಂದು ಐತಿಹಾಸಿಕ ಸ್ಮಾರಕದ ಮಟ್ಟಕ್ಕೆ ಕುಗ್ಗಿಸಿಕೊಳ್ಳುತ್ತಿರುವಂತೆ ಭಾಸವಾಗುತ್ತಿದೆ. ಸದ್ಯದ ಅಗತ್ಯಗಳಿಗೆ ಸ್ಪಂದಿಸಲು ಈ ಪಕ್ಷಕ್ಕೆ ಸಾಧ್ಯವಾಗುತ್ತಿಲ್ಲ; ಭವಿಷ್ಯದಲ್ಲಿ ತನ್ನ ಕಾರ್ಯತಂತ್ರ ಏನಿರಬೇಕು ಎಂಬ ವಿಚಾರವಾಗಿ ಪಕ್ಷಕ್ಕೆ ಖಚಿತ ನಿಲುವು ಇಲ್ಲ. ಕಾಂಗ್ರೆಸ್ ನೇತೃತ್ವದ ಸರ್ಕಾರಗಳು ದೇಶದ ಮೂರು ರಾಜ್ಯಗಳಲ್ಲಿ ಮಾತ್ರ ಇವೆ. ಆದರೆ ಯಾವ ರಾಜ್ಯದಲ್ಲಿಯೂ ಆಡಳಿತವು ಸುಗಮವಾಗಿ ನಡೆಯುತ್ತಿಲ್ಲ. ಪಂಜಾಬ್‌ನಲ್ಲಿ ಪಕ್ಷವು ತಾನಾಗಿಯೇ ಬಿಕ್ಕಟ್ಟೊಂದನ್ನು ಸೃಷ್ಟಿಸಿಕೊಂಡಿತು, ಅದರ ಪರಿಣಾಮವಾಗಿ ಸರ್ಕಾರವನ್ನು ಅಸ್ಥಿರಗೊಳಿಸಿತು. ಇಡೀ ವಿದ್ಯಮಾನವು ಪಕ್ಷದ ನಾಯಕತ್ವಕ್ಕೆ, ಪಕ್ಷವನ್ನು ನಿಭಾಯಿಸಲು ಬರುವುದಿಲ್ಲ, ಪಕ್ಷದಲ್ಲಿನ ಪರಿಸ್ಥಿತಿಯನ್ನು ಗ್ರಹಿಸುವ ಶಕ್ತಿಯೂ ಕಡಿಮೆ ಎಂಬುದನ್ನು ತೋರಿಸಿಕೊಟ್ಟಿತು. ಪಕ್ಷವು ಆಡಳಿತದಲ್ಲಿ ಇರುವ ಇತರ ರಾಜ್ಯಗಳಲ್ಲಿಯೂ ಸಮಸ್ಯೆಗಳು ಇವೆ. ಅಲ್ಲಿನ ಸಮಸ್ಯೆಗಳು ಸ್ಫೋಟಗೊಂಡು, ಸರ್ಕಾರವನ್ನು ಮತ್ತು ಪಕ್ಷವನ್ನು ತೊಂದರೆಗೆ ಸಿಲುಕಿಸಲು ಬಹುಕಾಲ ಬೇಕಾಗುವುದಿಲ್ಲ.

ತನ್ನೊಳಗೆ ಪ್ರಜಾತಂತ್ರದ ತೊರೆಯೊಂದು ಹರಿಯುವಂತೆ ನೋಡಿಕೊಳ್ಳಬೇಕಿರುವುದು ಕಾಂಗ್ರೆಸ್ ಮಾಡಬೇಕಿರುವ ಮೊದಲ ಕೆಲಸ

ಕೆಲವು ರಾಜ್ಯಗಳ ವಿಧಾನಸಭೆಯಲ್ಲಿ ಕಾಂಗ್ರೆಸ್ಸಿಗೆ ಈಗ ಅಸ್ತಿತ್ವವೇ ಇಲ್ಲವಾಗಿದೆ. ಪಶ್ಚಿಮ ಬಂಗಾಳದಂತಹ ದೊಡ್ಡ ರಾಜ್ಯದ ವಿಧಾನಸಭೆಯಲ್ಲಿ ಕಾಂಗ್ರೆಸ್ಸಿಗೆ ಪ್ರಾತಿನಿಧ್ಯ ಇಲ್ಲ. ಉತ್ತರಪ್ರದೇಶ, ಬಿಹಾರ ರಾಜ್ಯಗಳ ವಿಧಾನಸಭೆಯಲ್ಲಿ ಕಾಂಗ್ರೆಸ್ ಸದಸ್ಯರ ಸಂಖ್ಯೆ ಬೆರಳೆಣಿಕೆಯಷ್ಟು ಮಾತ್ರ. ಪಕ್ಷದ ನಾಯಕರು, ಸದಸ್ಯರು ಮತ್ತು ಬೆಂಬಲಿಗರು ಪಕ್ಷ ತೊರೆದು, ಬೇರೆ ರಾಜಕೀಯ ಪಕ್ಷಗಳನ್ನು ಸೇರುತ್ತಿದ್ದಾರೆ. ಬಿಜೆಪಿ, ತೃಣಮೂಲ ಕಾಂಗ್ರೆಸ್ ಕಡೆ ಕಾಂಗ್ರೆಸ್ಸಿನ ನಾಯಕರು ಈಚಿನ ದಿನಗಳಲ್ಲಿ ಮುಖ ಮಾಡಿದ್ದಾರೆ. ಕಾಂಗ್ರೆಸ್ ರೂಪಿಸಿದ ತಂತ್ರಗಾರಿಕೆ, ಮಾಡಿಕೊಂಡ ಹೊಂದಾಣಿಕೆಗಳು ಈಚಿನ ಚುನಾವಣೆಗಳಲ್ಲಿ ಫಲ ಕೊಟ್ಟಿಲ್ಲ. ಕಾಂಗ್ರೆಸ್ ಪಕ್ಷವು ಹೊರೆ ಎಂಬಂತೆ ಮೈತ್ರಿಪಕ್ಷಗಳು ವರ್ತಿಸುತ್ತಿವೆ. ಪಕ್ಷದಲ್ಲಿ ಮನೆಮಾಡಿರುವ ಸೈದ್ಧಾಂತಿಕ ಗೊಂದಲದ ಪರಿಣಾಮವಾಗಿ ಸಂಘಟನೆಯಲ್ಲಿನ ದೌರ್ಬಲ್ಯವು ಜಾಸ್ತಿ ಆಗಿದೆ. ಆತ್ಮಾವಲೋಕನ ಹಾಗೂ ಸ್ವಯಂ ಮೌಲ್ಯಮಾಪನಕ್ಕೆ ಪಕ್ಷವು ಹಿಂದೇಟು ಹಾಕುತ್ತಿರುವುದು ಕೂಡ ಈ ಸ್ಥಿತಿಗೆ ಕಾರಣವಾಗಿದೆ. ತನ್ನ ಸಿದ್ಧಾಂತವನ್ನು ಗಟ್ಟಿಯಾಗಿ ಹೇಳಲು ಕಾಂಗ್ರೆಸ್ ಹಿಂದೇಟು ಹಾಕುತ್ತಿರುವಂತೆ ಕಾಣಿಸುತ್ತಿದೆ. ಇದು ಆತ್ಮವಿಶ್ವಾಸದ ಕೊರತೆಯನ್ನು ತೋರಿಸುತ್ತಿದೆ. ಕಾಂಗ್ರೆಸ್ ಅಂದರೆ ಏನು ಎಂಬುದನ್ನು ಹೇಳುವ ಸಮರ್ಥ ಕಾರ್ಯಕರ್ತರ ಪಡೆಯೊಂದನ್ನು ಪಕ್ಷವು ಸಜ್ಜುಗೊಳಿಸಬೇಕಿತ್ತು. ಜನರ ನಡುವೆ ನಿಂತು, ಪಕ್ಷದ ಸೈದ್ಧಾಂತಿಕ ಕಾಲಾಳುಗಳಾಗಿ ಕೆಲಸ ಮಾಡುವ ತಾಕತ್ತು ಅವರಲ್ಲಿ ಇರಬೇಕಿತ್ತು. ಬಿಜೆಪಿಯಲ್ಲಿ ಅಂತಹದೊಂದು ಪಡೆ ಇದೆ. ಈಗಲೂ ಬಿಜೆಪಿಗೆ ದೇಶದಾದ್ಯಂತ ಪ್ರಬಲ ಪ್ರತಿರೋಧ ಒಡ್ಡುವ ಶಕ್ತಿ ಇರುವುದು ಕಾಂಗ್ರೆಸ್ಸಿಗೆ ಮಾತ್ರ. ಹೀಗಿದ್ದರೂ, ಕಾಂಗ್ರೆಸ್ಸಿನಲ್ಲಿ ಇಂಥದ್ದೊಂದು ಚುರುಕಿನ ನಡೆಗಳು ಕಾಣಿಸುತ್ತಿಲ್ಲ. ಬೆಲೆ ಏರಿಕೆಯಂತಹ ಸಮಸ್ಯೆಗಳನ್ನು ಮುಂದಿಟ್ಟುಕೊಂಡು ಜನಾಭಿಪ್ರಾಯ ರೂಪಿಸಲಿಕ್ಕೆ ಕಾಂಗ್ರೆಸ್ಸಿಗೆ ಆಗುತ್ತಿಲ್ಲ. ತನ್ನ ಒಳಗಿನಿಂದಲೇ ವ್ಯಕ್ತವಾಗುತ್ತಿರುವ ಟೀಕೆಗಳಿಗೆ, ಅಗತ್ಯ ಬದಲಾವಣೆ ಕುರಿತ ಸಲಹೆಗಳಿಗೆ ಪಕ್ಷವು ಸ್ಪಂದಿಸುತ್ತಿಲ್ಲ. ಪಕ್ಷದ ಹಂಗಾಮಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ 23 ಮಂದಿ ನಾಯಕರು ಬರೆದ ಪತ್ರಕ್ಕೆ ದೊರೆತ ಸ್ಪಂದನೆ ಈ ಮಾತಿಗೆ ಸಾಕ್ಷಿ.

ಸೋನಿಯಾ ಗಾಂಧಿ ಅವರ ನಾಯಕತ್ವವು ಈ ಹಿಂದೆ ಪಕ್ಷಕ್ಕೆ ಎಷ್ಟೇ ಅನುಕೂಲ ಮಾಡಿಕೊಟ್ಟಿರಬಹುದು. ಆದರೆ, ಈಗಿನ ಸಂದರ್ಭದಲ್ಲಿ ಪಕ್ಷವನ್ನು ಹಿಂಜರಿತದಿಂದ ಹೊರಕ್ಕೆ ತರಲು ಅಥವಾ ಪಕ್ಷವನ್ನು ಬಲಪಡಿಸಲು ಅವರ ನಾಯಕತ್ವಕ್ಕೆ ಸಾಧ್ಯವಾಗಿಲ್ಲ. ಪಕ್ಷವನ್ನು ಒಟ್ಟಾಗಿ ಹಿಡಿದಿಟ್ಟುಕೊಳ್ಳಲು ಕೂಡ ಈ ನಾಯಕತ್ವಕ್ಕೆ ಕಷ್ಟವಾಗುತ್ತಿದೆ. ಪಕ್ಷದ ಯಾವುದೇ ಹಂತದಲ್ಲಿ ಇರುವ ಯಾವುದೇ ನಾಯಕರಿಗೆ ಪ್ರಜಾತಾಂತ್ರಿಕ ಮಾನ್ಯತೆ ಅಥವಾ ವಿಶ್ವಾಸಾರ್ಹತೆ ಇಲ್ಲ. ಪಂಜಾಬ್ ವಿದ್ಯಮಾನ ಗಮನಿಸಿ ಹೇಳುವುದಾದರೆ, ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಪಕ್ಷಕ್ಕೆ ಸಂಬಂಧಿಸಿದ ಪ್ರಮುಖ ತೀರ್ಮಾನಗಳನ್ನು ತೆಗೆದುಕೊಂಡಿದ್ದಾರೆ. ಆದರೆ ಅವರು ಪಕ್ಷದಲ್ಲಿ ಚುನಾಯಿತ ಸ್ಥಾನ ಹೊಂದಿಲ್ಲ. ಚುನಾಯಿತ ಅಧಿಕಾರ ಇಲ್ಲದಿದ್ದರೂ ಪಕ್ಷದಲ್ಲಿ ಪ್ರಮುಖ ಜವಾಬ್ದಾರಿ ಹೊಂದಿರುವ, ಪಕ್ಷವನ್ನು ಪ್ರತಿನಿಧಿಸುತ್ತಿರುವುದಾಗಿ ಹೇಳಿಕೊಳ್ಳುವ, ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳುತ್ತಿರುವ ಎಲ್ಲ ನಾಯಕರು ಆತ್ಮಾವಲೋಕನ ಮಾಡಿಕೊಳ್ಳಬೇಕು. ಈ ಮಾತು ಹಂಗಾಮಿ ಅಧ್ಯಕ್ಷರಿಂದ ಹಿಡಿದು ಅತ್ಯಂತ ಕೆಳ ಹಂತದ ನಾಯಕರವರೆಗೆ ಅನ್ವಯವಾಗುತ್ತದೆ. ಆಂತರಿಕ ಚುನಾವಣೆ ಮೂಲಕ ಪಕ್ಷದಲ್ಲಿ ಹೊಸ ನಾಯಕರಿಗೆ ಜವಾಬ್ದಾರಿ ವಹಿಸುವ ಕೆಲಸ ಮಾಡಬೇಕು. ತನ್ನೊಳಗೆ ಪ್ರಜಾತಂತ್ರದ ತೊರೆಯೊಂದು ಹರಿಯುವಂತೆ ನೋಡಿಕೊಳ್ಳಬೇಕಿರುವುದು ಕಾಂಗ್ರೆಸ್ ಮಾಡಬೇಕಿರುವ ಮೊದಲ ಕೆಲಸ. ಆಗ ಪಕ್ಷದಲ್ಲಿನ ಕೊಳೆ ತೊಳೆಯುತ್ತದೆ, ಪಕ್ಷಕ್ಕೆ ಹೊಸದಾಗಿ ಚೈತನ್ಯ ಪಡೆಯಲು ಸಾಧ್ಯವಾಗುತ್ತದೆ. ಇದು ಕಹಿ ಮಾತ್ರೆ ಎಂಬುದು ನಿಜ. ಆದರೆ ಕಹಿ ಔಷಧ ಸೇವಿಸಲು ಮನಸ್ಸು ಮಾಡದಿದ್ದರೆ ಪಕ್ಷದ ಆರೋಗ್ಯವು ಇನ್ನಷ್ಟು ಹದಗೆಡಬಹುದು.

ದಿನದ ಟ್ವೀಟ್

ಹೇಳದಿರುವ ಸಂಗತಿಯೆಂದರೆ...

ವಿದ್ಯುತ್ ಉತ್ಪಾದನಾ ಘಟಕಗಳು ಅಗತ್ಯಕ್ಕೆ ತಕ್ಕಂತೆ ಕಲ್ಲಿದ್ದಲು ಸಂಗ್ರಹಿಸದೇ ಇರುವುದು (ಶೇ 66ರಷ್ಟು ವಿದ್ಯುತ್ ಪೂರೈಕೆ ಉಷ್ಣ ಸ್ಥಾವರಗಳಿಂದ), ಮುಂಬರುವ ವಾರಗಳಲ್ಲಿ ದೊಡ್ಡ ಮಟ್ಟದಲ್ಲಿ ವಿದ್ಯುತ್ ಕಡಿತಕ್ಕೆ ಕಾರಣವಾಗಬಹುದು ಎಂದು ಕೇಂದ್ರ ಸರ್ಕಾರ ಹೇಳಿದೆ. ಆದರೆ, ಕೇಂದ್ರ ಹೇಳದಿರುವ ಸಂಗತಿಯೆಂದರೆ, ಪ್ರಮುಖ ಕಲ್ಲಿದ್ದಲು ಪೂರೈಕೆದಾರ ಸಂಸ್ಥೆಯು ಸರ್ಕಾರಿ ಸ್ವಾಮ್ಯದ ಕೋಲ್ ಇಂಡಿಯಾ ಲಿಮಿಟೆಡ್ ಮತ್ತು ಅತಿದೊಡ್ಡ ವಿದ್ಯುತ್ ಉತ್ಪಾದಕ ಸಂಸ್ಥೆಯು ಸರ್ಕಾರಿ ಸ್ವಾಮ್ಯದ ಎನ್‌ಟಿಪಿಸಿ!

ಎಂ.ಕೆ.ವೇಣು, ಪತ್ರಕರ್ತ

ಕಿಡಿನುಡಿ

ಲಖಿಂಪುರ-ಖೇರಿ ಹಿಂಸಾಚಾರ ಪ್ರಕರಣದಲ್ಲಿ ನ್ಯಾಯ ದೊರೆಯಬೇಕು ಎಂಬ ಹೋರಾಟವು ಸ್ಥಳೀಯ ಅಧಿಕಾರಸ್ಥ ಅಹಂಕಾರಿಗಳು ಬಡ ರೈತರ ಮೇಲೆ ನಡೆಸಿದ ಕ್ರೂರ ಹತ್ಯಾಕಾಂಡಕ್ಕೆ ಸಂಬಂಧಿಸಿದ್ದೇ ಹೊರತು ಅದಕ್ಕೆ ಯಾವುದೇ ಧಾರ್ಮಿಕ ಬಣ್ಣ ಇಲ್ಲ.

ವರುಣ್ ಗಾಂಧಿ, ಬಿಜೆಪಿ ಸಂಸದ

25 ವರ್ಷಗಳ ಹಿಂದೆ

ಶುಕ್ರವಾರ, 11-10-1996

• ಸರ್ಕಾರ ರಚನೆಗೆ ತೀವ್ರ ಪೈಪೋಟಿ

ನವದೆಹಲಿ, ಅ. 10- (ಪಿಟಿಐ, ಯುಎನ್‌ಐ) ಉತ್ತರಪ್ರದೇಶ ವಿಧಾನಸಭೆ ಚುನಾವಣೆಯ ಫಲಿತಾಂಶಗಳು ಬಹುತೇಕ ಪ್ರಕಟವಾಗಿದ್ದು, ಯಾವುದೇ ಪಕ್ಷ ಬಹುಮತ ಪಡೆದಿಲ್ಲ. ಅತಂತ್ರ ವಿಧಾನಸಭೆ ರೂಪುಗೊಂಡಿದ್ದು, ಸರ್ಕಾರ ರಚಿಸಲು ಬಿಜೆಪಿ, ಬಹುಜನ ಸಮಾಜ ಪಕ್ಷ ಹಾಗೂ ಸಂಯುಕ್ತ ರಂಗಗಳು ತೀವ್ರ ಪ್ರಯತ್ನಗಳನ್ನು ನಡೆಸಿವೆ.

ಬಿಜೆಪಿ ಹಾಗೂ ಸಮತಾ ಪಕ್ಷದ ಮೈತ್ರಿ ಕೂಟವು 411 ಸ್ಥಾನಗಳಲ್ಲಿ 170ನ್ನು ಗೆದ್ದುಕೊಂಡು ಮುನ್ನಡೆ ಸಾಧಿಸಿದ್ದರೂ, ಸ್ಪಷ್ಟ ಬಹುಮತ ಗಳಿಸಲು ವಿಫಲವಾಗಿದೆ. ಸಮಾಜವಾದಿ ಪಕ್ಷ ನೇತೃತ್ವದ ಸಂಯುಕ್ತ ರಂಗವು 128 ಸ್ಥಾನಗಳನ್ನು ಗೆದ್ದುಕೊಂಡಿದ್ದು ಎರಡನೇ ಸ್ಥಾನದಲ್ಲಿದೆ. ಬಹುಜನ ಸಮಾಜ ಪಕ್ಷ- ಕಾಂಗ್ರೆಸ್ ಮೈತ್ರಿಕೂಟವು 100 ಸ್ಥಾನಗಳನ್ನು ಗೆದ್ದುಕೊಂಡಿದೆ.

• ‘ಅಶ್ಲೀಲತೆಯ ಪ್ರದರ್ಶನವಲ್ಲ’

ಬೆಂಗಳೂರು, ಅ. 10- ನಗರದಲ್ಲಿ ಮುಂದಿನ ತಿಂಗಳ 23ರಂದು ನಡೆಯಲಿರುವ ವಿಶ್ವ ಸುಂದರಿ ಸ್ಪರ್ಧೆ ಕೆಲವರು ಭಾವಿಸಿರುವಂತೆ ನಗ್ನ ಅಥವಾ ಅಶ್ಲೀಲತೆಯ ಪ್ರದರ್ಶನವಲ್ಲ ಎಂದು ಇದನ್ನು ಇಲ್ಲಿ ಸಂಘಟಿಸುತ್ತಿರುವ ಅಮಿತಾಭ್ ಬಚ್ಚನ್ ಕಾರ್ಪೊರೇಷನ್ ಸಂಸ್ಥೆ ಮೊದಲ ಬಾರಿಗೆ ಸ್ಪಷ್ಟೀಕರಣ ನೀಡಿದೆ.

50 ವರ್ಷಗಳ ಹಿಂದೆ

ಸೋಮವಾರ, 11-10-1971

• ಸರ್ಕಾರಿ ಉದ್ಯಮ ಕ್ಷೇತ್ರಕ್ಕೆ ಶೀಘ್ರವೇ ಕಾಯಕಲ್ಪ ಸಮಿತಿ

ಕೈಲಾಸ ನಗರ, ಅ. 10- ಸರ್ಕಾರಿ ವ್ಯಾಪ್ತಿಗೆ ಸೇರಿದ ಕಾರ್ಖಾನೆಗಳಲ್ಲಿ ಕಾರ್ಯವಿಧಾನಗಳನ್ನು ಪರಿಣಾಮಕರವಾಗಿ ಸುಧಾರಿಸುವಂತೆ ಮಾಡಲು ಸರ್ಕಾರವು ಶೀಘ್ರವೇ ಉನ್ನತಾಧಿಕಾರ ಸಮಿತಿಯೊಂದನ್ನು ನೇಮಿಸುವುದು.

ಆಡಳಿತ ಕ್ರಮದಲ್ಲಿ ಸುಧಾರಣೆ, ಕಾರ್ಮಿಕರ ಪಾತ್ರ, ಅವರಿಗೆ ನೀಡುವ ಪ್ರೋತ್ಸಾಹ ಹಾಗೂ ದರ ನಿಗದಿ ನೀತಿಗಳ ಕುರಿತು ಈ ಸಮಿತಿ ಸರ್ಕಾರಕ್ಕೆ ಶಿಫಾರಸು ಸಲ್ಲಿಸುವುದು.

• ಕೂಡಲಿ ಶೃಂಗೇರಿ ಮಠದ ನೂತನ ಪೀಠಾಧೀಶರಿಂದ ಅಧಿಕಾರ ಸ್ವೀಕಾರ

ಮೈಸೂರು, ಅ. 10- ಕೂಡಲಿ ಶೃಂಗೇರಿ ಮಠದ ನೂತನ ಪೀಠಾಧಿಪತಿಗಳಾಗಿ ಶ್ರೀವಿದ್ಯಾಭಿನವ ನರಸಿಂಹ ಭಾರತಿ ಸ್ವಾಮಿಗಳು (ಗೌರೀಪುರದ ಶ್ರೀ ಚಿಂತಾಮಣಿ ಸ್ವಾಮಿಗಳು) ಇಂದು ಇಲ್ಲಿ ಅಧಿಕಾರ ವಹಿಸಿಕೊಂಡರು.

ಕೂಡಲಿ ಶೃಂಗೇರಿ ಪೀಠಾಧೀಶರಾಗಿದ್ದ ಶ್ರೀ ಶಂಕರ ಭಾರತಿ ಸ್ವಾಮಿಗಳು ನಿಧನರಾದ ನಂತರ, 11 ತಿಂಗಳಿಂದ ಪೀಠಾಧೀಶರ ಸ್ಥಾನ ತೆರವಾಗಿ ಉಳಿದಿತ್ತು.

ಗಗನಕ್ಕೆ ಹಾರಿದ ಉಪಗ್ರಹಗಳು ಮತ್ತು ಅವುಗಳ ತ್ಯಾಜ್ಯವಸ್ತುಗಳು ಖಗೋಳ ವಿಜ್ಞಾನಿಗಳ ದಿಕ್ಕು ತಪ್ಪಿಸುತ್ತಿವೆ

ದಿಕ್ಕು ತಪ್ಪಿಸುವ ದೀಪಗಳು

ವಿಶ್ಲೇಷಣೆ

ಬಿ.ಎಸ್. ಶೈಲಜಾ

80ರ ದಶಕದಲ್ಲಿ ಆಕಾಶದ ಒಂದು ಭಾಗದಲ್ಲಿ (ಪರ್ಸಿಯಸ್ ಎಂಬ ಪುಂಜದಲ್ಲಿ) ಆಗಿಂದಾಗ್ಗೆ ಮಿಂಚಿನಂತೆ ಹೊಳೆದು ಮಾಯವಾಗುತ್ತಿದ್ದ ಒಂದು ವಸ್ತು ನಿಗೂಢ ಕಾಯವಿರಬಹುದು ಎಂಬ ಗುಮಾನಿ ಬಂದಿತ್ತು. ದೂರದರ್ಶಕಗಳ ವ್ಯಾಪ್ತಿಗೆ ಸಿಲುಕಿದ್ದರಿಂದ ಹಾರುವ ತಟ್ಟೆ ಮುಂತಾದ ಅವೈಜ್ಞಾನಿಕ ಕಾಲ್ಪನಿಕ ವಸ್ತು ಅಲ್ಲ ಎಂದು ತಿಳಿದಿತ್ತು. ಅದರ ರಹಸ್ಯ ತಿಳಿಯಲು ಹಲವಾರು ದೂರದರ್ಶಕಗಳು ಒಟ್ಟಾಗಿ ಕೆಲಸ ಮಾಡಿದವು. ಅದು ಮಾನವನಿರ್ಮಿತ ಉಪಗ್ರಹದ ಪ್ರತಿಫಲಿತ ಬೆಳಕು ಎಂದು ತಿಳಿದುಬಂದಾಗ ವಿಜ್ಞಾನಿಗಳಿಗಾದ ಬೇಸರ ಅಷ್ಟಿಷ್ಟಲ್ಲ.

ಸುಮಾರು ಹತ್ತು ವರ್ಷಗಳ ಹಿಂದೆ ಭೂಮಿಗೆ ಇನ್ನೊಂದು ಚಂದ್ರ ಇದೆ ಎಂದು ಸುದ್ದಿ ಆಗಿತ್ತು. ಅದೂ ಹೀಗೆ ಭ್ರಮನಿರಸನ ಉಂಟು ಮಾಡಿತು. 60ರ ದಶಕದಲ್ಲಿ ಹಾರಿ ಭೂಮಿಯಿಂದ ತಪ್ಪಿಸಿಕೊಂಡು ಕಳೆದುಹೋಗಿದ್ದ ನೌಕೆಯೊಂದು ಸೂರ್ಯನ ಹಿಡಿತದಿಂದ ತಪ್ಪಿಸಿಕೊಳ್ಳಲಾಗದೆ ತನ್ನದೇ ಒಂದು ಕಕ್ಷೆಯಲ್ಲಿ ತಿರುಗುತ್ತಿತ್ತು. ಅದು ಹತ್ತಿರ ಬಂದಾಗ ಮಾತ್ರ ಕಾಣುವಷ್ಟು ಚಿಕ್ಕದು. ಹಾಗಾಗಿ ಒಂದು ವರ್ಷದ ಅವಧಿಯದು ಎಂದು ಸಾಬೀತಾಗಿ ಇನ್ನೊಂದು ಚಂದ್ರ ಎಂದು ಪ್ರತಿಷ್ಠಾಪಿಸಿಕೊಂಡಿತ್ತು.

ಅಲ್ಲಿಂದ ಇಂದಿನವರೆಗೆ ಗಗನಕ್ಕೆ ಹಾರಿದ ಉಪಗ್ರಹಗಳ ಸಂಖ್ಯೆ ಇದೀಗ ಆರು ಅಂಕೆಗಳ ಸಂಖ್ಯೆಯನ್ನು ದಾಟುತ್ತಿದೆ. ಜೊತೆ ಜೊತೆಗೆ ಅದರ ಎರಡರಷ್ಟು ಸಂಖ್ಯೆಯ ತ್ಯಾಜ್ಯವಸ್ತುಗಳೂ ಆಕಾಶದಲ್ಲಿ ಸೇರಿಕೊಳ್ಳುತ್ತಿವೆ. ಇವು ಹೀಗೆ ಖಗೋಳ ವಿಜ್ಞಾನಿಗಳ ದಿಕ್ಕು ತಪ್ಪಿಸುತ್ತಿವೆ.

ಕಳೆದ ವರ್ಷ ಹಾರಿದ ಸ್ಟಾರ್ ಲಿಂಕ್ ಸರಣಿಯ 12,000 ಉಪಗ್ರಹಗಳು ಭಾರಿ ತಲೆನೋವು ಉಂಟುಮಾಡಲಿರುವುದನ್ನು ಊಹಿಸಿ ಖಗೋಳ ವಿಜ್ಞಾನಿಗಳು ಆಕ್ಷೇಪ ವ್ಯಕ್ತಪಡಿಸಿದಾಗ, ಆ ಸಂಸ್ಥೆಯು ಪ್ರತಿಯೊಂದು ತುಣುಕಿನ ಜಾಡನ್ನೂ ವರದಿ ಮಾಡುವ ಜವಾಬ್ದಾರಿಯನ್ನೂ ಕೈಗೆತ್ತಿಕೊಂಡಿತು. ಆದರೆ ಇತ್ತೀಚೆಗೆ ಪ್ರಕಟವಾದ ಸುದ್ದಿ ಖಗೋಳ ವಿಜ್ಞಾನಿಗಳ ಮುನ್ನಡೆಗೆ ತೀವ್ರ ಆಘಾತ ಉಂಟುಮಾಡಿದೆ.

ಜಿಎನ್-ಝಡ್ 11 ಎಂಬುದು ಅತಿ ದೂರದಲ್ಲಿರುವ ಕ್ಷೀಣವಾಗಿ ಕಾಣುವ ಗ್ಯಾಲಕ್ಸಿ. ಇದರ ದೂರವನ್ನು ಮತ್ತು ಕೆಂಪು ಪಲ್ಲಟವನ್ನು ಲೆಕ್ಕ ಹಾಕಿದ ವಿಜ್ಞಾನಿಗಳು, ವಿಶ್ವ ಆರಂಭವಾದ 40 ಕೋಟಿ ವರ್ಷಗಳೊಳಗಾಗಿ ಸೃಷ್ಟಿಯಾದ ಗ್ಯಾಲಕ್ಸಿ ಎಂಬ ರೋಮಾಂಚಕಾರಿ ರಹಸ್ಯವನ್ನು ಬಯಲಿಗೆಳೆದರು. ಅದರ ಬಗ್ಗೆ ಅವಕೆಂಪು ಕಿರಣಗಳ ಅಧ್ಯಯನ ಕೈಗೆತ್ತಿಕೊಂಡ ಜಿಯಾನ್ ಎಂಬ ವಿಜ್ಞಾನಿಯ ತಂಡ ಅದರ ಚಿತ್ರಗಳನ್ನು ಕ್ರೋಡೀಕರಿಸಲು 179 ಸೆಕೆಂಡುಗಳ ಕಾಲ ಸತತವಾಗಿ ಚಿತ್ರೀಕರಣ ನಡೆಸಿತು. ಆ ಸರಣಿಯ ಅಧ್ಯಯನ ಮಾಡುವಾಗ, ಮಧ್ಯದಲ್ಲಿ ಇದ್ದಕ್ಕಿದ್ದಂತೆ ಪ್ರಕಾಶ ಹೆಚ್ಚಿದ್ದು ದಾಖಲಾಗಿದ್ದನ್ನು ಗಮನಿಸಿದ ಅವರು ಅದರ ಕಾರಣ ಹುಡುಕಿದರು. ಪ್ರಕಾಶದ ತೀವ್ರತೆಯ ಆಧಾರದ ಮೇಲೆ ಅದು ಗ್ಯಾಮಾ ರೇ ಬರ್ಸ್ಟ್ ಎಂದು ತೀರ್ಮಾನಿಸಿದರು. ಕಳೆದ ಡಿಸೆಂಬರ್‌ನಲ್ಲಿ (2020) ಈ ಸಂಶೋಧನಾ ಪ್ರಬಂಧ ಪ್ರಕಟವಾಯಿತು.

ಸೂರ್ಯನಿಗಿಂತ ಅತಿ ಹೆಚ್ಚು (30- 40ರಷ್ಟು) ದ್ರವ್ಯರಾಶಿಯ ನಕ್ಷತ್ರಗಳ ಅವಸಾನದ ಹಂತದಲ್ಲಿ ಅದರ ಕೇಂದ್ರದಲ್ಲಿ ಕಪ್ಪು ಕುಳಿ ಸೃಷ್ಟಿಯಾಗುವ ವಿದ್ಯಮಾನವೇ ಗ್ಯಾಮಾ ರೇ ಬರ್ಸ್ಟ್. ಕ್ಷಣಕಾಲ ಮಾತ್ರ ಅತಿ ಪ್ರಕಾಶದಿಂದ ಬೆಳಗುವ ಚುಕ್ಕೆಗಳನ್ನು ಪತ್ತೆ ಮಾಡುವುದು ಸಾಹಸವೇ ಎನ್ನಬಹುದು. ಕಳೆದ ದಶಕದಲ್ಲಿ ದಾಖಲಾಗಿರುವ ಈ ಬಗೆಯ ಸ್ಫೋಟಗಳನ್ನು ಗಮನಿಸಿದ ವಿಜ್ಞಾನಿಗಳು ಇದು ಸರ್ವೇ ಸಾಮಾನ್ಯವಾಗಿ ನಡೆಯುವ ಘಟನೆಯೂ ಇರಬಹುದು ಎಂದು ತರ್ಕಿಸಿದ್ದಾರೆ. ಆದ್ದರಿಂದ ಇಂತಹ ಒಂದೊಂದು ದಾಖಲೆಯೂ ಬಹಳ ಮಹತ್ವ ಪಡೆಯುತ್ತದೆ.

ಪ್ರಸ್ತುತ ವೀಕ್ಷಣೆ ಇನ್ನೊಂದು ರೀತಿಯಲ್ಲೂ ವಿಶೇಷ ಎನ್ನಿಸಿಕೊಳ್ಳುತ್ತದೆ. ಮಹಾಸ್ಫೋಟವಾದ ಕೇವಲ 40 ಕೋಟಿ ವರ್ಷಗಳ ನಂತರ ಸೃಷ್ಟಿಯಾದ ಈ ಗ್ಯಾಲಕ್ಸಿ, ಸುಮಾರು 1,300 ಕೋಟಿ ವರ್ಷಗಳ ಹಿಂದೆ ವಿಶ್ವ ಹೇಗಿತ್ತು ಎಂದು ತಿಳಿಸಿಕೊಡುವ ಹಳೆಯ ವೃತ್ತಪತ್ರಿಕೆ. ಆಗ ಎಂತಹ ಗ್ಯಾಲಕ್ಸಿಗಳು ರೂಪುಗೊಂಡಿದ್ದಿರಬಹುದು? ನಮ್ಮ ಆಕಾಶಗಂಗೆಗಿಂತ ಅವು ಎಷ್ಟು ಭಿನ್ನವಾಗಿದ್ದಿರಬಹುದು? ಹಾಗಿದ್ದಲ್ಲಿ ಆ ಭಿನ್ನತೆಗೆ ಕಾರಣ ಏನಿರಬಹುದು? ಇಂತಹ ಪ್ರಶ್ನೆಗಳಿಗೆ ಉತ್ತರ ಒದಗಿಸಬಲ್ಲ ಖಜಾನೆ. ಉದಾಹರಣೆಗೆ, ಆಗ ಹೀಲಿಯಂ ಎಷ್ಟು ಪ್ರಮಾಣದಲ್ಲಿ ಇದ್ದಿರಬಹುದು? ಇದು ನಮ್ಮ ಮಹಾಸ್ಫೋಟದ ಸಿದ್ಧಾಂತಕ್ಕೇ ಪುಷ್ಟಿ ಕೊಡಬಲ್ಲುದು ಅಥವಾ ಕೊಡಲಿ ಏಟೂ ಆಗಬಹುದು.

ಇಂತಹ ಈ ಗೆಲಾಕ್ಸಿಯಲ್ಲಿ ನಕ್ಷತ್ರದ ಸ್ಫೋಟ ಕಂಡುಬಂದಿತೆಂದರೆ ಅದು ನಕ್ಷತ್ರಗಳ ಹುಟ್ಟು- ಸಾವುಗಳ ಸಿದ್ಧಾಂತಕ್ಕೂ ಪೋಷಕವಾಗಬಲ್ಲುದು. ಸಾಧಾರಣವಾಗಿ ಎಲ್ಲ ಗ್ಯಾಲಕ್ಸಿಗಳಲ್ಲೂ ನಕ್ಷತ್ರಗಳ ಸೃಷ್ಟಿ ನಿರಂತರವಾಗಿ ನಡೆಯುತ್ತಿರುತ್ತದೆ. ಎಷ್ಟು ದ್ರವ್ಯ ರಾಶಿ ನಕ್ಷತ್ರವಾಗಿ ಪರಿವರ್ತಿತವಾಗುತ್ತದೆ ಎನ್ನುವುದನ್ನು ನಿರ್ಧರಿಸುವ ಅಂಶಗಳು ಹಲವಾರು- ಆ ಗ್ಯಾಲಕ್ಸಿಯಲ್ಲಿರುವ ಅನಿಲದ ರಾಸಾಯನಿಕ ಸಂಯೋಜನೆ, ಅದರ ವಯಸ್ಸು ಹೀಗೆ. ಈ ಒಂದು ಸ್ಫೋಟ ಈ ಇತಿಮಿತಿಗಳಿಗೊಂದು ಚೌಕಟ್ಟು ಒದಗಿಸಬಲ್ಲುದು.

ಹೀಗೆ ಹೊಸದೊಂದು ಚಿಂತನೆಯನ್ನೇ ಹುಟ್ಟುಹಾಕಿದ ಈ ಸಂಶೋಧನಾ ಪ್ರಬಂಧ ಅನೇಕರನ್ನು ಆ ಗ್ಯಾಲಕ್ಸಿಯತ್ತ ಆಕರ್ಷಿಸಿತು. ನಕ್ಷತ್ರದ ಸಾವು ಎಂಬ ಕ್ಷಣಿಕ ಘಟನೆಯನ್ನು ಹೊಂಚುಹಾಕಿ ಪತ್ತೆ ಮಾಡುವುದು ಸಾಧ್ಯವಿಲ್ಲ. 10 ಕೋಟಿ ವರ್ಷಗಳಿಗೊಂದು ಅವಸಾನವಾಗಿ ಇಂತಹ ಬೆಳಕಿನ ಮಿಂಚನ್ನು ವಿಜ್ಞಾನಿಗಳಿಗೆ ಪ್ರದರ್ಶಿಸಬಹುದು. ಆಗ ಆ ವಿಜ್ಞಾನಿ ತನ್ನ ದೂರದರ್ಶಕದಿಂದ ಅದೇ ದಿಕ್ಕನ್ನು ನೋಡುತ್ತಿರಬೇಕು. ಅದರ ಸಂಭವನೀಯತೆ ಕೋಟಿಗೆ ಒಂದು ಎನ್ನುತ್ತದೆ ಲೆಕ್ಕ. ಹಾಗಾದರೆ ಜಿಯಾಂಗ್ ಮತ್ತವರ ತಂಡಕ್ಕೆ ಎಂತಹ ಅದೃಷ್ಟ ಅಲ್ಲವೇ?



ಈ ಬಗೆಯ ‘ಅದೃಷ್ಟ’ದ ಫಲಿತಾಂಶಗಳು ಮನ್ನಣೆ ಪಡೆಯುವುದು ಕಷ್ಟ. ಉಳಿದ ಎಲ್ಲ ಸಾಧ್ಯತೆಗಳನ್ನು ಒರೆಗೆ ಹಚ್ಚಿ ನೋಡುವುದು ಅತಿ ಅವಶ್ಯ ಎಂದು ವಿಜ್ಞಾನಿಗಳು ‘ನೇಚರ್’ ಪತ್ರಿಕೆಗೆ ಬರೆದರು. ಹೀಗೆ ಇತರ ಸಾಧ್ಯತೆಗಳನ್ನು ಹುಡುಕಿದಾಗ ಆಕಾಶ ಎಂಬ ಕಸದ ಬುಟ್ಟಿಯಲ್ಲಿ ತ್ಯಾಜ್ಯವಾಗಿ ಬಿದ್ದಿದ್ದ ವಸ್ತುಗಳ ಹಾಜರಾತಿಯೂ ಬಹು ಮುಖ್ಯ ಅಂಶ. ಇಂತಹ ‘ಕಸ’ಗಳನ್ನೂ ಹಿಂಬಾಲಿಸಿ ದಾಖಲಿಸುವ ಹಲವಾರು ಸೇವಾ ಸಂಸ್ಥೆಗಳಿವೆ. ನಿವೃತ್ತಿ ಪಡೆದ ಗಗನನೌಕೆಗಳು, ಬಹುಹಂತಗಳ ರಾಕೆಟ್ ಹಾರಿಸಿದಾಗ ಕಳಚಿಕೊಳ್ಳುವ ಮೊದಲ ಹಂತಗಳು, ಇಂಧನದ ಟ್ಯಾಂಕ್‌ಗಳು- ಹೀಗೆ ಪ್ರತಿಯೊಂದನ್ನೂ ಹುಡುಕಿ ಪೋಲೆಂಡ್ ದೇಶದ ಇನ್ನೊಂದು ಸಂಶೋಧನಾ ತಂಡ ರಷ್ಯಾದ ಪ್ರೋಟಾನ್ ರಾಕೆಟ್‌ನ ಮೇಲ್ಭಾಗದ ಹಂತದ ಕವಚ ಎಂದು ಗುರುತಿಸಿತು. ಬ್ರೀಝ್ ಎಂ ಹೆಸರಿನ ಇದು ಕೆಳಸ್ತರದ ಕಕ್ಷೆಗಳಿಂದ 36,000 ಕಿ.ಮೀ. ಎತ್ತರದ ಭೂಸ್ಥಾಯಿ ಕಕ್ಷೆಗಳಿಗೆ ಉಪಗ್ರಹಗಳನ್ನು ಸೇರಿಸುವ ಹಂತದಲ್ಲಿ ಬಳಕೆಯಾಗುತ್ತದೆ. ಆ ಜವಾಬ್ದಾರಿ ಮುಗಿದ ಮೇಲೆಯೂ ಅದು ದೀರ್ಘವೃತ್ತದ ಕಕ್ಷೆಯಲ್ಲಿ ಕೆಲಕಾಲ ಸುತ್ತುತ್ತಿರುತ್ತದೆ. ಇಂತಹ ಒಂದು ಸಂದರ್ಭದಲ್ಲಿ ಅದು ಜಿಎನ್- ಝಡ್ 11 ಗೆಲಾಕ್ಸಿಯ ಮುಂದೆಯೇ ಹಾದುಹೋಯಿತು. ಆ ಕ್ಷೀಣ ಗ್ಯಾಲಕ್ಸಿಯ ಪ್ರಕಾಶಕ್ಕೆ ಹೋಲಿಸಿದಾಗ ಸೂರ್ಯನ ಬೆಳಕನ್ನು ಇದು ಪ್ರತಿಫಲಿಸಿದ್ದೇ ಹೆಚ್ಚು ಪ್ರಕಾಶಮಾನವಾಗಿ ಕಂಡಿತು. 179 ಸೆಕೆಂಡುಗಳ ಎಕ್ಸ್‌ಪೋಷರ್ ಅವಧಿಯಲ್ಲಿ ಸೇರಿಹೋಯಿತು.

ಜಿಯಾಂಗ್ ಅವರ ತಂಡ ಇದನ್ನು ನಿರ್ಲಕ್ಷಿಸಿತು ಎಂದು ಹೇಳುವಂತಿಲ್ಲ. ಏಕೆಂದರೆ ತಮ್ಮ ವರದಿಯನ್ನು ಪ್ರಕಟಿಸುವ ಮೊದಲು ಅವರು ಈ ಸಾಧ್ಯತೆಯನ್ನೂ ಪರಿಗಣಿಸಿದ್ದರು. ಅವರ ಪ್ರಕಾರ, ಈ ತ್ಯಾಜ್ಯ ವಸ್ತು ಅವರ ವೀಕ್ಷಣಾ ಪರಿಧಿಯ ಆಚೆಗಿತ್ತು. ದತ್ತಾಂಶವನ್ನು ಒದಗಿಸಿದ ಸಂಸ್ಥೆ (ಧನಸಹಾಯವಿಲ್ಲದೆ) ತನ್ನ ಕಾರ್ಯವನ್ನು ಸ್ಥಗಿತಗೊಳಿಸಿದೆ.

ಈ ವಿದ್ಯಮಾನ ಅನೇಕ ನೈತಿಕ ಪ್ರಶ್ನೆಗಳನ್ನೂ ಹುಟ್ಟುಹಾಕುತ್ತದೆ. 250 ವರ್ಷಗಳ ಹಿಂದೆ ಬರಿಗಣ್ಣಿನಿಂದ ನಕ್ಷತ್ರದ ಬೆಳಕು ವ್ಯತ್ಯಯವಾಗುವುದನ್ನು ಗುರುತಿಸಿ ದಾಖಲಿಸಿದ ಹುಡುಗ ಜಾನ್ ಗುಡ್‌ರಿಕ್. ಆಗ ಅದು ಮನ್ನಣೆ ಪಡೆಯಲಿಲ್ಲವಾದರೂ ಯಮಳ ನಕ್ಷತ್ರಗಳ ಹೊಸ ಶಾಖೆಯನ್ನೇ ಹುಟ್ಟುಹಾಕಿತು. ಟೀಕೋ ಬ್ರಾಹೆ ಮತ್ತು ಕೆಪ್ಲರ್ ಬರಿಗಣ್ಣಿನಿಂದ ಹೊಸ ನಕ್ಷತ್ರಗಳನ್ನು ಗುರುತಿಸಿದ್ದು ಸೂಪರ್ ನೋವಾಗಳನ್ನು ಅಧ್ಯಯನಕ್ಕೆ ತೆರೆದಿಟ್ಟಿತು. ಇನ್ನು ಮುಂದೆ ಇಂತಹ ವರದಿಗಳೆಲ್ಲ ಅರ್ಥ ಕಳೆದುಕೊಳ್ಳುತ್ತವೆ. ಯಾವುದೋ ‘ಕಸ’ ಅಡ್ಡ ಬಂದಿರಬೇಕು ಎಂದು ಅತಿ ಮುಖ್ಯವಾದ ಸ್ಫೋಟಗಳನ್ನೇ ತಿರಸ್ಕರಿಸಬಹುದಾದ ಸಾಧ್ಯತೆಗಳೇ ಹೆಚ್ಚಾಗುತ್ತವೆ. ಕಸವನ್ನು ಹಿಂಬಾಲಿಸಿ ವರದಿ ಮಾಡುವ ಉಚಿತ ವೆಬ್‌ಸೈಟ್‌ಗಳೂ ವರ್ಷಕ್ಕೆ 12,000 (ವಾಸ್ತವದಲ್ಲಿ 24,000) ಕಸದ ತುಂಡುಗಳು ಸೇರತೊಡಗಿದಾಗ ಕೈಚೆಲ್ಲಿ ಕುಳಿತುಕೊಳ್ಳಬಹುದು.

ಚುರುಮುರಿ

‘ಬಾಯಿಗೆ ಬೀಗ’ ಪ್ರಶಸ್ತಿ

• ಸುಮಂಗಲಾ

ಇಬ್ಬರು ಪತ್ರಕರ್ತರಿಗೆ ನೊಬೆಲ್ ಶಾಂತಿ ಪುರಸ್ಕಾರ ನೀಡಿದ ಸುದ್ದಿ ಓದಿದ ಬೆಕ್ಕಣ್ಣ ತುಸು ಹ್ಯಾಪುಮೋರೆ ಮಾಡಿತು.

‘ಯೋಗಿಮಾಮ ಉತ್ತರಪ್ರದೇಶದಾಗೆ ಎಂಥ ಛಂದ ರಾಜ್ಯಭಾರ ಮಾಡಾಕಹತ್ಯಾನ, ರಾಜ್ಯದಾಗೆ ಎಷ್ಟು ಶಾಂತಿ ಹಬ್ಬೈತಿ... ಖರೇ ಅಂದ್ರ ಅವಂಗ ಕೊಡಬೇಕಿತ್ತು’ ಎಂದಿತು.

‘ದಿನಕ್ಕೆ ಹತ್ತಾರು ಅತ್ಯಾಚಾರ ನಡೀತೈತಿ ಅಲ್ಲಿ, ಕೊಲೆ, ಸುಲಿಗೆ ಯಾವುದೂ ಕಡಿಮೆಯಾಗಿಲ್ಲ. ಹಾಡಹಗಲೇ ರೈತರ ಮ್ಯಾಗೆ ದೊಡ್ಡ ಕಾರು ಹರಿಸಿ ಸಾಯಿಸ್ತಾರ, ಶಾಂತಿ ಎಲ್ಲೈತಿ’ ಎಂದೆ.

‘ಉತ್ತರಪ್ರದೇಶ ಮೊದ್ಲು ಗೂಂಡಾರಾಜ್ ಆಗಿತ್ತು, ಈಗ ಯೋಗಿರಾಜ್ ಆಗೈತಿ. ಇನ್ನೇನ್ ಶಾಂತಿ ಬೇಕು? ಹೋಗಲಿ,ಮೋದಿ ಮಾಮಗಾದ್ರೂ ಕೊಡಬೌದಿತ್ತಿಲ್ಲೋ... ವಿಶ್ವಗುರು ಆಗೂದು ಅಂದ್ರ ಅಷ್ಟು ಸರಳ ಐತೇನು. ಇಡೀ ಬ್ರಹ್ಮಾಂಡದೊಳಗ ಮೋದಿಮಾಮನಷ್ಟು ಜನಪ್ರಿಯ ವಿಶ್ವಗುರು ಯಾರೂ ಇಲ್ಲ. ಸಂಸತ್ತಿನಿಂದ ನಾಕೈದು ಮೈಲಿ ದೂರದಾಗೆ ಹತ್ತು ತಿಂಗಳಿನಿಂದ ರೈತ್ರು ಅಷ್ಟೆಲ್ಲ ಪ್ರತಿಭಟನೆ ಮಾಡಿಕೋತ ಗದ್ದಲ ಎಬ್ಬಿಸಿದರೂ ಮೋದಿಮಾಮ ಎಷ್ಟ್ ಶಾಂತಿಯಿಂದ ಮೌನವಾಗೇ ಉತ್ತರ ಕೊಡಾಕ ಹತ್ಯಾನ. ಹೀಂಗ ಶಾಂತಿ ಕಾಪಾಡೂದಂದ್ರ ಸರಳ ಅಂದ್ಕಂಡಿಯೇನ್...’ ಎಂದೆಲ್ಲ ಅಲವತ್ತುಕೊಂಡಿತು.

‘ಮಂಗ್ಯಾನಂಥವ್ನೇ... ನೊಬೆಲ್ ಶಾಂತಿ ಹೆಂಥಾ ಸಾಧನೆಗೆ ಕೊಡ್ತಾರೆ ಅಂತಾದ್ರೂ ಗೊತ್ತೈತೇನ್ ನಿಂಗೆ’.

ನನ್ನ ಮಾತು ಕಿವಿಗೇ ಬೀಳದಂತೆ ಮೊಂಡುವಾದ ಮುಂದುವರಿಸಿತು.

‘ವಿರೋಧ ಪಕ್ಷದವರ ಬಾಯಿ ಮುಚ್ಚಿಸಿ ಶಾಂತಿ ಕಾಪಾಡೂದಷ್ಟೇ ಅಲ್ಲ... ತಮ್ಮದೇ ಪಕ್ಷದಾಗೆ ಭಿನ್ನಮತ, ಗದ್ದಲ ಮಾಡೋರ ಬಾಯಿನೂ ಹೆಂಗ ಮುಚ್ಚಿಸ್ತಾರ. ನೋಡೀಗ... ಯೆಡ್ಯೂರಜ್ಜಾರು, ವಿಜಯಣ್ಣ ಮಾತಾಡದಂಗೆ ಐಟಿ ದಾಳಿ ನಡೆಸಿದ್ರು. ಹೀಂಗ ಎಲ್ಲಾ ಥರದ ಭಿನ್ನಮತ ಮಟ್ಟ ಹಾಕಿದ್ರಷ್ಟೇ ಶಾಂತಿ ಇರತೈತಿ’.

‘ಹಂಗಾರೆ ನೊಬೆಲ್ ಶಾಂತಿ ಅಲ್ಲಲೇ... ಬಾಯಿಗೆ ಬೀಗ ಜಡಿಯೂದಕ್ಕೆ ಬ್ಯಾರೆ ಪ್ರಶಸ್ತಿ ಕೊಡಬೇಕು’ ನಾನು ನಕ್ಕೆ.

ಬೆಕ್ಕಣ್ಣನೂ ಹಟ ಬಿಡದೇ ‘ಹೌದು, ನೊಬೆಲ್ ಸೈಲೆನ್ಸಿಂಗ್ ಅವಾರ್ಡ್ ಅಂತ ಹೊಸದಾಗಿ ಸ್ಥಾಪನಾ ಮಾಡಬಕು’ ಎಂದಿತು!

ಸಂಗತ

ಪ್ರಶ್ನೆ ಎತ್ತುವ ಸ್ವಾಧ್ಯಾಯದ ಕಲಿಕೆ

ಮಕ್ಕಳು ಪ್ರಶ್ನೆ ಕೇಳುವುದನ್ನು ತಡೆಯದೆ, ಅವರ ಕುತೂಹಲ ತಣಿಸುವಂತೆ ಸಾವಧಾನವಾಗಿ ಉತ್ತರಿಸುವ ಹೊಣೆಗಾರಿಕೆ ದೊಡ್ಡವರದ್ದು

• ಡಾ. ವಿ.ಎಚ್.ಮೂಲಿಮನಿ

ಮಕ್ಕಳಿಗೆ ಸಂತೋಷಕರ, ಸ್ಫೂರ್ತಿದಾಯಕ ಭವ್ಯ ಭವಿಷ್ಯತ್ ನಿರ್ಮಾಣ ಮಾಡುವುದು ನಮ್ಮೆಲ್ಲರ ಕರ್ತವ್ಯ. ಎಲ್ಲ ಮಕ್ಕಳ ಮನಸ್ಸೂ ಸ್ವಚ್ಛಂದವಾಗಿ, ಕ್ರಿಯಾಶೀಲವಾಗಿ ವಿಕಾಸವಾಗುವ ರೀತಿಯಲ್ಲಿ ಅವಕಾಶ ಮಾಡಿಕೊಡಬೇಕು. ಹುಟ್ಟಿನಿಂದ ಆರು ವರ್ಷಗಳವರೆಗಿನ ಅವಧಿ ಮನುಷ್ಯನು ತನ್ನ ಸುತ್ತಲಿನ ಪರಿಸರವನ್ನು ಅರ್ಥೈಸಿಕೊಳ್ಳಲು ಕಳೆಯುವ ಕಾಲಘಟ್ಟ. ಅಂದರೆ ಇದು, ಮಗುವಿಗೆ ಪ್ರತಿಯೊಂದರಲ್ಲೂ ಅದಮ್ಯ ಕುತೂಹಲ, ಪ್ರಶ್ನೆಗಳು ಹುಟ್ಟುವ ವಯಸ್ಸು.

ಹಕ್ಕಿ ಹಾರುತ್ತದೆ ಏಕೆ? ಹೂವು ಅರಳುವುದು ಹೇಗೆ? ಯಾರು ಮೇಲಿಂದ ಮಳೆ ಸುರಿಸುತ್ತಾರೆ? ತಟ್ಟೆಗೆ ತಟ್ಟೆ ಎಂದೇ ಏಕೆ ಹೇಳಬೇಕು? ಹಸಿರೆಲೆಗಳ ಬಣ್ಣ ಚಳಿಗಾಲದಲ್ಲಿ ಹಳದಿ, ಕೆಂಪು ಏಕೆ? ಒಂಟೆಯ ಡುಬ್ಬದಲ್ಲಿ ನೀರು ತುಂಬಿದೆಯೇ? ಮೋಡಗಳು ಹೇಗೆ ಆಗುತ್ತವೆ? ಈರುಳ್ಳಿ ಹೆಚ್ಚಿದಾಗ ಕಣ್ಣೀರು ಏಕೆ? ಆಕಾಶವು ನೀಲಿ ಬಣ್ಣವೇಕೆ? ಹೀಗೆ ಕೊನೆ ಮೊದಲಿಲ್ಲದ ನಿರಂತರ ಪ್ರಶ್ನೆಗಳ ಸುರಿಮಳೆ ಸುರಿಸುವ ಕಾಲ ಇದು!

ಅಂದರೆ ಮಗುವಿಗೆ ಮೂಲಭೂತವಾಗಿ ಇವೆಲ್ಲವನ್ನೂ ತಿಳಿದುಕೊಳ್ಳಬೇಕು ಎಂಬ ಆಸೆಯೂ ಆಸಕ್ತಿಯೂ ಇರುತ್ತದೆ. ಅದರ ಕುತೂಹಲ ತಣಿಸುವಂತೆ ಸಾವಧಾನವಾಗಿ ಉತ್ತರಿಸುವ ಹೊಣೆಗಾರಿಕೆ ದೊಡ್ಡವರದ್ದು. ವಿದ್ಯಾರ್ಥಿಗಳದು ಕುತೂಹಲದ ಮನಸ್ಸು. ಅವರಿಗೆ ಪಠ್ಯ ಹಾಗೂ ಪಠ್ಯೇತರ ವಿಷಯಗಳಲ್ಲಿ ಅನುಮಾನಗಳು ಉದ್ಭವಿಸಿದಾಗ ಭಯ, ಸಂಕೋಚ ಅಥವಾ ಹಿಂಜರಿಕೆಗಳಿಂದ ಶಿಕ್ಷಕರಲ್ಲಿ ಪ್ರಶ್ನೆಗಳನ್ನು ಕೇಳದೆ ಮನಸ್ಸಿನಲ್ಲೇ ಉಳಿಸಿಕೊಳ್ಳುವುದರಿಂದ ಪ್ರಗತಿ ಕುಂಠಿತವಾಗುತ್ತದೆ.

ಪ್ರತಿಭಾವಂತ ವಿಜ್ಞಾನಿಯಾಗಿದ್ದ ಸ್ಟೀಫನ್ ಹಾಕಿಂಗ್, ‘ನಾನು ಬೆಳೆಯಲು ಒಪ್ಪದ ಪುಟ್ಟ ಮಗು. ಅದಕ್ಕೇ ಈಗಲೂ ‘ಹೇಗೆ’ ಮತ್ತು ‘ಏಕೆ’ ಎಂಬ ಪ್ರಶ್ನೆಗಳನ್ನು ಕೇಳುತ್ತಲೇ ಇರುತ್ತೇನೆ. ಅಪರೂಪಕ್ಕೊಮ್ಮೆ ಉತ್ತರ ಕಂಡುಕೊಂಡಿದ್ದೇನೆ’ ಎಂದು ಹೇಳುತ್ತಿದ್ದರು. ರುಡ್‌ಯಾರ್ಡ್ ಕಿಪ್ಲಿಂಗ್ ಮಕ್ಕಳಿಗಾಗಿ ಹೀಗೆ ಬರೆದಿದ್ದಾರೆ, ‘ನನ್ನ ಬಳಿ ಆರು ಮಂದಿ ಪ್ರಾಮಾಣಿಕ ಜನರಿದ್ದಾರೆ. ಅವರೇ ನನಗೆ ತಿಳಿಯದ್ದನ್ನೆಲ್ಲ ಕಲಿಸಿದ್ದಾರೆ. ಅವರ ಹೆಸರೇನು ಹೇಳಲೆ? ಅವರೆಂದರೆ- ಏನು? ಏಕೆ? ಎಂದು? ಹೇಗೆ? ಎಲ್ಲಿ? ಯಾರು?

ಮಹಾನ್ ವಿಜ್ಞಾನಿಗಳ ಮನಸ್ಸು ಅನೇಕ ರೀತಿಯ ಪ್ರಶ್ನೆಗಳಿಂದ ತುಡಿಯುತ್ತಿರುತ್ತದೆ. ‘ಇದೇಕೆ ಹೀಗಾಗುತ್ತದೆ?’, ‘ಇದನ್ನು ನನ್ನಿಂದ ಸುಧಾರಿಸಲಾದೀತೆ?’ ಅಥವಾ ‘ಇದಕ್ಕಿಂತ ಹೆಚ್ಚಿನದೇನಾಗಬಹುದು?’ ಎಂದೆಲ್ಲ ಕೇಳಿಕೊಳ್ಳುತ್ತಲೇ ಇರುತ್ತದೆ.

ಯಾವುದೇ ವಿಷಯದ 360 ಡಿಗ್ರಿಗಳ ಜ್ಞಾನ ಸಂಪಾದಿಸಬೇಕಾದರೆ ಅದನ್ನು ಹಲವು ದಿಕ್ಕುಗಳಿಂದ ಶೋಧಿಸಬೇಕು. ಇದಕ್ಕೆ ಅತ್ಯುತ್ತಮ ಮಾರ್ಗವೆಂದರೆ ವಾದ. ಯಾವುದಾದರೂ ವಿಷಯವನ್ನು ಗುರುಗಳು ಹೇಳಿದರು ಎಂಬ ಕಾರಣಕ್ಕೆ ವಾದವಿಲ್ಲದೆ ಒಪ್ಪಿಕೊಂಡರೆ ಅದರಿಂದ ಸಿಗುವ ಜ್ಞಾನ ಅಲ್ಪ ಮಾತ್ರ. ಆದರೆ ವಿಷಯದ ಬಗ್ಗೆ ಇನ್ನಷ್ಟು, ಮತ್ತಷ್ಟು ಎಂಬಂತೆ ಪ್ರಶ್ನಿಸುತ್ತ, ಅಗೆಯುತ್ತ ಹೋದರೆ ಆ ವಿಷಯವು ಹೆಚ್ಚು ಸ್ಫುಟವಾಗುತ್ತ ಸಾಗುತ್ತದೆ. ಆದರೆ ವಾದಕ್ಕಾಗಿ ವಾದ ಎಂಬಂತೆ ಆಗಬಾರದು. ತಮಗೆ ಬೇಕಾದ ಜ್ಞಾನ ಪಡೆಯುವುದೇ ಅಂತಿಮ ಗುರಿ ಎಂಬ ಲಕ್ಷ್ಯವು ವಾದಿ ಪ್ರತಿವಾದಿಗಳಿಬ್ಬರಲ್ಲೂ ಇರಬೇಕು.

ಇನ್ನು ಪ್ರಶ್ನೆ ಮಾಡುವುದು ಭಾರತದ ಪ್ರಾಚೀನ ಶಿಕ್ಷಣ ಪದ್ಧತಿಯ ಅವಿಭಾಜ್ಯ ಭಾಗವೇ ಆಗಿದೆ. ಎಲ್ಲ ಉಪನಿಷತ್ತುಗಳೂ ಇಂಥ ಪ್ರಶ್ನೋತ್ತರ ರೂಪದಲ್ಲೇ ಇವೆ. ಅವುಗಳಲ್ಲೊಂದು ಪ್ರಮುಖ ಉಪನಿಷತ್ತಿಗೆ ಷಟ್‌ಪ್ರಶ್ನೋಪನಿಷತ್ ಎಂಬ ಹೆಸರಿದೆ. ಪ್ರಶ್ನೆಗಳಲ್ಲಿ ಎರಡು ವಿಧ: ಉತ್ಥಿತ್ ಆಕಾಂಕ್ಷಾ ಮತ್ತು ಉತ್ಥಾಪ್ಯ ಆಕಾಂಕ್ಷಾ. ಇವುಗಳಲ್ಲಿ ಮೊದಲನೆಯದು, ಶಿಷ್ಯನಿಗೆ ಅಧ್ಯಯನ ಮಾಡುವಾಗ ಅಥವಾ ಗುರುಮುಖೇನ ಪಾಠ ಕೇಳುತ್ತಿರುವಾಗ ಹುಟ್ಟುವ ಪ್ರಶ್ನೆಗಳು. ಉದಾಹರಣೆಗೆ, ಭೂಮಿಯು ಸೂರ್ಯನ ಸುತ್ತ ಪ್ರದಕ್ಷಿಣೆ ಹಾಕುತ್ತದೆ ಎಂಬ ಸಾಲು ಓದಿದರೆ ವಿದ್ಯಾರ್ಥಿಗೆ ‘ಭೂಮಿಯೇ ಏಕೆ ಸೂರ್ಯನಿಗೆ ಪ್ರದಕ್ಷಿಣೆ ಹಾಕಬೇಕು? ಭೂಮಿ ತನ್ನ ಸುತ್ತಾಟವನ್ನು ನಿಲ್ಲಿಸಿದರೆ ಏನಾಗಬಹುದು? ಮುಂತಾಗಿ ಅನಿಸುವುದು. ಇದು ಉತ್ಥಿತ್ ಆಕಾಂಕ್ಷಾ. ಇದಲ್ಲದೆ ವಿಷಯವನ್ನು ಸ್ಪಷ್ಟಪಡಿಸಲಿಕ್ಕಾಗಿ ಗುರುವೇ ತನ್ನ ಉಪನ್ಯಾಸದ ಮಧ್ಯದಲ್ಲಿ ಪ್ರಶ್ನೆ ಮಾಡಿ ಶಿಷ್ಯಂದಿರ ಬೌದ್ಧಿಕತೆಯನ್ನು ಕೆದಕಿದರೆ ಅದು ಉತ್ಥಾಪ್ಯ ಆಕಾಂಕ್ಷಾ.

ಮಕ್ಕಳು ಪ್ರಶ್ನೆ ಕೇಳುವುದನ್ನು ತಡೆಯಲು ಎಂದಿಗೂ ಯತ್ನಿಸಬಾರದು. ಉತ್ತರ ಗೊತ್ತಿಲ್ಲದಿದ್ದರೆ ಅವರನ್ನು ಗದರಿಸಿ ಓಡಿಸದೇ ಪ್ರಾಮಾಣಿಕವಾಗಿ ‘ನನಗೆ ಉತ್ತರ ಗೊತ್ತಿಲ್ಲ. ನಾವಿಬ್ಬರೂ ಸೇರಿ ಉತ್ತರವನ್ನು ಹುಡುಕೋಣ’ ಎಂದು ಅವರ ಕಲಿಕೆಯಲ್ಲಿ ಜೊತೆಗೂಡಬೇಕು. ಇದರಿಂದ ‘ಯಾವಾಗಲೂ ರೆಡಿಮೇಡ್’ ಉತ್ತರಗಳನ್ನು ಪಡೆಯುವ ಮಕ್ಕಳು ಅಭ್ಯಾಸವನ್ನು ಕಡಿಮೆ ಮಾಡಿ, ಉತ್ತರಗಳನ್ನು ಸಂಶೋಧಿಸಿ ಕಂಡುಕೊಳ್ಳಬೇಕು ಎಂಬ ಸರಿಯಾದ ಸ್ವಾಧ್ಯಾಯದ ವಿಭಾಗವನ್ನು ಪರಿಚಯ ಮಾಡಿಸಿದಂತಾಗುತ್ತದೆ.

ಪ್ರಶ್ನೆ ಮಾಡುವುದು ಹರಿಯುವ ನದಿಯಂತೆ. ಯಾವುದನ್ನೂ ಪ್ರಶ್ನೆ ಮಾಡದೇ ನಂಬಬೇಡಿ. ಎಂತಹ ಪವಾಡಪುರುಷರು, ದೇವಮಾನವರು ಎನಿಸಿಕೊಂಡವರು, ಮಹಾತ್ಮರು, ವಿಶ್ವವಿಖ್ಯಾತ ವಿಜ್ಞಾನಿಗಳೇ ಹೇಳಲಿ, ಅವರು ಹೇಳಿದ್ದನ್ನು ಯಾಂತ್ರಿಕವಾಗಿ ಒಪ್ಪಿಕೊಳ್ಳಬಾರದು ಎಂಬುದು ಶಿಕ್ಷಣ ತಜ್ಞ ಡಾ. ಎಚ್.ನರಸಿಂಹಯ್ಯ ಅವರ ಸಲಹೆಯಾಗಿತ್ತು.

ಮೂಲಭೂತ ಪ್ರಶ್ನೆಯನ್ನು ಎತ್ತುವುದು ಮುಖ್ಯವೇ ಹೊರತು ಉತ್ತರವನ್ನು ಕಂಡುಕೊಳ್ಳುವುದಲ್ಲ.

ಲೇಖಕ: ನಿವೃತ್ತ ಪ್ರಾಧ್ಯಾಪಕ, ಕಲಬುರ್ಗಿ

ವಾಚಕರ ವಾಣಿ

ಶೋಭೆ ತರದ ಸಚಿವರ ಹೇಳಿಕೆ

‘ಶಾಲಾ ಪಠ್ಯಪುಸ್ತಕಗಳಲ್ಲಿರುವ ದೋಷಗಳನ್ನು ಸಾರ್ವಜನಿಕರು ಗಂಭೀರವಾಗಿ ಗಮನಿಸಿದ್ದರೆ, ಸಂಬಂಧಪಟ್ಟವರ ಮೇಲೆ ಹಲ್ಲೆ ಮಾಡುತ್ತಿದ್ದರು’ ಎಂಬ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರ ಹೇಳಿಕೆ (ಪ್ರ.ವಾ., ಅ. 9) ಖಂಡನೀಯ. ಈ ಹೇಳಿಕೆಯ ಮೂಲಕ ಸಚಿವರು ಪಠ್ಯಪುಸ್ತಕ ರಚನಾಕಾರರ ಮೇಲೆ ಪರೋಕ್ಷವಾಗಿ ಹಿಂಸೆಗೆ ಪ್ರಚೋದಿಸಿರುವಂತೆ ತೋರುತ್ತದೆ. ಪಠ್ಯಪುಸ್ತಕ ರಚನೆ ಮಾಡಿರುವವರು ವಿಷಯ ತಜ್ಞರೇ ಆಗಿರುವಾಗ, ಅವುಗಳಲ್ಲಿ ದೋಷಗಳಿದ್ದರೆ ವಿಷಯ ತಜ್ಞರ ಸಮಿತಿ ಪರಿಶೀಲಿಸಿ, ಚರ್ಚಿಸಿ ತೀರ್ಮಾನಿಸಬೇಕು ಎಂಬ ಅರಿವು ಸಚಿವರಿಗೆ ಇರಬೇಕಿತ್ತು.

ಆರ್‌ಎಸ್‌ಎಸ್ ತತ್ವ ಪ್ರಚಾರಕರೊಬ್ಬರ ಅಧ್ಯಕ್ಷತೆಯಲ್ಲಿ ಈಗಾಗಲೇ ಸಮಿತಿ ರಚಿಸಿರುವುದೇ ವಿವಾದವಾಗಿರುವಾಗ, ಆ ತಪ್ಪನ್ನು ಮುಚ್ಚಿಹಾಕಲು ಮತ್ತು ಸಾರ್ವಜನಿಕರ ಗಮನ ಬೇರೆಡೆ ಸೆಳೆಯಲು ಈ ರೀತಿ ಸಲ್ಲದ ಹೇಳಿಕೆಗಳನ್ನು ಸಚಿವರು ನೀಡುತ್ತಿರುವಂತೆ ತೋರುತ್ತದೆ. ಸಂವಿಧಾನಬದ್ಧ ಜವಾಬ್ದಾರಿಯುತ ಸ್ಥಾನದಲ್ಲಿರುವ ಸಚಿವರ ಇಂತಹ ಹೇಳಿಕೆಗಳು ಯಾರಿಗೂ ಶೋಭೆ ತರುವುದಿಲ್ಲ.

ಡಾ. ಶಿವಕುಮಾರಿ ಎಂ.ಎಸ್., ಬೆಂಗಳೂರು

ಸುಟ್ಟಿತು ಕಾಫಿ!

ಗ್ರಾಹಕ ಗಾಬರಿಯಿಂದ ಕೇಳಿದ...
ಅಲ್ಲಯ್ಯಾ, ಎರಡು ಕಾಫಿ ಕುಡಿದೆ ಸರಿ,
ಮೊದಲನೇ ಕಾಫಿಗೆ ₹ 25
ಅದೇ ಎರಡನೇ ಕಾಫಿಗೆ ₹ 30
ಬಿಲ್ ಕೊಟ್ಟಿದ್ದೀಯಲ್ಲಾ?
ಮಾಣಿ ಉವಾಚ: ಸಾರ್,
ಎರಡನೇ ಕಾಫಿಯನ್ನು ಬಿಸಿ ಮಾಡಿದ್ದು
ಹೊಸ ಗ್ಯಾಸ್ ಸಿಲಿಂಡರ್‌ನಲ್ಲಿ...!

ವಿ.ವಿಜಯೇಂದ್ರ ರಾವ್
ಬೆಂಗಳೂರು

ಶಾಲೆಗೆ ಬೇಕು ಮಳೆ ನೀರು ಸಂಗ್ರಹ ಸೌಲಭ್ಯ

ದೇಶದ ಶಾಲೆಗಳ ಘನ ಘೋರ ಸ್ಥಿತಿ ಬಗ್ಗೆ ಯುನೆಸ್ಕೊ ವರದಿ ನೀಡಿದೆ (ಪ್ರ.ವಾ., ಅ. 6). ನಮ್ಮ ದೇಶವು ಶಿಕ್ಷಣಕ್ಕೆ ನೀಡುತ್ತಿರುವ ಸೌಲಭ್ಯ ತುಂಬ ಕನಿಷ್ಠವಾಗಿದ್ದು ಶೈಕ್ಷಣಿಕ ಭವಿಷ್ಯ ಮಸುಕಾಗಿದೆ. 10 ಲಕ್ಷಕ್ಕೂ ಹೆಚ್ಚು ಶಿಕ್ಷಕರ ಕೊರತೆ ಇರುವುದನ್ನು ವರದಿ ಎತ್ತಿಹಿಡಿದಿದೆ. ನಮ್ಮ ದೇಶ ಹಿಂದುಳಿಯಲು ನಾವು ಶಿಕ್ಷಣಕ್ಕೆ ತೋರಿಸುತ್ತಿರುವ ಅಸಡ್ಡೆಯೇ ಕಾರಣ. ಬಹಳಷ್ಟು ಶಾಲೆಗಳಲ್ಲಿ ಶೌಚಾಲಯಗಳ ಸ್ಥಿತಿ ಅತ್ಯಂತ ಶೋಚನೀಯವಾಗಿದೆ. ಗ್ರಾಮಾಂತರ ಪ್ರದೇಶದ ಹೆಚ್ಚಿನ ಶಾಲೆಗಳಲ್ಲಿ ಹೆಣ್ಣುಮಕ್ಕಳಿಗೆ ಈಗಲೂ ಬಯಲುಶೌಚವೇ ಗತಿ. ಅಲ್ಲದೆ ಶೌಚಾಲಯಗಳು ನೀರಿನ ಕೊರತೆಯಿಂದ ಬಳಸಲಾಗದೆ ಗಬ್ಬುನಾಥ ಬೀರುತ್ತಿರುತ್ತವೆ. ಶಾಲೆಯಲ್ಲಿ ತಾರಸಿ ಮಳೆ ನೀರಿನ ಸಂಗ್ರಹದಿಂದ ಶೌಚಾಲಯಕ್ಕೆ ನೀರಿನ ವ್ಯವಸ್ಥೆಯನ್ನು ಸುಲಭವಾಗಿ ಕಲ್ಪಿಸಲು ಸಾಧ್ಯ.

ಎಚ್.ಆರ್.ಪ್ರಕಾಶ್, ಕೆ.ಬಿ.ದೊಡ್ಡಿ, ಮಂಡ್ಯ

ಪತ್ರಕರ್ತರಿಗೆ ಸಂದ ಗೌರವ

ಪತ್ರಕರ್ತರಾದ ಫಿಲಿಪ್ಪೀನ್ಸ್‌ನ ಮರಿಯಾ ರೆಸ್ಸಾ ಮತ್ತು ರಷ್ಯಾದ ಡಿಮಿಟ್ರಿ ಮುರಾಟೋವ್ ಅವರಿಗೆ 2021ನೇ ಸಾಲಿನ ನೊಬೆಲ್ ಶಾಂತಿ ಪ್ರಶಸ್ತಿ ಘೋಷಣೆಯಾದ ಸುದ್ದಿಯನ್ನು (ಪ್ರ.ವಾ., ಅ. 9) ಓದಿ ಸಂತಸವಾಯಿತು. ಈ ಪ್ರಶಸ್ತಿಯ ಆಯ್ಕೆ ಸಮಿತಿ ಅಧ್ಯಕ್ಷರಾದ ಬೆರಿಟ್ ರೀಸ್ ಆ್ಯಂಡರ್ಸನ್ ಅವರು ಪ್ರಶಸ್ತಿ ಘೋಷಣೆ ಸಂದರ್ಭದಲ್ಲಿ ನಡೆಸಿದ ಸುದ್ದಿಗೋಷ್ಠಿಯಲ್ಲಿ ಹೇಳಿದ ಮಾತುಗಳು ಹೀಗಿವೆ: ‘ವಿಶ್ವದೆಲ್ಲೆಡೆ ಪ್ರಜಾಪ್ರಭುತ್ವ ಮತ್ತು ಪತ್ರಿಕಾ ಸ್ವಾತಂತ್ರ್ಯ ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸುತ್ತಿವೆ. ಅದರ ರಕ್ಷಣೆಗಾಗಿ ನಿಲ್ಲುವ ಎಲ್ಲ ಪತ್ರಕರ್ತರನ್ನೂ ಈ ಇಬ್ಬರು ಪ್ರಶಸ್ತಿ ಪುರಸ್ಕೃತರು ಪ್ರತಿನಿಧಿಸುತ್ತಾರೆ’. ಈ ಮಾತು ವಿಶ್ವದಾದ್ಯಂತ ಇರುವ ಪತ್ರಕರ್ತರಿಗೆ ಸಂದ ಅತಿ ದೊಡ್ಡ ಗೌರವದ ಮಾತಾಗಿದೆ.

ಇಂಥ ಮಾತುಗಳ ಮೂಲಕ ಇಡೀ ವಿಶ್ವದ ಪತ್ರಕರ್ತರೆಲ್ಲ ಒಂದೇ ಕುಟುಂಬದವರು ಎಂದು ತಿಳಿಸುವ ಆ್ಯಂಡರ್ಸನ್ ಅವರ ದೃಷ್ಟಿಕೋನ ಪ್ರಶಂಸಾರ್ಹವಾದದ್ದು. ಮರಿಯಾ ಮತ್ತು ಡಿಮಿಟ್ರಿ ಸೇರಿದಂತೆ ಪ್ರಜಾಪ್ರಭುತ್ವ ಹಾಗೂ ಪತ್ರಿಕಾ ಸ್ವಾತಂತ್ರ್ಯದ ರಕ್ಷಣೆಗಾಗಿ ನಿಲ್ಲುವ ವಿಶ್ವದ ಎಲ್ಲ ಪತ್ರಕರ್ತರೂ ಅಭಿನಂದನಾರ್ಹರು.

ಎಲ್.ಎಸ್.ಶಿವಮೂರ್ತಿ, ಬೆಂಗಳೂರು

ಅರ್ಥಹೀನ ಹೇಳಿಕೆ ವಾಪಸ್ ಪಡೆಯಲಿ

‘ಶಾಲಾ ಪಠ್ಯಪುಸ್ತಕಗಳಲ್ಲಿರುವ ದೋಷ’ಗಳಿಗೆ ಸಂಬಂಧಿಸಿದಂತೆ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರ ಪ್ರಚೋದನಕಾರಿ ಹೇಳಿಕೆ ತುಂಬ ಆಘಾತಕಾರಿಯಾದುದು ಹಾಗೂ ಖಂಡನೀಯವಾದುದು. ಪ್ರಸ್ತುತ ಪಠ್ಯಪುಸ್ತಕ ಪರಿಷ್ಕರಣಾ ಸಮಿತಿಯ ಅಧ್ಯಕ್ಷರಾದ ರೋಹಿತ್ ಚಕ್ರತೀರ್ಥ ಅವರನ್ನು ಅಧ್ಯಕ್ಷ ಸ್ಥಾನದಿಂದ ಕೈಬಿಡಬೇಕು ಎಂಬ ಒತ್ತಾಯಕ್ಕೆ ಸೂಕ್ತವಾದ ರೀತಿಯಲ್ಲಿ ಸಮಜಾಯಿಷಿಯನ್ನು ನೀಡದೆ ಈ ರೀತಿ ಪ್ರತಿಕ್ರಿಯಿಸಿರುವುದನ್ನು ಗಮನಿಸಿದರೆ ಅವರ ಮನದಿಂಗಿತದ ಬಗ್ಗೆ ಯಾರಿಗೇ ಆಗಲಿ ಗುಮಾನಿ ಬರದೇ ಇರದು. ಅವರು ಮಾಡಿರುವ ಆರೋಪಗಳು ನಿರಾಧಾರ ಹಾಗೂ ಅರ್ಥಹೀನ. ಬರಗೂರು ರಾಮಚಂದ್ರಪ್ಪ ಅವರಂತಹವರ ಘನತೆಯನ್ನು ಅರಿಯದೆ ಮಾತನಾಡಿರುವುದು ಅಕ್ಷಮ್ಯ. ಸಚಿವರು ಒಂದೇ ಒಂದು ಬಾರಿ ಬರಗೂರರೊಡನೆ ಸಂವಾದ ನಡೆಸಿದ್ದರೂ ಅವರಿಂದ ಇಂತಹ ಅಚಾತುರ್ಯ ನಡೆಯುತ್ತಿರಲಿಲ್ಲ ಎಂಬುದು ನನ್ನ ಆಧಾರಸಹಿತ ನಂಬುಗೆ. ಈಗಲಾದರೂ ಸಚಿವರು ಬರಗೂರರೊಡನೆ ಮಾತನಾಡಲಿ ಮತ್ತು ತಮ್ಮ ಹೇಳಿಕೆಯನ್ನು ಹಿಂದಕ್ಕೆ ಪಡೆಯಲಿ.

ಪು.ಸೂ.ಲಕ್ಷ್ಮೀನಾರಾಯಣ ರಾವ್, ಬೆಂಗಳೂರು

ಸಮಾಜದ ಸ್ವಾಸ್ಥ್ಯ ಕದಡದಿರಿ

ಮಾದಕವಸ್ತು ಪ್ರಕರಣಗಳಲ್ಲಿ ಸೆಲೆಬ್ರಿಟಿಗಳು, ಉದ್ಯಮಿಗಳು, ರಾಜಕಾರಣಿಗಳು ಮತ್ತು ಅವರ ಮಕ್ಕಳು, ಸಂಬಂಧಿಕರು ಹೆಚ್ಚಿಗೆ ಸಿಲುಕುತ್ತಿರುವುದು ಕಂಡುಬರುತ್ತಿದೆ. ಇದನ್ನು ನೋಡಿದರೆ ಬಿಡುವಿಲ್ಲದ ಜೀವನದ ಜಂಜಾಟದ ಮಧ್ಯೆ ತಮ್ಮ ಮಕ್ಕಳಿಗೆ ಒಳ್ಳೆಯ ಆಚಾರ-ವಿಚಾರ, ಸಾಮಾಜಿಕ ಕಳಕಳಿಯ ಅರಿವು ಮೂಡಿಸುವಲ್ಲಿ ಕೆಲವರು ವಿಫಲರಾಗಿದ್ದಾರೆ ಎನಿಸುತ್ತದೆ. ಶ್ರೀಮಂತರ ಮಕ್ಕಳಿಗೆ ಕೇಳಿದಷ್ಟು ಹಣ ಸುಲಭವಾಗಿ ಸಿಗುವುದರಿಂದ ಲೇಟ್‌ನೈಟ್ ಪಾರ್ಟಿ, ಮದ್ಯಸೇವನೆ, ಡ್ರಗ್ಸ್ ಸೇವನೆಯಂತಹ ದುಶ್ಚಟಗಳಿಗೆ ಅವರು ದಾಸರಾಗುವ ಅವಕಾಶಗಳು ಹೆಚ್ಚಿಗೆ ಇರುತ್ತವೆ. ಕೆಲವರು ಕುಡಿದ ಅಮಲಿನಲ್ಲಿ ಅಪಘಾತಗಳಿಗೆ ಕಾರಣರಾಗಿ ಅಮಾಯಕರ ಪ್ರಾಣ ತೆಗೆದಿರುವ, ಸಾರ್ವಜನಿಕ ಆಸ್ತಿಪಾಸ್ತಿಗೆ ನಷ್ಟ ಉಂಟು ಮಾಡಿರುವ ಅನೇಕ ಉದಾಹರಣೆಗಳಿವೆ. ತಮ್ಮ ಮಕ್ಕಳು ಏನೇ ತಪ್ಪು ಮಾಡಿದರೂ ಸಮರ್ಥಿಸಿಕೊಳ್ಳುವವರಿದ್ದಾರೆ. ಅಂತಹವರು, ಪುತ್ರನ ವಿಷಯದಲ್ಲಿ ನಿರ್ದಾಕ್ಷಿಣ್ಯ ನಿರ್ಧಾರ ಕೈಗೊಂಡ ಹಾಲಿವುಡ್ ನಟ ಜಾಕಿಚಾನ್ ಅವರನ್ನು ನೋಡಿ ಕಲಿಯಬೇಕಾಗಿದೆ.

ಮುರುಗೇಶ ಡಿ., ದಾವಣಗೆರೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕಾಶ್ಮೀರ ನಾಗರಿಕರ ಹತ್ಯೆ ಉಗ್ರರ ಷಡ್ಯಂತ್ರ

ಐದು ದಿನಗಳಲ್ಲಿ ಏಳು ಮಂದಿ ನಾಗರಿಕರನ್ನು ಉಗ್ರರು ಗುಂಡಿಟ್ಟು ಹತ್ಯೆ ಮಾಡುವುದರೊಂದಿಗೆ ದೇಶದ ಗಮನವು ಮತ್ತೆ ಕಾಶ್ಮೀರದತ್ತ ಹರಿದಿದೆ. ಈ ಘಟನೆಗಳಿಂದಾಗಿ ಅಲ್ಲಿ ಈ ವರ್ಷ ಈವರೆಗೆ 25ಕ್ಕೂ ಹೆಚ್ಚು ನಾಗರಿಕರ ಹತ್ಯೆ ಆಗಿದೆ ಎಂಬುದೂ ಚರ್ಚೆಗೆ ಬಂತು. ಉಗ್ರರ ಕಾರ್ಯಾಚರಣೆ ವಿಧಾನದಲ್ಲಿ ಬದಲಾವಣೆ ಆಗಿರುವುದನ್ನು ಈ ವರ್ಷದ ನಾಗರಿಕರ ಹತ್ಯೆಗಳು ಸ್ಪಷ್ಟವಾಗಿ ಸೂಚಿಸುತ್ತವೆ. ಜತೆಗೆ, ಹತ್ಯೆಗೆ ಉಗ್ರರು ಗುರಿ ಮಾಡಿರುವ ವ್ಯಕ್ತಿಗಳನ್ನು ಗಮನಿಸಿದರೆ, ಯಾವುದೋ ನಿರ್ದಿಷ್ಟ ಗುರಿಯನ್ನು ಉಗ್ರರು ಹಾಕಿಕೊಂಡಿದ್ದಾರೆ ಎಂಬುದೂ ಅರಿವಾಗುತ್ತದೆ.

ಶ್ರೀನಗರದ ಪ್ರಮುಖ ಔಷಧ ವ್ಯಾಪಾರಿ ಮತ್ತು ಕಾಶ್ಮೀರಿ ಪಂಡಿತ ಸಮುದಾಯದ ಗಣ್ಯ 70 ವರ್ಷದ ಮಖನ್ ಲಾಲ್ ಬಿಂದ್ರೂ ಅವರನ್ನು ಜನದಟ್ಟಣೆಯ ಇಕ್ಬಾಲ್ ಪಾರ್ಕ್‌ನಲ್ಲಿರುವ ಔಷಧ ಅಂಗಡಿಯಲ್ಲಿಯೇ ಗುಂಡಿಟ್ಟು ಹತ್ಯೆ ಮಾಡಲಾಗಿದೆ. ಪೊಲೀಸರು ಮತ್ತು ಭದ್ರತಾ ಸಿಬ್ಬಂದಿಯ ನಿಗಾ ಇರುವ ಪ್ರದೇಶದಲ್ಲಿಯೇ ಈ ಹತ್ಯೆ ನಡೆದಿದೆ. ಸ್ವಾತಂತ್ರ್ಯ ನಂತರದ ವರ್ಷಗಳಲ್ಲಿ ಮತ್ತು ನಂತರ 1990ರ ದಶಕದಲ್ಲಿ ಹಿಂಸಾಚಾರಕ್ಕೆ ಬೆದರಿ ಕಾಶ್ಮೀರಿ ಪಂಡಿತರು ಕಣಿವೆಯನ್ನು ತೊರೆದಿದ್ದಾರೆ. ಬಿಂದ್ರೂ ಅವರಂತಹ ಕೆಲವರಷ್ಟೇ ಅಲ್ಲಿ ಉಳಿದಿದ್ದಾರೆ.

ನಿರ್ದಿಷ್ಟ ಸಮುದಾಯವನ್ನು ಗುರಿಯಾಗಿಸಿ ಹಿಂಸಾಚಾರ ನಡೆಸುವ ಪ್ರವೃತ್ತಿ ಕಾಶ್ಮೀರದಲ್ಲಿ ಹಿಂದೆ ಕಂಡು ಬಂದಿರಲಿಲ್ಲ. ಹಾಗಾಗಿಯೇ ಕೋಮು ಸಾಮರಸ್ಯ ಮೂಡಿತ್ತು. ಈ ಸಾಮರಸ್ಯವನ್ನು ಕದಡುವುದೇ ಈಗಿನ ಹತ್ಯೆಗಳ ಹಿಂದಿರುವ ಉದ್ದೇಶ ಎಂದು ಕಾಶ್ಮೀರ ಪೊಲೀಸ್ ಮುಖ್ಯಸ್ಥ ದಿಲ್‌ಬಾಗ್ ಸಿಂಗ್ ಅವರೂ ಹೇಳಿದ್ದಾರೆ.

ವಿಶೇಷ ಸ್ಥಾನ ರದ್ದತಿ ಮತ್ತು ಕಾಶ್ಮೀರದ ಹೊರಗಿನವರು ಜಮೀನು ಖರೀದಿಸಲು ದೊರಕಿರುವ ಅವಕಾಶದ ಬಗ್ಗೆ ಕಾಶ್ಮೀರದ ಜನರಲ್ಲಿ ಅನುಮಾನ ಇದೆ. ಕಾಶ್ಮೀರದ ಜನಸಂಖ್ಯಾ ಚಿತ್ರಣವನ್ನು ಬದಲಾಯಿಸಿ, ಈಗ ಬಹುಸಂಖ್ಯಾತರಾಗಿರುವ ಮುಸ್ಲಿಮರನ್ನು ಅಲ್ಪಸಂಖ್ಯಾತರನ್ನಾಗಿಸುವ ಹುನ್ನಾರ ಕೇಂದ್ರ ಸರ್ಕಾರದ್ದು ಎಂದು ಅವರು ಭಾವಿಸಿದ್ದಾರೆ. ಈ ಭಾವನೆಯನ್ನೇ ಉಗ್ರರು ತಮ್ಮ ಷಡ್ಯಂತ್ರಕ್ಕೆ ಬಳಸಿಕೊಳ್ಳುತ್ತಿದ್ದಾರೆ. ಪಂಡಿತ ಸಮುದಾಯದಲ್ಲಿ ಭೀತಿ ಮೂಡಿಸುವುದೇ ಬಿಂದ್ರೂ ಹತ್ಯೆಯ ಹಿಂದಿನ ಉದ್ದೇಶ. ಬಿಂದ್ರೂ ಅವರು ಆರ್‌ಎಸ್‌ಎಸ್ ಪರವಾಗಿ ಕೆಲಸ ಮಾಡುತ್ತಿದ್ದರು ಎಂಬ ಹುಸಿ ಆರೋಪವನ್ನು ಉಗ್ರರು ಮಾಡಿದ್ದಾರೆ. ಕಣಿವೆಯ ಹಿಂದೂ–ಮುಸ್ಲಿಮರ ನಡುವೆ ಅಪನಂಬಿಕೆ ಮೂಡಿಸುವ ಹುನ್ನಾರ ಇದರ ಹಿಂದೆ ಇದೆ.

ಶ್ರೀನಗರದ ಈದ್ಗಾ ಪ್ರದೇಶದಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಶುಕ್ರವಾರ ನುಗ್ಗಿದ್ದ ಉಗ್ರರು ಪ್ರಾಂಶುಪಾಲೆ ಸತೀಂದರ್ ಕೌರ್ ಮತ್ತು ಶಿಕ್ಷಕ ದೀಪಕ್ ಚಂದ್ ಅವರನ್ನು ಹತ್ಯೆ ಮಾಡಿದ್ದಾರೆ. ಸತೀಂದರ್ ಅವರು ಸಿಖ್ ಮತ್ತು ಚಂದ್ ಅವರು ಹಿಂದೂ ಧರ್ಮಕ್ಕೆ ಸೇರಿದವರು. ಬಿಂದ್ರೂ ಅವರ ಹತ್ಯೆಯ ದಿನವೇ, ಬಿಹಾರ ಮೂಲದ ವೀರೇಂದ್ರ ಪಾಸ್ವಾನ್ ಎಂಬ ಬೀದಿಬದಿ ವ್ಯಾಪಾರಿಯನ್ನೂ ಉಗ್ರರು ಹತ್ಯೆ ಮಾಡಿದ್ದಾರೆ.

2019ರಲ್ಲಿಯೂ ಇಂತಹ ಕಾರ್ಯತಂತ್ರವನ್ನು ಉಗ್ರರು ಅನುಸರಿಸಿದ್ದರು. ಪಶ್ಚಿಮ ಬಂಗಾಳದ ಐವರು ಕಾರ್ಮಿಕರನ್ನು 2019ರ ಅಕ್ಟೋಬರ್‌ನಲ್ಲಿ ಉಗ್ರರು ಹತ್ಯೆ ಮಾಡಿದ್ದರು. ಇವರೆಲ್ಲರೂ ಮುಸ್ಲಿಮರು. ಹಾಗೆಯೇ, ಸುಮಾರು 40 ವರ್ಷಗಳಿಂದ ಕಾಶ್ಮೀರದಲ್ಲಿ ಆಭರಣ ವ್ಯಾಪಾರಿಯಾಗಿದ್ದ ಪಂಜಾಬ್ ಮೂಲದ ಸತ್ಪಾಲ್ ನಿಶ್ಚಲ್‌ಗೆ ಕಾಶ್ಮೀರದ ನಿವಾಸಿ ಎಂಬ ಪ್ರಮಾಣಪತ್ರ 2020ರ ಡಿಸೆಂಬರ್‌ನಲ್ಲಿ ಸಿಕ್ಕಿತ್ತು. ಡಿಸೆಂಬರ್ 31ರಂದು ಅವರನ್ನು ಉಗ್ರರು ಕೊಂದಿದ್ದರು.

ಈ ರೀತಿಯ ಹತ್ಯೆಯ ಮೂಲಕ, ಕಾಶ್ಮೀರದ ಜನರ ಹಕ್ಕುಗಳ ರಕ್ಷಕರು ತಾವು ಎಂದು ಬಿಂಬಿಸಿ ಕಾಶ್ಮೀರಿಗರ ಸಹಾನುಭೂತಿ ಪಡೆದುಕೊಳ್ಳುವ, ಕೋಮು ಸಾಮರಸ್ಯ ಕದಡುವ ಎರಡೆರಡು ಕಾರ್ಯಸೂಚಿಯನ್ನು ಉಗ್ರರು ಹೊಂದಿರುವುದು ನಿಚ್ಚಳವಾಗಿದೆ.



ಉಗ್ರರ ಚಟುವಟಿಕೆಯ ಏರಿಳಿತ

ಜಮ್ಮು-ಕಾಶ್ಮೀರದ ವಿಶೇಷ ಸ್ಥಾನ ರದ್ದತಿಯ ನಂತರ, ಅಲ್ಲಿ ಉಗ್ರರ ಚಟುವಟಿಕೆ ಕಡಿಮೆಯಾಗಲಿದೆ ಎಂದು ಕೇಂದ್ರ ಸರ್ಕಾರ ಹೇಳಿತ್ತು. 2019ರ ಆಗಸ್ಟ್ 5ರಂದು ವಿಶೇಷ ಸ್ಥಾನ ರದ್ದು ಮಾಡಿದ ನಂತರ, ಭಯೋತ್ಪಾದಕ ಚಟುವಟಿಕೆ, ನಾಗರಿಕರ ಹತ್ಯೆಯಲ್ಲಿ ಏರಿಳಿತ ಕಂಡು ಬಂದಿದೆ. 2018ಕ್ಕೆ ಹೋಲಿಸಿದರೆ, 2019ರಲ್ಲಿ ಮತ್ತು 2020ರಲ್ಲಿ ಕಡಿಮೆ ಘಟನೆಗಳು ವರದಿಯಾಗಿವೆ. ಆದರೆ 2021ರಲ್ಲಿ ಎಷ್ಟು ಘಟನೆಗಳು ಜರುಗಿವೆ ಎಂಬುದನ್ನು ಸರ್ಕಾರ ಬಹಿರಂಗಪಡಿಸಿಲ್ಲ.

- 2018ಕ್ಕೆ ಹೋಲಿಸಿದರೆ 2019ರಲ್ಲಿ ಕಲ್ಲುತೂರಾಟದ ಪ್ರಕರಣಗಳು ಗಣನೀಯ ಪ್ರಮಾಣದಲ್ಲಿ ಏರಿಕೆಯಾಗಿದೆ. 2020ರಲ್ಲಿ ಮತ್ತು 2021ರಲ್ಲಿ ಎಷ್ಟು ಘಟನೆಗಳು ವರದಿಯಾಗಿವೆ ಎಂಬುದನ್ನು ಸರ್ಕಾರ ಬಹಿರಂಗಪಡಿಸಿಲ್ಲ
- 2019ರ ನಂತರ ಜಮ್ಮು-ಕಾಶ್ಮೀರದಲ್ಲಿ ಉಗ್ರರ ದಾಳಿಗಳ ಸಂಖ್ಯೆ ಇಳಿಕೆಯಾಗಿದೆ
- 2018ರಲ್ಲಿ ಉಗ್ರರ ದಾಳಿಯಲ್ಲಿ 38 ನಾಗರಿಕರಷ್ಟೇ ಮೃತಪಟ್ಟಿದ್ದರು. 2019ರಲ್ಲಿ ಈ ಸಂಖ್ಯೆ 54ಕ್ಕೆ ಏರಿಕೆಯಾಗಿತ್ತು. 2020ರಲ್ಲಿ 45ಕ್ಕೆ ಇಳಿಕೆಯಾಗಿದೆ. ಆದರೆ 2018ಕ್ಕೆ ಹೋಲಿಸಿದರೆ ಈ ಸಂಖ್ಯೆ ಹೆಚ್ಚೇ ಇದೆ
- 2018ಕ್ಕೆ ಹೋಲಿಸಿದರೆ, ಸೇನೆ ಮತ್ತು ಪೊಲೀಸ್ ಕಾರ್ಯಾಚರಣೆಯಲ್ಲಿ ಮೃತಪಟ್ಟ ಉಗ್ರರ ಸಂಖ್ಯೆಯೂ ನಂತರದ ವರ್ಷಗಳಲ್ಲಿ ಇಳಿಕೆಯಾಗಿದೆ. ಭದ್ರತಾ ಸಿಬ್ಬಂದಿಯ ಸಾವಿನ ಸಂಖ್ಯೆಯೂ ಇಳಿಕೆಯಾಗಿದೆ

400ಕ್ಕೂ ಹೆಚ್ಚು ಜನರು ವಶಕ್ಕೆ

ಸರಣಿ ಹತ್ಯೆಗಳನ್ನು ನಿಲ್ಲಿಸುವುದಕ್ಕಾಗಿ ಭದ್ರತಾ ಪಡೆಗಳು ತ್ವರಿತ ಕಾರ್ಯಾಚರಣೆ ನಡೆಸುತ್ತಿವೆ. ಪ್ರತ್ಯೇಕತಾವಾದಿಗಳ ಸಂಪರ್ಕ ಹೊಂದಿರುವ ಆರೋಪದ ಮೇಲೆ ಈವರೆಗೆ ಸುಮಾರು 400ಕ್ಕೂ ಹೆಚ್ಚು ಜನರನ್ನು ಭದ್ರತಾ ಪಡೆಗಳು ವಶಕ್ಕೆ ತೆಗೆದುಕೊಂಡಿವೆ ಮತ್ತು ಬಂಧಿಸಿವೆ. ಜಮಾತ್–ಎ–ಇಸ್ಲಾಮಿ, ತೆಹ್ರೀಕ್–ಎ–ಹುರಿಯತ್ ಸಂಘಟನೆಗಳ ಸದಸ್ಯರು, ಭೂಗತರಾಗಿ ಭಯೋತ್ಪಾದಕ ಕಾರ್ಯಾಚರಣೆ ನಡೆಸುವವರು, ಭದ್ರತಾ ಪಡೆ ಮತ್ತು ನಾಗರಿಕರ ಮೇಲೆ ಕಲ್ಲು ತೂರಾಟ ಮಾಡಿದ್ದವರು ಬಂಧಿತರಲ್ಲಿ ಸೇರಿದ್ದಾರೆ.

ಈ ಸರಣಿ ಹತ್ಯೆಗಳನ್ನು ನಡೆಸಿದ ದ ರೆಸಿಸ್ಟೆನ್ಸ್ ಫ್ರಂಟ್ (ಟಿಆರ್‌ಎಫ್) ಉಗ್ರರ ಕುರಿತು ಭದ್ರತಾ ಸಂಸ್ಥೆಗಳಿಗೆ ಈ ಮೊದಲು ಯಾವ ಸುಳಿವೂ ಇರಲಿಲ್ಲ. ಈಗ ಹತ್ಯೆಗಳ ಹಿಂದಿನ ಕಾರ್ಯತಂತ್ರದ ಬಗ್ಗೆ ಭದ್ರತಾ ಪಡೆಗಳಿಗೆ ಸುಳಿವು ಸಿಕ್ಕಿದೆ. ನಾಗರಿಕರ ಮೇಲೆ ನಡೆಯುತ್ತಿರುವ ದಾಳಿಯ ಸರಪಳಿಯನ್ನು ಮುರಿಯುವ ಸಲುವಾಗಿ ಶಂಕಿತರನ್ನು ಬಂಧನದಲ್ಲಿ ಇರಿಸಲಾಗಿದೆ. ಅತಿ ಹೆಚ್ಚು ಹತ್ಯೆಗಳು ವರದಿಯಾಗಿರುವುದು ಶ್ರೀನಗರದಲ್ಲಿ. ಇಲ್ಲಿಯೇ ಸುಮಾರು 70 ಜನರನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ. ಆದರೆ ಇತ್ತೀಚೆಗೆ ನಡೆದ ದಾಳಿಗಳ ಬಗ್ಗೆ ಅವರಿಂದ ಸದ್ಯಕ್ಕೆ ಪೊಲೀಸರಿಗೆ ಮಾಹಿತಿ ಸಿಕ್ಕಿಲ್ಲ ಎನ್ನಲಾಗಿದೆ.

ಈ ಕಾರ್ಯಾಚರಣೆಯಲ್ಲಿ ಭದ್ರತಾ ಸಂಸ್ಥೆಗಳಿಗೆ ಸಹಕಾರ ನೀಡಲು ರಾ, ಗುಪ್ತಚರ ಇಲಾಖೆ, ಒಳನುಸುಳುವಿಕೆ ನಿಗ್ರಹ ಪರಿಣಿತರ ತಂಡ ಕಾಶ್ಮೀರಕ್ಕೆ ತೆರಳಿವೆ. ಇದೇ ವೇಳೆ, ನಾಗರಿಕರನ್ನು ಗುರಿಯಾಗಿಸಿಕೊಂಡು ಹತ್ಯೆ ನಡೆಸುತ್ತಿರುವ ಮೊಕದ್ದಮೆ ಸಂಬಂಧ ರಾಷ್ಟ್ರೀಯ ತನಿಖಾ ತಂಡ (ಎನ್‌ಐಎ) 40 ಶಿಕ್ಷಕರಿಗೆ ಸಮನ್ಸ್ ಜಾರಿ ಮಾಡಿದೆ. ಅದರಂತೆ ಆ ಶಿಕ್ಷಕರು ವಿಚಾರಣೆಗೆ ಒಳಪಡಲಿದ್ದಾರೆ.

ಕಾರ್ಗೋಗೆ ಎಸ್‌ಪಿ ನೇಮಕ: ‘ಕಾರ್ಗೊ’ ಎಂದು ಕರೆಯಲಾಗುವ ಜಮ್ಮು ಮತ್ತು ಕಾಶ್ಮೀರದ ವಿಶೇಷ ಕಾರ್ಯಪಡೆಗೆ (ಎಸ್‌ಒಜಿ) ಐದು ತಿಂಗಳುಗಳ ಬಳಿಕ ಪೂರ್ಣಾವಧಿ ಎಸ್‌ಪಿಯನ್ನು ನೇಮಿಸಲಾಗಿದೆ. ಸರಣಿ ದಾಳಿಗಳು ನಡೆದ ಬಳಿಕ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಕಾಶ್ಮೀರದಲ್ಲಿ ‘ಹೈಬ್ರಿಡ್’ ಉಗ್ರರ ಉಪಟಳ

ಪಾಕಿಸ್ತಾನ ಮೂಲದ ಭಯೋತ್ಪಾದಕ ಸಂಘಟನೆಗಳು ‘ಹೈಬ್ರಿಡ್’ ಉಗ್ರರನ್ನು (ತಾತ್ಕಾಲಿಕ ಉಗ್ರರು) ಬಳಸಿಕೊಂಡು ಕಣಿವೆಯ ವಾತಾವರಣ ಕದಡಲು ಯತ್ನಿಸುತ್ತಿವೆ. ಹೈಬ್ರಿಡ್ ಉಗ್ರರು ಬೇರಾರೂ ಅಲ್ಲ, ಅವರೆಲ್ಲರೂ ಕಾಶ್ಮೀರದ ಯುವಕರೇ ಎಂದು ಖಚಿತ ಮೂಲಗಳನ್ನು ಆಧರಿಸಿ ಸುದ್ದಿಸಂಸ್ಥೆಗಳು ವರದಿ ಮಾಡಿವೆ. ಈ ಯುವಕರು ಪೂರ್ಣಪ್ರಮಾಣದ ಉಗ್ರರಲ್ಲ. ದೈನಂದಿನ ಕೆಲಸಗಳಲ್ಲಿ ತೊಡಗಿಸಿಕೊಂಡಿರುವ ಕಾಶ್ಮೀರದ ಯುವಕರನ್ನು ನಾಗರಿಕರ ಹತ್ಯೆಗಳಂತಹ ಕೆಲಸಗಳಿಗೆ ನಿಯೋಜಿಸಲಾಗುತ್ತಿದೆ.

ಈ ಎಲ್ಲ ನಾಗರಿಕ ಹತ್ಯೆ ಪ್ರಕರಣಗಳಲ್ಲಿ ಪಿಸ್ತೂಲ್ ಬಳಕೆಯಾಗಿದೆ. ಹೊಸದಾಗಿ ನೇಮಕವಾದವರು ಅಥವಾ ಸಂಘಟನೆ ಸೇರುವ ಹಂತದಲ್ಲಿರುವ ಯುವಕರು ಈ ಕೃತ್ಯಗಳನ್ನು ಎಸಗಿದ್ದಾರೆ. ಅಚ್ಚರಿಯೆಂದರೆ, ನಾಗರಿಕರ ಹತ್ಯೆ ಕೆಲಸ ಪೂರ್ಣಗೊಂಡ ಬಳಿಕ ಅವರು ತಮ್ಮ ಎಂದಿನ ಕೆಲಸಗಳಿಗೆ ಮರಳುತ್ತಾರೆ. ಹೀಗಾಗಿ ಇವರನ್ನು ಶಂಕಿತರು ಎಂದು ಗುರುತಿಸಲು ಕಷ್ಟವಾಗುತ್ತಿದೆ. ಇವರು ಪೊಲೀಸರು ಅಥವಾ ಗುಪ್ತಚರ ಸಂಸ್ಥೆಗಳ ನಿಗಾ ಪಟ್ಟಿಯಲ್ಲೂ ಇಲ್ಲ. ಸಾಮಾನ್ಯ ಜನರನ್ನೇ ಈ ಕೃತ್ಯಗಳಿಗೆ ಆಯ್ಕೆ ಮಾಡುವ ಉಗ್ರರ ತಂತ್ರ ಕಣಿವೆಯಲ್ಲಿ ಕೆಲಸ ಮಾಡುತ್ತಿದೆ.

ಜಮ್ಮು ಕಾಶ್ಮೀರದ ವಿಶೇಷ ಸ್ಥಾನ ರದ್ದತಿಗೂ ಮುನ್ನ ನಡೆಯುತ್ತಿದ್ದ ದಾಳಿಗಳು ಹಾಗೂ ಉಗ್ರರ ಒಳನುಸುಳುವಿಕೆಗೆ ಕಾಶ್ಮೀರದಲ್ಲಿ ನೇಮಕ ಮಾಡಲಾದ ಉಗ್ರರ ಜೊತೆಗೆ ಪಾಕಿಸ್ತಾನದ ಮೂಲದ ಹಾಗೂ ಅಲ್ಲಿ ತರಬೇತಿ ಪಡೆದವರನ್ನು ನಿಯೋಜಿಸಲಾಗುತ್ತಿತ್ತು. ಆದರೆ ಕಾಶ್ಮೀರವು ಕೇಂದ್ರಾಡಳಿತ ಪ್ರದೇಶವಾಗಿ ಬದಲಾಗಿರುವ ಕಾರಣ, ಅಲ್ಲಿ ಭದ್ರತೆಯನ್ನು ಭಾರಿ ಪ್ರಮಾಣದಲ್ಲಿ ಹೆಚ್ಚಿಸಲಾಗಿದೆ. ಹೀಗಾಗಿ ಉಗ್ರರೂ ಹೊಸ ರೀತಿಯ ಷಡ್ಯಂತ್ರದ ಮೊರೆ ಹೋಗಿದ್ದಾರೆ ಎಂದು ವಿಶ್ಲೇಷಿಸಲಾಗಿದೆ.

ಈಗ ಕಾಶ್ಮೀರದ ಯುವಕರನ್ನು ಉಗ್ರಗಾಮಿ ಸಂಘಟನೆಗೆ ನೇರವಾಗಿ ನೇಮಕಾತಿ ಮಾಡಿಕೊಳ್ಳುತ್ತಿಲ್ಲ. ನೇಮಕಾತಿ ಮಾಡಿಕೊಂಡರೂ ಅವರಿಗೆ ಒಂದು ಕೆಲಸ ನಿಯೋಜಿಸಿ, ಮತ್ತೆ ಅವರು ತಮ್ಮ ಕೆಲಸಕ್ಕೆ ವಾಪಸಾಗುವಂತೆ ಸೂಚಿಸಲಾಗುತ್ತಿದೆ. ಹೀಗೆ ಮಾಡುವುದರಿಂದ ಪೊಲೀಸರು ಹಾಗೂ ಗುಪ್ತಚರ ವಿಭಾಗದ ನಿಗಾದಿಂದ ತಪ್ಪಿಸಿಕೊಳ್ಳಬಹುದು ಎಂಬುದು ಉಗ್ರ ಸಂಘಟನೆಗಳ ಲೆಕ್ಕಾಚಾರ. ಇದೇ ಯೋಜನೆಯನ್ನು ಉಗ್ರರು ಕಾರ್ಯಗತಗೊಳಿಸಿ, ಇದೇ ವರ್ಷ 28 ನಾಗರಿಕರನ್ನು ಹತ್ಯೆ ಮಾಡಿದ್ದಾರೆ ಎಂದು ಕಾಶ್ಮೀರದ ಐ.ಜಿ. ವಿಜಯ್ ಕುಮಾರ್ ಹೇಳಿದ್ದಾರೆ.

ನಾಗರಿಕರ ಹತ್ಯೆ ಘಟನೆಗಳು ಹೆಚ್ಚುತ್ತಿದ್ದಂತೆ ಎಚ್ಚೆತ್ತುಕೊಂಡಿರುವ ಭದ್ರತಾಪಡೆಗಳು ಇಂತಹ ಕೆಲವು ನಾಗರಿಕರನ್ನು ಗುರುತಿಸಿವೆ. ಹೈಬ್ರಿಡ್ ಭಯೋತ್ಪಾದಕರನ್ನು ಸೆರೆಹಿಡಿಯಲು ಭದ್ರತಾ ಪಡೆಗಳ ಸಹಕಾರದೊಂದಿಗೆ ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂದು ವಿಜಯ್ ಕುಮಾರ್ ತಿಳಿಸಿದ್ದಾರೆ.

‘ಭಾರಿ ಸಂಖ್ಯೆಯ ಭಯೋತ್ಪಾದಕರ ಹತ್ಯೆ ಹಾಗೂ ಉಗ್ರರ ಬೆಂಬಲ ವ್ಯವಸ್ಥೆ ನಿಷ್ಕ್ರಿಯವಾಗಿರುವುದು ಭಯೋತ್ಪಾದಕ ಸಂಘಟನೆಗಳಲ್ಲಿ ನಿರಾಶೆ ಮೂಡಿಸಿದೆ. ತಮ್ಮ ಕಾರ್ಯತಂತ್ರವನ್ನು ಬದಲಾಯಿಸಿರುವ ಅವರು, ಮಹಿಳೆಯರು ಸೇರಿದಂತೆ ಅಲ್ಪಸಂಖ್ಯಾತ ಸಮುದಾಯಗಳ ಜನರನ್ನು ಗುರಿಯಾಗಿಸಲು ಪ್ರಾರಂಭಿಸಿದ್ದಾರೆ’ ಎಂದಿದ್ದಾರೆ.

ಎಂಡೊಸಲ್ಫಾನ್ ನಾಶ: ಸಂತ್ರಸ್ತರ ಆಕ್ರೋಶ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- 1,450 ಲೀಟರ್ ಎಂಡೊಸಲ್ಫಾನ್ ಬಳಕೆಯಾಗದೆ ಉಳಿಕೆ
- ಸ್ಥಳೀಯವಾಗಿ ನಾಶಪಡಿಸಲು ಸಂತ್ರಸ್ತರಿಂದ ಭಾರಿ ವಿರೋಧ
- ವಾಪಸ್ ಪಡೆಯಲು ತಯಾರಿಕಾ ಸಂಸ್ಥೆಯೂ ಸಿದ್ಧವಿಲ್ಲ

ಕಾಸರಗೋಡು: ಪರಿಹಾರ ನೀಡುವಂತೆ ಪ್ರತಿಭಟನೆ ನಡೆಸುತ್ತಿರುವ ಇಲ್ಲಿಯ ಎಂಡೊಸಲ್ಫಾನ್ ಕೀಟನಾಶಕ ಸಂತ್ರಸ್ತರು ಮತ್ತು ಅವರ ಕುಟುಂಬದವರು ಈಗ ಮತ್ತೊಂದು ಪ್ರತಿಭಟನೆ ಆರಂಭಿಸಿದ್ದಾರೆ. ಬಾಕಿ ಉಳಿದಿರುವ ಎಂಡೊಸಲ್ಫಾನ್ ದಾಸ್ತಾನನ್ನು ಸ್ಥಳೀಯವಾಗಿ ನಾಶಪಡಿಸಬಾರದು ಎಂದು ಅವರು ಆಗ್ರಹಿಸಿದ್ದಾರೆ.

ಎರಡು ದಶಕಗಳಿಂದ ಬಳಕೆಯಾಗದೇ ಉಳಿದಿರುವ 1,450 ಲೀಟರ್ ಎಂಡೊಸಲ್ಫಾನ್ ದಾಸ್ತಾನನ್ನು ಜಿಲ್ಲೆಯ ಮೂರು ಸ್ಥಳಗಳಲ್ಲಿ ಬ್ಯಾರೆಲ್‌ಗಳಲ್ಲಿ ಇರಿಸಲಾಗಿದೆ. ಇದನ್ನು ಸ್ಥಳದಲ್ಲೇ ನಾಶಪಡಿಸಲು ಜಿಲ್ಲಾಡಳಿತ ನಿರ್ಧರಿಸಿದೆ. ಎಂಡೊಸಲ್ಫಾನ್ ಅನ್ನು ಸ್ಥಳದಲ್ಲೇ ನಾಶಪಡಿಸಿದರೆ ಇಲ್ಲಿಯ ಜನರ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುತ್ತದೆ ಎಂದು ಜನರು ಆತಂಕಕ್ಕೀಡಾಗಿದ್ದಾರೆ.

ಎಂಡೊಸಲ್ಫಾನ್ ಸಂತ್ರಸ್ತರ ವೇದಿಕೆ ಭಾನುವಾರ ಕಾಸರಗೋಡಿನಲ್ಲಿ ಸಭೆ ಆಯೋಜಿಸಿತ್ತು. ಸ್ಥಳದಲ್ಲೇ ಎಂಡೊಸಲ್ಫಾನ್ ನಾಶ ಮಾಡುವುದಕ್ಕೆ ಅನುವು ಮಾಡುವುದು ಬೇಡ ಎಂದು ಸಭೆಯಲ್ಲಿ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಈ ಕುರಿತು ‘ಪ್ರಜಾವಾಣಿ’ ಜೊತೆ ಮಾತನಾಡಿದ ಎಂಡೊಸಲ್ಫಾನ್ ಸಂತ್ರಸ್ತರ ವೇದಿಕೆ ಮುಖಂಡ ಅಂಬಲತರ ಕುಂಞಿಕೃಷ್ಣನ್, ‘ಸ್ಥಳೀಯವಾಗಿ ಎಂಡೊಸಲ್ಫಾನ್ ನಾಶಪಡಿಸುವ ಎಲ್ಲಾ ಪ್ರಯತ್ನವನ್ನು ನಾವು ಪ್ರತಿರೋಧಿಸುತ್ತೇವೆ. ನಮ್ಮ ಜಿಲ್ಲೆ ಈಗಾಗಲೇ ಎಂಡೊಸಲ್ಫಾನ್ ಪರಿಣಾಮಗಳಿಂದ ಜರ್ಜರಿತವಾಗಿದೆ. ಅದನ್ನು ಉತ್ಪಾದಿಸಿದ್ದ ಹಿಂದುಸ್ತಾನ್ ಇನ್ಸೆಕ್ಟಿಸೈಡ್ ಲಿಮಿಟೆಡ್ ಅದನ್ನು ಹಿಂಪಡೆಯಲು ನಿರಾಕರಿಸಿದೆ’ ಎಂದು ಹೇಳಿದ್ದಾರೆ.

ಬಳಸದೇ ಉಳಿದಿರುವ ಎಂಡೊಸಲ್ಫಾನ್ ಕೀಟನಾಶಕವನ್ನು ಹಿಂಪಡೆದು, ವೈಜ್ಞಾನಿಕ ರೀತಿಯಲ್ಲಿ ನಾಶ ಮಾಡುವಂತೆ ಎಂಡೊಸಲ್ಫಾನ್ ತಯಾರಿಸಿದ್ದ ಸಂಸ್ಥೆಗೆ ಜಿಲ್ಲಾಡಳಿತ ಈ ಹಿಂದೆ ಮನವಿ ಮಾಡಿತ್ತು. ಆದರೆ ಆ ಮನವಿಯನ್ನು ಸಂಸ್ಥೆ ತಿರಸ್ಕರಿಸಿತ್ತು.

ಕೇರಳ ಸರ್ಕಾರದ ಅಧಿಕೃತ ಎಂಡೊಸಲ್ಫಾನ್ ಸಂತ್ರಸ್ತರ ಪಟ್ಟಿಗೆ ಮತ್ತಷ್ಟು ಜನರನ್ನು ಸೇರಿಸುವಂತೆ ಮತ್ತು ಸುಪ್ರೀಂ ಕೋರ್ಟ್ ಆದೇಶಿಸಿದ್ದ ₹5 ಲಕ್ಷ ಪರಿಹಾರ ನೀಡುವಂತೆ ಎಂಡೊಸಲ್ಫಾನ್ ಸಂತ್ರಸ್ತರ ವೇದಿಕೆ ಹೋರಾಟ ಮುಂದುವರಿಸಿದೆ.

ಸೋರಿಕೆಯ ಆತಂಕ

ಬ್ಯಾರೆಲ್‌ಗಳಿಂದ ಕೀಟನಾಶಕ ಸೋರಿಕೆ ಆಗಬಹುದು ಎಂಬ ಆತಂಕ 2012ರಲ್ಲಿ ಎದುರಾಗಿತ್ತು. ಅಲ್ಲಿಂದ ಈಚೆಗೆ, ಶೇಖರಿಸಿ ಇರಿಸಿರುವ ಕೀಟನಾಶಕವನ್ನು ನಾಶಪಡಿಸಬೇಕು ಎಂಬ ಬೇಡಿಕೆಗೆ ಬಲ ಬಂದಿತು.

ಕೃಷಿ ವಿಶ್ವವಿದ್ಯಾಲಯ ಮತ್ತು ಪ್ಲಾಂಟೇಶನ್ ಕಾರ್ಪೊರೇಷನ್‌ನ ತಜ್ಞರ ಸಹಾಯ ಪಡೆಯಲಾಗುತ್ತದೆ. ಮದ್ಯಸಾರ ಬಳಸಿ ಮೂರು ಹಂತಗಳ ಪ್ರಕ್ರಿಯೆ ಮೂಲಕ ಎಂಡೊಸಲ್ಫಾನ್‌ನನ್ನು ನಾಶಪಡಿಸಲಾಗುವುದು. ಇದರಿಂದ ಸ್ಥಳೀಯರ ಆರೋಗ್ಯಕ್ಕೆ ಯಾವುದೇ ಸಮಸ್ಯೆ ಉಂಟಾಗುವುದಿಲ್ಲ ಎಂದು ಜಿಲ್ಲಾಡಳಿತ ಹೇಳಿದೆ. ಅಲ್ಲದೇ ಈ ಕುರಿತು ಸ್ಥಳೀಯರ ಮನವೊಲಿಸಲು ಕೂಡಾ ಜಿಲ್ಲಾಡಳಿತ ಪ್ರಯತ್ನಿಸುತ್ತಿದೆ. ಆದರೆ ಆದರೆ ಸ್ಥಳೀಯರು ಪಟ್ಟು ಸಡಿಲಿಸುತ್ತಿಲ್ಲ. ಬ್ಯಾರೆಲ್‌ಗಳಲ್ಲಿ ಎಂಡೊಸೆಲ್ಫಾನ್ ಶೇಖರಿಸಲಾಗಿದೆ. ಕಾಸರಗೋಡಿನ ಸಮೀಪದ ಪೆರಿಯಾದಲ್ಲಿ 915 ಲೀಟರ್ ಶೇಖರಣೆ ಮಾಡಲಾಗಿದೆ. ರಾಜಪುರಂ ಗ್ರಾಮದಲ್ಲಿ 450 ಲೀಟರ್, ಚೀಮೇನಿಯಲ್ಲಿ ಗ್ರಾಮದಲ್ಲಿ 75 ಲೀಟರ್ ಶೇಖರಣೆ ಮಾಡಲಾಗಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಭಾರತ–ಚೀನಾ ಗಡಿಯತ್ತ ಸಾಗುತ್ತಿದ್ದ ಸೇನಾ ಬೆಂಗಾವಲು ಪಡೆಗೆ ರೈತರು ತಡೆ ಒಡ್ಡಿದರೇ? ವೈರಲ್ ಆಗಿರುವ ವಿಡಿಯೊ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕ ಚರ್ಚೆಯಾಗುತ್ತಿದೆ. ಸೇನಾ ಸಮವಸ್ತ್ರದಲ್ಲಿರುವ ವ್ಯಕ್ತಿಯೊಬ್ಬರು ರೈತರ ಗುಂಪಿನ ಜೊತೆ ಮಾತುಕತೆ ನಡೆಸುತ್ತಿರುವ ದೃಶ್ಯ ಇದರಲ್ಲಿದೆ. ಪ್ರತಿಭಟನೆ ನಡೆಸುತ್ತಿರುವ ರೈತರು ಸೇನಾ ಕರ್ತವ್ಯಕ್ಕೆ ಅಡ್ಡಿಪಡಿಸುವ ಮೂಲಕ ಅಪಮಾನ ಮಾಡಿದ್ದಾರೆ ಎಂದು ಕೆಲವು ಸಾಮಾಜಿಕ ಜಾಲತಾಣ ಬಳಕೆದಾರರು ಆರೋಪಿಸಿದ್ದಾರೆ.

ಈ ವಿಡಿಯೊ ಬಗ್ಗೆ ಸೇನೆಯೇ ಸ್ಪಷ್ಟೀಕರಣ ನೀಡಿದೆ. ಇದು ಸೆ. 27ರಂದು ಭಾರತ್ ಬಂದ್‌ನಂದು ಚಿತ್ರೀಕರಿಸಿದ ವಿಡಿಯೊ. ದೈನದಿಂದ ಕಾರ್ಯಾಚರಣೆಯ ಭಾಗವಾಗಿ, 20 ಸೇನಾ ವಾಹನಗಳು ಕಪುರ್ತಲಾದಿಂದ ಬೀರ್ ಸಾರಂಗ್‌ವಾಲ್ ಕಡೆಗೆ ಸಂಚರಿಸುತ್ತಿದ್ದವು. ಅಂದರೆ, ಗಡಿಯೊಳಗೇ ಪ್ರಯಾಣಿಸುತ್ತಿದ್ದವು. ಮಾರ್ಗಮಧ್ಯೆ, ‘ಜಲಂಧರ್ ಸಮೀಪ ಬೆಂಗಾವಲು ವಾಹನದಲ್ಲಿದ್ದ ಸಿಬ್ಬಂದಿ ಹಾಗೂ ರೈತರ ನಡುವೆ 20 ನಿಮಿಷ ಚರ್ಚೆ ನಡೆಯಿತು. ರೈತರು ವಿನಯಶೀಲರಾಗಿದ್ದರು ಮತ್ತು ನಿರ್ಗಮಿಸುವಾಗ ಕೈಕುಲುಕಿದರು. ಆದರೆ ಈ ದೃಶ್ಯವನ್ನು ವೈರಲ್ ವೀಡಿಯೊದಲ್ಲಿ ತೋರಿಸಲಾಗಿಲ್ಲ’ ಎಂದು ಸೇನಾಧಿಕಾರಿಯೊಬ್ಬರು ತಿಳಿಸಿದ್ದಾರೆ. ರೈತರ ಪ್ರತಿಭಟನೆಗೆ ಮಸಿ ಬಳಿಯಲು ಮಾಡಿದ ಮತ್ತೊಂದು ಯತ್ನವಿದು ಎಂದು ಆಲ್ಟ್ ನ್ಯೂಸ್ ವರದಿ ಮಾಡಿದೆ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಕವಿ-ನಾಯಕ

ಪಾರಿಜಾತವ ಕಂಡು ನಿಡುಸುಯ್ದು, ಪದಗಳಿಂ|
ಶೌರಿಕಥೆಯನು ಹೆಣೆದು ತೃಪ್ತನಹನು ಕವಿ||
ಊರಿನುದ್ದಾನಕದ ತರಿಸಿ ಬೆಳೆಸುವ ಕಾರ್ಯ -|
ಧೀರನಲ ರಾಜ್ಯಕನು – ಮಂಕುತಿಮ್ಮ ||473||

ಪದ-ಅರ್ಥ: ನಿಡುಸುಯ್ದು= ನಿಟ್ಟುಸಿರುಬಿಟ್ಟು, ಶೌರಿಕಥೆ= ಕೃಷ್ಣನ ಕಥೆ, ಊರಿನುದ್ಯಾನಕದ= ಊರಿನ+ ಉದ್ಯಾನಕೆ+ ಅದ, ರಾಜ್ಯಕ= ರಾಜ್ಯದ ಆಡಳಿತ ನಡೆಸುವವನು.

ವಾಚ್ಯಾರ್ಥ: ಪಾರಿಜಾತ ಹೂವನ್ನು ಕಂಡು, ನಿಟ್ಟುಸಿರುಬಿಟ್ಟು ಕೃಷ್ಣನ ಕಥೆಯನ್ನು ಸುಂದರವಾಗಿ ಬರೆದು ತೃಪ್ತಿಪಡುವನು ಕವಿ. ಆದರೆ ಪಾರಿಜಾತವನ್ನು ಕಂಡು ಅದರ ಸಸಿಯನ್ನು ಊರಿನ ಉದ್ಯಾನಕ್ಕೆ ತರಿಸಿ, ಬೆಳೆಸಿ ಎಲ್ಲರಿಗೆ ದೊರಕುವಂತೆ ಮಾಡುವವನು ಧೀರ ರಾಜ್ಯದ ಆಡಳಿತಗಾರ.

ವಿವರಣೆ: ಕಾವ್ಯ ಸೃಷ್ಟಿಗೆ ಒಂದು ಪ್ರೇರಣೆ ಇದ್ದೇ ಇರುತ್ತದೆ. ದೇಶಕಾಲದಲ್ಲಿ ನಡೆಯುವ ಘಟನೆಗಳು, ವಿಷಯಗಳು ಕಾವ್ಯದ ಮೂಲಸಾಮಗ್ರಿಗಳಾಗುತ್ತವೆ. ಆಗ ಕವಿ, ಸಂವೇದನೆಯ ಕೇಂದ್ರದಲ್ಲಿ ತನ್ನನ್ನು ಕಲ್ಪಿಸಿಕೊಂಡು ಆ ಘಟನೆಗಳಿಗೆ ಅಕ್ಷರವಾಗುವ ಸಾಮರ್ಥ್ಯವನ್ನು ಪಡೆಯುತ್ತಾನೆ. ಅವನ ಕಾವ್ಯದ ಜೀವಾಳವೆಂದರೆ ಸೌಂದರ್ಯ. ಕಾವ್ಯಸತ್ಯ ವಾಸ್ತವ ಸತ್ಯವಲ್ಲ ಅದು ಕಲ್ಪನಾ ಸತ್ಯ. ಶಬ್ದದ ಶ್ರವ್ಯ ಹಾಗೂ ಅರ್ಥಬೋಧಕ ಅಂಶಗಳಲ್ಲಿ ಸೌಂದರ್ಯವನ್ನು ಸಾಧಿಸುವುದು ಅವನ ಗುರಿ. ಕಗ್ಗ ಈ ಚೌಪದಿಯ ಮೊದಲ ಎರಡು ಸಾಲುಗಳಲ್ಲಿ ಕವಿ ಮಾಡಬಹುದಾದದ್ದನ್ನು ಹೇಳುತ್ತದೆ. ಕವಿಯ ಕಣ್ಣಿಗೆ ಸುಂದರವಾದ ಪಾರಿಜಾತದ ಹೂವು ಕಣ್ಣಿಗೆ ಬಿತ್ತು. ಆತ ಪಾರಿಜಾತದ ಮರವನ್ನು ತರುವ, ಬೆಳೆಸುವ ವಿಚಾರ ಮಾಡಲಾರ. ತನ್ನ ಅಸಹಾಯಕತೆಗೆ ಬಿಸುಸುಯ್ದು, ತನಗೆ ಸಿದ್ಧವಾದ ಶಕ್ತಿಯಿಂದ ಕಾವ್ಯವನ್ನು ಬರೆಯಲು ತೊಡಗುತ್ತಾನೆ. ಕೃಷ್ಣನ ಜೀವನದಲ್ಲಿ ಬರುವ ಪಾರಿಜಾತದ ಹೂವಿನ ಕಥೆಯನ್ನು ಬಳಸಿಕೊಂಡು ಅತ್ಯಂತ ಸುಂದರವಾದ ಕಾವ್ಯವನ್ನು ಬರೆದು ತೃಪ್ತನಾಗುತ್ತಾನೆ. ಆದರೆ ಅದೇ ಪಾರಿಜಾತ ಪುಷ್ಪವನ್ನು ಒಬ್ಬ ಸಮರ್ಥ ಆಡಳಿತಗಾರ ನೋಡಿದರೆ ಏನಾಗಬಹುದು? ಆತ ತನ್ನೂರಿನ ಜನಕ್ಕೆ ಆ ಸುಂದರ ಹೂವು ದೊರಕಲೆಂದು ಯೋಜಿಸಿ, ಪಾರಿಜಾತ ಗಿಡದ ಸಸಿಯನ್ನು ತರಿಸಿ, ಉದ್ಯಾನದಲ್ಲಿ ನೆಡಸಿ, ಬೆಳಸಿ ಪೋಷಿಸುತ್ತಾನೆ. ನಗರದ ಜನಕ್ಕೆಲ್ಲ ಪಾರಿಜಾತದ ಹೂವುಗಳು ದೊರೆಯುವಂತೆ ನೋಡಿಕೊಳ್ಳುತ್ತಾನೆ. ಕೆಲವರು ಕಾವ್ಯವನ್ನೋದಿದರೆ ಪಾರಿಜಾತದ ಹೂವು ದೊರಕಿದಂತಾಯಿತೇ? ಆದ್ದರಿಂದ ರಾಜ್ಯಕನ ಕಾರ್ಯ ದೊಡ್ಡದು ಎನ್ನಬಹುದು. ಮತ್ತೆ ಕೆಲವರು ರಾಜ್ಯಕ ಹಾಕಿಸಿದ ಗಿಡ ಬದುಕುವುದು ಕೆಲಕಾಲ ಮಾತ್ರ ಆದರೆ ಕವಿಯ ಕಾವ್ಯ ಶಾಶ್ವತವಾದದ್ದು ಎನ್ನಬಹುದು. ಇಬ್ಬರ ಕಾರ್ಯಗಳೂ ಶ್ರೇಷ್ಠವಾದವುಗಳೇ. ಶ್ರೀರಾಮ ತುಂಬ ದೊಡ್ಡವನೇ, ಕೃಷ್ಣನೂ ದೊಡ್ಡವನು. ಆದರೆ ವಾಲ್ಮೀಕಿ ರಾಮಾಯಣವನ್ನು ಬರೆಯದಿದ್ದರೆ, ವ್ಯಾಸರು ಮಹಾಭಾರತ, ಭಾಗವತಗಳನ್ನು ಬರೆಯದಿದ್ದರೆ ಅವರ ಮಹಿಮೆ ಜಗತ್ತಿಗೆ ಹೇಗೆ ತಿಳಿಯುತ್ತಿತ್ತು? ಕವಿಗೆ ನಾಯಕನ ಪ್ರೇರಣೆ ಮತ್ತು ನಾಯಕನಿಗೆ ಕವಿಯಿಂದ ಶಾಶ್ವತತೆ. ❖

ಗುಂಡಣ್ಣ



ದಿನ ಭವಿಷ್ಯ

ಸೋಮವಾರ ಅಕ್ಟೋಬರ್ 11, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಶರದೃತು ಆಶ್ವಯುಜ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಚಿತ್ತಾ ಪಂಚಮೀ ಗಂ. 0-7 (ಬೆ. 6-19) ಉಪರಿ ಶಷ್ಠೀ 54-4 (ರಾ. 3-57) ಸೋಮವಾರ ನಿತ್ಯ ನಕ್ಷತ್ರ ಜ್ಯೇಷ್ಠ ಗಂ. 28-41 (ಸಾ. 5-44) ಸೌಭಾಗ್ಯ ನಾಮ ಯೋಗ ಗಂ. 27-25 ಬಾಲವ ಕರಣ ಗಂ. 0-7 ಉಪರಿ ಕೌಲವ ಕರಣ ಗಂ. 27-2 ವಿಷಾಭಾವಃ ಅಮೃತ ಗಂ 8-17 ರಾಹುಕಾಲ: ಬೆ. ಗಂ. 7-30 ರಿಂದ 9-00 ಗುಳಿಕ ಮ. ಕಾಲ ಗಂ 1-30 ರಿಂದ 3-00 ಯಮಗಂಡ ಕಾಲ ಬೆ. ಗಂ 10-30 ರಿಂದ 12-00 : ಸೂರ್ಯೋದಯ: 6-13 ಸೂರ್ಯಾಸ್ತ: 6-00 ಅದೃಷ್ಟ ಸಂಖ್ಯೆ 47

ಮೇಷ: ಷೇರು ವ್ಯವಹಾರ ಹಾಗೂ ಹಣಕಾಸಿನ ವ್ಯವಹಾರಗಳಲ್ಲಿ ಅಭಿವೃದ್ಧಿ. ರಕ್ತ ಸಂಬಂಧಿಗಳ ವಿರೋಧವನ್ನು ಎದುರಿಸಬೇಕಾದೀತು. ಹಿರಿಯರ ಸಕಾಲಿಕ ನೆರವಿನಿಂದಾಗಿ ಎದುರಾಗಬಹುದಾದ ವಿಪತ್ತುಗಳು ದೂರ.

ವೃಷಭ: ಹಣಕಾಸು ವ್ಯವಹಾರದಲ್ಲಿ ನಷ್ಟ ತಪ್ಪಿಸುವ ಸಲುವಾಗಿ ಅತ್ಯಂತ ಜಾಗರೂಕತೆಯಿಂದ ಇರುವುದು ಒಳಿತು. ಉದ್ಯೋಗಿಗಳಿಗೆ ಹಿತ ಶತೃಗಳಿಂದ ತೊಂದರೆ.

ಮಿಥುನ: ಉದ್ಯೋಗ ವ್ಯವಹಾರಗಳಲ್ಲಿ ಧನಲಾಭ. ನ್ಯಾಯಾಧೀಶರು, ಬ್ಯಾಂಕ್ ಅಧಿಕಾರಿ ವರ್ಗದವರಿಗೆ ಉದ್ಯೋಗದಲ್ಲಿ ಬಡ್ತಿಯನ್ನು ನಿರೀಕ್ಷಿಸಬಹುದು. ವಿವಾಹಗಳು ನಿಶ್ಚಯ ವಾಗುವ ಸಾಧ್ಯತೆ.

ಕರ್ಕಾಟಕ: ತಾಂತ್ರಿಕ ಪರಿಣತರಿಗೆ ಹೆಚ್ಚಿನ ಮಾನ್ಯತೆ. ಸಂಗೀತಗಾರರಿಗೆ, ಕಲಾವಿದರುಗಳಿಗೆ ಗೌರವಾದರಗಳು ಪ್ರಾಪ್ತ. ಉದ್ಯೋಗದಲ್ಲಿ ಸ್ವಲ್ಪಮಟ್ಟಿನ ತೊಡಕು ತಲೆದೋರುವ ಸಾಧ್ಯತೆ.

ಸಿಂಹ: ವ್ಯವಹಾರಗಳು ದಿನದಂತೆ ನಿಯಮಿತವಾಗಿ ಸಾಗಲಿವೆ. ಸೇನೆಯಲ್ಲಿ ಸೇವೆ ಸಲ್ಲಿಸುತ್ತಿರುವವರು ಅಥವಾ ರಕ್ಷಣಾ ವಿಭಾಗದಲ್ಲಿ ಕಾರ್ಯ ನಿರ್ವಹಿಸುವವರಿಗೆ ಗೌರವಾದರಗಳು ದೊರಕುವ ಸಾಧ್ಯತೆ.

ಕನ್ಯಾ: ಆರ್ಥಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಿರಿ. ವಾಹನಗಳ ಖರೀದಿ ಸಾಧ್ಯತೆ. ಮನೆಯಲ್ಲಿ ಮಂಗಳ ಕಾರ್ಯಗಳ ವಿಚಾರ ಪ್ರಸ್ತಾಪ. ರಂಗ ಕಲಾವಿದರುಗಳಿಗೆ ಮಾನ್ಯತೆ.

ತುಲಾ: ಬುದ್ಧಿವಂತಿಕೆಯ ಕಾರ್ಯಕುಶಲತೆ ಮೆರೆಯಲಿದ್ದೀರಿ. ಲೇವಾದೇವಿ ವ್ಯವಹಾರದಲ್ಲಿ ಹೆಚ್ಚಿನ ಲಾಭ. ಗೃಹ ನಿರ್ಮಾಣ ಕಾರ್ಯಗಳನ್ನು ಕೈಗೆತ್ತಿಕೊಳ್ಳುವ ಸಾಧ್ಯತೆ.

ವೃಶ್ಚಿಕ: ಪಾಠ ಪ್ರವಚನ ಮಾಡುವವರು, ಉಪಾಧ್ಯಾಯರುಗಳಿಗೆ ಹೆಚ್ಚಿನ ಅನುಕೂಲವಾಗಲಿದೆ. ಮನಸ್ತಾಪ ತಪ್ಪಿಸಲು ಸಹೋದರರೊಂದಿಗೆ ಅತ್ಯಂತ ಜಾಣ್ಮೆಯಿಂದ ವ್ಯವಹರಿಸುವುದು ಒಳಿತು.

ಧನು: ಶೃಂಗಾರ ಸಾಮಗ್ರಿಗಳ ವಹಿವಾಟುದಾರರಿಗೆ ಅತ್ಯಂತ ಲಾಭದಾಯಕ ದಿನ. ಸರಕು ಸಾಗಣಿಕೆ ಕೆಲಸದಲ್ಲಿ ಬಿಡುವಿಲ್ಲದ ಕೆಲಸದಿಂದಾಗಿ ಹೆಚ್ಚಿನ ಆದಾಯ.

ಮಕರ: ಮನೆಯಲ್ಲಿ ಮಂಗಳ ಕಾರ್ಯಗಳು ನಡೆಯುವ ಸಾಧ್ಯತೆ. ಯಂತ್ರೋಪಕರಣಗಳ ಖರೀದಿ ಸಾಧ್ಯತೆ. ಕೃಷಿ ಕ್ಷೇತ್ರದಲ್ಲಿ ಸ್ವಲ್ಪಮಟ್ಟಿನ ಹಿಂಜರಿಕೆ ಉಂಟಾಗುವ ಸಾಧ್ಯತೆ.

ಕುಂಭ: ಮನೆಗೆ ಹೊಸ ಅತಿಥಿಯೊಬ್ಬರ ಸೇರ್ಪಡೆಯಾಗುವುದರಿಂದ ಸಂತಸ. ಕೈಗಾರಿಕೋದ್ಯಮಿಗಳಿಗೆ/ ತಾಂತ್ರಿಕ ಉತ್ಪನ್ನಗಳ ವ್ಯವಹಾರಸ್ಥರಿಗೆ ಹೆಚ್ಚಿನ ಆದಾಯ. ಸಂಗಾತಿಯೊಂದಿಗೆ ಪ್ರವಾಸ.

ಮೀನ: ಹೊಸ ಉದ್ಯಮದ ವಿಚಾರದಲ್ಲಿ ದುಡುಕುವುದು ಬೇಡ. ಇಷ್ಟ ಮಿತ್ರರೊಂದಿಗೆ ಚರ್ಚಿಸಿ ನಿರ್ಧಾರ ತೆಗೆದುಕೊಳ್ಳುವುದು ಉತ್ತಮ. ಬರವಣಿಗೆಯಿಂದ ವಿನಾ ಕಾರಣ ವಿವಾದ ಸೃಷ್ಟಿಸಿಕೊಳ್ಳುವ ಸಾಧ್ಯತೆ.

ನಿಮ್ಮ ಜನ್ಮದಿನ 11-ಅಕ್ಟೋಬರ್ ಇಂದು ಅತ್ಯಂತ ಶುಭದಾಯಕವಾಗಿದ್ದು, ವ್ಯವಹಾರ, ಉದ್ಯಮಗಳು ಸುಲಲಿತವಾಗಿ ಸಾಗುವವು. ಆರ್ಥಿಕ ಸ್ಥಿತಿಯು ಎಂದಿನಂತೆ ಮುಂದುವರಿಯುವ ಜೊತೆಗೆ ಹೊಸ ಉದ್ಯಮವನ್ನು ಪ್ರಾರಂಭಿಸುವ ಸಾಧ್ಯತೆಯೂ ಕಂಡುಬರುತ್ತಿದೆ. ಆಕಾಂಕ್ಷಿಗಳಿಗೆ ಸಂತಾನ ಭಾಗ್ಯವೂ ಕೂಡಿಬರಲಿದೆ.

ಪದಬಂಧ 4745

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ತಲೆಯನ್ನು ಕೆಳಕ್ಕೆ ಬಾಗಿಸಿ ನಡೆಯುವವನು (4)
3.ಮೂಲಿಕೆಗಳನ್ನು ಬಟ್ಟೆಯಿಳಿಸಿ ತೆಗೆದ ರಸ (3)
5.ಗಣಿಯೊಳಗಿರುವ ಬಸುರಿ (3)
7.ಹಲ್ಲುಗಳಿಗೆ ಆಧಾರವಾಗಿರುವ ಮಾಂಸಖಂಡ (3)
8.ಎಲ್ಲರೂ ಒಟ್ಟಾಗಿ ಹಾಡುವಿಕೆ (5)
11.ಗದ್ದಲ ಇಲ್ಲೇ ಕೇಳುತ್ತಿದೆ (3)
12.ಕೋಟೆಯ ಮೇಲುಭಾಗ (3)
15. ಪ್ರತ್ಯಕ್ಷವಲ್ಲದ್ದು ಪಕ್ಷದೊಳಗಿದೆಯಲ್ಲಾ? (3)
16.ಅಕ್ಕಪಕ್ಕ ಎಂದು ಹೀಗೆನ್ನಿ (4)

ಮೇಲಿಂದ ಕೆಳಕ್ಕೆ
1.ಎಣ್ಣೆ ಮಜ್ಜನಕ್ಕೇನೂ ಭಂಗವಿಲ್ಲ ಬಿಡಿ! (3)
2.ಜಮ ಅಲ್ಲ! ಇದು ವೆಚ್ಚ! (2)
3.ಕರದಲ್ಲಿ ಹಿಡಿದಿರುವ ಕಚ್ಚಾಪ್ರತಿ (3)
4.ನರಕಾಧಿಪತಿ ನೀಡಿದ ಘೋರದಂಡನೆ (4)
6.ಸರಪಣಿಯಲ್ಲಿನ ಪಂಕ್ತಿಯೇ ಉಲ್ಟಾ ಆಗಿಬಿಟ್ಟಿದೆ (3)
7. ಕೆಲಸಕ್ಕೆ ಬಾರದ ಮಾತಿದು (5)
9.ಮುಸಲ್ಮಾನರ ದೊರೆ (3)
10.ಒಪ್ಪವಾಗಿ ಬಳಿಯುವುದು (4)
11.ಬೆಳಕಿನ ಕಿಂಡಿಯಿದು (3)
13.ರೀತಿಯೊಡನೆ ಬಂದಿರುವ ಸಂಪ್ರದಾಯ! (3)
14. ಕೂರ್ಮವಿಲ್ಲಿ ಉಲ್ಟಾಪಲ್ಟಾ ಆಗಿದೆ (2)



4744ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಶಾಸಕ 2.ಪಾರುಪತ್ಯ 4.ಮಾನವೀಯ 6.ಸಂಪದ 7.ಕಸ 9.ನಿಷ್ಣಾತ 11.ರಲು 13.ವಿಲೋಮ 14.ಕನ್ನಡಕ 16.ಮಕಮಲ್ಲು 17.ಪಯಣ

ಮೇಲಿಂದ ಕೆಳಕ್ಕೆ: 1.ಶಾಖಮಾಪಕ 2.ಪಾದ್ರಿ 3.ಪರೋಪಕಾರ 5.ಯವನಿ 8.ಸಮಾಲೋಚಕ 10.ತವಕ 12.ಉಪಕರಣ 15.ಜೊಲ್ಲು

ಸುಡೊಕು 5131

			3		8		2	4
8		6				5		
	5		4		6		7	
			1		2		4	
		9		3				
6			8		9	2		5
	8		6		1		9	
7		2		8		3		1
	6		2		3		5	7

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5130 ಸುಡೊಕು

2	9	4	1	5	6	7	8	3
6	1	7	3	8	4	5	2	9
8	5	3	7	2	9	4	1	6
3	2	9	5	4	1	6	7	8
7	6	8	2	9	3	1	4	5
5	4	1	6	7	8	9	3	2
1	7	6	8	3	5	2	9	4
4	3	5	9	1	2	8	6	7
9	8	2	4	6	7	3	5	1

ಸಮಸ್ಯೆಗಳಿಗೆ ಪರಿಹಾರ ಒದಗಿಸುವುದಾಗಿ ಸಚಿವ ಮುರುಗೇಶ ಆರ್. ನಿರಾಣಿ ಭರವಸೆ

'ಹೊಸ ಉದ್ಯಮಗಳ ಸ್ಥಾಪನೆಗೆ ಆದ್ಯತೆ'

ಪ್ರಜಾವಾಣಿ ವಾರ್ತೆ

ಮುರುಗೇಶ ಆರ್. ನಿರಾಣಿ

ಬೆಂಗಳೂರು: ಹೊಸ ಉದ್ಯಮಗಳ ಸ್ಥಾಪನೆಗೆ ಆದ್ಯತೆ ನೀಡುವ ಜತೆಗೆ ಈಗಿರುವ ಸಮಸ್ಯೆಗಳನ್ನು ತ್ವರಿತಗತಿಯಲ್ಲಿ ನಿವಾರಿಸಲು ಪ್ರಯತ್ನಿಸಲಾಗುವುದು. ಈ ಮೂಲಕ ಉದ್ಯಮ ವಲಯಕ್ಕೆ ಹೊಸ ಸ್ಪರ್ಶ ನೀಡುವ ಭರವಸೆಯನ್ನು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಮುರುಗೇಶ್ ಆರ್. ನಿರಾಣಿ ವ್ಯಕ್ತಪಡಿಸಿದರು.

'ಪ್ರಜಾವಾಣಿ' ಕಚೇರಿಯಲ್ಲಿ ಭಾನುವಾರ ನಡೆದ 'ಫೋನ್ ಇನ್' ಕಾರ್ಯಕ್ರಮದಲ್ಲಿ ರಾಜ್ಯದ ವಿವಿಧೆಡೆಯಿಂದ ಉದ್ಯಮಿಗಳು, ರೈತರು, ವಿದ್ಯಾರ್ಥಿಗಳು, ಮಹಿಳೆಯರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿದ ಸಚಿವರು, ಹಲವು ಸಮಸ್ಯೆಗಳಿಗೆ ಪರಿಹಾರ ಒದಗಿಸಿದರು. ಆಯ್ದ ಕೆಲವು ಪ್ರಶ್ನೆಗಳು ಮತ್ತು ಉತ್ತರಗಳು ಇಲ್ಲಿವೆ.

● ದಾವಣಗೆರೆಯ ಬಳಿಯ ಜವಳಿ ಪಾರ್ಕ್‌ನಲ್ಲಿ ಹಲವು ಸಮಸ್ಯೆಗಳಿವೆ. ಇಲ್ಲಿ ಇತರ ಉದ್ಯಮಗಳನ್ನು ಸ್ಥಾಪಿಸಲು ಅವಕಾಶ ಕಲ್ಪಿಸಬೇಕು- ಮಂಜುನಾಥ, ದಾವಣಗೆರೆ

ಜವಳಿ ಪಾರ್ಕ್ ಸಮಸ್ಯೆಯನ್ನು ಶೀಘ್ರ ಇತ್ಯರ್ಥಗೊಳಿಸಲಾಗುವುದು. ಜತೆಗೆ, ದಾವಣಗೆರೆಯ ಬಾತಿ ಹತ್ತಿರ ಹೆದ್ದಾರಿಯಲ್ಲಿ 400 ಎಕರೆ ಪ್ರದೇಶ ಖರೀದಿಸಲಾಗುತ್ತಿದೆ. ಕರೂರಿನಲ್ಲೂ ಕೈಗಾರಿಕೆಗಳ ಸ್ಥಾಪನೆಗೆ 300 ಎಕರೆ ನೀಡಲು ರೈತರು ಒಪ್ಪಿಕೊಂಡಿದ್ದಾರೆ. ಮುಂದಿನ ದಿನಗಳಲ್ಲಿ ರಸಗೊಬ್ಬರ ಕಾರ್ಖಾನೆಯನ್ನು ಎರಡು ಸಾವಿರ ಎಕರೆ ಪ್ರದೇಶದಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿದೆ.

● ಕಲಬುರಗಿ ಜಿಲ್ಲೆಯಲ್ಲಿ ಹೊಸದಾಗಿ ಸಿಮೆಂಟ್ ಕಾರ್ಖಾನೆ ಸ್ಥಾಪಿಸುವ ಉದ್ದೇಶವಿದೆಯೇ? ಪ್ರಕಾಶ್, ಚಿತಾಪುರ

ಕಲಬುರಗಿ ಜಿಲ್ಲೆಯಲ್ಲಿ ಸುಣ್ಣದ ಕಲ್ಲು ಹೇರಳವಾಗಿ ಲಭ್ಯವಿದೆ. ಸುಮಾರು 5.80 ಕೋಟಿ ಟನ್‌ನಷ್ಟು ಸುಣ್ಣದ ಕಲ್ಲು ದೊರೆಯಲಿದೆ. 2022ರ ನವೆಂಬರ್‌ನಲ್ಲಿ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ ಮಾಡುತ್ತಿದ್ದೇವೆ. ಆ ಸಂದರ್ಭದಲ್ಲಿ ಸಿಮೆಂಟ್ ಕಾರ್ಖಾನೆಗಳನ್ನು ಸ್ಥಾಪಿಸಲು ಹೂಡಿಕೆದಾರರಿಗೆ ಮನವರಿಕೆ ಮಾಡಲಾಗುವುದು.

● ನಾನು ಅಂಗವಿಕಲ. ಧಾರವಾಡದ ಮುಮ್ಮಿಗಟ್ಟಿಯಲ್ಲಿ ಕಾಟನ್ ಜಿನ್ನಿಂಗ್ ಕಾರ್ಖಾನೆ ಸ್ಥಾಪಿಸಲು ಅರ್ಜಿ ಹಾಕಿದ್ದೇನೆ. ಸಮಾಜದ ವರ್ಗದ ಅಂಗವಿಕಲರಿಗೆ ಹೆಚ್ಚಿನ ಸಹಾಯ ಧನ ಕಲ್ಪಿಸಬೇಕು. - ರಾಮನಾಥ್, ಧಾರವಾಡ

● ಖಾಸಗಿ ಶಾಲೆ ಶಿಕ್ಷಕರ ಬದುಕು ಸಂಕಷ್ಟದಲ್ಲಿದೆ. ನಮಗೆ ಬೇರೆ ಉದ್ಯೋಗವೂ ಗೊತ್ತಿಲ್ಲ. ಅವರ ಪರಿಸ್ಥಿತಿ ಅಯೋಮಯವಾಗಿದೆ. ಮಹಿಳೆಯರು ಉದ್ಯಮ ವಲಯದಲ್ಲೂ ಹಿಂದುಳಿದಿದ್ದಾರೆ.

-ರತ್ನಮ್ಮ, ಕಾರಟಗಿ, ಕೊಪ್ಪಳ.

ಮಹಿಳೆಯರು ಯಾವ ರೀತಿಯಲ್ಲಿ ಉದ್ಯಮಗಳನ್ನು ಕೈಗೊಳ್ಳಬಹುದು ಎನ್ನುವ ಬಗ್ಗೆ ಕೈಗಾರಿಕೆ ಇಲಾಖೆ ವತಿಯಿಂದ ಮಾರ್ಗದರ್ಶನ ಮತ್ತು ನೆರವು ನೀಡಲಾಗುವುದು. ಟೈಲರಿಂಗ್, ಹೈನುಗಾರಿಕೆ, ಮನೆಯಲ್ಲೇ ವಿವಿಧ ಉತ್ಪನ್ನಗಳನ್ನು ತಯಾರಿಸುವುದು ಸೇರಿದಂತೆ ಸಣ್ಣ ಮತ್ತು ಬೃಹತ್ ಉದ್ಯಮಗಳನ್ನು ಸ್ಥಾಪಿಸಬಹುದು.

ಅಂಗವಿಕಲರಿಗೆ ಹೆಚ್ಚಿನ ಸೌಲಭ್ಯಗಳನ್ನು ಕಲ್ಪಿಸಲು ಕ್ರಮಕೈಗೊಳ್ಳಲಾಗುವುದು. ನಿಮ್ಮ ಉತ್ತಮ ಸಲಹೆಯನ್ನು ಪರಿಗಣಿಸಲಾಗುವುದು.

● ಅನುಮತಿ ಪಡೆದು ಗ್ರಾನೈಟ್ ಉದ್ಯಮದಲ್ಲಿ ತೊಡಗಿದ್ದೇನೆ. ಈಗ ಭೂ ಪರಿವರ್ತನೆ ಮಾಡಿಕೊಳ್ಳುವುದು ಕಡ್ಡಾಯವೇ? – ಪ್ರಕಾಶ್, ದೇವನಹಳ್ಳಿ

ಭೂ ಪರಿವರ್ತನೆ ಮಾಡಿಕೊಳ್ಳುವುದು ಕಡ್ಡಾಯ. ಈ ಬಗ್ಗೆ ಜಿಲ್ಲಾಧಿಕಾರಿ ಕಚೇರಿಯನ್ನು ಸಂಪರ್ಕಿಸಿ.

● ಕಲಬುರಗಿ ಜಿಲ್ಲೆಯಲ್ಲಿ ಕೈಗಾರಿಕೆಗಳಲ್ಲಿ ಉದ್ಯಮಗಳನ್ನು ಸ್ಥಾಪಿಸಲು ಸರ್ಕಾರ ಏನು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಮಹಿಳೆಯರಿಗೆ ಆದ್ಯತೆ ದೊರೆಯಲಿದೆಯೇ? ವಿಜಯಲಕ್ಷ್ಮಿ, ಕಲಬುರಗಿ

ಕಲಬುರಗಿಯಲ್ಲಿ ಜವಳಿ ಪಾರ್ಕ್ ಮಾಡುವ ಉದ್ದೇಶ ಇದೆ. ವಿಮಾನ ನಿಲ್ದಾಣದ ಸಮೀಪ ಒಂದು ಸಾವಿರ ಎಕರೆ ಸ್ವಾಧೀನ ಮಾಡಿಕೊಳ್ಳುತ್ತಿದ್ದೇವೆ. ಮಹಿಳೆಯರಿಗೂ ಒಂದು ಕೈಗಾರಿಕಾ ಪಾರ್ಕ್ ಮಾಡಿದ್ದೇವೆ. 'ಕಲಬುರಗಿ ಮುನ್ನೋಟ-2050' ಎನ್ನುವ ಯೋಜನೆ ರೂಪಿಸಲಾಗುತ್ತಿದೆ. ನಮ್ಮ ಕನಸಿನ ಕಲಬುರಗಿ ಭವಿಷ್ಯದಲ್ಲಿ ಹೇಗೆ ಇರಬೇಕು ಎನ್ನುವ ಬಗ್ಗೆ ಯೋಜನೆಗಳನ್ನು ರೂಪಿಸಲಾಗಿದೆ.

● ನೇಕಾರಿಕೆ ಮಾಡುತ್ತಿದ್ದೇನೆ. ಸರ್ಕಾರದ ಯೋಜನೆಗಳು ಸರಿಯಾಗಿ ತಲುಪುತ್ತಿಲ್ಲ. – ಜಗದೀಶ್, ಇಳಕಲ್ ಬಾಗಲಕೋಟೆ,

ಜವಳಿ ಕ್ಷೇತ್ರದ ಸಮಸ್ಯೆಗಳ ಸಂಪೂರ್ಣ ಅರಿವು ಇದೆ. ನೇಕಾರ ಸಂಘಟನೆಗಳ ಮುಖಂಡರ ಜತೆ ಇಳಕಲ್‌ನಲ್ಲಿ ಶೀಘ್ರ ಚರ್ಚಿಸುತ್ತೇನೆ. ಅಲ್ಲಿ ಜವಳಿ ಪಾರ್ಕ್ ಮಾಡುವ ಚಿಂತನೆಯೂ ಇದೆ.

● ಚಿಂಚೋಳಿಯಲ್ಲಿ ಸಕ್ಕರೆ ಕಾರ್ಖಾನೆ ಆರಂಭಿಸುವ ಉದ್ದೇಶ ಇದೆಯೇ? –ಮಹೇಶ್ ಚಿಂಚೋಳಿ, ಕಲಬುರಗಿ

ಒಂದು ವರ್ಷದಲ್ಲಿ ಹೊಸ ಸಕ್ಕರೆ ಕಾರ್ಖಾನೆ ಆರಂಭಿಸುವ ಉದ್ದೇಶ ಇದೆ. ಹೂಡಿಕೆ ಮಾಡುವವರನ್ನು ಹುಡುಕುತ್ತಿದ್ದೇವೆ. ಈಗಾಗಲೇ ಒಬ್ಬರು ಅರ್ಜಿ ಹಾಕಿದ್ದಾರೆ.

● ಕಬ್ಬು ಸಕಾಲಕ್ಕೆ ಕಾರ್ಖಾನೆಗೆ ಹೋಗುತ್ತಿಲ್ಲ. ಪರಿಹಾರ ರೂಪಿಸಿ. ಪ್ರಭು, ಪಾಂಡವಪುರ

ಪಾಂಡವಪುರ ಸಕ್ಕರೆ ಕಾರ್ಖಾನೆ ಸಾಮರ್ಥ್ಯ 2,500 ಟನ್‌ವಿತ್ತು. ಈಗ ಅದನ್ನು 5,000 ಟನ್ ಸಾಮರ್ಥ್ಯಕ್ಕೆ ಹೆಚ್ಚಿಸುತ್ತಿದ್ದೇವೆ. ಕಾರ್ಖಾನೆಯನ್ನು ಸಮರ್ಪಕವಾಗಿ ನಿರ್ವಹಿಸಿಕೊಂಡು ಹೋಗುವ ಜವಾಬ್ದಾರಿ ರೈತರದ್ದು ಸಹ ಆಗಿದೆ. ಪ್ರತಿ 10 ದಿನಕ್ಕೆ ಹಣ ಪಾವತಿಸುತಿದ್ದೇವೆ. ಆದರೆ, ರೈತ ಸಂಘದವರು ಮತ್ತು ಕೆಲವರು ಅನುಕೂಲವಾಗಿಲ್ಲ ಎಂದು ಹೇಳುತ್ತಿದ್ದಾರೆ. ನೀವು ಹೋರಾಟಗಾರರ ಸಲಹೆ ಪಡೆಯಿರಿ. ಅವರ ಸಲಹೆಯಂತೆ ಮುಂದುವರಿಯೋಣ.

● ಜಿಂದಾಲ್ ಕಾರ್ಖಾನೆಯಲ್ಲಿ ಕನ್ನಡಿಗರನ್ನು ಕಡೆಗಣಿಸಲಾಗುತ್ತಿದೆ. ಭೂಮಿ ಕಳೆದುಕೊಂಡ ಸಂತ್ರಸ್ತ ರೈತರ ಮಕ್ಕಳಿಗೆ ಉದ್ಯೋಗ ನೀಡುತ್ತಿಲ್ಲ. ಹಲವು ಬಾರಿ ಈ ಬಗ್ಗೆ ದೂರು ನೀಡಲಾಗಿದೆ. – ಕರಿಬಸಪ್ಪ, ತೋರಣಗಲ್, ಬಳ್ಳಾರಿ

ಡಾ. ಸರೋಜಿನಿ ಮಹಿಷಿ ವರದಿ ಅನ್ವಯ ಶೇಕಡ 85ರಷ್ಟು ಉದ್ಯೋಗಗಳನ್ನು ಕನ್ನಡಿಗರಿಗೆ ನೀಡಬೇಕು. ಈ ಬಗ್ಗೆ ಸಮಸ್ಯೆ ಅಥವಾ ದೂರುಗಳಿದ್ದರೆ ನನಗೆ ಸಂಪೂರ್ಣ ವಿವರಗಳನ್ನು ಕಳುಹಿಸಿ.

ಸೆಮಿಕಂಡಕ್ಟರ್ ವಲಯದಲ್ಲಿ ₹10 ಸಾವಿರ ಕೋಟಿ ಹೂಡಿಕೆ

ರಾಜ್ಯದಲ್ಲಿ ಸೆಮಿಕಂಡಕ್ಟರ್ ಉದ್ಯಮಗಳನ್ನು ಸ್ಥಾಪಿಸಲು ಆದ್ಯತೆ ನೀಡಲಾಗುತ್ತಿದೆ. ಈ ಕ್ಷೇತ್ರದಲ್ಲಿ ₹10 ಸಾವಿರ ಕೋಟಿ ಹೂಡಿಕೆಯಾಗಲಿದ್ದು, ಒಂದು ಲಕ್ಷ ಜನರಿಗೆ ಉದ್ಯೋಗ ದೊರೆಯಲಿದೆ ಎಂದು ಮುರುಗೇಶ ಆರ್. ನಿರಾಣಿ ತಿಳಿಸಿದರು. ಈ ಉದ್ಯಮಗಳನ್ನು ಹುಬ್ಬಳ್ಳಿ-ಧಾರವಾಡ, ಮೈಸೂರು, ಕಲಬುರಗಿ ಮುಂತಾದ ನಗರಗಳಲ್ಲಿ ಸ್ಥಾಪಿಸಲಾಗುವುದು. ಸರ್ಕಾರದಿಂದ ಈ ಉದ್ಯಮಕ್ಕೆ ಹಲವು ರಿಯಾಯಿತಿಗಳನ್ನು ನೀಡಲಾಗುವುದು ಎಂದು ತಿಳಿಸಿದರು.

ವಿಐಎಸ್‌ಎಲ್ ಪುನರಾರಂಭಕ್ಕೆ ಕ್ರಮ

'ಕೇಂದ್ರ ಸರ್ಕಾರದ ವಿಐಎಸ್‌ಎಲ್ ಕಾರ್ಖಾನೆ ಮರು ಆರಂಭಿಸುವ ಬಗ್ಗೆ ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ ಮತ್ತು ಧರ್ಮೇಂದ್ರ ಪ್ರಧಾನ್ ಅವರ ಜತೆ ಚರ್ಚಿಸಲಾಗಿದೆ' ಎಂದು ಸಚಿವ ಮುರುಗೇಶ ಆರ್. ನಿರಾಣಿ ತಿಳಿಸಿದರು.

ಶಿವಮೊಗ್ಗದ ಹಾರನಹಳ್ಳಿಯ ಶಿವಾನಂದಪ್ಪ ಅವರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಭದ್ರಾವತಿಯ ವಿಐಎಸ್‌ಎಲ್ ಆರಂಭಿಸಲು ಶಿವಮೊಗ್ಗ ಸಂಸದ ಬಿ.ವೈ. ರಾಘವೇಂದ್ರ ಅವರು ಸಹ ಅಪಾರ ಆಸಕ್ತಿ ವಹಿಸಿದ್ದಾರೆ. ರಾಜ್ಯ ಸರ್ಕಾರದಿಂದಲೂ ಸಾಧ್ಯವಿರುವ ಎಲ್ಲ ಕ್ರಮಗಳನ್ನು ಕೈಗೊಂಡು ಶೀಘ್ರ ಕಾಯಕಲ್ಪ ನೀಡಲು ಪ್ರಯತ್ನಿಸಲಾಗುವುದು' ಎಂದು ಭರವಸೆ ನೀಡಿದರು.

ಪ್ರಜಾವಾಣಿ ಫೋನ್-ಇನ್

'ನಿರುದ್ಯೋಗ ನಿವಾರಣೆಗೆ ಉದ್ಯಮಗಳಿಗೆ ಉತ್ತೇಜನ'

'ಉದ್ಯಮಿಯಾಗು ಉದ್ಯೋಗ ನೀಡು' ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ನಿರುದ್ಯೋಗ ನಿವಾರಣೆಗೆ ಪೂರಕವಾಗಿ ಉದ್ಯಮಶೀಲತೆಗೆ ಉತ್ತೇಜನ ನೀಡಲಾಗುವುದು. ಈ ಉದ್ದೇಶದಿಂದ 'ಉದ್ಯಮಿಯಾಗು ಉದ್ಯೋಗ ನೀಡು' ಕಾರ್ಯಕ್ರಮಕ್ಕೆ ಸೋಮವಾರ ಚಾಲನೆ ನೀಡಲಾಗುವುದು ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಮುರುಗೇಶ್ ಆರ್. ನಿರಾಣಿ ತಿಳಿಸಿದರು.

ನಗರದ ಅರಮನೆ ಮೈದಾನದಲ್ಲಿ ಸೋಮವಾರ ನಡೆಯಲಿರುವ 'ಉದ್ಯಮಿಯಾಗು ಉದ್ಯೋಗ ನೀಡು' ಕಾರ್ಯಾಗಾರ ಮತ್ತು ಮಂಗಳವಾರ ನಡೆಯಲಿರುವ ಕೈಗಾರಿಕಾ ಅದಾಲತ್‌ನ ಸಿದ್ಧತೆಗಳನ್ನು ಭಾನುವಾರ ಪರಿಶೀಲಿಸಿದ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕಾರ್ಯಾಗಾರ ಉದ್ಘಾಟಿಸುವರು. ಕಾರ್ಯಾಗಾರದಲ್ಲಿ 10,000ಕ್ಕೂ ಹೆಚ್ಚು ಮಂದಿ ಪಾಲ್ಗೊಳ್ಳುವ ನಿರೀಕ್ಷೆ ಇದೆ. ಈಗಾಗಲೇ 4,800 ಮಂದಿ ನೋಂದಣಿ ಮಾಡಿಸಿದ್ದಾರೆ.

ಉದ್ಯಮಿಗಳಾಗಿ ಯಶಸ್ಸು ಸಾಧಿಸಿರುವವರು ತಮ್ಮ ಅನುಭವಗಳನ್ನು ಹಂಚಿಕೊಳ್ಳಲಿದ್ದಾರೆ. ಉದ್ಯಮಗಳ ಆರಂಭಕ್ಕೆ ಬೇಕಿರುವ ಸಿದ್ಧತೆ, ಹೂಡಿಕೆ, ಬ್ಯಾಂಕ್ ನೆರವು, ಯಶಸ್ವಿ ಅನುಷ್ಠಾನ ಮತ್ತಿತರ ವಿಷಯಗಳ ಕುರಿತು ಅವರು ಮಾರ್ಗದರ್ಶನ ನೀಡಲಿದ್ದಾರೆ ಎಂದರು.

ಜೆರೋಧಾ ಕಂಪನಿ ಸಂಸ್ಥಾಪಕ ನಿತಿನ್ ಕಾಮತ್, ಕೂ ಆ್ಯಪ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅಪ್ರಮೇಯ ರಾಧಾಕೃಷ್ಣ, ನೋಪೋ ನ್ಯಾನೊ ತಂತ್ರಜ್ಞಾನ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಗದಾಧರ್ ರೆಡ್ಡಿ, ಕ್ರೆಡಿಟ್ ಉಡಾನ್ ಕ್ಯಾಪಿಟಲ್ ಮುಖ್ಯಸ್ಥ ಚೈತನ್ಯ ಅಡಪ, ಬೌನ್ಸ್ ಸಹ ಸಂಸ್ಥಾಪಕ ವಿವೇಕಾನಂದ ಹಳ್ಳೇಕೆರೆ, ನಿರಾಮೈ ಹೆಲ್ತ್ ಅನಾಲಿಟಿಕ್ಸ್‌ನ ಸಂಸ್ಥಾಪಕಿ ಗೀತಾ ಮಂಜುನಾಥ್, ಸಾಮೂಹಿಕ ಉದ್ಯಮಶೀಲತೆಗಾಗಿ ಜಾಗತಿಕ ಒಕ್ಕೂಟದ ಸಹ ಸಂಸ್ಥಾಪಕ ಮದನ್ ಪಡಕಿ, ಫಿಸ್ಡಮ್ ಸಹ ಸಂಸ್ಥಾಪಕ ಸುಬ್ರಹ್ಮಣ್ಯ ಎಸ್.ವಿ. ಯುವಜನರಿಗೆ ಮಾರ್ಗದರ್ಶನ ನೀಡುವರು ಎಂದು ವಿವರಿಸಿದರು.

250 ಮನವಿ ಸಲ್ಲಿಕೆ: ಮಂಗಳವಾರ ಬೆಂಗಳೂರು ವಲಯದ ಕೈಗಾರಿಕಾ ಅದಾಲತ್ ನಡೆಯಲಿದೆ. ಕೈಗಾರಿಕೋದ್ಯಮಿಗಳು ಮತ್ತು ಮಧ್ಯಸ್ಥಿಕೆದಾರರ ನಡುವೆ ಸಮಾಲೋಚನೆಗೆ ಅದಾಲತ್‌ನಲ್ಲಿ ಅವಕಾಶ ಕಲ್ಪಿಸಲಾಗುವುದು. ಉದ್ದಿಮೆಗಳಿಗೆ ಸಂಬಂಧಿಸಿದ ಸಮಸ್ಯೆಗಳಿಗೆ ತ್ವರಿತ ಪರಿಹಾರಕ್ಕೆ ಈ ಕ್ರಮ ಕೈಗೊಂಡಿದ್ದು, ಈವರೆಗೆ 250 ಮನವಿಗಳು ಸಲ್ಲಿಕೆಯಾಗಿವೆ ಎಂದು ಸಚಿವರು ತಿಳಿಸಿದರು.

ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ.ಇ.ವಿ. ರಮಣ ರೆಡ್ಡಿ, ಆಯುಕ್ತೆ ಗುಂಜನ್ ಕೃಷ್ಣ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಎನ್. ಶಿವಶಂಕರ್, ಕರ್ನಾಟಕ ಉದ್ಯೋಗ ಮಿತ್ರದ ವ್ಯವಸ್ಥಾಪಕ ನಿರ್ದೇಶಕ ದೊಡ್ಡ ಬಸವರಾಜು ಪತ್ರಿಕಾಗೋಷ್ಠಿಯಲ್ಲಿದ್ದರು.

ಹೊಸ ನೀತಿ ಜಾರಿಗೆ ಸಿದ್ಧತೆ

'ಜೈವಿಕ ಇಂಧನ ಸೇರಿದಂತೆ ಕೆಲವು ಕ್ಷೇತ್ರಗಳಿಗೆ ಸಂಬಂಧಿಸಿದಂತೆ ರಾಜ್ಯದಲ್ಲಿ ಸ್ಪಷ್ಟವಾದ ನೀತಿ ಇಲ್ಲ. ಅಂತಹ ಕ್ಷೇತ್ರಗಳನ್ನು ಗುರುತಿಸಿ ಹೊಸ ನೀತಿಗಳನ್ನು ರೂಪಿಸಿ, ಜಾರಿಗೊಳಿಸಲಾಗುವುದು' ಎಂದು ಸಚಿವ ಮುರುಗೇಶ್ ನಿರಾಣಿ ತಿಳಿಸಿದರು.

ಮಹಾರಾಷ್ಟ್ರ ಮತ್ತು ಉತ್ತರ ಪ್ರದೇಶ ರಾಜ್ಯಗಳಲ್ಲಿ ಜೈವಿಕ ಇಂಧನ ನೀತಿ ಇದೆ. ಅವುಗಳನ್ನು ಅಧ್ಯಯನ ನಡೆಸಿ, ಕರಡು ನೀತಿ ಸಿದ್ಧಪಡಿಸಲಾಗಿದೆ. ಆರ್ಥಿಕ ಇಲಾಖೆಯ ಒಪ್ಪಿಗೆ ದೊರೆತ ಬಳಿಕ ಅದನ್ನು ಬಿಡುಗಡೆ ಮಾಡಿ, ಅನುಷ್ಠಾನಕ್ಕೆ ತರಲಾಗುವುದು ಎಂದರು.

ಮಹಿಳಾ ಬೈಕ್ ರ್‍ಯಾಲಿ

ಸಾರ್ವಜನಿಕ ವಿಜಯ ದಶಮಿ ಸಮಿತಿ ಮತ್ತು ಹಿಂದೂ ಜಾಗರಣಾ ವೇದಿಕೆಯಿಂದ ಸಾರ್ವಜನಿಕ ವಿಜಯದಶಮಿ ಮಹೋತ್ಸವದ ಅಂಗವಾಗಿ ದಾವಣಗೆರೆಯಲ್ಲಿ ಭಾನುವಾರ ನಡೆದ ಮಹಿಳಾ ದ್ವಿಚಕ್ರ ವಾಹನ ರ್‍ಯಾಲಿಯಲ್ಲಿ ಸೆಲ್ಫಿ ತೆಗೆದುಕೊಳ್ಳುತ್ತಿರುವ ಯುವತಿ

ಪ್ರಜಾವಾಣಿ ಚಿತ್ರ: ಸತೀಶ ಬಡಿಗೇರ್

ಅಂದಾಜು, ಟೆಂಡರ್ ಪರಿಶೀಲನೆಗೆ 27 ಸಮಿತಿಗಳಿದ್ದರೂ ನೂರಾರು ಕೋಟಿಯ ಅವ್ಯವಹಾರ

ನೀರಾವರಿ ತಾಂತ್ರಿಕ ಸಮಿತಿಗಳ ಬರ್ಖಾಸ್ತಿಗೆ ಶಿಫಾರಸು

● ರಾಜೇಶ್ ರೈ ಚಟ್ಲ

ಪ್ರಜಾವಾಣಿ ವಿಶೇಷ

ಬೆಂಗಳೂರು: ಜಲಸಂಪನ್ಮೂಲ ಇಲಾಖೆ ಅನುಷ್ಠಾನಗೊಳಿಸುವ ಬೃಹತ್ ನೀರಾವರಿ ಯೋಜನೆಗಳಲ್ಲಿ ಯಾವುದೇ ಅಕ್ರಮಗಳು ನಡೆಯಬಾರದು ಎಂಬ ಕಾರಣಕ್ಕೆ ರಾಜ್ಯ ಸರ್ಕಾರ 27 ತಾಂತ್ರಿಕ ಸಮಿತಿಗಳನ್ನು ರಚಿಸಿದೆ. ಆದರೂ ನೂರಾರು ಕೋಟಿ ರೂಪಾಯಿ ಅಕ್ರಮಗಳಿಗೆ ಕಡಿವಾಣ ಬಿದ್ದಿಲ್ಲ.

ನಿವೃತ್ತ ಎಂಜಿನಿಯರ್ ಇನ್ ಚೀಫ್, ನಿವೃತ್ತ ಮುಖ್ಯ ಎಂಜಿನಿಯರ್‌ಗಳು ಸೇರಿ 76 ಅಧಿಕಾರೇತರ ಹುದ್ದೆಗಳು ಈ ಸಮಿತಿಯಲ್ಲಿವೆ. ನೀರಾವರಿ ಯೋಜನೆಗಳ ಅಂದಾಜು ಪಟ್ಟಿ, ಟೆಂಡರ್‌ಗಳನ್ನು ಈ ಸಮಿತಿಗಳೇ ಅಂತಿಮಗೊಳಿಸಬೇಕು. ಆದರೆ, ಈ ಸಮಿತಿಗಳಿಂದ ಅಕ್ರಮ ತಡೆಯಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ 27 ಸಮಿತಿಗಳಲ್ಲಿ ಏಳನ್ನು ಮಾತ್ರ ಉಳಿಸಿಕೊಂಡು ಉಳಿದವನ್ನು ರದ್ದು ಮಾಡುವುದು ಸೂಕ್ತ ಎಂದು ಸತ್ಯಶೋಧನಾ ತಂಡ ಸರ್ಕಾರಕ್ಕೆ ಶಿಫಾರಸು ಮಾಡಿದೆ.

ಡಿ.ವೈ. ಉಪ್ಪಾರ್ ಸಹಭಾಗಿತ್ವದ 'ಎಡಿಯು ಇನ್ಫ್ರಾ' ಎಂಬ ಕಂಪನಿ ಗುತ್ತಿಗೆ ವಹಿಸಿದ್ದ ₹ 17,685 ಕೋಟಿಗೂ ಹೆಚ್ಚು ಮೊತ್ತದ ಎಂಟು ಬೃಹತ್ ಯೋಜನೆಗಳಲ್ಲಿ ನಡೆದಿದೆ ಎನ್ನಲಾದ ಅಕ್ರಮ ಆರೋಪಗಳ ವಿಚಾರಣೆ ನಡೆಸಲು ರಾಜ್ಯ ಸರ್ಕಾರ ರಚಿಸಿದ ಸತ್ಯಶೋಧನಾ ತಂಡ ಶಿಫಾರಸು ಮಾಡಿದೆ. ಇಲಾಖೆಯ ನಿವೃತ್ತ ಕಾರ್ಯದರ್ಶಿ ಎಸ್.ಜೆ. ಚನ್ನಬಸಪ್ಪ ಮತ್ತು ಎಚ್.ಡಿ. ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದಾಗ ತಾಂತ್ರಿಕ ಸಲಹೆಗಾರರಾಗಿದ್ದ ಎಂ.ಕೆ. ವೆಂಕಟರಾಮ್ ಅವರು ಈ ತಂಡದ ಸದಸ್ಯರು.

ನೀರಾವರಿ ಯೋಜನೆಗಳನ್ನು ಪರಿಶೀಲಿಸಿ, ಸರ್ಕಾರಕ್ಕೆ ಶಿಫಾರಸು ಮಾಡಲು ಹಿಂದೆ ಇಡೀ ರಾಜ್ಯಕ್ಕೆ ಬಾಳೆಕುಂದ್ರಿ ನೇತೃತ್ವದ ತಾಂತ್ರಿಕ ಉಪ ಸಮಿತಿ ಇತ್ತು. ಆ ಬಳಿಕ (1995–98) ಕೆ.ಸಿ. ರೆಡ್ಡಿ ನೇತೃತ್ವದಲ್ಲಿ ಒಂದೇ ಒಂದು ತಾಂತ್ರಿಕ ಸಲಹಾ ಸಮಿತಿ ಇತ್ತು. ಜಲಸಂಪನ್ಮೂಲ ಖಾತೆಗೆ ಸಚಿವರುಗಳು ಬಂದು ಹೋಗುತ್ತಿದ್ದಂತೆ, ತಮ್ಮ ಅವಧಿಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ಎಂಜಿನಿಯರ್‌ಗಳಿಗೆ 'ಆಶ್ರಯ' ಕಲ್ಪಿಸಲು ಹೊಸ ಹೊಸ ಸಮಿತಿಗಳನ್ನು ರಚಿಸುತ್ತಲೇ ಹೋದರು. ಇದೀಗ ಈ ಸಮಿತಿಗಳೇ ಸರ್ಕಾರಕ್ಕೆ 'ಬಿಳಿಯಾನೆ' ಆಗಿ ಪರಿಣಮಿಸಿವೆ.

ನಾಲ್ಕೂ ನಿಗಮಗಳು ಕೈಗೊಳ್ಳುವ ಕಾಮಗಾರಿಗಳ ಅಂದಾಜು, ವಿಸ್ತೃತ ಯೋಜನಾ ವರದಿ, ಟೆಂಡರ್‌ಗಳು ಮತ್ತು ಯೋಜನೆಯ ಹಣ ಹೆಚ್ಚಳವಾದರೆ ಪರಿಶೀಲಿಸಲು ಸದ್ಯ 19 ಅಂದಾಜು ಪರಿಶೀಲನಾ ಸಮಿತಿ, ತಲಾ 4 ಟೆಂಡರ್ ಪರಿಶೀಲನಾ ಸಮಿತಿ ಮತ್ತು ತಾಂತ್ರಿಕ ಉಪ ಸಮಿತಿ ಸೇರಿ ಒಟ್ಟು 27 ಸಮಿತಿಗಳಿವೆ. ಈ ಸಮಿತಿಗಳ ಕಾರ್ಯವೈಖರಿಯನ್ನು ವರದಿಯಲ್ಲಿ ಉಲ್ಲೇಖಿಸಿರುವ ಸತ್ಯಶೋಧನಾ ತಂಡ, 'ಇವು ನಿವೃತ್ತ ಅಧಿಕಾರಿಗಳ ಪುನರ್ವಸತಿ ಕೇಂದ್ರಗಳಾಗಿ ಬದಲಾಗಿವೆ. ಸಭೆಗಳಲ್ಲೇ ಈ ಸಮಿತಿಗಳು ಕಾಲಹರಣ ಮಾಡುತ್ತಿವೆ' ಎಂದು ಟೀಕಿಸಿದೆ.

ಈ 27 ಸಮಿತಿಗಳಲ್ಲಿರುವ ಒಟ್ಟು 76 ಮಂದಿಯಲ್ಲಿ 61 ಮಂದಿ ನಿವೃತ್ತ ಎಂಜಿನಿಯರ್ ಇನ್ ಚೀಫ್ ಮತ್ತು ನಿವೃತ್ತ ಮುಖ್ಯ ಎಂಜಿನಿಯರ್‌ಗಳು. ಕೆಲವರು ಒಂದಕ್ಕಿಂತ ಹೆಚ್ಚಿನ ಸಮಿತಿಗಳಲ್ಲಿದ್ದಾರೆ. ಉಳಿದ 15 ಮಂದಿಯಲ್ಲಿ ಐಐಎಸ್ಸಿಯ ನಿವೃತ್ತ ಪ್ರಾಧ್ಯಾಪಕರೊಬ್ಬರು ಕೆಬಿಜೆಎನ್‌ಎಲ್‌ನ 3 ಸಮಿತಿಗಳಲ್ಲಿ, ಎಂಜಿನಿಯರಿಂಗ್ ಕಾಲೇಜಿನ ಹಾಲಿ ಪ್ರಾಧ್ಯಾಪಕರೊಬ್ಬರು ವಿಜೆಎನ್‌ಎಲ್‌ನ 3 ಸಮಿತಿಗಳಲ್ಲಿ, ಐಐಎಸ್ಸಿಯ ಪ್ರಾಧ್ಯಾಪಕರೊಬ್ಬರು ಸಿಎನ್‌ಎನ್‌ಎಲ್‌ನ 3 ಸಮಿತಿಗಳಲ್ಲಿ, ನಿವೃತ್ತ ಸೂಪರಿಟೆಂಡೆಂಟ್ ಎಂಜಿನಿಯರ್ ಒಬ್ಬರು ಕೆಎನ್‌ಎನ್‌ಎಲ್‌ನ 6 ಸಮಿತಿಗಳಲ್ಲಿ ಇದ್ದಾರೆ.

'ಯೋಜನೆಗಳ ಅಂದಾಜು ಪಟ್ಟಿಗಳು ದೋಷಪೂರಿತವಾಗಿವೆ, ಹಳೆಯ ಮಣ್ಣಿನ ಮರು ಬಳಕೆ ಬಗ್ಗೆ ಲೆಕ್ಕ ಹಾಕುವಾಗ ತಪ್ಪುಗಳಾಗಿವೆ ಎಂದು ಹೇಳುತ್ತಾರೆ. ಹಾಗಿದ್ದರೆ, ಈ ಅಂದಾಜು ಪರಿಶೀಲನಾ ಸಮಿತಿ, ಟೆಂಡರ್ ಪರಿಶೀಲನಾ ಸಮಿತಿ, ಉನ್ನತಾಧಿಕಾರ ಸಮಿತಿಗಳಲ್ಲಿ ಇರುವವರೇನು ಎಂಜಿನಿಯರುಗಳಲ್ಲವೇ? ಗಾರೆ ಕೆಲಸದವರೇ?' ಎಂದು ಮಲಪ್ರಭಾ ನಾಲೆ ಮತ್ತು ಉಪನಾಲೆಗಳ ಕಾಮಗಾರಿಯಲ್ಲಿ ₹ 400 ಕೋಟಿಗೂ ಹೆಚ್ಚು ಮೊತ್ತದ ಭ್ರಷ್ಟಾಚಾರ ನಡೆದಿದೆ ಎಂದು ಆರೋಪಿಸಿ ಲೋಕಾಯುಕ್ತಕ್ಕೆ ದೂರು ಸಲ್ಲಿಸಿರುವ ಶ್ರೀನಿವಾಸ ಗೌಡ ಪ್ರಶ್ನಿಸಿದ್ದಾರೆ. ಅವರು ನೀಡಿರುವ ದೂರಿನ ವಿಚಾರಣೆ ನಡೆಯುತ್ತಿದೆ.

'ಕೇವಲ 7 ಸಮಿತಿಗಳು ಸಾಕು'

₹ 5 ಕೋಟಿಯಿಂದ ₹ 100 ಕೋಟಿವರೆಗಿನ ಯೋಜನೆಗಳ ಅಂದಾಜು ಮತ್ತು ಟೆಂಡರ್‌ಗಳನ್ನು ಪರಿಶೀಲಿಸಲು ನಾಲ್ಕೂ ನಿಗಮಗಳಲ್ಲಿ ತಾಂತ್ರಿಕ ಪರಿಣತರನ್ನೊಳಗೊಂಡ ತಲಾ ಒಂದೊಂದು ಉಪ ಸಮಿತಿ, ₹ 100 ಕೋಟಿಗೂ ಹೆಚ್ಚು ಮೊತ್ತದ ಅಂದಾಜುಗಳನ್ನು ಪರಿಶೀಲಿಸಲು ನಾಲ್ಕೂ ನಿಗಮಗಳಿಗೆ ಸೇರಿ ಸರ್ಕಾರದ ಮಟ್ಟದಲ್ಲಿ ತಲಾ ಒಂದು ತಾಂತ್ರಿಕ ಪರಿಣತರ ಅಂದಾಜು ಉಪ ಸಮಿತಿ ಮತ್ತು ಒಂದು ತಾಂತ್ರಿಕ ಪರಿಣತರ ಟೆಂಡರ್ ಉಪ ಸಮಿತಿ ಇದೆ. ₹ 5 ಕೋಟಿಗೂ ಹೆಚ್ಚು ಮೊತ್ತದ ಏತ ನೀರಾವರಿ ಯೋಜನೆಗಳ ಪರಿಶೀಲನೆಗೆ ಎಲ್ಲ ನಿಗಮಗಳಿಗೆ ಸೇರಿ ಸರ್ಕಾರದ ಮಟ್ಟದಲ್ಲಿ ಒಂದು ಎಲೆಕ್ಟ್ರೋ- ಮೆಕ್ಯಾನಿಕಲ್ ಪರಿಣತರನ್ನೊಳಗೊಂಡ ಸಮಿತಿಯನ್ನು ರಚಿಸಬೇಕು. ಈ ಪ್ರಸ್ತಾವಿತ ಸಮಿತಿಗಳ ಅನುಮೋದನೆಯ ಬಳಿಕವಷ್ಟೇ ಯೋಜನೆಗಳನ್ನು ಅನುಷ್ಠಾನಗೊಳಿಸಲು ನಿಗಮಗಳಿಗೆ ಅಧಿಕಾರ ನೀಡಬೇಕು ಎಂದು ಸತ್ಯಶೋಧನಾ ತಂಡ ಸರ್ಕಾರಕ್ಕೆ ಶಿಫಾರಸು ಮಾಡಿದೆ.

ಕಲ್ಲಿದ್ದಲು ಕೊರತೆ ನೀಗಿಸಿ, ವಿದ್ಯುತ್ ಉತ್ಪಾದಿಸಿ: ಸಿದ್ದರಾಮಯ್ಯ ಒತ್ತಾಯ

ಸಿದ್ದರಾಮಯ್ಯ

ಮಂಡ್ಯ: 'ಕಲ್ಲಿದ್ದಲು ಕೊರತೆ ಇದೆ ಎಂಬ ಕಾರಣಕ್ಕೆ ವಿದ್ಯುತ್ ಉತ್ಪಾದನೆ ಸ್ಥಗಿತಗೊಳಿಸಬಾರದು. ಸರ್ಕಾರ ಜವಾಬ್ದಾರಿಯಿಂದ ನಡೆದುಕೊಳ್ಳಬೇಕು' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಒತ್ತಾಯಿಸಿದರು.

ಭಾನುವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, 'ಕೇಂದ್ರ ಸರ್ಕಾರದ ಜೊತೆ ಮಾತನಾಡಿ ಅವಶ್ಯವಿರುವಷ್ಟು ಕಲ್ಲಿದ್ದಲು ತರಿಸಿಕೊಳ್ಳಬೇಕು. ರೈತರಿಗೆ, ಗ್ರಾಹಕರಿಗೆ ತೊಂದರೆಯಾಗದಂತೆ ಎಚ್ಚರ ವಹಿಸಬೇಕು' ಎಂದರು.

ಎಚ್‌ಡಿಕೆ ವಿರುದ್ಧ ಟೀಕೆ: 'ಜೆಡಿಎಸ್ ಪಕ್ಷದ ಬಗ್ಗೆ ನಾನು ಹೆಚ್ಚು ಮಾತನಾಡುವುದಿಲ್ಲ. ಆದರೂ ಎಚ್.ಡಿ.ಕುಮಾರಸ್ವಾಮಿ ಕಾಲು ಕೆರೆದುಕೊಂಡು ಬರುತ್ತಾರೆ. ನಾನೇನು ಮಾಡಲಿ? ಎಚ್.ಡಿ.ದೇವೇಗೌಡ, ಕುಮಾರಸ್ವಾಮಿ ಬಗ್ಗೆ ಮಾತನಾಡುವುದನ್ನು ಬಿಟ್ಟಿದ್ದೇನೆ. ಅವರು ನನ್ನ ಮಾತಿಗೆ ಕೋಮುವಾದಿ ಬಣ್ಣ ಕಟ್ಟಿ ತಿರುಚುವ ಕೆಲಸ ಮಾಡುತ್ತಾರೆ. ಟೀಕೆ ಮಾಡಿಕೊಳ್ಳಲಿ. ಅವರ ಎಲ್ಲಾ ಹೇಳಿಕೆಗಳನ್ನು ನಿರ್ಲಕ್ಷಿಸುತ್ತೇನೆ' ಎಂದು ತಿಳಿಸಿದರು.

ಜೆಡಿಎಸ್ ದುರ್ಬಲ: 'ಮಂಡ್ಯ ಜಿಲ್ಲೆಯಲ್ಲಿ ಜೆಡಿಎಸ್ ದುರ್ಬಲವಾಗಿದೆ. ಬಲಿಷ್ಠವಾಗಿದ್ದರೆ ಲೋಕಸಭೆ ಚುನಾವಣೆಯಲ್ಲಿ ಸೋಲುತಿತ್ತೇ? ಜಿಲ್ಲೆಯಲ್ಲಿ ಜೆಡಿಎಸ್ ಶಾಸಕರೇ ಇದ್ದರೂ ಸೋಲು ಅನುಭವಿಸುವಂತಾಯಿತು' ಎಂದರು.

'ಸಿದ್ದರಾಮಯ್ಯರದ್ದು 'ಬ್ರೂಟಸ್' ರಾಜಕಾರಣ'

ಬೆಂಗಳೂರು: 'ಸಿದ್ದರಾಮಯ್ಯ ಅವರದ್ದು 'ಬ್ರೂಟಸ್' ಮಾದರಿಯ ರಾಜಕಾರಣ. ಜೆಡಿಎಸ್‌ನ ಮಿತ್ರ ಪಕ್ಷವಾಗಿದ್ದುಕೊಂಡೇ ಲೋಕಸಭಾ ಚುನಾವಣೆಯಲ್ಲಿ ಕುತಂತ್ರದಿಂದ ನಮ್ಮ ಅಭ್ಯರ್ಥಿಗಳನ್ನು ಸೋಲಿಸಿದರು' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ದೂರಿದ್ದಾರೆ.

'ಮಂಡ್ಯ ಜಿಲ್ಲೆಯಲ್ಲಿ ಜೆಡಿಎಸ್ ದುರ್ಬಲವಾಗಿದೆ' ಎಂಬ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿಕೆಗೆ ಭಾನುವಾರ ಟ್ವಿಟರ್‌ನಲ್ಲಿ ಪ್ರತಿಕ್ರಿಯಿಸಿರುವ ಅವರು, 'ಮೈತ್ರಿ ಸರ್ಕಾರದ ಭಾಗವಾಗಿದ್ದುಕೊಂಡೇ ಬೆನ್ನಿಗಿರಿದ ನಿಮ್ಮ ಹೀನ ರಾಜಕೀಯ ಯಾರಿಗೆ ಗೊತ್ತಿಲ್ಲ ಹೇಳಿ? ನಿಮ್ಮ ಕುತಂತ್ರದ ಹೆಜ್ಜೆಗಳು ಎಲ್ಲೆಲ್ಲಿ ಮೂಡಿದವು ಎಂಬುದು ಜನರಿಗೆ ಗೊತ್ತಿದೆ' ಎಂದಿದ್ದಾರೆ.

ಮಂಡ್ಯದಲ್ಲಿ ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿ ನಿಖಿಲ್ ಹೇಗೆ ಸೋತರು ಎಂಬುದು ಗೊತ್ತಿದೆ. ಬಿಜೆಪಿ, ಕಾಂಗ್ರೆಸ್, ರೈತ ಸಂಘ ಮತ್ತು ಕೆಲವು ಮಾಧ್ಯಮಗಳು ಸೇರಿ ನಡೆಸಿದ ಪ್ರಯತ್ನದಿಂದ ಜೆಡಿಎಸ್‌ಗೆ ಸೋಲಾಯಿತು. ಕೌರವರು ರಚಿಸಿದ ಚಕ್ರವ್ಯೂಹದಲ್ಲಿ ಅಭಿಮನ್ಯು ಸೋತಂತೆ ನಿಖಿಲ್ ಸೋತಿದ್ದಾರೆ. ಮಂಡ್ಯದಲ್ಲಿ ಜೆಡಿಎಸ್ ದುರ್ಬಲವಾಗಿದೆ ಎಂಬುದಾಗಿ ಹೇಳುವುದು ಮೂರ್ಖತನದ ಪರಮಾವಧಿ ಎಂದು ಹೇಳಿದ್ದಾರೆ.

ಕೋಟ್ಯಂತರ ಅಕ್ರಮಕ್ಕೆ ಸಾಕ್ಷ್ಯ!

ಒಂದನೇ ಪುಟದಿಂದ...

ಹೆಜ್ಜೆ ಹೆಜ್ಜೆಗೂ ಸಂಪರ್ಕ: ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಆರಂಭವಾಗುತ್ತಿದ್ದಂತೆಯೇ ಗುತ್ತಿಗೆದಾರರು ಉಮೇಶ್, ಶಶಿಧರ ಮರಡಿ ಮತ್ತು ಅರವಿಂದ್ ಅವರನ್ನು ಸಂಪರ್ಕಿಸುತ್ತಿದ್ದರು. ಮುಂದೇನು ಮಾಡಬೇಕು ಎಂಬುದನ್ನು ವಾಟ್ಸ್ ಆ್ಯಪ್ ಸಂದೇಶದಲ್ಲಿ ಅವರು ಸೂಚಿಸುತ್ತಿದ್ದರು. ಕಾರ್ಯಾದೇಶ ವಿತರಣೆಯವರೆಗೂ ಅದೇ ಮಾರ್ಗದಲ್ಲಿ ಸಂಭಾಷಣೆ ನಡೆಯುತ್ತಿತ್ತು. ಯಾವ ಅಧಿಕಾರಿಯನ್ನು ಸಂಪರ್ಕಿಸಬೇಕು? ಅಲ್ಲಿ ಏನು ಮಾಡಬೇಕು? ಎಂಬ ಸಂದೇಶಗಳೂ ವಾಟ್ಸ್ ಆ್ಯಪ್ ಮೂಲಕವೇ ತಲುಪುತ್ತಿದ್ದವು. ಬಿಲ್ ಪಾವತಿ ಸೇರಿದಂತೆ ಇತರ ಪ್ರಮುಖ ಕೆಲಸಗಳ ಸಂದರ್ಭದಲ್ಲೂ ಇದೇ ಮಾದರಿಯ 'ವ್ಯವಹಾರ' ನಡೆದಿರುವುದು ಕಂಡುಬಂದಿದೆ ಎಂಬ ಮಾಹಿತಿ ಲಭಿಸಿದೆ.

'ಬೃಹತ್ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ನಡೆಸುತ್ತಿದ್ದ ಹಿರಿಯ ಅಧಿಕಾರಿಗಳು, ಇಲಾಖಾ ಮುಖ್ಯಸ್ಥರು ಕೂಡ ಇದೇ ರೀತಿ ಮೂವರ ಜತೆ ಮಾತುಕತೆ ನಡೆಸುತ್ತಿದ್ದರು. ಕೆಲವು ಅಧಿಕಾರಿಗಳು ನೇರವಾಗಿಯೇ 'ಹಣ ತಲುಪಿದೆಯೆ?' 'ಇನ್ನು ಮುಂದುವರಿಯಬಹುದೆ?' ಎಂದು ನಿರ್ದಿಷ್ಟ ಮೊತ್ತ ಉಲ್ಲೇಖಿಸಿ ಖಚಿತಪಡಿಸಿಕೊಂಡಿದ್ದಾರೆ. ಕೆಲವರು ಸಂಖ್ಯೆಯನ್ನು ಮಾತ್ರ ಉಲ್ಲೇಖಿಸಿ, ಮುಂದೆ ಸಂಕೇತಾಕ್ಷರಗಳು, ಕೆಲವು ರಹಸ್ಯ ಪದಗಳನ್ನು (ಕೋಡ್ ವರ್ಡ್) ಬಳಸಿ ಮಾತುಕತೆ ನಡೆಸಿರುವ ಮಾಹಿತಿ ವಾಟ್ಸ್‌ಆ್ಯಪ್ ಸಂದೇಶಗಳಲ್ಲಿದೆ' ಎಂದು ಮೂಲಗಳು ತಿಳಿಸಿವೆ.

ಪ್ರತ್ಯೇಕ ತನಿಖೆಗೆ ಶಿಫಾರಸು ಸಾಧ್ಯತೆ: ಕಾಮಗಾರಿಗಳ ಗುತ್ತಿಗೆಗೆ ಸಂಬಂಧಿಸಿದಂತೆ ತೆರಿಗೆ ವಂಚನೆ, ಅಘೋಷಿತ ಆದಾಯದ ಹೊರತಾದ ಅಕ್ರಮಗಳ ಕುರಿತು ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ತನಿಖೆ ನಡೆಸುವಂತೆ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಶಿಫಾರಸು ಮಾಡುವ ಸಾಧ್ಯತೆ ಇದೆ.

ಈ ಸಂಭಾಷಣೆಗಳಲ್ಲಿ ಭಾಗಿಯಾಗಿರುವ ಅಧಿಕಾರಿಗಳು, ಗುತ್ತಿಗೆದಾರರು ಮತ್ತು ಮಧ್ಯವರ್ತಿಗಳನ್ನು ವಿಚಾರಣೆ ನಡೆಸುವುದಕ್ಕೂ ಐ.ಟಿ ಅಧಿಕಾರಿಗಳು ಸಿದ್ಧತೆ ನಡೆಸುತ್ತಿದ್ದಾರೆ. ಹಂತ ಹಂತವಾಗಿ ನೋಟಿಸ್ ಜಾರಿಗೆ ಚಿಂತನೆ ನಡೆದಿದೆ ಎಂದು ಗೊತ್ತಾಗಿದೆ.

'ಆರ್ಯ ಈಡಿಗ ಅಭಿವೃದ್ಧಿ ಮಂಡಳಿ ಸ್ಥಾಪನೆಗೆ ಕ್ರಮ'

ಹಾವೇರಿ: 'ಆರ್ಯ ಈಡಿಗ ಅಭಿವೃದ್ಧಿ ಮಂಡಳಿ ಶೀಘ್ರ ಸ್ಥಾಪಿಸುವ ಕುರಿತು ರಾಜ್ಯದ ಮುಖ್ಯಮಂತ್ರಿಯೊಂದಿಗೆ ಮಾತನಾಡುವೆ' ಎಂದು ಕೇಂದ್ರ ಬಂದರು ಮತ್ತು ಪ್ರವಾಸೋದ್ಯಮ ಸಚಿವ ಶ್ರೀಪಾದ ನಾಯ್ಕ ಭರವಸೆ ನೀಡಿದರು.

ನಗರದಲ್ಲಿ ಭಾನುವಾರ ನಡೆದ ಆರ್ಯ ಈಡಿಗರ ಜಿಲ್ಲಾ ಮಟ್ಟದ ಬೃಹತ್ ಸಮಾವೇಶವನ್ನು ಉದ್ಘಾಟಿಸಿ ಅವರು ಮಾತನಾಡಿದರು. 'ಈ ಸಮಾವೇಶದ ಮೂಲಕ ಆರ್ಯ ಈಡಿಗ ಅಭಿವೃದ್ಧಿ ಮಂಡಳಿ ಸ್ಥಾಪನೆಗೆ ಹೆಜ್ಜೆ ಇಡಬೇಕಾಗಿದೆ. ಇದರಿಂದ ಈ ಸಮಾಜದ ಉದ್ಯಮಕ್ಕೆ ಅನುಕೂಲವಾಗಲಿದೆ' ಎಂದರು.

'ಸಮಾಜದ 70 ಲಕ್ಷ ಜನ ರಾಜ್ಯದಲ್ಲಿದ್ದಾರೆ. ಗೋವಾದಲ್ಲಿ ಜನಸಂಖ್ಯೆಯ ಶೇ 35 ರಷ್ಟಿದ್ದೇವೆ. ಆ ಕಾರಣದಿಂದ ನಾನು 5 ಬಾರಿ ಸಂಸದನಾಗಿ ಆಯ್ಕೆಯಾಗಲು ಸಾಧ್ಯವಾಗಿದೆ. ಸಮಾಜ ಸಂಘಟನೆಯಾಗಬೇಕು. ಅಂದಾಗ ಮಾತ್ರ ನಮ್ಮ ಬೇಡಿಕೆಗಳನ್ನು ಈಡೇರಿಸಲು ಸಾಧ್ಯವಾಗುತ್ತದೆ' ಎಂದು ಹೇಳಿದರು.

'ಕೆಲವರು ಈಡಿಗ ಸಮಾಜದ ಸಿಗಂಧೂರು ಚೌಡೇಶ್ವರಿ ದೇವಸ್ಥಾನದ ಧರ್ಮದರ್ಶಿಗಳು ಹಾಗೂ ಆ ದೇವಸ್ಥಾನದ ಮೇಲೆ ಸುಳ್ಳು ಆರೋಪ ಮಾಡಿದ್ದರು. ಆ ದೇವಸ್ಥಾನದ ರಕ್ಷಣೆಗೆ ಹಾಗೂ ಅಭಿವೃದ್ಧಿಗಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರದೊಂದಿಗೆ ಮಾತನಾಡುವೆ' ಎಂದರು.

ಪ್ರಣವಾನಂದ ಸ್ವಾಮೀಜಿ ಸಮಾವೇಶದ ಸಾನ್ನಿಧ್ಯ ವಹಿಸಿದ್ದರು. ನಿಪ್ಪಾಣಿಯ ಅರುಣಾನಂದ ಸ್ವಾಮೀಜಿ, ಸಮಾಜದ ಧುರೀಣರಾದ ಕಾಗೋಡು ತಿಮ್ಮಪ್ಪ, ಬಿ.ಕೆ.ಹರಿಪ್ರಸಾದ್, ಮಾಲೀಕಯ್ಯ ಗುತ್ತೇದಾರ, ಬೇಳೂರು ಗೋಪಾಲಕೃಷ್ಣ, ಕೃಷ್ಣಾ ಈಳಿಗೇರ, ಸತೀಶ ಈಳಿಗೇರ ಇದ್ದರು.



'ಸುಂಕ ಇಳಿಕೆ: ಪರಿಸ್ಥಿತಿ ಆಧರಿಸಿ ನಿರ್ಧಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ಹಣಕಾಸು ಪರಿಸ್ಥಿತಿ ಆಧರಿಸಿ ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಅಬಕಾರಿ ಸುಂಕ ಇಳಿಕೆ ಕುರಿತು ತೀರ್ಮಾನಕ್ಕೆ ಬರಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಭಾನುವಾರ ಸುದ್ದಿಗಾರರ ಜತೆ ಮಾತನಾಡಿ, 'ರಾಜ್ಯದಲ್ಲಿ ಡೀಸೆಲ್ ದರ ಪ್ರತಿ ಲೀಟರ್‌ಗೆ ₹ 100 ತಲುಪಿರುವುದರಿಂದ ರಾಜ್ಯ ಸರ್ಕಾರ ತನ್ನ ಪಾಲಿನ ಅಬಕಾರಿ ಸುಂಕ ಕಡಿಮೆ ಮಾಡಲಿದೆಯೆ' ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, 'ಈಗಲೇ ಏನನ್ನೂ ಹೇಳಲಾಗದು. ಹಣಕಾಸು ಪರಿಸ್ಥಿತಿ ಹಾಗೂ ವರಮಾನ ಸಂಗ್ರಹದ ಕುರಿತು ಪರಿಶೀಲಿಸಿದ ಬಳಿಕ ನಿರ್ಧಾರಕ್ಕೆ ಬರಲಾಗುವುದು' ಎಂದರು.

ರಾಜ್ಯದ ಉಷ್ಣ ವಿದ್ಯುತ್ ಸ್ಥಾವರಗಳಲ್ಲಿನ ಕಲ್ಲಿದ್ದಲು ಕೊರತೆ ನಿವಾರಣೆಗೆ ಪ್ರಯತ್ನ ನಡೆದಿದೆ. ರಾಜ್ಯಕ್ಕೆ ಹಂಚಿಕೆಯಾಗಿರುವ ಮಹಾರಾಷ್ಟ್ರದ ಚಂದ್ರಾಪುರ ಮತ್ತು ಒಡಿಶಾದ ಮಹಾನಂದಿ ಗಣಿಗಳಿಂದ ಕಲ್ಲಿದ್ದಲು ತರಲು ಪ್ರಯತ್ನಿಸಲಾಗುತ್ತಿದೆ. ಚಂದ್ರಾಪುರ ಗಣಿಯಲ್ಲಿ ಕಲ್ಲಿದ್ದಲು ತೆಗೆಯುವ ಮುನ್ನ ಮಹಾರಾಷ್ಟ್ರ ಅರಣ್ಯ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಪಡೆಯಬೇಕಿದೆ. ಈ ಸಂಬಂಧ ಕೇಂದ್ರ ಅರಣ್ಯ ಸಚಿವ ಭೂಪೇಂದ್ರ ಯಾದವ್ ಅವರಿಗೆ ಮನವಿ ಸಲ್ಲಿಸಲಾಗಿದೆ ಎಂದು ತಿಳಿಸಿದರು.

ಮಹಾನಂದಿ ಗಣಿಯಲ್ಲಿ ಕಲ್ಲಿದ್ದಲು ತೆಗೆಯಲು ಈಗಾಗಲೇ ಎಲ್ಲ ಅನುಮತಿಗಳನ್ನೂ ಪಡೆಯಲಾಗಿದೆ. ಹೊಸದಾಗಿ ಅನುಮತಿ ಅಗತ್ಯವಿಲ್ಲ. ಚಂದ್ರಾಪುರ ಗಣಿಗೆ ಸಂಬಂಧಿಸಿದಂತೆ ಮಹಾರಾಷ್ಟ್ರದ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರಿಂದ ನಿರಾಕ್ಷೇಪಣಾ ಪತ್ರ ದೊರೆತ ತಕ್ಷಣ ಕೆಲಸ ಆರಂಭಿಸಲಾಗುವುದು ಎಂದರು.

ಮಹಾರಾಷ್ಟ್ರದಿಂದ ಕಲ್ಲಿದ್ದಲು ತಂದರೆ ವೆಚ್ಚ ಕಡಿಮೆ ಆಗಲಿದೆ. ಎರಡೂ ಗಣಿಗಳಲ್ಲಿ ಉತ್ಪಾದನೆ ಆರಂಭವಾದರೆ ಪರಿಸ್ಥಿತಿ ಸುಧಾರಿಸಲಿದೆ. ತಕ್ಷಣದಲ್ಲಿ ಪೂರೈಕೆ ಹೆಚ್ಚಿಸುವಂತೆ ಮನವಿ ಮಾಡಿದ್ದು, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರೂ ಅಧಿಕಾರಿಗಳಿಗೆ ಪೂರಕವಾಗಿ ಸೂಚನೆ ನೀಡಿದ್ದಾರೆ ಎಂದು ಬೊಮ್ಮಾಯಿ ತಿಳಿಸಿದರು.

ದಸರಾ ಬಳಿಕ ನಿರ್ಧಾರ: ಪ್ರಾಥಮಿಕ ಶಾಲೆಗಳ ತರಗತಿ ಆರಂಭದ ಕುರಿತು ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, 'ದಸರಾ ಬಳಿಕ ತಜ್ಞರ ಸಮಿತಿ ಸಭೆ ಸೇರಲಿದೆ. ಸಮಿತಿಯ ಶಿಫಾರಸು ಆಧರಿಸಿ ನಿರ್ಧಾರ ಕೈಗೊಳ್ಳಲಾಗುವುದು' ಎಂದರು.

ಎಲ್ಲರ ಜತೆ ಚರ್ಚಿಸಿ ತೀರ್ಮಾನ



ಬಸವರಾಜ ಬೊಮ್ಮಾಯಿ

'ಬೆಂಗಳೂರು ಉಸ್ತುವಾರಿ ಸಚಿವರ ನೇಮಕಕ್ಕೆ ಸಂಬಂಧಿಸಿದಂತೆ ದೊಡ್ಡ ಸಮಸ್ಯೆಯೇನೂ ಇಲ್ಲ. ಎಲ್ಲ ಶಾಸಕರ ಜತೆ ಚರ್ಚಿಸಿ ತೀರ್ಮಾನ ಮಾಡಲಾಗುವುದು. ಎಲ್ಲರೊಂದಿಗೂ ಆಪ್ತವಾಗಿ, ಪ್ರೀತಿಯಿಂದ ಮಾತುಕತೆ ನಡೆಸುತ್ತೇನೆ' ಎಂದು ಬೊಮ್ಮಾಯಿ ಹೇಳಿದರು.

ಬೆಂಗಳೂರು ಉಸ್ತುವಾರಿಯನ್ನು ತಮ್ಮ ಬಳಿಯೇ ಉಳಿಸಿಕೊಳ್ಳಲಾಗುವುದೇ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, 'ಶಾಸಕರ ಜತೆ ಚರ್ಚಿಸಿದ ಬಳಿಕ ನಿರ್ಧಾರವಾಗಲಿದೆ' ಎಂದರು.

ಸರ್ಕಾರಿ ನೌಕರರ ಸಂಘದಲ್ಲಿ ಭಿನ್ನಮತ

ಬೆಂಗಳೂರು: ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ಕಾರ್ಯವೈಖರಿ ವಿರುದ್ಧ ಹಲವು ಸದಸ್ಯರು ಅಸಮಾಧಾನಗೊಂಡಿದ್ದು, ಭಾನುವಾರ ನಡೆದ ಸಂಘದ ರಾಜ್ಯ ಪರಿಷತ್ ಕಾರ್ಯಕಾರಿ ಸಮಿತಿ ಸಭೆಯಲ್ಲೇ ಭಿನ್ನಮತ ಬಹಿರಂಗವಾಗಿದೆ.

'ಷಡಾಕ್ಷರಿ ಸಂಘವನ್ನು ವೈಯಕ್ತಿಕ ಹಿತಾಸಕ್ತಿಗಳಿಗೆ ಬಳಸಿಕೊಳ್ಳುತ್ತಿದ್ದಾರೆ ಎಂದು ಕೆಲವು ಸದಸ್ಯರು ಸಭೆಯಲ್ಲಿ ಆರೋಪಿಸಿದ್ದಾರೆ. ನೌಕರರ ಪರವಾಗಿ ಹೋರಾಟ ನಡೆಸುತ್ತಿಲ್ಲ. ನೌಕರರ ಬೇಡಿಕೆಗಳಿಗೆ ಸ್ಪಂದಿಸುತ್ತಿಲ್ಲ ಎಂಬ ಆರೋಪವನ್ನೂ ಕೆಲವರು ಮಾಡಿದ್ದಾರೆ. ಸರ್ಕಾರದ ಹಂತದಲ್ಲಿ ನೌಕರರ ಪರವಾದ ಪ್ರಸ್ತಾವಗಳನ್ನು ಸರಿಯಾಗಿ ಮಂಡಿಸುತ್ತಿಲ್ಲ ಎಂಬ ಅಸಮಾಧಾನವೂ ವ್ಯಕ್ತವಾಗಿದೆ' ಎಂದು ನೌಕರರ ಸಂಘದ ಕೆಲವು ಪದಾಧಿಕಾರಿಗಳು ತಿಳಿಸಿದರು.

ನೂತನ ಪಿಂಚಣಿ ಯೋಜನೆಯನ್ನು ಕೈಬಿಟ್ಟು ಹಳೆಯ ಪಿಂಚಣಿ ಯೋಜನೆಯನ್ನು ಎಲ್ಲರಿಗೂ ಅನ್ವಯಿಸಬೇಕೆಂಬ ಬೇಡಿಕೆ ಈಡೇರಿಕೆ ಹಾಗೂ ಏಳನೇ ವೇತನ ಆಯೋಗ ರಚನೆಗೆ ಒತ್ತಡ ತರುವ ಕೆಲಸವನ್ನೂ ಮಾಡುತ್ತಿಲ್ಲ ಎಂಬ ಅಸಮಾಧಾನವೂ ವ್ಯಕ್ತವಾಗಿದೆ. ಈ ಎರಡೂ ವಿಷಯದಲ್ಲಿ ಹೋರಾಟ ರೂಪಿಸುವಂತೆ ಭಾನುವಾರದ ಸಭೆಯಲ್ಲಿ ಒತ್ತಾಯ ಕೇಳಿಬಂದಿದೆ ಎಂದು ಅವರು ಮಾಹಿತಿ ನೀಡಿದರು.

ಕೆಲವು ವಿಷಯಗಳು ಪ್ರಸ್ತಾಪವಾದಾಗ ಸಭೆಯಲ್ಲಿ ತೀವ್ರ ವಾಗ್ವಾದ ನಡೆದಿದ್ದು, ಗದ್ದಲದ ವಾತಾವರಣ ನಿರ್ಮಾಣವಾಗಿತ್ತು ಎಂದು ತಿಳಿಸಿದರು.

ಈ ಕುರಿತು ಪ್ರತಿಕ್ರಿಯಿಸಿದ ಷಡಾಕ್ಷರಿ, 'ಭಿನ್ನಮತದ ಯಾವುದೇ ಘಟನೆಗಳೂ ನಡೆದಿಲ್ಲ. ಸಂಘದ ಸಭೆ ಅತ್ಯಂತ ಸುಸೂತ್ರವಾಗಿ ನಡೆದಿದ್ದು, ಸರ್ವಾನುಮತದಿಂದ ಎಲ್ಲ ನಿರ್ಧಾರಗಳನ್ನು ಕೈಗೊಳ್ಳಲಾಗಿದೆ' ಎಂದರು.

ಲಖಿಂಪುರ–ಖೇರಿ ಹಿಂಸಾಚಾರ ಪ್ರಕರಣ: 'ಸಮಾಜಘಾತುಕರಿಂದ ಬಿಜೆಪಿ ಕಾರ್ಯಕರ್ತರ ಹತ್ಯೆ'

2ನೇ ಎಫ್‌ಐಆರ್: ರೈತರ ಹತ್ಯೆ ಉಲ್ಲೇಖವಿಲ್ಲ

ಲಖಿಂಪುರ-ಖೇರಿ (ಪಿಟಿಐ): ಲಖಿಂಪುರ-ಖೇರಿಯಲ್ಲಿ ನಡೆದಿದ್ದ ಹಿಂಸಾಚಾರದ ಸಂಬಂಧ ಭಾನುವಾರ ಎರಡನೇ ಎಫ್‌ಐಆರ್ ದಾಖಲಿಸಲಾಗಿದೆ. ರೈತರ ಮಧ್ಯದಲ್ಲಿದ್ದ ಸಮಾಜಘಾತುಕ ವ್ಯಕ್ತಿಗಳು ಬಿಜೆಪಿ ಕಾರ್ಯಕರ್ತರನ್ನು ಹೊಡೆದು ಕೊಂದಿದ್ದಾರೆ ಎಂದು ಎಫ್‌ಐಆರ್‌ನಲ್ಲಿ ಆರೋಪಿಸಲಾಗಿದೆ. ಆದರೆ, ರೈತರ ಮೇಲೆ ವಾಹನ ನುಗ್ಗಿಸಿ ನಡೆಸಿದ ಹತ್ಯೆಯ ಬಗ್ಗೆ ಈ ಎಫ್‌ಐಆರ್‌ನಲ್ಲಿ ಒಂದು ಉಲ್ಲೇಖವೂ ಇಲ್ಲ.

ಅಕ್ಟೋಬರ್ 4ರಂದು ತಿಕೋನಿಯಾ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ. ಸುಮಿತ್ ಜೈಸ್ವಾಲ್ ಎಂಬ ಬಿಜೆಪಿ ಕಾರ್ಯಕರ್ತ ಈ ಎಫ್‌ಐಆರ್ ದಾಖಲಿಸಿದ್ದಾರೆ.

'ಘಟನೆ ನಡೆದ ದಿನ ನಾನು ಮತ್ತು ಕೆಲವು ಬಿಜೆಪಿ ಕಾರ್ಯಕರ್ತರು ಬಾನ್ವಿರ್‌ಪುರದಲ್ಲಿ ಆಯೋಜಿಸಲಾಗಿದ್ದ ಕುಸ್ತಿ ಪಂದ್ಯಾವಳಿಯ ಮುಖ್ಯ ಅತಿಥಿಯಾಗಿದ್ದ ಉಪಮುಖ್ಯಮಂತ್ರಿ ಕೇಶವ ಪ್ರಸಾದ್ ಮೌರ್ಯ ಅವರನ್ನು ಸ್ವಾಗತಿಸಲು ಥಾರ್ ಜೀಪ್‌ನಲ್ಲಿ ಹೋಗುತ್ತಿದ್ದೆವು. ಹರಿ ಓಂ ಥಾರ್ ಜೀಪ್ ಅನ್ನು ಚಲಾಯಿಸುತ್ತಿದ್ದರು. ಬಿಜೆಪಿ ಕಾರ್ಯಕರ್ತ ಶುಭಂ ಮಿಶ್ರಾ ಮತ್ತು ಶ್ಯಾಂ ಸುಂದರ್ ಥಾರ್‌ನಲ್ಲಿ ಕೂತಿದ್ದರು' ಎಂದು ಎಫ್‌ಐಆರ್‌ನಲ್ಲಿ ವಿವರಿಸಲಾಗಿದೆ.

'ನಾವು ಶಾಂತಿಯುತವಾಗಿಯೇ ಹೋಗುತ್ತಿದ್ದೆವು. ಇದ್ದಕ್ಕಿದ್ದಂತೆ ರೈತರ ಮಧ್ಯೆಯಿಂದ ಬಂದ ಕೆಲವು ಸಮಾಜಘಾತುಕರು ಬಿದಿರಿನ ದೊಣ್ಣೆಗಳಿಂದ ವಾಹನದ ಮೇಲೆ ದಾಳಿ ನಡೆಸಿದರು. ಗಾಯವಾದ ಕಾರಣ ಹರಿ ಓಂ ಜೀಪನ್ನು ನಿಲ್ಲಿಸಿದರು. ಅವರನ್ನು ಹೊರಗೆಳೆದ ಆರೋಪಿಗಳು ಬಿದಿರು ಮತ್ತು ಕತ್ತಿಯಿಂದ ಹೊಡೆದು ಕೊಂದರು. ಶ್ಯಾಂ ಸುಂದರ್ ಮತ್ತು ಶುಭಂ ಮಿಶ್ರಾ ಅವರಿಗೂ ಇದೇ ಗತಿಯಾಯಿತು. ನನ್ನ ಮೇಲೂ ಕಲ್ಲು ತೂರಲಾಯಿತು. ನಾನು ಹೇಗೋ ತಪ್ಪಿಸಿಕೊಂಡೆ. ಸಿಕ್ಕಿಬಿದ್ದಿದ್ದರೆ, ಅವರು ನನ್ನನ್ನೂ ಕೊಲ್ಲುತ್ತಿದ್ದರು' ಎಂದು ಅವರು ಎಫ್‌ಐಆರ್‌ನಲ್ಲಿ ವಿವರಿಸಲಾಗಿದೆ.

ಇದಕ್ಕೆಲ್ಲಾ ಸಾಕ್ಷಿಯಾಗಿದ್ದ ಪತ್ರಕರ್ತ ರಮಣ್ ಕಶ್ಯಪ್ ಅವರನ್ನೂ ಹೊಡೆದು ಕೊಲ್ಲಲಾಗಿದೆ ಎಂದು ಎಫ್‌ಐಆರ್‌ನಲ್ಲಿ ಆರೋಪಿಸಲಾಗಿದೆ.

ಈ ಎಫ್‌ಐಆರ್‌ನ ಅನ್ವಯ ಅನಾಮಧೇಯ ವ್ಯಕ್ತಿಗಳ ವಿರುದ್ಧ ಕೊಲೆ ಮತ್ತು ಮಾರಕಾಸ್ತ್ರದಿಂದ ಹಲ್ಲೆ ನಡೆಸಿರುವ ಪ್ರಕರಣ ದಾಖಲಿಸಲಾಗಿದೆ.

ಸುಮಿತ್ ದಾಖಲಿಸಿರುವ ಎಫ್‌ಐಆರ್‌ನಲ್ಲಿ, 'ದಾಳಿ ನಡೆಸಿದ ಕಾರಣ ಜೀಪನ್ನು ನಿಲ್ಲಿಸಲಾಯಿತು' ಎಂದು ಉಲ್ಲೇಖಿಸಿದ್ದಾರೆ. ಆದರೆ ವೈರಲ್ ಆಗಿರುವ ವಿಡಿಯೊದಲ್ಲಿ, ರೈತರ ಮೇಲೆ ಜೀಪ್ ನುಗ್ಗಿಸುತ್ತಿರುವುದು ದಾಖಲಾಗಿದೆ. ಈ ಬಗ್ಗೆ ಸುಮಿತ್ ತಮ್ಮ ಎಫ್‌ಐಆರ್‌ನಲ್ಲಿ ಉಲ್ಲೇಖವನ್ನೇ ಮಾಡಿಲ್ಲ.

ಜತೆಗೆ ಜೀಪ್‌ನಲ್ಲಿ, ಪ್ರಕರಣದ ಪ್ರಮುಖ ಆರೋಪಿ ಆಶಿಶ್ ಮಿಶ್ರಾ ಅವರು ಇದ್ದರೆ ಅಥವಾ ಇರಲಿಲ್ಲವೇ ಎಂಬುದರ ಬಗ್ಗೆಯೂ ಅವರು ಎಫ್‌ಐಆರ್‌ನಲ್ಲಿ ಉಲ್ಲೇಖಿಸಿಲ್ಲ.

ಪತ್ರಕರ್ತ ರಮಣ ಕಶ್ಯಪ್ ಅವರನ್ನು ರೈತರ ಗುಂಪಿನಲ್ಲಿ ಇದ್ದವರೇ ಹೊಡೆದು ಕೊಂದಿದ್ದಾರೆ ಎಂದು ಉಲ್ಲೇಖಿಸಿರುವುದಕ್ಕೆ, ರಮಣ ಅವರ ಕುಟುಂಬದವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. 'ನನ್ನ ಮಗ ಜೀಪಿಗೆ ಸಿಲುಕಿ ಮೃತಪಟ್ಟಿದ್ದಾನೆ. ಯಾರೂ ಅವನನ್ನು ಹೊಡೆದು ಕೊಂದಿಲ್ಲ' ಎಂದು ರಮಣ ಕಶ್ಯಪ್ ಅವರ ತಂದೆ ಹೇಳಿದ್ದಾರೆ.

ಚುನಾವಣಾ ಪ್ರಚಾರಕ್ಕೆ ಪ್ರಿಯಾಂಕಾ ಚಾಲನೆ

ವಾರಾಣಸಿಯಲ್ಲಿ 'ಕಿಸಾನ್ ನ್ಯಾಯ' ಯಾತ್ರೆ ಆರಂಭಕ್ಕೂ ಮುನ್ನ ಪ್ರಿಯಾಂಕಾ ಗಾಂಧಿ ಅವರು ಕಾಶಿ ವಿಶ್ವನಾಥ ದೇವಾಲಯದಲ್ಲಿ ಪೂಜೆ ಸಲ್ಲಿಸಿದರು –ಪಿಟಿಐ ಚಿತ್ರ

ಲಖನೌ: ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಗೆ ಇನ್ನೇನು ಐದು ತಿಂಗಳು ಬಾಕಿ ಇರುವಂತೆ, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ, ಚುನಾವಣಾ ಪ್ರಚಾರ ಸಮಾವೇಶಕ್ಕೆ ಭಾನುವಾರ ಚಾಲನೆ ನೀಡಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರ ಲೋಕಸಭಾ ಕ್ಷೇತ್ರವಾದ ವಾರಾಣಸಿಯಲ್ಲಿ ನಡೆದ ಸಮಾವೇಶದಲ್ಲಿ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಿದ ಅವರು, ಮಾತಿನುದ್ದಕ್ಕೂ ಮೋದಿ ವಿರುದ್ಧ ಹರಿಹಾಯ್ದರು.

ಇಂಧನ ದರ ಹೆಚ್ಚಳ, ಸಾರ್ವಜನಿಕ ಆಸ್ತಿ ನಗದೀಕರಣ, ರೈತರ ಹೋರಾಟದೆಡೆಗೆ ಕೇಂದ್ರ ಸರ್ಕಾರದ ಅಲಕ್ಷ್ಯ ವಿಷಯಗಳನ್ನು ಪ್ರಮುಖವಾಗಿ ಪ್ರಸ್ತಾಪಿಸಿ, ಬಿಜೆಪಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಬಿಜೆಪಿ ಮತ್ತು ಮೋದಿ ಅವರ ಶ್ರೀಮಂತ ಸ್ನೇಹಿತರಷ್ಟೇ ಈ ದೇಶದಲ್ಲಿ ಸುರಕ್ಷಿತವಾಗಿದ್ದಾರೆ ಎಂದರು.

'ಮೋದಿ, ರೈತರನ್ನು ಅವಮಾನಿಸುತ್ತಿದ್ದಾರೆ. ದೇಶದ ಅಮೂಲ್ಯ ಸಂಪತ್ತನ್ನು ತಮ್ಮ ಕೋಟ್ಯಧಿಪತಿ ಸ್ನೇಹಿತರಿಗೆ ಕವಡೆಕಾಸಿಗೆ ಮಾರುತ್ತಿದ್ದಾರೆ' ಎಂದು ಆರೋಪಿಸಿದರು.

ಲಖಿಂಪುರ ಖೇರಿಯಲ್ಲಿ ಪ್ರತಿಭಟನನಿರತ ರೈತರ ಮೇಲೆ ವಾಹನ ಹರಿಸಿದ ಪ್ರಕರಣದಲ್ಲಿ ಆರೋಪಿಯಾಗಿರುವ ಆಶಿಶ್ ಮಿಶ್ರಾ ಅವರ ತಂದೆ, ಕೇಂದ್ರ ಸಚಿವ ಮೇಲೆ ಅಜಯ್ ಮಿಶ್ರಾ ಅವರನ್ನು ಮೋದಿ ರಕ್ಷಿಸುತ್ತಿದ್ದಾರೆ ಎಂದೂ ಕಿಡಿಕಾರಿದರು. 'ಕಾರ್ಯಕ್ರಮವೊಂದರಲ್ಲಿ ಭಾಗಿಯಾಗಲು ಲಖನೌಗೆ ಬಂದ ಪ್ರಧಾನಿಗೆ, ಅಲ್ಲಿಂದ ಎರಡು ಗಂಟೆ ದಾರಿಯ ಲಖಿಂಪುರಕ್ಕೆ ಬರಲು ಸಮಯವಿರಲಿಲ್ಲ... ಅವರು, ಪ್ರತಿಭಟನೆ ನಡೆಸುತ್ತಿರುವ ರೈತರನ್ನು ಭಯೋತ್ಪಾದಕರು ಎನ್ನುತ್ತಾರೆ... ಅವರದೇ ಪಕ್ಷದ, ಉತ್ತರ ಪ್ರದೇಶ ಮುಖ್ಯಮಂತ್ರಿ, 'ಬೆಂಕಿ ಹಚ್ಚುವವರು' ಎಂದು ಹಣೆಪಟ್ಟಿ ಕಟ್ಟುತ್ತಾರೆ' ಎಂದು ವಾಗ್ದಾಳಿ ನಡೆಸಿದರು.

ಜಿಲ್ಲೆಯ ಜಗತ್‌ಪುರದಲ್ಲಿ ಸಮಾವೇಶ ಆಯೋಜಿಸಲಾಗಿತ್ತು.

'ಅಪರಾಧ ಪ್ರಕರಣದಲ್ಲಿ ಭಾಗಿಯಾದ ಆರೋಪಿಯೊಬ್ಬನಿಗೆ, ವಿಚಾರಣೆಗೆ ಬರುವಂತೆ ಪೊಲೀಸರು ಆಮಂತ್ರಣ ನೀಡಿದ್ದನ್ನು ನೀವು ಎಲ್ಲಿಯಾದರೂ ಕಂಡಿದ್ದೀರಾ? ಇದು ಜಗತ್ತಿನ ಬೇರೆ ಎಲ್ಲೋ ಆಗಿಲ್ಲ. ಉತ್ತರಪ್ರದೇಶದಲ್ಲಿಯೇ ಆಗುತ್ತಿದೆ' ಎಂದು ಯೋಗಿ ಆದಿತ್ಯನಾಥ ನೇತೃತ್ವದ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು. ಸಚಿವ ಅಜಯ್ ಮಿಶ್ರಾ ರಾಜೀನಾಮೆ ನೀಡಬೇಕು ಎಂಬ ಆಗ್ರಹವನ್ನು ತಮ್ಮ ಪಕ್ಷ ಮುಂದುವರಿಸಲಿದೆ ಎಂದ ಪ್ರಿಯಾಂಕಾ, 'ನಾವು ಯಾರಿಗೂ ಹೆದರುವುದಿಲ್ಲ. ನೀವು (ಸರ್ಕಾರ) ಬೇಕಿದ್ದರೆ ನಮ್ಮನ್ನು ಜೈಲಿನಲ್ಲಿಡಿ. ಸಚಿವರು ರಾಜೀನಾಮೆ ನೀಡುವವರೆಗೆ ನಾವು ನಮ್ಮ ಹೋರಾಟವನ್ನು ಮುಂದುವರಿಸುತ್ತೇವೆ. ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಪಕ್ಷ ನಮ್ಮದು. ಯಾರೂ ನಮ್ಮನ್ನು ಸುಮ್ಮನಿರಿಸಲಾರರು' ಎಂದು ಪ್ರಿಯಾಂಕಾ ಹೇಳಿದರು.

ಆಶಿಶ್ ಮಿಶ್ರಾಗೆ ವಿಐಪಿ ಸವಲತ್ತು?

ಲಖಿಂಪುರ ಖೇರಿ ರೈತರ ಹತ್ಯೆ ಪ್ರಕರಣದ ಪ್ರಮುಖ ಆರೋಪಿಯಾಗಿರುವ ಆಶಿಶ್ ಮಿಶ್ರಾರನ್ನು ಪೊಲೀಸರು ವಿಐಪಿಯಂತೆ ನೋಡಿಕೊಳ್ಳುತ್ತಿರುವುದು ಏಕೆ ಎಂದು ಹಲವರು ಪ್ರಶ್ನಿಸಿದ್ದಾರೆ.

ರೈತರ ಹತ್ಯೆ ಪ್ರಕರಣದ ಆರೋಪಿಯಾಗಿದ್ದರೂ, ಆಶಿಶ್ ಮಿಶ್ರಾಗೆ ಸಿಆರ್‌ಪಿಸಿಯ 160ನೇ ಸೆಕ್ಷನ್ ಅಡಿಯಲ್ಲಿ ನೋಟಿಸ್ ನೀಡಲಾಗಿದೆ. ಯಾವುದೇ ಪ್ರಕರಣಗಳಲ್ಲಿ ಸಾಕ್ಷಿಗಳಿಗೆ ಈ ಸೆಕ್ಷನ್ ಅಡಿಯಲ್ಲಿ ನೋಟಿಸ್ ನೀಡಲಾಗುತ್ತದೆ. ಆದರೆ ಪ್ರಮುಖ ಆರೋಪಿ ಆಶಿಶ್ ಮಿಶ್ರಾಗೆ ಈ ಸೆಕ್ಷನ್ ಅಡಿಯಲ್ಲಿ ನೋಟಿಸ್ ನೀಡಿರುವುದಕ್ಕೆ ಸಾಮಾಜಿಕ ಜಾಲತಾಣಗಳಲ್ಲಿ ತೀವ್ರ ಆಕ್ಷೇಪ ವ್ಯಕ್ತವಾಗಿದೆ. ಅಲ್ಲದೆ, ಶನಿವಾರ ವಿಚಾರಣೆಗೆ ಹಾಜರಾಗುವಾಗ ಆಶಿಶ್ ಮಿಶ್ರಾರನ್ನು ಪೊಲೀಸ್ ಬೆಂಗಾವಲಿನಲ್ಲಿ ಕರೆತರಲಾಗಿತ್ತು. ಇದಕ್ಕೂ ಸಾಮಾಜಿಕ ಜಾಲತಾಣಗಳಲ್ಲಿ ತೀವ್ರ ಆಕ್ಷೇಪ ವ್ಯಕ್ತವಾಗುತ್ತಿದೆ. ಕೇಂದ್ರ ಸಚಿವನ ಮಗನಾಗಿರುವ ಕಾರಣ ಮತ್ತು ಬ್ರಾಹ್ಮಣರ ಮತವನ್ನು ಉಳಿಸಿಕೊಳ್ಳಲು ಉತ್ತರ ಪ್ರದೇಶ ಸರ್ಕಾರ ಆಶಿಶ್‌ಗೆ ವಿಐಪಿ ಸವಲತ್ತು ನೀಡುತ್ತಿದೆ ಎಂದು ವಿರೋಧ ಪಕ್ಷಗಳೂ ಆರೋಪಿಸಿವೆ.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಮೈಸೂರು ದಸರಾ ನೇರ ಪ್ರಸಾರ Live
ಸಂಜೆ 6 ಪೊಲೀಸ್ ಬ್ಯಾಂಡ್
ಸಂಜೆ 7.30 ಜಾನಪದ ಗಾಯನ ಮೈಸೂರಿನ ಕ್ರಿಯಾ ಅಭಿವ್ಯಕ್ತಿ ತಂಡದ
ರಾತ್ರಿ 8.15 ದಾಸವಾಣಿ ರಾಯಚೂರಿನ ಶೇಷಗಿರಿ ದಾಸ
ಯಡಿಯೂರಪ್ಪ ಆಪ್ತರ ಮೇಲೆ ಐಟಿ ದಾಳಿಯ ಗುಟ್ಟೇನು?
ಭಾಗವಹಿಸುವವರು:
ಎಲ್.ಹನುಮಂತಯ್ಯ, ರಾಜ್ಯಸಭಾ ಸದಸ್ಯ, ಕಾಂಗ್ರೆಸ್
ವೆಂಕಟರಾವ್ ನಾಡಗೌಡ, ಶಾಸಕ, ಜೆಡಿಎಸ್
ನೆಲಮಂಗಲ ಸುರೇಶ, ವಕ್ತಾರ, ಬಿಜೆಪಿ
ನಾರಾಯಣ ಎ., ರಾಜಕೀಯ ವಿಶ್ಲೇಷಕ
ಸಂವಾದ ಮಧ್ಯಾಹ್ನ 11.30 ರಿಂದ 12.30
ಪಾಡ್‌ಕಾಸ್ಟ್: ಬೆಳಿಗ್ಗೆ 7 : ವಚನವಾಣಿ, ಬೆಳಿಗ್ಗೆ 7.30: ದಿನದ ಸೂಕ್ತಿ, ಬೆಳಿಗ್ಗೆ 8: ಪ್ರಜಾವಾಣಿ ವಾರ್ತೆ, ಬುಲೆಟಿನ್, ಬೆಳಿಗ್ಗೆ 9: ಪ್ರಚಲಿತ, ಬೆಳಿಗ್ಗೆ 9.30: ಸಂಪಾದಕೀಯ, ಮಧ್ಯಾಹ್ನ 2: ಪ್ರಜಾವಾಣಿ ವಾರ್ತೆ, ಬುಲೆಟಿನ್, ರಾತ್ರಿ 8: ಪ್ರಜಾವಾಣಿ ವಾರ್ತೆ, ಬುಲೆಟಿನ್
ಪ್ರಜಾವಾಣಿ ಕನ್ನಡ ಧ್ವನಿ

ಆಶಿಶ್ ಅವರನ್ನು ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸಲು ಪೊಲೀಸರು ಶನಿವಾರ ರಾತ್ರಿ ಕರೆದೊಯ್ದರು –ಪಿಟಿಐ ಚಿತ್ರ

ಆಶಿಶ್ ಮಿಶ್ರಾ ನ್ಯಾಯಾಂಗ ವಶಕ್ಕೆ

ಒಂದನೇ ಪುಟದಿಂದ...

ಆರೋಪಿಯನ್ನು ತನಿಖೆಗಾಗಿ ಪೊಲೀಸ್ ವಶಕ್ಕೆ ಒಪ್ಪಿಸುವಂತೆ ಮ್ಯಾಜಿಸ್ಟ್ರೇಟ್ ಅವರಿಗೆ ಮನವಿ ಸಲ್ಲಿಸಲಾಗಿದ್ದು, ಈ ಅರ್ಜಿಯ ವಿಚಾರಣೆ ಸೋಮವಾರ ನಿಗದಿಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಆಶಿಶ್ ಮಿಶ್ರಾ ಬಂಧನಕ್ಕೆ ರೈತ ನಾಯಕರು ಹಾಗೂ ವಿರೋಧ ಪಕ್ಷಗಳ ಮುಖಂಡರು ಆಗ್ರಹಿಸಿದ್ದರು. ಆದರೆ, ಸಚಿವ ಅಜಯ್ ಮಿಶ್ರಾ ಹಾಗೂ ಆಶಿಶ್ ಆರೋಪಗಳನ್ನು ಅಲ್ಲಗಳೆದಿದ್ದರು.

ಘಟನೆಯ ನಂತರ, ಉದ್ರಿಕ್ತ ಪ್ರತಿಭಟನಕಾರರು, ಬಿಜೆಪಿಯ ಇಬ್ಬರು ಕಾರ್ಯಕರ್ತರು ಹಾಗೂ ಅವರ ವಾಹನ ಚಾಲಕನನ್ನು ಹತ್ಯೆ ಮಾಡಿದ್ದಾಗಿ ಆರೋಪಿಸಲಾಗಿದೆ. ಹಿಂಸಾಚಾರದಲ್ಲಿ ಸ್ಥಳೀಯ ಪತ್ರಕರ್ತ ರಾಮನ್ ಕಶ್ಯಪ್ ಕೂಡ ಮೃತಪಟ್ಟಿದ್ದರು.

ಸ್ಥಳೀಯವಾಗಿ 'ಮೋನು ಭಯ್ಯಾ' ಎಂದು ಕರೆಸಿಕೊಳ್ಳುವ ಆಶಿಶ್ ಮಿಶ್ರಾ, ತಮ್ಮ ತಂದೆ ಪ್ರತಿನಿಧಿಸುವ ಖೇರಿ ಲೋಕಸಭಾ ಕ್ಷೇತ್ರದ ಉಸ್ತುವಾರಿ ನೋಡಿಕೊಳ್ಳುತ್ತಿದ್ದರು. ಎರಡು ಸಮನ್ಸ್‌ಗಳ ಬಳಿಕ ಶನಿವಾರ ಬೆಳಿಗ್ಗೆ ಹತ್ತೂವರೆ ವೇಳೆಗೆ ಎಸ್‌ಐಟಿ ಮುಂದೆ ಹಾಜರಾಗಿದ್ದ ಆರೋಪಿಯನ್ನು ಸತತ ವಿಚಾರಣೆಯ ನಂತರ, ರಾತ್ರಿ 11 ಗಂಟೆ ಹೊತ್ತಿಗೆ ಬಂಧಿಸಲಾಯಿತು. ಆರೋಪಿಯನ್ನು ರಾತ್ರಿ ಜಿಲ್ಲಾ ಕಾರಾಗೃಹದಲ್ಲಿ ಇರಿಸಲಾಗಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಕರಣದ ಆರೋಪಿಗಳನ್ನು ಬಂಧಿಸದೇ ಇರುವ ಬಗ್ಗೆ ಸುಪ್ರೀಂ ಕೋರ್ಟ್ ಶುಕ್ರವಾರ ರಾಜ್ಯ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿತ್ತು. ಸಾಕ್ಷ್ಯಗಳನ್ನು ಸಂರಕ್ಷಿಸಿ ಇಡಲು ನಿರ್ದೇಶಿಸಿದ್ದ ನ್ಯಾಯಾಲಯ, ತನಿಖೆಯನ್ನು ಬೇರೊಂದು ಸಂಸ್ಥೆಗೆ ವರ್ಗಾಯಿಸುವ ಚಿಂತನೆ ಇದೆ ಎಂದೂ ಹೇಳಿತ್ತು.

ತಮ್ಮ ಬೇಡಿಕೆಗಳಿಗೆ ಅ.11ರ ಒಳಗಾಗಿ ಸ್ಪಂದಿಸದಿದ್ದರೆ, ಲಖಿಂಪುರ–ಖೇರಿಯಲ್ಲಿ ಮೃತಪಟ್ಟ ರೈತರ ಅಸ್ಥಿಯೊಂದಿಗೆ 'ಶಹೀದ್ ಕಿಸಾನ್ ಯಾತ್ರಾ' ನಡೆಸುವುದಾಗಿ ರೈತ ಸಂಘಟನೆಗಳು ಹೇಳಿವೆ.

ಅ.18ರಂದು ಬೆಳಿಗ್ಗೆ 10ರಿಂದ ಸಂಜೆ 4ರವರೆಗೆ ರೈಲು ತಡೆ ಹಾಗೂ ಅ.26ರಂದು ಲಖನೌದಲ್ಲಿ ಮಹಾ ಪಂಚಾಯತ್ ನಡೆಸಲು ಸಂಯುಕ್ತ ಕಿಸಾನ್ ಮೋರ್ಚಾ ಕರೆ ನೀಡಿದೆ.

ಅಜಯ್ ಮಿಶ್ರಾ ಅವರನ್ನು ಸಂಪುಟದಿಂದ ವಜಾ ಮಾಡುವಂತೆ ಹಾಗೂ ಸೌಹಾರ್ದ ಕದಡಿದ, ಹತ್ಯೆ ಸಂಚು ರೂಪಿಸಿದ ಆರೋಪದಲ್ಲಿ ಬಂಧಿಸಬೇಕು ಎಂದು ಸಂಯುಕ್ತ ಕಿಸಾನ್ ಮೋರ್ಚಾ ನಾಯಕ ಯೋಗೇಂದ್ರ ಯಾದವ್ ಆಗ್ರಹಿಸಿದ್ದಾರೆ. ಈ ಪ್ರಕರಣದಲ್ಲಿ, ಅವರು ಆರೋಪಿಗಳ ರಕ್ಷಣೆಗೆ ನಿಂತಿದ್ದಾರೆ ಎಂದೂ ಯಾದವ್ ದೆಹಲಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದ್ದಾರೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಡಿಐಜಿ ಉಪೇಂದ್ರ ಅಗರ್ವಾಲ್ ನೇತೃತ್ವದ ಒಂಬತ್ತು ಸದಸ್ಯರ ವಿಶೇಷ ತನಿಖಾ ತಂಡವನ್ನು ರಚಿಸಲಾಗಿದೆ. ಗುರುವಾರ ಇಬ್ಬರನ್ನು ಬಂಧಿಸಿದ್ದ ಪೊಲೀಸರು, ವಿಚಾರಣೆಗೆ ಹಾಜರಾಗುವಂತೆ ಆಶಿಶ್ ಮಿಶ್ರಾ ಮನೆ ಮುಂದೆ ನೋಟಿಸ್ ಅಂಟಿಸಿದ್ದರು.

ದಲಿತ ಯುವಕನ ಹತ್ಯೆ: ಕಾಂಗ್ರೆಸ್ ಮೌನವೇಕೆ?– ಮಾಯಾವತಿ

ಲಖನೌ (ಪಿಟಿಐ): ರಾಜಸ್ಥಾನದ ಹನುಮಗಡದಲ್ಲಿ ದಲಿತ ಯುವಕನ ಮೇಲೆ ನಡೆದ ಮಾರಣಾಂತಿಕ ಹಲ್ಲೆ ಮತ್ತು ಹತ್ಯೆ ಬಗ್ಗೆ ಕಾಂಗ್ರೆಸ್ ಮೌನ ವಹಿಸಿದ್ದೇಕೆ ಎಂದು ಬಹುಜನ ಸಮಾಜ ಪಕ್ಷದ (ಬಿಎಸ್‌ಪಿ) ಅಧ್ಯಕ್ಷೆ ಮಾಯಾವತಿ ಪ್ರಶ್ನಿಸಿದ್ದಾರೆ.

ಹತ್ಯೆಯನ್ನು ಖಂಡಿಸಿರುವ ಅವರು, 'ರಾಜಸ್ಥಾನದ ಘಟನೆಯ ಬಗ್ಗೆ ಕಾಂಗ್ರೆಸ್ ಹೈಕಮಾಂಡ್ ಏಕೆ ಮೌನವಾಗಿದೆ?' ಎಂದು ಟ್ವೀಟ್ ಮಾಡಿದ್ದಾರೆ. ಪ್ರೇಮ ಪ್ರಕರಣವೊಂದರಲ್ಲಿ ದಲಿತ ಯುವಕನ ಮೇಲೆ ಅ.7ರಂದು ಗುಂಪೊಂದು ಹಲ್ಲೆ ನಡೆಸಿತ್ತು. ಗಂಭೀರವಾಗಿ ಗಾಯಗೊಂಡಿದ್ದ ವ್ಯಕ್ತಿ ಮೃತಪಟ್ಟಿದ್ದರು.

'ಪಂಜಾಬ್, ಛತ್ತೀಸಗಡ ಮುಖ್ಯಮಂತ್ರಿಗಳು ಅಲ್ಲಿಗೂ ಭೇಟಿ ನೀಡಿ, ಸಂತ್ರಸ್ತ ಕುಟುಂಬಕ್ಕೆ ₹50 ಲಕ್ಷ ಪರಿಹಾರ ನೀಡುವರೇ? ಇದಕ್ಕೆ ಉತ್ತರ ನೀಡಿ. ಇಲ್ಲದಿದ್ದರೆ ದಲಿತರ ಹೆಸರಿನಲ್ಲಿ ಮೊಸಳೆ ಕಣ್ಣೀರು ಹಾಕುವುದನ್ನು ಬಿಡಿ' ಎಂದು ಕಿಡಿಕಾರಿದ್ದಾರೆ.

ಲಖಿಂಪುರ ಪ್ರಕರಣದ ಬಗ್ಗೆ ಟ್ವೀಟ್ ಮಾಡಿರುವ ಅವರು, ಇದು ಬಿಜೆಪಿ ಸರ್ಕಾರದ ಕಾರ್ಯವಿಧಾನವನ್ನು ತೋರಿಸುತ್ತದೆ ಎಂದು ಟೀಕಿಸಿದ್ದಾರೆ. ಸಚಿವ ಅಜಯ್ ಮಿಶ್ರಾ ಅವರನ್ನು ವಜಾ ಮಾಡಬೇಕು ಎಂದು ಆಗ್ರಹಿಸಿರುವ ಅವರು, ಆಗಷ್ಟೇ ರೈತರಿಗೆ ನ್ಯಾಯ ಸಿಗುವ ಭರವಸೆ ಇದೆ ಎಂದಿದ್ದಾರೆ.

ಹಿಂದೂ–ಸಿಖ್ ಕದನವೆಂಬಂತೆ ಬಿಂಬಿಸುವ ಪ್ರಯತ್ನ: ವರುಣ್ ಗಾಂಧಿ ಎಚ್ಚರಿಕೆ

ನವದೆಹಲಿ (ಪಿಟಿಐ): ಲಖಿಂಪುರ ಖೇರಿ ಘಟನೆಯನ್ನು ಹಿಂದೂ ಮತ್ತು ಸಿಖ್ಖರ ನಡುವಿನ ಕದನ ಎಂಬಂತೆ ಬಿಂಬಿಸುತ್ತಿರುವುದರ ಬಗ್ಗೆ ಆತಂಕ ವ್ಯಕ್ತಪಡಿಸಿರುವ ಬಿಜೆಪಿ ಸಂಸದ ವರುಣ್ ಗಾಂಧಿ, ಇಂಥ ಬಿರುಕುಗಳನ್ನು ಸೃಷ್ಟಿಸುವುದು ಅಪಾಯಕಾರಿಯಷ್ಟೇ ಅಲ್ಲ, ಮಾಗಿದ ಗಾಯಗಳನ್ನು ಮತ್ತೆ ಕೆರೆಯುವ ಪ್ರಯತ್ನ ಎಂದು ಎಚ್ಚರಿಸಿದ್ದಾರೆ. ಪ್ರತಿಭಟನೆ ನಡೆಸುತ್ತಿರುವ ರೈತರಿಗೆ 'ಖಲಿಸ್ತಾನಿ' ಎಂಬ ಪದ ಬಳಸುವುದು, ತಲೆತಲಾಂತರಗಳಿಂದ ಗಡಿ ರಕ್ಷಣೆಗಾಗಿ ಹೋರಾಡಿ, ತಮ್ಮ ರಕ್ತ ಬಸಿದ ಹೆಮ್ಮೆಯ ಪುತ್ರರ ತಲೆಮಾರುಗಳಿಗೆ ಮಾಡಿದ ಅವಮಾನವಷ್ಟೇ ಅಲ್ಲ; ಇಂಥ ಪ್ರಚೋದನೆಯು ತಪ್ಪು ಪ್ರತಿಕ್ರಿಯೆಗೆ ಕಾರಣವಾಗಿ ರಾಷ್ಟ್ರೀಯ ಏಕತೆಗೆ ಅಪಾಯಕಾರಿಯೂ ಆಗಬಲ್ಲದು ಎಂದು ವರುಣ್ ಆತಂಕ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಟ್ವೀಟ್ ಮಾಡಿರುವ ಅವರು, ಹಿಂದೂ–ಸಿಖ್ ಭೇದ ಹುಟ್ಟಿಸುವ ಪ್ರಯತ್ನ ತಪ್ಪು ಹಾಗೂ ಅನೈತಿಕವೂ ಆಗಿದೆ. ಯಾವ ಗಾಯ ಮಾಯಬೇಕಾದರೆ ತಲೆಮಾರುಗಳೇ ಬೇಕಾದವೋ ಆ ಗಾಯವನ್ನು ಮತ್ತೆ ಕೆದಕುವ ಅಪಾಯಕಾರಿ ನಡೆ. ಕ್ಷುಲ್ಲಕ ರಾಜಕೀಯ ಲಾಭಕ್ಕಾಗಿ ದೇಶದ ಅಖಂಡತೆಯನ್ನು ಬಲಿ ಕೊಡಬಾರದು ಎಂದಿದ್ದಾರೆ. ಕೇಂದ್ರದ ಕೃಷಿ ಕಾಯ್ದೆಗಳನ್ನು ವಿರೋಧಿಸಿ ರೈತರು ನಡೆಸುತ್ತಿರುವ ಪ್ರತಿಭಟನೆಯ ಉದ್ದೇಶದೊಂದಿಗೆ ಸಹಾನುಭೂತಿ ಇರುವ ವರುಣ್, ಅವರಿಗೆ ಬೆಂಬಲ ವ್ಯಕ್ತಪಡಿಸಿ ಆಗಾಗ ಟ್ವೀಟ್ ಕೂಡ ಮಾಡಿದ್ದಾರೆ. ಅವರ ಈ ನಿಲುವು ಬಿಜೆಪಿ ನಾಯಕತ್ವಕ್ಕೆ ಅಪಥ್ಯವೆನಿಸಿದೆ. ಫಿಲಿಬಿತ್ ಸಂಸದರಾಗಿರುವ ವರುಣ್ ಅವರನ್ನು, ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿಯಿಂದ ಇತ್ತೀಚೆಗಷ್ಟೇ ಕೈಬಿಡಲಾಗಿದೆ.

ರಾಷ್ಟ್ರಪತಿ ಭೇಟಿಗೆ ಮುಂದಾದ ಕಾಂಗ್ರೆಸ್

ನವದೆಹಲಿ: ಲಖಿಂಪುರ ಖೇರಿ ಹಿಂಸಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ, ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರ ಭೇಟಿಗೆ ಅನುಮತಿ ಕೋರಿ ಕಾಂಗ್ರೆಸ್ ಪತ್ರ ಬರೆದಿದೆ.

ಲಖಿಂಪುರ ಖೇರಿ ಪ್ರಕರಣವನ್ನು 'ಹಾಡಹಗಲೇ ನಡೆದ ರೈತರ ಸಾಮೂಹಿಕ ಹತ್ಯೆ' ಎಂದಿರುವ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ಅದಕ್ಕೆ ಸಂಬಂಧಿಸಿದ ನಿಜಾಂಶಗಳ ವಿಸ್ತೃತ ಟಿಪ್ಪಣಿಯನ್ನು ರಾಷ್ಟ್ರಪತಿಗೆ ಸಲ್ಲಿಸಬೇಕಿದೆ' ಎಂದು ಹೇಳಿದ್ದಾರೆ.

ಸಾಧಾರಣ ಅಪರಾಧವಲ್ಲ: ಖುರ್ಷಿದ್

ಲಖನೌ (ಪಿಟಿಐ): ಲಖಿಂಪುರ–ಖೇರಿಯಲ್ಲಿನ ಹಿಂಸಾಚಾರ ಪ್ರಕರಣವು ಸಾಧಾರಣವಾದ ಅಪರಾಧವಲ್ಲ; ಅದೊಂದು ದುರಂತ ಎಂದು ಕಾಂಗ್ರೆಸ್‌ನ ಮುಖಂಡ ಸಲ್ಮಾನ್ ಖುರ್ಷಿದ್ ಹೇಳಿದ್ದಾರೆ.



'ಪ್ರಜಾಸತ್ತಾತ್ಮಕವಾಗಿ ನಡೆಯುತ್ತಿದ್ದ ರೈತರ ಪ್ರತಿಭಟನೆಯ ಬಗೆಗಿನ ಕ್ರೂರ ಮನೋಭಾವವು ಅ.3ರ ದುರಂತಕ್ಕೆ ಕಾರಣ. ಇದೇ ಮನೋಭಾವ ಮುಂದುವರಿದಲ್ಲಿ, ಅದು ಭಾರತೀಯ ಪ್ರಜಾಸತ್ತೆಗೆ ಮಾರಕವಾಗಲಿದೆ. ಇದರ ವಿರುದ್ಧ ಎಲ್ಲರೂ ಒಗ್ಗಟ್ಟಿನಿಂದ ಹೋರಾಡುವ ಅಗತ್ಯವಿದೆ' ಎಂದಿದ್ದಾರೆ. ಅಲ್ಲದೇ ಯಾರೊಬ್ಬರೂ ಇಂಥದೊಂದು ದುರಂತದಿಂದ ಲಾಭ ಮಾಡಿಕೊಳ್ಳಲು ಮುಂದಾಗಬಾರದು ಎಂದೂ ಅವರು ಹೇಳಿದ್ದಾರೆ.

ಹಡಗಿನಲ್ಲಿ ಡ್ರಗ್ಸ್ ಪ್ರಕರಣ ನೈಜೀರಿಯಾ ಪ್ರಜೆ ಬಂಧನ

ಮುಂಬೈ (ಪಿಟಿಐ): ಹಡಗಿನಲ್ಲಿ ಮಾದಕವಸ್ತು ಪ್ರಕರಣಕ್ಕೆ ಸಂಬಂಧಿಸಿ ಎನ್‌ಸಿಬಿ ಅಧಿಕಾರಿಗಳು ಶನಿವಾರ ನೈಜೀರಿಯಾದ ಪ್ರಜೆ ಒಕಾರೊ ಖುಜಾಮಾನನ್ನು ಬಂಧಿಸಿದ್ದಾರೆ. ಈತ ಪ್ರಕರಣದಲ್ಲಿ ಬಂಧನವಾದ ನೈಜೀರಿಯಾದ ಎರಡನೇ ಪ್ರಜೆ.

ಬಂಧಿತ ನೈಜೀರಿಯಾ ಪ್ರಜೆಯಿಂದ ಕೊಕೈನ್ ವಶಪಡಿಸಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಪ್ರಕರಣ ಸಂಬಂಧ ಈವರೆಗೆ ಬಾಲಿವುಡ್ ನಟ ಶಾರುಕ್ ಖಾನ್ ಪುತ್ರ ಆರ್ಯನ್ ಖಾನ್ ಸೇರಿದಂತೆ ಒಟ್ಟು 20 ಜನರ ಬಂಧನವಾದಂತಾಗಿದೆ.

ಮಾಹಿತಿಯನ್ನು ಆಧರಿಸಿ ಪ್ರಕರಣದಲ್ಲಿ ವಿದೇಶಿಯರ ಕೈವಾಡ ಇರುವುದರ ಪತ್ತೆಗೆ ಎನ್‌ಸಿಬಿ ಕಾರ್ಯತತ್ಪರವಾಗಿದೆ. ಮಹಾರಾಷ್ಟ್ರದ ಸಚಿವ ನವಾಬ್ ಮಲ್ಲಿಕ್ ಅವರು 'ದಾಳಿಯಲ್ಲಿ ಇಬ್ಬರು ಹೊರಗಿನವರ ಪಾತ್ರವಿದೆ' ಎಂದು ಆರೋಪಿಸಿದ್ದರು.

'ವಿದ್ಯುತ್ ಬಳಕೆ ಇಳಿಕೆ, ಕಲ್ಲಿದ್ದಲು ಕೊರತೆ ಇಲ್ಲ'

ನವದೆಹಲಿ (ಪಿಟಿಐ): ದೇಶದಲ್ಲಿ ಶನಿವಾರ ವಿದ್ಯುತ್ ಬಳಕೆ ಶೇ 2ರಷ್ಟು ಇಳಿಕೆಯಾಗಿದೆ. ಜತೆಗೆ ಉಷ್ಣ ವಿದ್ಯುತ್ ಸ್ಥಾವರಗಳಿಗೆ ಕಲ್ಲಿದ್ದಲು ಪೂರೈಕೆಯಾಗುತ್ತಿದೆ. ಪರಿಸ್ಥಿತಿ ಸುಧಾರಿಸುತ್ತಿದೆ. ಹೀಗಾಗಿ ಕಲ್ಲಿದ್ದಲು ಕೊರತೆಯಿಂದ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗುತ್ತದೆ ಎಂದು ಯಾರೂ ಆತಂಕ ಪಡುವ ಅವಶ್ಯಕತೆ ಇಲ್ಲ ಎಂದು ಕೇಂದ್ರ ಇಂಧನ ಸಚಿವಾಲಯ ಮತ್ತು ಕಲ್ಲಿದ್ದಲು ಸಚಿವಾಲಯ ಹೇಳಿವೆ.

ಕಲ್ಲಿದ್ದಲು ಕೊರತೆಯಿಂದ ವಿದ್ಯುತ್ ಉತ್ಪಾದನೆ ಕುಂಠಿತವಾಗಿದೆ ಎಂದು ಹಲವು ರಾಜ್ಯಗಳು ಇಂಧನ ಸಚಿವಾಲಯವನ್ನು ಎಡತಾಕಿರುವ ಬೆನ್ನಲ್ಲೇ, ಸಚಿವಾಲಯವು ಈ ಸ್ಪಷ್ಟನೆ ನೀಡಿದೆ. ಅಗತ್ಯವಿರುವವರು ನನಗೆ ಮನವಿ ಸಲ್ಲಿಸಲು, ಅಗತ್ಯವಿರುವಷ್ಟು ಕಲ್ಲಿದ್ದಲು ಮತ್ತು ವಿದ್ಯುತ್ ಪೂರೈಸುತ್ತೇನೆ ಎಂದು ಇಂಧನ ಸಚಿವ ಆರ್.ಕೆ.ಸಿಂಗ್ ಹೇಳಿದ್ದಾರೆ.

ಶುಕ್ರವಾರ 390 ಕೋಟಿ ಯುನಿಟ್‌ಗಳಷ್ಟು ವಿದ್ಯುತ್ ಬಳಕೆಯಾಗಿದೆ. ದೇಶದಲ್ಲಿ ಆರ್ಥಿಕತೆ ಚೇತರಿಸಿಕೊಳ್ಳುತ್ತಿದ್ದು, ಹೀಗಾಗಿ ವಿದ್ಯುತ್ ಬಳಕೆ ಏರಿಕೆಯಾಗಿದೆ. ಇದೇ ಸಂದರ್ಭದಲ್ಲಿ ಕಲ್ಲಿದ್ದಲು ಕೊರತೆಯಾದ ಕಾರಣ ಈ ಪರಿಸ್ಥಿತಿ ಬಂದಿದೆ. ಆದರೆ ಶನಿವಾರ 382 ಕೋಟಿ ಯುನಿಟ್‌ಗಳಷ್ಟು ವಿದ್ಯುತ್ ಮಾತ್ರ ಬಳಕೆಯಾಗಿದೆ. ವಿದ್ಯುತ್‌ಗೆ ಬೇಡಿಕೆ ಕಡಿಮೆಯಾಗಿದೆ. ಹೀಗಾಗಿ ಈಗ ಇರುವ ಕಲ್ಲಿದ್ದಲು ದಾಸ್ತಾನಿನಲ್ಲಿ, ಅಗತ್ಯವಿರುವಷ್ಟು ವಿದ್ಯುತ್ ಉತ್ಪಾದಿಸಲಾಗುತ್ತದೆ ಎಂದು ಸಚಿವಾಲಯವು ಹೇಳಿದೆ.

ದೇಶದಲ್ಲಿ ಅಗತ್ಯವಿರುವಷ್ಟು ಕಲ್ಲಿದ್ದಲಿನ ಸಂಗ್ರಹವಿದೆ ಎಂದು ಕಲ್ಲಿದ್ದಲು ಸಚಿವಾಲಯ ಸಹ ಹೇಳಿದೆ. ಇಂಧನ ಸಚಿವ ಆರ್.ಕೆ.ಸಿಂಗ್ ಮತ್ತು ಕಲ್ಲಿದ್ದಲು ಸಚಿವ ಪ್ರಲ್ಹಾದ ಜೋಷಿ ಅವರು ಕಲ್ಲಿದ್ದಲು ಕಂಪನಿಗಳು ಮತ್ತು ವಿದ್ಯುತ್ ಉತ್ಪಾದನಾ ಕಂಪನಿಗಳ ಜತೆಗೆ ಪ್ರತ್ಯೇಕ ಸಭೆ ನಡೆಸಿದ್ದಾರೆ.

ಮುಖ್ಯಾಂಶಗಳು

- ಪಂಜಾಬ್‌ನಲ್ಲಿ ವಿದ್ಯುತ್ ಉತ್ಪಾದನೆ ಸ್ಥಗಿತಗೊಳಿಸಿದ ಹಲವು ಸ್ಥಾವರಗಳು
- ಜಗನ್ ಮೋಹನ್ ರೆಡ್ಡಿ, ಪ್ರಧಾನಿಗೆ ಅರವಿಂದ ಕೇಜ್ರಿವಾಲ್ ಪತ್ರ
- ಕಲ್ಲಿದ್ದಲು ಪೂರೈಸುವಂತೆ ಇಬ್ಬರೂ ಮುಖ್ಯಮಂತ್ರಿಗಳ ಒತ್ತಾಯ

ಬೇಡಿಕೆಗಿಂತ ಕಡಿಮೆ ಪೂರೈಕೆ

ದೇಶದ ಎಲ್ಲಾ ಉಷ್ಣ ವಿದ್ಯುತ್ ಸ್ಥಾವರಗಳಲ್ಲಿ ಪ್ರತಿದಿನ 18.5 ಲಕ್ಷ ಟನ್‌ನಷ್ಟು ಕಲ್ಲಿದ್ದಲು ಬಳಸಲಾಗುತ್ತಿದೆ. ಆದರೆ 17.5 ಲಕ್ಷ ಟನ್‌ಗಳಷ್ಟು ಕಲ್ಲಿದ್ದಲನ್ನು ಮಾತ್ರ ಪೂರೈಕೆ ಮಾಡಲಾಗುತ್ತಿದೆ ಎಂದು ಇಂಧನ ಸಚಿವಾಲಯವು ಭಾನುವಾರ ಪ್ರೆಸ್ ಇನ್ಫರ್ಮೇಷನ್ ಬ್ಯೂರೊ ಮೂಲಕ ಬಿಡುಗಡೆ ಮಾಡಿರುವ ಪತ್ರಿಕಾ ಪ್ರಕಟಣೆಯಲ್ಲಿ ವಿವರಿಸಿದೆ.

ಸಚಿವಾಲಯದ ಪ್ರಕಟಣೆಯ ಅನ್ವಯವೇ ದೇಶದ ಎಲ್ಲಾ ಸ್ಥಾವರಗಳಲ್ಲಿ ಪ್ರತಿದಿನ ಅಗತ್ಯಕ್ಕಿಂತ 1 ಲಕ್ಷ ಟನ್‌ಗಳಷ್ಟು ಕಲ್ಲಿದ್ದಲು ಕಡಿಮೆ ಪೂರೈಕೆಯಾಗುತ್ತಿದೆ. ಸ್ಥಾವರಗಳ ಸಂಗ್ರಹದಲ್ಲಿ ಇದ್ದ ಕಲ್ಲಿದ್ದಲನ್ನು, ಈ ಕೊರತೆ ತುಂಬಲು ಬಳಸಲಾಗಿದೆ. ಹೀಗಾಗಿ ಸಂಗ್ರಹ ಕರಗುತ್ತಾ ಬಂದಿದೆ. ಪೂರೈಕೆಯೂ ಸಾಮಾನ್ಯ ಸ್ಥಿತಿಗೆ ಮರಳದೇ ಇರುವ ಕಾರಣ ಕೊರತೆ ಕಾಡಲಾರಂಭಿಸಿದೆ.

ದೇಶದ ಎಲ್ಲಾ ಸ್ಥಾವರಗಳಲ್ಲಿ 72 ಲಕ್ಷ ಟನ್‌ನಷ್ಟು ಕಲ್ಲಿದ್ದಲಿನ ಸಂಗ್ರಹವಿದೆ. ಇದು ಇನ್ನೂ ನಾಲ್ಕು ದಿನಕ್ಕೆ ಸಾಕಾಗುತ್ತದೆ. ಕೋಲ್ ಇಂಡಿಯಾ ಲಿಮಿಟೆಡ್ ಈಗಾಗಲೇ 400 ಲಕ್ಷ ಟನ್ ಕಲ್ಲಿದ್ದಲನ್ನು ಉತ್ಪಾದಿಸಿದ್ದು, ಅದನ್ನು ಶೀಘ್ರವೇ ಉಷ್ಣ ವಿದ್ಯುತ್ ಸ್ಥಾವರಗಳಿಗೆ ಪೂರೈಸಲಿದೆ ಎಂದು ಸಚಿವಾಲಯವು ಹೇಳಿದೆ.

ಎರಡು ದಿನದಲ್ಲಿ ದೆಹಲಿಗೆ ಕಲ್ಲಿದ್ದಲು ಪೂರೈಕೆ ಸುಧಾರಿಸದೇ ಇದ್ದರೆ, ರಾಷ್ಟ್ರ ರಾಜಧಾನಿ ಕತ್ತಲೆಯಲ್ಲಿ ಮುಳುಗಬೇಕಾಗುತ್ತದೆ.
ಅರವಿಂದ ಕೇಜ್ರಿವಾಲ್, ದೆಹಲಿ ಮುಖ್ಯಮಂತ್ರಿ

ದೇಶದಲ್ಲಿ ಕಲ್ಲಿದ್ದಲಿನ ಕೊರತೆ ಇಲ್ಲ. ಕಲ್ಲಿದ್ದಲು ಕೊರತೆಯಾಗಿದೆ ಎಂಬ ತುರ್ತುಸ್ಥಿತಿಯನ್ನು ವಿರೋಧ ಪಕ್ಷಗಳು ಅನಗತ್ಯವಾಗಿ ಸೃಷ್ಟಿಸಿವೆ
ಆರ್.ಕೆ.ಸಿಂಗ್, ಕೇಂದ್ರ ಇಂಧನ ಸಚಿವ

ಆಮ್ಲಜನಕ ಕೊರತೆಯಾಗಿದ್ದಾಗಲೂ ಕೇಂದ್ರ ಸರ್ಕಾರವು ಆಮ್ಲಜನಕ ಕೊರತೆ ಇಲ್ಲ ಎಂದಿತ್ತು. ಈಗ ಕಲ್ಲಿದ್ದಲು ಕೊರತೆಯ ಸಂದರ್ಭದಲ್ಲೂ ಇದೇ ಮಾತು ಹೇಳುತ್ತಿದೆ
ಮನೀಷ್ ಸಿಸೋಡಿಯಾ, ದೆಹಲಿ ಉಪಮುಖ್ಯಮಂತ್ರಿ

ರಾಷ್ಟ್ರ ರಾಜಕಾರಣ ನಿರಾಕರಣೆ ಸಿದ್ದರಾಮಯ್ಯ ಬಗ್ಗೆ ಬೇಸರ

ಸೋನಿಯಾ ಗಾಂಧಿ

ನವದೆಹಲಿ: ರಾಷ್ಟ್ರ ರಾಜಕಾರಣಕ್ಕೆ ಬರುವಂತೆ ಇರಿಸಿದ್ದ ಪ್ರಸ್ತಾಪವನ್ನು ಸಿದ್ದರಾಮಯ್ಯ ಅವರು ತಿರಸ್ಕರಿಸಿರುವುದು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ಬೇಸರ ತರಿಸಿದೆ. ಸಿದ್ದರಾಮಯ್ಯ ಅವರಿಂದ ಇಂತಹ ಪ್ರಬಲ ಪ್ರತಿಕ್ರಿಯೆಯನ್ನು ಸೋನಿಯಾ ಗಾಂಧಿ ನಿರೀಕ್ಷಿಸಿರಲಿಲ್ಲ ಮತ್ತು ಅವರ ಹಟಮಾರಿ ಧೋರಣೆಯು ನಾಯಕತ್ವವನ್ನು ಅಚ್ಚರಿಗೊಳಿಸಿದೆ ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ.

ಸೋನಿಯಾ ಗಾಂಧಿ ಅವರು ಎರಡು ಉದ್ದೇಶಗಳನ್ನು ಇಟ್ಟುಕೊಂಡು ಸಿದ್ದರಾಮಯ್ಯ ಅವರನ್ನು ದೆಹಲಿಗೆ ಕರೆತರಲು ಪ್ರಯತ್ನಿಸಿದ್ದರು. ಕರ್ನಾಟಕ ಕಾಂಗ್ರೆಸ್ ಘಟಕದ ಮುಖ್ಯಸ್ಥ ಡಿ.ಕೆ. ಶಿವಕುಮಾರ್ ಅವರೊಂದಿಗಿನ ಮುಸುಕಿನ ಗುದ್ದಾಟ ಕೊನೆಗೊಳಿಸುವುದು ಹಾಗೂ ಪಕ್ಷದ ಹಿರಿಯರನ್ನು ರಾಷ್ಟ್ರ ರಾಜಕಾರಣಕ್ಕೆ ಕರೆತಂದು ರಾಜ್ಯ ನಾಯಕತ್ವವನ್ನು ಯುವಕರಿಗೆ ಬಿಟ್ಟುಕೊಡುವ ರಾಹುಲ್ ಗಾಂಧಿ ಅವರ ಯೋಜನೆಯನ್ನು ಸಾಕಾರಗೊಳಿಸುವ ಉದ್ದೇಶ ಅವರದ್ದಾಗಿತ್ತು.

ಸಿದ್ದರಾಮಯ್ಯ ಅವರಿಗೆ ಒಂದು ಪ್ರಮುಖ ರಾಜ್ಯದ ಉಸ್ತುವಾರಿಯೊಂದಿಗೆ ಎಐಸಿಸಿ ಪ್ರಧಾನ ಕಾರ್ಯದರ್ಶಿಯಾಗಿ ಅಧಿಕಾರ ವಹಿಸಿಕೊಳ್ಳುವಂತೆ ಕೇಳಿಕೊಳ್ಳಲಾಗಿತ್ತು. ಪಕ್ಷದ ಕಾರ್ಯಾಧ್ಯಕ್ಷರಲ್ಲಿ ಒಬ್ಬರನ್ನಾಗಿ ನೇಮಿಸುವ ಪ್ರಸ್ತಾಪವನ್ನೂ ಇರಿಸಿದ್ದರು.

ಪಕ್ಷದ ಪುನರುಜ್ಜೀವನ ಯೋಜನೆಯ ಪ್ರಕಾರ, ದೇಶದ ವಿವಿಧ ಪ್ರದೇಶಗಳನ್ನು ಪ್ರತಿನಿಧಿಸುವ ಮೂರ್ನಾಲ್ಕು ಕಾರ್ಯಾಧ್ಯಕ್ಷರೊಂದಿಗೆ ರಾಹುಲ್ ಗಾಂಧಿ ಅವರನ್ನು ಮತ್ತೆ ರಾಷ್ಟ್ರೀಯ ಅಧ್ಯಕ್ಷರಾಗಿ ನಿಯೋಜಿಸುವ ಉದ್ದೇಶವಿತ್ತು.

ಮತ್ತೆ ಮುಖ್ಯಮಂತ್ರಿ ಹುದ್ದೆಯ ಮಹತ್ವಾಕಾಂಕ್ಷೆ ಹೊಂದಿರುವ ಸಿದ್ದರಾಮಯ್ಯ ಅವರು, ಪ್ರಸ್ತುತ ರಾಷ್ಟ್ರೀಯ ಮಟ್ಟದಲ್ಲಿ ದುರ್ಬಲವಾಗಿರುವ ಪಕ್ಷದ ಕೆಲಸವನ್ನು ಕೈಗೆತ್ತಿಕೊಳ್ಳುವುದರಿಂದ ಯಾವುದೇ ಪ್ರಯೋಜನವಿಲ್ಲ ಎಂದು ತಮ್ಮ ಆಪ್ತರ ಬಳಿ ಹೇಳಿಕೊಂಡಿದ್ದಾರೆ ಎಂದು ತಿಳಿದುಬಂದಿದೆ.

ತಮಿಳುನಾಡಿನ ಎರಡು ಉದ್ಯಮ ಸಮೂಹಗಳಿಗೆ ಸೇರಿದ ಸ್ಥಳಗಳ ಮೇಲೆ ಇತ್ತೀಚೆಗೆ ನಡೆಸಿದ ಶೋಧ ಕಾರ್ಯ ಸಂದರ್ಭದಲ್ಲಿ ₹250 ಕೋಟಿ ಕಪ್ಪುಹಣ ಪತ್ತೆ

'ತಮಿಳುನಾಡು: ₹ 250 ಕೋಟಿ ಕಪ್ಪುಹಣ ಪತ್ತೆ'

ನವದೆಹಲಿ (ಪಿಟಿಐ): ತಮಿಳುನಾಡಿನ ಎರಡು ಉದ್ಯಮ ಸಮೂಹಗಳಿಗೆ ಸೇರಿದ ಸ್ಥಳಗಳಲ್ಲಿ ಇತ್ತೀಚೆಗೆ ನಡೆಸಿದ ಶೋಧ ಕಾರ್ಯ ಸಂದರ್ಭದಲ್ಲಿ ₹250 ಕೋಟಿ ಕಪ್ಪುಹಣ ಪತ್ತೆ ಮಾಡಲಾಗಿದೆ ಎಂದು ಆದಾಯ ತೆರಿಗೆ ಇಲಾಖೆ ಭಾನುವಾರ ತಿಳಿಸಿದೆ.

ಈ ಉದ್ಯಮ ಸಮೂಹಗಳು ರೇಷ್ಮೆ ಸೀರೆಗಳ ವ್ಯಾಪಾರ ಹಾಗೂ ಚಿಟ್ ಫಂಡ್ ವ್ಯವಹಾರ ನಡೆಸುತ್ತಿವೆ. ಕಾಂಚಿಪುರ, ವೆಲ್ಲೂರ್ ಹಾಗೂ ಚೆನ್ನೈನ 34 ಸ್ಥಳಗಳಲ್ಲಿ ಅಕ್ಟೋಬರ್ 5ರಂದು ಶೋಧ ಕಾರ್ಯ ಕೈಗೊಳ್ಳಲಾಗಿತ್ತು ಎಂದು ಇಲಾಖೆ ತಿಳಿಸಿದೆ.

'ಚಿಟ್ ಫಂಡ್ ನಡೆಸುತ್ತಿರುವ ಸಮೂಹವು ಅಕ್ರಮ ವ್ಯವಹಾರದಲ್ಲಿಯೂ ತೊಡಗಿದೆ. ಕಳೆದ ಹಲವು ವರ್ಷಗಳಲ್ಲಿ ಸಮೂಹ ಮಾಡಿರುವ ಹೂಡಿಕೆ ಹಾಗೂ ಪಾವತಿಸಿದ ಮೊತ್ತ ₹ 400 ಕೋಟಿಗೂ ಅಧಿಕ' ಎಂದು ಇಲಾಖೆ ಬಿಡುಗಡೆ ಮಾಡಿರುವ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

'ಈ ಸಮೂಹವು ಕಮಿಷನ್ ಹಾಗೂ ಡಿವಿಡೆಂಡ್ ರೂಪದಲ್ಲಿ ಆದಾಯ ಗಳಿಸಿದ್ದು, ಇದಕ್ಕೆ ಯಾವುದೇ ಲೆಕ್ಕಪತ್ರ ಇಲ್ಲ' ಎಂದೂ ಪ್ರಕಟಣೆ ತಿಳಿಸಿದೆ. 'ಲೆಕ್ಕಪತ್ರ ಇರದ ₹ 1.35 ಕೋಟಿ, 7.5 ಕೆ.ಜಿ ಚಿನ್ನಾಭರಣ ಜಪ್ತಿ ಮಾಡಲಾಗಿದೆ. ಲೆಕ್ಕಪತ್ರ ಇಲ್ಲದ ₹ 150 ಕೋಟಿಗೂ ಅಧಿಕ ಮೊತ್ತದ ಆದಾಯವನ್ನು ಸಹ ಪತ್ತೆ ಹಚ್ಚಲಾಗಿದೆ' ಎಂದು ತಿಳಿಸಿದೆ. 'ಲೆಕ್ಕಪತ್ರ ಇಲ್ಲದ ₹ 44 ಲಕ್ಷ ನಗದು, 9.5 ಕೆಜಿ ಚಿನ್ನಾಭರಣ ಜಪ್ತಿ ಮಾಡಲಾಗಿದೆ.' ಎಂದೂ ತಿಳಿಸಿದೆ.

'ಜಾಮೀನಿಗೆ ಪ್ರಕರಣದ ತೀವ್ರತೆ ಪರಿಗಣಿಸಿ'

ಕೊಲೆ ಪ್ರಕರಣ: ಮಧ್ಯಪ್ರದೇಶ ಹೈಕೋರ್ಟ್‌ನ ಆದೇಶ ತಳ್ಳಿಹಾಕಿದ 'ಸುಪ್ರೀಂ'

ನವದೆಹಲಿ (ಪಿಟಿಐ): ನಿರೀಕ್ಷಣಾ ಜಾಮೀನು ನೀಡುವಾಗ ಅಪರಾಧ ಪ್ರಕರಣವು ಎಷ್ಟು ಗಂಭೀರವಾಗಿದೆ ಹಾಗೂ ನಿರ್ದಿಷ್ಟ ಆರೋಪಗಳು ಏನು ಎಂಬುದನ್ನು ಕೋರ್ಟ್ ಗಣನೆಗೆ ತೆಗೆದುಕೊಳ್ಳಬೇಕು ಎಂದು ಸುಪ್ರೀಂ ಹೇಳಿದೆ.

ಕೊಲೆ ಪ್ರಕರಣವೊಂದರಲ್ಲಿ ಇಬ್ಬರು ಆರೋಪಿಗಳಿಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಿ ಮಧ್ಯಪ್ರದೇಶ ಹೈಕೋರ್ಟ್ ನೀಡಿದ್ದ ಆದೇಶವನ್ನು ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಮತ್ತು ಬಿ.ವಿ. ನಾಗರತ್ನ ಅವರ ಪೀಠವು ರದ್ದುಪಡಿಸಿತು.

ಲಭ್ಯವಿರುವ ಸಾಕ್ಷ್ಯಗಳ ಆಧಾರದ ಮೇಲೆ, ಹೈಕೋರ್ಟ್ ನಿರೀಕ್ಷಣಾ ಜಾಮೀನು ಅರ್ಜಿಗಳಿಗೆ ಒಪ್ಪಿಗೆ ಸೂಚಿಸುವಾಗ ಸರಿಯಾದ ತತ್ವಗಳನ್ನು ಅನ್ವಯಿಸಿದೆಯೇ ಎಂಬುದನ್ನು ನಿರ್ಧರಿಸಬೇಕು ಎಂದು ಸುಪ್ರೀಂ ಹೇಳಿತು.

'ನ್ಯಾಯಾಲಯಗಳು ಸಾಮಾನ್ಯವಾಗಿ ಅಪರಾಧಗಳ ಸ್ವರೂಪ, ಪ್ರಕರಣದ ಗಂಭೀರತೆ, ಪ್ರಕರಣದಲ್ಲಿ ಅರ್ಜಿದಾರರ ಪಾತ್ರ ಮತ್ತು ಪ್ರಕರಣದ ಸತ್ಯಾಂಶಗಳಂತಹ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು ಜಾಮೀನು ನೀಡುವ ಅಥವಾ ತಿರಸ್ಕರಿಸುವ ನಿರ್ಧಾರ ತೆಗೆದುಕೊಳ್ಳಬೇಕು' ಎಂದು ಪೀಠ ಹೇಳಿತು.

ಐಪಿಸಿ ಸೆಕ್ಷನ್ 302 (ಕೊಲೆ), 323 (ಸ್ವಯಂಪ್ರೇರಣೆಯಿಂದ ನೋವುಂಟುಮಾಡುವ) ಅಡಿ ದಾಖಲಾದ ಪ್ರಕರಣದಲ್ಲಿ ಇಬ್ಬರು ಆರೋಪಿಗಳಿಗೆ ನಿರೀಕ್ಷಣಾ ಜಾಮೀನು ನೀಡಿರುವುದನ್ನು ಪ್ರಶ್ನಿಸಿ ಸಲ್ಲಿಸಿದ್ದ ಮೇಲ್ಮನವಿಯನ್ನು ಸುಪ್ರೀಂ ಕೋರ್ಟ್ ವಿಚಾರಣೆ ನಡೆಸಿ ಈ ಅಭಿಪ್ರಾಯ ವ್ಯಕ್ತಪಡಿಸಿತು.

ಇದು ವ್ಯಕ್ತಿಯನ್ನು ಕೊಲ್ಲುವ ಗಂಭೀರ ಸ್ವರೂಪದ ಅಪರಾಧವಾಗಿದ್ದು, ಪ್ರಕರಣದಲ್ಲಿ ಆರೋಪಿಗಳ ನಿರ್ದಿಷ್ಟ ಪಾತ್ರ ಇರುವುದನ್ನು ಎಫ್‌ಐಆರ್ ಹಾಗೂ ಹೇಳಿಕೆಗಳು ಸೂಚಿಸುತ್ತಿವೆ ಎಂದು ಸುಪ್ರೀಂ ಹೇಳಿತು.

'ನಿರೀಕ್ಷಣಾ ಜಾಮೀನು ನೀಡುವ ಹೈಕೋರ್ಟ್ ಆದೇಶವು ಅಪರಾಧದ ಸ್ವರೂಪ, ಪ್ರಕರಣದ ಗಂಭೀರತೆ ಮತ್ತು ಆರೋಪಿಗಳ ವಿರುದ್ಧದ ನಿರ್ದಿಷ್ಟ ಆರೋಪಗಳನ್ನು ಒಳಗೊಂಡಂತೆ ಸಾಕ್ಷ್ಯಾಧಾರಗಳನ್ನು ಕಡೆಗಣಿಸಿದೆ. ಹೈಕೋರ್ಟ್ ನೀಡಿದ ನಿರೀಕ್ಷಣಾ ಜಾಮೀನನ್ನು ರದ್ದುಗೊಳಿಸಲು ಸಾಕಷ್ಟು ಕಾರಣಗಳಿವೆ' ಎಂದು ಪೀಠ ಹೇಳಿತು.

ಈ ಹಂತದಲ್ಲಿ ಪ್ರಕರಣದ ವಾಸ್ತವಾಂಶಗಳನ್ನು ವಿವರವಾಗಿ ಪರಿಶೀಲಿಸುವ ಅಗತ್ಯವಿಲ್ಲ. ನಿರೀಕ್ಷಣಾ ಜಾಮೀನು ನೀಡಲು ಹೈಕೋರ್ಟ್ ಸರಿಯಾದ ತತ್ವಗಳನ್ನು ಪಾಲಿಸಿದೆಯೇ ಎಂಬುದನ್ನು ಪರಿಶೀಲಿಸಬೇಕು ಎಂದು ಸುಪ್ರೀಂ ಹೇಳಿದೆ.

ಸ್ಲಾಥಿಯಾ, ರಾಣಾ ರಾಜೀನಾಮೆ ನ್ಯಾಷನಲ್ ಕಾನ್ಫರೆನ್ಸ್‌ಗೆ ಹಿನ್ನಡೆ

ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ನ್ಯಾಷನಲ್ ಕಾನ್ಫರೆನ್ಸ್ ಪಕ್ಷದ ಇಬ್ಬರು ಪ್ರಮುಖ ನಾಯಕರಾದ ದೇವೇಂದರ್ ರಾಣಾ ಮತ್ತು ಸುರ್ಜಿತ್ ಸಿಂಗ್ ಸ್ಲಾಥಿಯಾ ಅವರು ಭಾನುವಾರ ಪಕ್ಷಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ.

ಈ ಇಬ್ಬರು ನಾಯಕರು ಸೋಮವಾರ ದೆಹಲಿಯಲ್ಲಿ ಬಿಜೆಪಿಗೆ ಸೇರುವ ಸಾಧ್ಯತೆಗಳಿವೆ. ಈ ಬೆಳವಣಿಗೆಯಿಂದಾಗಿ ನ್ಯಾಷನಲ್ ಕಾನ್ಫರೆನ್ಸ್‌ಗೆ ತೀವ್ರ ಹಿನ್ನಡೆಯಾಗಿದೆ.

'ಸ್ಲಾಥಿಯಾ ಮತ್ತು ರಾಣಾ ಅವರ ರಾಜೀನಾಮೆ ಪತ್ರಗಳನ್ನು ಡಾ.ಫಾರೂಕ್ ಅಬ್ದುಲ್ಲಾ ಸ್ವೀಕರಿಸಿದ್ದು, ಅಂಗೀಕರಿಸಿದ್ದಾರೆ. ಈ ಸಂಬಂಧ ಯಾವುದೇ ಕ್ರಮ ಅಥವಾ ಪ್ರತಿಕ್ರಿಯೆ ಅಗತ್ಯವಿಲ್ಲ' ಎಂದು ನ್ಯಾಷನಲ್ ಕಾನ್ಫರೆನ್ಸ್ ವಕ್ತಾರರು ಟ್ವೀಟ್ ಮಾಡಿದ್ದಾರೆ.

ರಾಣಾ ಅವರು ನ್ಯಾಷನಲ್ ಕಾನ್ಫರೆನ್ಸ್‌ನ ಜಮ್ಮು ವಲಯ ಘಟಕದ ಅಧ್ಯಕ್ಷರಾಗಿದ್ದರು. ರಾಜೀನಾಮೆ ನೀಡಿ, ಬಿಜೆಪಿ ಸೇರುವರು ಎಂದು ಹಲವು ದಿನಗಳಿಂದ ವದಂತಿ ಇತ್ತು. ಭಾನುವಾರ ಸ್ವತಃ ರಾಜೀನಾಮೆ ತೀರ್ಮಾನ ಪ್ರಕಟಿಸುವ ಮೂಲಕ ರಾಣಾ ತೆರೆ ಎಳೆದಿದ್ದರು. 'ನಾನು ಮತ್ತು ಪಕ್ಷದ ಹಿರಿಯ ಸಹೋದ್ಯೋಗಿ ಎಸ್.ಎಸ್. ಸ್ಲಾಥಿಯಾ ನ್ಯಾಷನಲ್ ಕಾನ್ಫರೆನ್ಸ್‌ನ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದೇವೆ' ಎಂದು ತಿಳಿಸಿದ್ದರು.

ಶ್ರೀನಗರ: 16 ಕಡೆ ಎನ್‌ಐಎ ದಾಳಿ, ಇಬ್ಬರ ಬಂಧನ

ಶ್ರೀನಗರ: ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಅಧಿಕಾರಿಗಳು ಕಾಶ್ಮೀರದ 16 ಸ್ಥಳಗಳಲ್ಲಿ ಭಾನುವಾರ ದಾಳಿ ನಡೆಸಿದ್ದು, 'ದಿ ರೆಸಿಸ್ಟನ್ಸ್ ಫ್ರಂಟ್' (ಟಿಆರ್‌ಎಫ್)ನ ಇಬ್ಬರು ಸದಸ್ಯರನ್ನು ಬಂಧಿಸಿದ್ದಾರೆ. ಜಮ್ಮು–ಕಾಶ್ಮೀರ ಪೊಲೀಸರು ಹಾಗೂ ಸಿಆರ್‌ಪಿಎಫ್ ಯೋಧರು ಈ ಕಾರ್ಯಾಚರಣೆಗೆ ಭದ್ರತೆ ಒದಗಿಸಿದ್ದಾರೆ.

'ಐಎಸ್‌ಐಎಸ್ ವಾಯ್ಸ್ ಆಫ್ ಹಿಂದ್', 'ಬಠಿಂಡಿ ಐಇಡಿ ವಶ' ಪ್ರಕರಣಗಳಿಗೆ ಸಂಬಂಧಿಸಿ ಶ್ರೀನಗರ, ಅನಂತನಾಗ್, ಕುಲ್ಗಾಮ್, ಬಾರಾಮುಲ್ಲಾ ಹಾಗೂ ಸೊಪೋರ್‌ನಲ್ಲಿ ಎನ್‌ಐಎ ಈ ಕಾರ್ಯಾಚರಣೆ ಕೈಗೊಂಡಿತ್ತು.

ಶಂಕಿತರ ಬಳಿ ಇದ್ದ ಮೊಬೈಲ್ ಫೋನ್‌ಗಳು, ಲ್ಯಾಪ್‌ಟಾಪ್, ಎಲೆಕ್ಟ್ರಾನಿಕ್ಸ್ ಸಾಧನಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. 'ದಿ ರೆಸಿಸ್ಟನ್ಸ್ ಫ್ರಂಟ್' (ಟಿಆರ್‌ಎಫ್) ಸಂಘಟನೆಗೆ ಸಂಬಂಧಿಸಿದ ಸ್ಥಳಗಳ ಮೇಲೆ ಹಾಗೂ ಟಿಆರ್‌ಎಫ್‌ನ ಕಮಾಂಡರ್ ಸಜ್ಜಾದ್ ಗುಲ್ ಮನೆ ಮೇಲೂ ದಾಳಿ ನಡೆಸಲಾಗಿದೆ.

ಟಿಆರ್‌ಎಫ್ ಎಂಬುದು ಪಾಕಿಸ್ತಾನ ಮೂಲದ ಲಷ್ಕರ್–ಎ–ತಯಬಾದ ಘಟಕ ಎನ್ನಲಾಗಿದೆ. ಭಾರತದ ವಿರುದ್ಧ ಯುದ್ಧ ಸಾರುವ ಸಲುವಾಗಿ ಇಸ್ಲಾಮಿಕ್ ಸ್ಟೇಟ್ (ಐಎಸ್) ಯುವಕರನ್ನು ನೇಮಕ ಮಾಡಿಕೊಳ್ಳುತ್ತಿದೆ ಎಂಬ ಆರೋಪಗಳಿವೆ' ಎನ್ನಲಾಗುತ್ತಿದೆ.

ವರ್ತಕರಿಗೆ ಮಾರ್ಚ್ 31ರವರೆಗೆ ಖಾದ್ಯತೈಲ ದಾಸ್ತಾನು ಮಿತಿ

ನವದೆಹಲಿ (ಪಿಟಿಐ): ಅಡುಗೆ ಎಣ್ಣೆ ಬೆಲೆ ಏರಿಕೆಯನ್ನು ನಿಯಂತ್ರಿಸುವ ಉದ್ದೇಶದಿಂದ ಮಾರ್ಚ್ 31ರ ವರೆಗೆ ವರ್ತಕರಿಗೆ ದಾಸ್ತಾನು ಮಿತಿಯನ್ನು ಹೇರಿರುವುದಾಗಿ ಕೇಂದ್ರ ಸರ್ಕಾರವು ಭಾನುವಾರ ಹೇಳಿದೆ.

ರಾಜ್ಯ ಸರ್ಕಾರಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ತಮ್ಮ ಬಳಿ ಲಭ್ಯ ಇರುವ ದಾಸ್ತಾನು ಮತ್ತು ತಮ್ಮಲ್ಲಿನ ಬಳಕೆಯ ಆಧಾರದ ಮೇಲೆ ಅಡುಗೆ ಎಣ್ಣೆ ಹಾಗೂ ಎಣ್ಣೆಬೀಜಗಳ ಮೇಲಿನ ದಾಸ್ತಾನು ಮಿತಿ ಎಷ್ಟು ಎಂಬುದನ್ನು ನಿರ್ಧರಿಸಲಿವೆ. ಆದರೆ, ಕೆಲವು ಆಮದು ಮತ್ತು ರಫ್ತು ವಹಿವಾಟುದಾರರಿಗೆ ಈ ಮಿತಿಯಿಂದ ವಿನಾಯಿತಿ ನೀಡಲಾಗಿದೆ.

ಕೇಂದ್ರದ ನಿರ್ಧಾರದಿಂದ ದೇಶಿ ಮಾರುಕಟ್ಟೆಯಲ್ಲಿ ಅಡುಗೆ ಎಣ್ಣೆ ದರ ತಗ್ಗಲಿದೆ. ಇದರಿಂದಾಗಿ ಗ್ರಾಹಕರಿಗೆ ತುಸು ನೆಮ್ಮದಿ ಸಿಗಲಿದೆ ಎಂದು ಆಹಾರ ಮತ್ತು ಗ್ರಾಹಕ ವ್ಯವಹಾರಗಳ ಸಚಿವಾಲಯವು ಪ್ರಕಟಣೆಯಲ್ಲಿ ಹೇಳಿದೆ. ವಿದೇಶಿ ವ್ಯಾಪಾರದ ಮಹಾನಿರ್ದೇಶಕರು (ಡಿಜಿಎಫ್‌ಟಿ) ನೀಡಿರುವ ಆಮದು-ರಫ್ತುದಾರರ ಕೋಡ್ ಸಂಖ್ಯೆಯನ್ನು ಹೊಂದಿರುವವರಿಗೆ ದಾಸ್ತಾನು ಮಿತಿಯಿಂದ ವಿನಾಯಿತಿ ನೀಡಲಾಗಿದೆ ಎಂದು ಸಚಿವಾಲಯವು ತಿಳಿಸಿದೆ.

ಸರ್ಕಾರದ ಮಾಹಿತಿಯ ಪ್ರಕಾರ, ಜಾಗತಿಕ ಅಂಶಗಳು ಹಾಗೂ ಸ್ಥಳೀಯ ಪೂರೈಕೆ ಕೊರತೆಯಿಂದ ಒಂದು ವರ್ಷದಲ್ಲಿ ಖಾದ್ಯ ತೈಲ ಬೆಲೆಯು ಚಿಲ್ಲರೆ ಮಾರುಕಟ್ಟೆಯಲ್ಲಿ ಶೇಕಡ 46.15ರಷ್ಟು ಏರಿಕೆ ಆಗಿದೆ.

ಯಾರೊಂದಿಗೂ ಹಸ್ತಲಾಘವ ಮಾಡಬೇಡಿ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಪೆಟ್ರೋಲ್ 30 ಪೈಸೆ, ಡೀಸೆಲ್ 35 ಪೈಸೆ ಏರಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಭಾನುವಾರ ಪೆಟ್ರೋಲ್ ದರವನ್ನು ಲೀಟರಿಗೆ 30 ಪೈಸೆ ಮತ್ತು ಡೀಸೆಲ್ ದರ ಲೀಟರಿಗೆ 35 ಪೈಸೆಗಳಷ್ಟು ಹೆಚ್ಚಿಸಿವೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರ ಏರಿಕೆಗೆ ಅನುಗುಣವಾಗಿ ದೇಶದಲ್ಲಿ ಇಂಧನ ದರ ಹೆಚ್ಚಾಗುತ್ತಿದೆ.

ಭಾನುವಾರದ ದರ ಏರಿಕೆಯಿಂದಾಗಿ ಡೀಸೆಲ್ ದರವು ಲೀಟರಿಗೆ ₹ 100ರ ಗಡಿ ದಾಟಿರುವ ಪ್ರದೇಶಗಳ ಸಾಲಿಗೆ ಗುಜರಾತ್‌ನ ಗಾಂಧಿನಗರವೂ ಸೇರಿಕೊಂಡಿದೆ. ಗಾಂಧಿನಗರದಲ್ಲಿ ಡೀಸೆಲ್ ದರ ಲೀಟರಿಗೆ ₹ 100.21ರಷ್ಟಾಗಿದೆ.

ಬೆಂಗಳೂರಿನಲ್ಲಿ ಪೆಟ್ರೋಲ್ ದರ ಲೀಟರಿಗೆ ₹ 107.71 ಮತ್ತು ಡೀಸೆಲ್ ದರ ಲೀಟರಿಗೆ ₹ 98.46ಕ್ಕೆ ಏರಿಕೆ ಆಗಿದೆ. ದೆಹಲಿಯಲ್ಲಿ ಪೆಟ್ರೋಲ್ ದರ ₹ 104.14 ಮತ್ತು ಡೀಸೆಲ್ ದರ ₹ 100.66ಕ್ಕೆ ತಲುಪಿದೆ.

ಕನ್ನಡ ಸಿನಿಮಾ ಹಾಡುಗಳ ಚಿತ್ರ ಸಾಹಿತ್ಯದ ಚರ್ಚೆ

‘ನಮ್ಮ ಕಾಲ ಚೆನ್ನಾಗಿತ್ತು ಎನ್ನುವುದು ಮಿಥ್ಯೆ’

ಪ್ರಜಾವಾಣಿ ವಾರ್ತೆ

ಎನ್.ಎಸ್. ಶಂಕರ್

ಎಂ.ಡಿ. ಪಲ್ಲವಿ

ಕವಿರಾಜ್

ಸಂಧ್ಯಾರಾಣಿ

ಬೆಂಗಳೂರು: ‘ಕಾಲದ ಮನೋಧರ್ಮಕ್ಕೆ ತಕ್ಕಂತೆ ಚಿತ್ರಸಾಹಿತ್ಯ ಸೃಷ್ಟಿಯಾಗುತ್ತದೆ. ಹಳೆಯ ಹಾಡುಗಳೇ ಚೆನ್ನ, ಈಗಿನದು ಚೆನ್ನಾಗಿಲ್ಲ ಎನ್ನುವುದು ಎಲ್ಲಾ ಕಾಲದಲ್ಲೂ ಇದ್ದ ಮತ್ತು ಇರುವ ಗೊಣಗಾಟವಷ್ಟೇ’ - ಇದು ಭಾನುವಾರ ಆಲದಮರ ಕ್ಲಬ್‌ಹೌಸ್‌ನಲ್ಲಿ ನಡೆದ ಚರ್ಚೆಯಲ್ಲಿ ಭಾಗವಹಿಸಿದ ಅತಿಥಿಗಳ ಒಕ್ಕೊರಲಿನ ಅಭಿಪ್ರಾಯವಾಗಿತ್ತು.

ಕನ್ನಡ ಸಿನಿಮಾ ಹಾಡುಗಳ ಸಾಹಿತ್ಯ ಎತ್ತ ಸಾಗುತ್ತಿದೆ? ಎನ್ನುವ ವಿಷಯದ ಕುರಿತು ಸ್ವಾರಸ್ಯಕರ ಚರ್ಚೆ ನಡೆಯಿತು. ನಿರ್ದೇಶಕ ಎನ್.ಎಸ್. ಶಂಕರ್ , ಚಿತ್ರಸಾಹಿತಿ ಕವಿರಾಜ್, ಕವಯತ್ರಿ ಸಂಧ್ಯಾರಾಣಿ ಚರ್ಚೆಯಲ್ಲಿ ಭಾಗವಹಿಸಿದ್ದರು. ಗಾಯಕಿ ಎಂ.ಡಿ.ಪಲ್ಲವಿ ಚರ್ಚೆಯಲ್ಲಿ ಭಾಗವಹಿಸಿದ್ದಲ್ಲದೆ ಕೆಲವು ಹಳೆಯ ಚಿತ್ರಗೀತೆಗಳನ್ನು ಹಾಡಿದರು.

‘ನಮ್ಮ ಕಾಲ ಚೆನ್ನಾಗಿತ್ತು ಎನ್ನುವುದು ಒಂದು ಜನ್ಮಜಾತ ಮಿಥ್ ಅಷ್ಟೆ. 1980ರ ದಶಕದ ಹಾಡುಗಳು ಆ ಕಾಲದ ಜನರಿಗೆ ಇಷ್ಟವಾಗುತ್ತವೆ. ಕಾರಣ, ಅವರು ಆ ಹಾಡುಗಳೊಂದಿಗೆ ಭಾವನಾತ್ಮಕವಾಗಿ ಕನೆಕ್ಟ್ ಆಗಿರುತ್ತಾರೆ. ಆ ದಶಕದಲ್ಲಿ ತರುಣರಾಗಿದ್ದವರ ಮಕ್ಕಳನ್ನು ಕೇಳಿದರೆ ಅವರಿಗೆ ಇಂದಿನ ಹಾಡುಗಳು ಹೆಚ್ಚು ಕನೆಕ್ಟ್ ಆಗುತ್ತವೆ’ ಎಂದು ಚಿತ್ರಸಾಹಿತಿ ಕವಿರಾಜ್ ಅಭಿಪ್ರಾಯಪಟ್ಟರು.

‘ಒಳ್ಳೆಯ ಹಾಡುಗಳು, ಕೆಟ್ಟ ಹಾಡುಗಳು ಎನ್ನುವುದು ಎಲ್ಲ ಕಾಲದಲ್ಲೂ ಇದ್ದವು. ಜನರ ಆಲೋಚನೆಗಳಿಗೆ, ಅವರ ಸಂವೇದನೆಗಳಿಗೆ ತಕ್ಕ ಹಾಗೆ ಚಿತ್ರಸಾಹಿತ್ಯ ರಚಿಸಲಾಗುತ್ತಿದೆ. ಚಿತ್ರ ನಿರ್ಮಾತೃಗಳು ಸಮಾಜವನ್ನು, ಬದುಕನ್ನು ನೋಡುವ ನೋಟ ಬದಲಾದಂತೆ ಚಿತ್ರಸಾಹಿತ್ಯ ಕೂಡ ಬದಲಾಯಿತು’ ಎಂದು ಚಿತ್ರ ನಿರ್ದೇಶಕ ಎನ್.ಎಸ್. ಶಂಕರ್ ಹೇಳಿದರು.

‘ಇತ್ತೀಚಿನ ವರ್ಷಗಳಲ್ಲಿ ಹೀರೊ ಮತ್ತು ಹೀರೋಯಿಸಂಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ. ಕಥೆ, ಸನ್ನಿವೇಶಕ್ಕೆ ತಕ್ಕ ಚಿತ್ರಸಾಹಿತ್ಯ ರಚನೆಯಾಗುತ್ತಿಲ್ಲ’ ಎಂದು ಕವಯತ್ರಿ ಸಂಧ್ಯಾರಾಣಿ ಅವರು ಅಭಿಪ್ರಾಯಪಟ್ಟರು. ಇದಕ್ಕೆ ಸಂವಾದಿಯಾಗಿ ಎಂ.ಡಿ ಪಲ್ಲವಿ ಅವರು, ‘ಹೀರೋಯಿಸಂ ಕಡಿಮೆ ಆಗಿ, ಕಥೆ, ಸನ್ನಿವೇಶಕ್ಕೆ ತಕ್ಕ ಹಾಗೆ ಹಾಡುಗಳ ರಚನೆ ಆಗಬೇಕು. ಇತ್ತೀಚೆಗೆ ಹೊಸಬರು ಇಂಥ ಪ್ರಯೋಗ ಮಾಡುತ್ತಿದ್ದಾರೆ’ ಎಂದು ದನಿಗೂಡಿಸಿದರು.

ಮಡಿವಂತಿಕೆ ಇದೆ: ‘ಡಾ. ರಾಜ್‌ಕುಮಾರ್ ಅಭಿನಯದ ‘ಕವಿರತ್ನ ಕಾಳಿದಾಸ’ ಸಿನಿಮಾದಲ್ಲಿ ದೇವಿಯನ್ನು ವರ್ಣಿಸುವ ಹಾಡಿದೆ. ಅಲ್ಲಿ ದೇವಿಯ ಕುಚಗಳನ್ನು ವರ್ಣಿಸಲಾಗುತ್ತದೆ. ಅದು ಸಂಸ್ಕೃತ ಪದ. ಆ ವಿಷಯವನ್ನೇ ನಾವು ಕನ್ನಡದಲ್ಲಿ ಹೇಳಲು ಹೊರಟರೆ ಸಾಮಾಜಿಕ ನಿಷೇಧಕ್ಕೆ ಒಳಗಾಗಬೇಕಾಗುತ್ತದೆ. ಭಕ್ತಿಗೀತೆಯಲ್ಲಿ ಬಳಸುವ ಪದವನ್ನು ಪ್ರೇಮಗೀತೆಯಲ್ಲಿ ಯಾಕೆ ಬಳಸಬಾರದು’ ಎಂದು ಚಿತ್ರಸಾಹಿತಿ ಕವಿರಾಜ್ ಪ್ರಶ್ನಿಸಿದರು.

‘ಹಳೆ ಪಾತ್ರೇ, ಹಳೆ ಕಬ್ಣಾ... ಚಿತ್ರಾನ್ನ, ಚಿತ್ರಾನ್ನ... ಇಂಥವುಗಳು ಹಾಡೇ? ಎಂದು ಹಲವರು ಆಕ್ಷೇಪಿಸುತ್ತಾರೆ. ನನಗೆ ಅನ್ನಿಸೋದು ಪದಗಳ ಬಗ್ಗೆ ನಮಗೆ ಯಾಕೆ ಅಸ್ಪೃಶ್ಯತೆ ಕಾಡುತ್ತದೆ. ಅದೂ ಜನರು ಮಾತನಾಡುವ ಭಾಷೆ ಅಲ್ಲವೇ?’ ಎಂದರು.

ಸಾಹಿತ್ಯಕ್ಕೂ, ಸಿನಿಮಾ ಸಾಹಿತ್ಯಕ್ಕೂ ಹೋಲಿಕೆ ಮಾಡುವುದರಲ್ಲೇ ಸಮಸ್ಯೆ ಇದೆ. ಹೋಲಿಕೆ ಸರಿಯಲ್ಲ
ಎನ್.ಎಸ್. ಶಂಕರ್, ಚಿತ್ರನಿರ್ದೇಶಕ

ಹೆಚ್ಚು ಜನಪ್ರಿಯವಾದುದು ಶ್ರೇಷ್ಠವಲ್ಲ; ಕೆಳದರ್ಜೆಯದ್ದು ಎನ್ನುವ ನಂಬಿಕೆ ಇದೆ. ಅದು ಹಾಗಾಗಬೇಕಿಲ್ಲ
ಸಂಧ್ಯಾರಾಣಿ, ಕವಯತ್ರಿ

‘ಚಿತ್ರಸಾಹಿತ್ಯ ಸರಳವಾದುದು ಎಂದು ಎಲ್ಲರೂ ಹೇಳುತ್ತಾರೆ. ನಿಜಾಂಶವೆಂದರೆ ಅದು ಅಷ್ಟು ಸರಳ ಇಲ್ಲ. ಸರಳವಾಗಿರುವುದೇ ಹೆಚ್ಚು ಕಷ್ಟಕರವಾಗಿರುತ್ತದೆ. ಯಾವುದೇ ಹಾಡಿಗೆ ಟ್ಯೂನ್ ಮೊದಲು ಸಿದ್ಧವಾಗುತ್ತದೆ. ಅದಕ್ಕೆ ತಕ್ಕಹಾಗೆ ಬರೆಯಬೇಕು. ಲಕ್ಷಗಟ್ಟಲೆ ಪ್ರೇಮಗೀತೆಗಳು ಈಗಾಗಲೇ ಇವೆ. ಪ್ರತೀ ಬಾರಿ ಹೊಸದನ್ನು ಬರೆಯುವ ಸವಾಲು ಇದೆ. ಹಾಡಿನಿಂದಲೇ ಸಿನಿಮಾ ಗೆಲ್ಲಬೇಕು ಅಂತಾರೆ, ಇಷ್ಟೆಲ್ಲ ಸವಾಲುಗಳ ಮಧ್ಯೆ ಕೆಲಸ ಮಾಡುತ್ತಿದ್ದೇವೆ. ಹಾಗಿದ್ದರೂ ನಮ್ಮನ್ನು ಎರಡನೇ ದರ್ಜೆ ರೀತಿ ಯಾಕೆ ನೋಡಬೇಕು?’

ಕವಿರಾಜ್, ಚಿತ್ರಸಾಹಿತಿ

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ವೈಕುಂಠ ಸಮಾರಾಧನೆ

ಬಿ. ಗಂಗಾಧರ್
(ರಿಟೈರ್ಡ್ ಮ್ಯಾನೇಜರ್, ಬಿ.ಇ.ಎಂ.ಎಲ್)
(ಶ್ರೀಮತಿ ಬೋರಮ್ಮ ಮತ್ತು ಲೇಟ್ ಬೆಟ್ಟಯ್ಯನವರ ಪುತ್ರ)
ಇವರು ದಿನಾಂಕ 02-10-2021 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧ ವೈಕುಂಠ ಸಮಾರಾಧನೆಯನ್ನು ದಿನಾಂಕ: 12-10-2021ನೇ ಮಂಗಳವಾರ ಬೆಳಿಗ್ಗೆ 11:30ಕ್ಕೆ ಮೃತರ ಸ್ವಗೃಹ ನಂ. 808/ಎ32, 5ನೇ ಹಂತ, 2ನೇ ಫೇಸ್, ಬಿ.ಇ.ಎಂ.ಎಲ್ ಲೇಔಟ್, ರಾಜರಾಜೇಶ್ವರಿನಗರ, ಬೆಂಗಳೂರು-560098 ರಲ್ಲಿ ನಡೆಸಲಾಗುವುದು. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು: ಪತ್ನಿ ಮತ್ತು ಕುಟುಂಬದವರು
Ph: 9480305470, 9611462601

ಮ್ಯೂಚುವಲ್ ಫಂಡ್: ಏನಿದು ಎಕ್ಸಿಟ್ ಲೋಡ್?

ಬಂಡವಾಳ ಮಾರುಕಟ್ಟೆ

ಅವಿನಾಶ್ ಕೆ.ಟಿ.

ಮ್ಯೂಚುವಲ್ ಫಂಡ್ ಮೂಲಕ ಹೂಡಿಕೆ ಮಾಡುವ ಮುನ್ನ ತಿಳಿಯಬೇಕಾದ ಪ್ರಮುಖ ವಿಚಾರಗಳಲ್ಲಿ ಎಕ್ಸಿಟ್ ಲೋಡ್ ಕೂಡ ಒಂದು. ನಿರ್ದಿಷ್ಟ ಫಂಡ್‌ನಿಂದ ಅವಧಿಗೂ ಮುನ್ನ ಹೊರಬರಬೇಕಾದರೆ ಎಕ್ಸಿಟ್ ಲೋಡ್ ಶುಲ್ಕ ಅನ್ವಯ ಆಗುತ್ತದೆ. ಎಕ್ಸಿಟ್ ಲೋಡ್ ಲೆಕ್ಕಾಚಾರ ಹೇಗೆ? ಎಲ್ಲ ಸಂದರ್ಭಗಳಲ್ಲೂ ಎಕ್ಸಿಟ್ ಲೋಡ್ ಅನ್ವಯಿಸುತ್ತದೆಯೇ? ಯಾವ ಮಾದರಿಯ ಮ್ಯೂಚುವಲ್ ಫಂಡ್‌ಗಳಿಗೆ ಎಕ್ಸಿಡ್ ಲೋಡ್ ಇರುವುದಿಲ್ಲ? ಇವುಗಳ ಬಗ್ಗೆ ವಿವರವಾಗಿ ತಿಳಿದುಕೊಳ್ಳೋಣ.

ಏನಿದು ಎಕ್ಸಿಟ್ ಲೋಡ್?: ಅವಧಿಗೆ ಮುನ್ನ ಮ್ಯೂಚುವಲ್ ಫಂಡ್ ಹೂಡಿಕೆಯನ್ನು ಹಿಂಪಡೆದುಕೊಂಡರೆ ಸ್ವತ್ತು ನಿರ್ವಹಣಾ ಕಂಪನಿಗಳು (ಅಸೆಟ್ ಮ್ಯಾನೇಜ್ಮೆಂಟ್ ಕಂಪನಿಗಳು) ಹೂಡಿಕೆದಾರರಿಗೆ ವಿಧಿಸುವ ಶುಲ್ಕ ಎಕ್ಸಿಟ್ ಲೋಡ್. ಹೂಡಿಕೆದಾರರು ಅವಧಿಗೆ ಮುನ್ನ ಹೂಡಿಕೆ ಮೊತ್ತ ಹಿಂಪಡೆಯುವುದನ್ನು ತಡೆಯಲು ಎಕ್ಸಿಟ್ ಲೋಡ್ ಶುಲ್ಕವನ್ನು ಸ್ವತ್ತುನಿರ್ವಹಣಾಕಂಪನಿಗಳುವಿಧಿಸುತ್ತಿವೆ.ಮ್ಯೂಚುವಲ್ ಫಂಡ್‌ನಿಂದ ನಿರ್ಗಮಿಸಲು ಹೂಡಿಕೆದಾರ ತೆರುವ ಶುಲ್ಕ ಎಂದು ಸರಳವಾಗಿ ಇದನ್ನು ಕರೆಯಬಹುದು.

ಒಂದು ಫಂಡ್‌ನಿಂದ ಮತ್ತೊಂದು ಫಂಡ್‌ಗೆ ಹೂಡಿಕೆ ವರ್ಗಾಯಿಸುವ ಸಂದರ್ಭದಲ್ಲಿಯೂ ಎಕ್ಸಿಟ್ ಲೋಡ್ ಅನ್ವಯಿಸುತ್ತದೆ. ಹಾಗಾಗಿ ಯಾವುದೇ ಮ್ಯೂಚುವಲ್ ಫಂಡ್‌ನಲ್ಲಿ ಹೂಡಿಕೆ ಮಾಡುವ ನಿರ್ಧಾರ ತೆಗೆದುಕೊಳ್ಳುವ ಮುನ್ನ ಎಕ್ಸಿಟ್ ಲೋಡ್ ಎಷ್ಟು ಎಂದು ತಿಳಿದು ಮುಂದುವರಿಯುವುದು ಬಹಳ ಮುಖ್ಯ. ನಿರ್ದಿಷ್ಟ ಅವಧಿಗಿಂತ ಹೆಚ್ಚಿನ ಅವಧಿಗೆ ನೀವು ಹೂಡಿಕೆ ಮಾಡಿದರೆ ಎಕ್ಸಿಟ್ ಶುಲ್ಕ ಇರುವುದಿಲ್ಲ.

ಎಕ್ಸಿಟ್ ಲೋಡ್ ಲೆಕ್ಕಾಚಾರ ಹೇಗೆ?: ಉದಾಹರಣೆಗೆ ನೀವು ₹ 2000 ಹೂಡಿಕೆ ಮಾಡಿ ಮ್ಯೂಚುವಲ್ ಫಂಡ್ ಮೂಲಕ ₹ 20 ಮೌಲ್ಯದ 100 ಯೂನಿಟ್‌ಗಳನ್ನು ಖರೀದಿಸಿದ್ದೀರಿ ಎಂದಿಟ್ಟುಕೊಳ್ಳಿ. ಕ್ರಮೇಣ, ಅಂದರೆ 6 ತಿಂಗಳ ಬಳಿಕ ಆ ಪ್ರತಿ ಯೂನಿಟ್ ಬೆಲೆ ₹ 30ಕ್ಕೆ ಜಿಗಿದು ನಿಮ್ಮ ಹೂಡಿಕೆ ಮೊತ್ತ ₹ 3,000 ಆಗಿದೆ ಎಂದು ಭಾವಿಸಿ. ಈ ವೇಳೆ ನೀವು ಮ್ಯೂಚುವಲ್ ಫಂಡ್ ಹೂಡಿಕೆ ಹಿಂಪಡೆಯಲು ನಿರ್ಧರಿಸಿದರೆ ಶೇ 1ರಷ್ಟು, ಅಂದರೆ ₹ 30 ಎಕ್ಸಿಟ್ ಲೋಡ್ ಶುಲ್ಕ ತೆರಬೇಕಾಗುತ್ತದೆ. ಅಂದರೆ ₹ 3,000 ಮೌಲ್ಯದಲ್ಲಿ ₹ 2,970 ನಿಮ್ಮ ಕೈಸೇರುತ್ತದೆ. ಒಂದೊಮ್ಮೆ ನೀವು, ಹೂಡಿಕೆ ಮಾಡಿದ ಒಂದು ವರ್ಷದ ಬಳಿಕ ಮ್ಯೂಚುವಲ್ ಫಂಡ್ ಹೂಡಿಕೆ ಹಿಂಪಡೆದುಕೊಂಡರೆ ಯಾವುದೇ ನಿರ್ಗಮನ ಶುಲ್ಕ ಇಲ್ಲದ ಕಾರಣ ₹ 3,000 ನಿಮ್ಮ ಬ್ಯಾಂಕ್ ಖಾತೆಗೆ ಸಂದಾಯವಾಗುತ್ತದೆ.

ಯಾವ ಫಂಡ್‌ಗಳಿಗೆ ಎಕ್ಸಿಟ್ ಲೋಡ್?: ವಿವಿಧ ಮ್ಯೂಚುವಲ್ ಫಂಡ್‌ಗಳಲ್ಲಿ ಎಕ್ಸಿಟ್ ಲೋಡ್ ವಿವಿಧ ರೀತಿಯಲ್ಲಿರುತ್ತದೆ. ಆದರೆ ಎಲ್ಲ ಮ್ಯೂಚುವಲ್ ಫಂಡ್‌ಗಳಲ್ಲೂ ಎಕ್ಸಿಟ್ ಲೋಡ್ ಇರುವುದಿಲ್ಲ ಎನ್ನುವುದು ಮುಖ್ಯವಾಗಿ ಗಮನಿಸಬೇಕಿರುವ ಅಂಶ. ಲಿಕ್ವಿಡ್ ಫಂಡ್‌ಗಳಿಗೆ ಎಕ್ಸಿಟ್ ಲೋಡ್ ಇರುವುದಿಲ್ಲ. ಹೂಡಿಕೆದಾರ ಅಗತ್ಯ ಎನಿಸಿದಾಗ ಹೂಡಿಕೆ ಹಣ ಹಿಂಪಡೆಯಬಹುದು. ಕೆಲವು ಡೆಟ್ ಫಂಡ್‌ಗಳಲ್ಲಿ (ಸಾಲಪತ್ರ ಆಧಾರಿತ ಫಂಡ್‌ಗಳು) ಎಕ್ಸಿಟ್ ಲೋಡ್ ಇರುವುದಿಲ್ಲ, ಕೆಲವು ಫಂಡ್‌ಗಳಲ್ಲಿ ಇರುತ್ತದೆ.

ಈಕ್ವಿಟಿ ಮ್ಯೂಚುವಲ್ ಫಂಡ್ ಮತ್ತು ಹೈಬ್ರೀಡ್ ಫಂಡ್‌ಗಳಲ್ಲಿ ಅವಧಿಗೆ ಮುನ್ನ ಮ್ಯೂಚುವಲ್ ಫಂಡ್‌ನಿಂದ ಹೊರಬಂದರೆ ಎಕ್ಸಿಟ್ ಲೋಡ್ ತೆರಬೇಕಾಗುತ್ತದೆ. ಮತ್ತೊಂದು ವಿಚಾರ ನೆನಪಿರಲಿ ಮ್ಯೂಚುವಲ್ ಫಂಡ್ ಹೂಡಿಕೆ ಮಾಡಿದ ನಂತರ ನಿಮ್ಮ ಫಂಡ್ ನಷ್ಟದಲ್ಲಿದ್ದು, ಆ ವೇಳೆ ಫಂಡ್‌ನಿಂದ ಹೊರಬರಬೇಕಾದರೂ ಎಕ್ಸಿಟ್ ಲೋಡ್ ಅನ್ವಯವಾಗುತ್ತದೆ.

(ಲೇಖಕ: ಇಂಡಿಯನ್ ಮನಿ ಡಾಟ್ ಕಾಂನ ಹಣಕಾಸು ಸಲಹಾ ವಿಭಾಗದ ಮುಖ್ಯಸ್ಥ)

ಮುಂದುವರಿದ ‘ಗೂಳಿ’ ಓಟ

ಷೇರುಪೇಟೆಯಲ್ಲಿ ಗೂಳಿ ಓಟ ಜೋರಾಗಿದೆ. ಅಕ್ಟೋಬರ್ 8ಕ್ಕೆ ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಸೂಚ್ಯಂಕಗಳು ಭಾರಿ ಜಿಗಿತ ಕಂಡಿವೆ. 17,895 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ವಾರದ ಅವಧಿಯಲ್ಲಿ ಶೇ 2.7ರಷ್ಟು ಗಳಿಕೆ ಕಂಡಿದ್ದರೆ, 60,059 ಅಂಶಗಳಲ್ಲಿ ವಹಿವಾಟು ಮುಗಿಸಿರುವ ಸೆನ್ಸೆಕ್ಸ್ ಶೇ 2.2ರಷ್ಟು ಗಳಿಕೆ ಕಂಡಿದೆ. ನಿಫ್ಟಿ ಮಿಡ್ ಕ್ಯಾಪ್ 100 ಸೂಚ್ಯಂಕ ಶೇ 0.43ರಷ್ಟು ಗಳಿಸಿದ್ದರೆ, ಸ್ಮಾಲ್ ಕ್ಯಾಪ್ ಸೂಚ್ಯಂಕ ಶೇ 1.23ರಷ್ಟು ಜಿಗಿದಿದೆ.

ಬಡ್ಡಿ ದರವನ್ನು ಯಥಾಸ್ಥಿತಿಯಲ್ಲಿಡಲು ಭಾರತೀಯ ರಿಸರ್ವ್ ಬ್ಯಾಂಕ್ ತೀರ್ಮಾನಿಸಿರುವುದು, ಕಂಪನಿಗಳ ತ್ರೈಮಾಸಿಕ ಫಲಿತಾಂಶಗಳು ಉತ್ತಮವಾಗಿ ಬರುತ್ತಿರುವುದು, ಜಾಗತಿಕವಾಗಿ ಕೋವಿಡ್ ಪ್ರಕರಣಗಳು ಗಣನೀಯವಾಗಿ ಹೆಚ್ಚಳ ಕಾಣದಿರುವುದು, ಏಷ್ಯಾದ ಮಾರುಕಟ್ಟೆಗಳು ಒಳಗೊಂಡು ಪ್ರಮುಖ ಮಾರುಕಟ್ಟೆಗಳಲ್ಲಿ ಸಕಾರಾತ್ಮಕತೆ ಕಂಡುಬಂದಿರುವುದು ಸೇರಿದಂತೆ ಹಲವು ಅಂಶಗಳು ಷೇರುಪೇಟೆ ಜಿಗಿತಕ್ಕೆ ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಐ.ಟಿ. ಸೂಚ್ಯಂಕ ಗರಿಷ್ಠ ಶೇ 4.66ರಷ್ಟು ಏರಿಕೆ ದಾಖಲಿಸಿದೆ. ಮಾಧ್ಯಮ ವಲಯ ಶೇ 4.63ರಷ್ಟು, ವಾಹನ ಉತ್ಪಾದನೆ ಶೇ 4.55ರಷ್ಟು, ರಿಯಲ್ ಎಸ್ಟೇಟ್ ಶೇ 2.93ರಷ್ಟು, ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 1.48ರಷ್ಟು, ಲೋಹ ವಲಯ ಶೇ 0.76ರಷ್ಟು ಹೆಚ್ಚಳವಾಗಿವೆ. ನಿಫ್ಟಿ ಫಾರ್ಮಾ ಮತ್ತು ಎಫ್‌ಎಂಸಿಜಿ ವಲಯಗಳು ಕ್ರಮವಾಗಿ ಶೇ 0.50ರಷ್ಟು ಮತ್ತು ಶೇ 1ರಷ್ಟು ಇಳಿಕೆ ಕಂಡಿವೆ.

ಏರಿಕೆ-ಇಳಿಕೆ: ನಿಫ್ಟಿಯಲ್ಲಿ ಟಾಟಾ ಮೋಟರ್ಸ್ ಶೇ 14.88ರಷ್ಟು, ಒಎನ್‌ಜಿಸಿ ಶೇ 10.14ರಷ್ಟು, ಟೈಟನ್ ಶೇ 8.96ರಷ್ಟು, ಇಂಡಸ್ ಇಂಡ್ ಬ್ಯಾಂಕ್ ಶೇ 6.37ರಷ್ಟು, ಮಹೀಂದ್ರ ಆ್ಯಂಡ್ ಮಹೀಂದ್ರ ಶೇ 6.03ರಷ್ಟು, ರಿಲಯನ್ಸ್ ಶೇ 5.85ರಷ್ಟು, ಟಿಸಿಎಸ್ ಶೇ 5.52ರಷ್ಟು, ಟೆಕ್ ಮಹೀಂದ್ರ ಶೇ 4.99ರಷ್ಟು, ಡಿವೀಸ್ ಲ್ಯಾಬ್ಸ್ ಶೇ 4.95ರಷ್ಟು, ಏಷ್ಯನ್ ಪೇಂಟ್ಸ್ ಶೇ 4.06ರಷ್ಟು, ವಿಪ್ರೋ ಶೇ 3.95ರಷ್ಟು, ಎಚ್‌ಸಿಎಲ್ ಟೆಕ್ ಶೇ 3.80ರಷ್ಟು ಜಿಗಿತ ಕಂಡಿವೆ. ಸಿಪ್ಲಾ ಶೇ 7.06ರಷ್ಟು, ಗ್ರಾಸಿಮ್ ಇಂಡಸ್ಟ್ರೀಸ್ ಶೇ 4.67ರಷ್ಟು, ಶ್ರೀ ಸಿಮೆಂಟ್ ಶೇ 4.61ರಷ್ಟು, ನೆಸ್ಲೆ ಶೇ 2.88ರಷ್ಟು, ಕೋಟಕ್ ಮಹೀಂದ್ರ ಬ್ಯಾಂಕ್ ಶೇ 2.87ರಷ್ಟು, ಹಿಂದೂಸ್ಥಾನ್ ಯುನಿ ಲಿವರ್ ಶೇ 2.37ರಷ್ಟು, ಹಿಂಡಾಲ್ಕೋ ಇಂಡಸ್ಟ್ರೀಸ್ ಶೇ 2.21ರಷ್ಟು, ಪವರ್ ಗ್ರಿಡ್ ಶೇ 2.16ರಷ್ಟು ಕುಸಿತ ಕಂಡಿವೆ.

ಮುನ್ನೋಟ: ಆರ್‌ಬಿಐ ಬಡ್ಡಿ ದರವನ್ನು ಯಥಾಸ್ಥಿತಿಯಲ್ಲಿಟ್ಟ ಕಾರಣ ಷೇರು ಮಾರುಕಟ್ಟೆಯಲ್ಲಿ ಹೂಡಿಕೆದಾರರ ಉತ್ಸಾಹ ಹೆಚ್ಚಾಗಿತ್ತು. ಆದರೆ ಅಮೆರಿಕದಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ಉದ್ಯೋಗ ಸೃಷ್ಟಿಯಾಗದಿರುವುದಕ್ಕೆ ಪೇಟೆ ಹೇಗೆ ಪ್ರತಿಕ್ರಿಯಿಸಲಿದೆ ಎಂಬುದನ್ನು ಕಾದುನೋಡಬೇಕಿದೆ. ಈ ವಾರ ಮೈಂಡ್ ಟ್ರೀ, ವಿಪ್ರೊ, ಎಚ್‌ಡಿಎಫ್‌ಸಿ ಬ್ಯಾಂಕ್, ಎಚ್‌ಸಿಎಲ್ ಟೆಕ್, ಇನ್ಫೊಸಿಸ್, ಡಿ- ಮಾರ್ಟ್, ಡೆಲ್ಟಾ ಕಾರ್ಪ್ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ. ಫಲಿತಾಂಶಗಳ ಜತೆಗೆ ದೇಶಿಯ ಮತ್ತು ಜಾಗತಿಕ ವಿದ್ಯಮಾನಗಳು ಸೂಚ್ಯಂಕಗಳ ಮೇಲೆ ಪರಿಣಾಮ ಬೀರಲಿವೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Part-Time Jobs

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Marketing & Sales

LOOKING FOR Sales Staff in Bangalore Showroom with 6 to 8 years experience in Jewellery. Salary starting from 25000 up to 35000. Food and Accommodation shall be provided by the Company. Contact B.B. Jewellers 9986577790

General

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000ವರೆಗೆ ಸಂಪಾದಿಸಿ. ಕನ್ನಡ/ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8095377333/ 8095377444

ತಕ್ಷಣ ಬೇಕಾಗಿದ್ದಾರೆ ಕರ್ನಾಟಕದ ಎಲ್ಲಾಜಿಲ್ಲೆಗಳಲ್ಲಿನ ಕಂಪನಿಗಳಿಗೆ ಆಫೀಸ್‌ಗಳಿಗೆ 7th,SSLC,PUC, ಡಿಗ್ರಿಯಾದವರಿಗೆ, (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ ESI/PF ನೊಂದಿಗೆ 16,800-32000/- 7829215432, 9538804499

ಕುಂದಾಪುರದಲ್ಲಿರುವ (ಉಡುಪಿ) ಕಂಪೆನಿಗೆ ಕೆಲಸಕ್ಕೆ ಯುವಕ-ಯುವತಿಯರು ಬೇಕಾಗಿದ್ದಾರೆ. ವೇತನ 10,000-15,000. ಊಟ, ವಸತಿ ಉಚಿತ. 6364257442

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ,ಅಡುಗೆಗೆ ಮಹಿಳೆಯರು ಹೋಂ ನರ್ಸ್ ಗಳು ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ. 10,000-15,000. 8951315839, 9880545002

TOYOTA, ಟಾಟಾಮೋಟರ್ಸ್, ಬಿಗ್ ಬಜಾರ್ಸ್ ಬ್ರಿಟಾನಿಯಾಗಳಿಗೆ 5th,SSLC, Degree, ITI,Diploma ದವರು ನೇರನೇಮಕಾತಿಯಿದೆ.18,000-60,000 /- ವಸತಿಯೂಟವಿದೆ. 7795837319, 9901312461

ವಿಡಿಯೋಕಾನ್, TVS, TOYOTA, ಬ್ರಿಟಾನಿಯಾ MNCಗಳಿಗೆ SSLC, PUC, Degree, ITI ನವರು (ವಿದ್ಯಾರ್ಹತೆಯಿಲ್ಲದವರಿಗೂ) 17,800-56,000/- ವಸತಿಯೂಟವಿದೆ. 7899778278, 9611715755

ಕರ್ನಾಟಕದಾದ್ಯಂತ ಪುನರಾರಂಭವಾಗಿರುವ ಪ್ರಸಿದ್ಧಕಂಪನಿ/ ಆಫೀಸ್ ಕೆಲಸಗಳಿಗೆ ಯುವಕ/ಯುವತಿಯರು ಬೇಕಾಗಿದ್ದಾರೆ (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ Salary+OT 16,800-45000/-.9902839010, 9980295449

ವ್ಯಾಪಾರ

Business to Business

Finance

ಸಾಲಗಳು ನಾವು ಎಲ್ಲಾ ರೀತಿಯ ಸಾಲಗಳನ್ನು ನೀಡುತ್ತೇವೆ. ವೈಯಕ್ತಿಕ, ವ್ಯವಹಾರ, ಆಸ್ತಿ, ವಸತಿ, ಕೃಷಿ, ಸ್ವಾಧೀನ ಮತ್ತು ಆಸ್ತಿಗಾಗಿ ಸಾಲ ನೀಡಲಾಗುತ್ತದೆ. ಮೊಬೈಲ್:90568-35880

ಭವಿಷ್ಯ

Astrology

ಕೊಳ್ಳೇಗಾಲದ ಪ್ರಸಿದ್ಧ ತಾಂತ್ರಿಕರು ನುಡಿದಂತೆ ನಡೆಯುವುದು, ಅಸಾಧ್ಯವಾದದ್ದು ಇಲ್ಲಿ ಸಾಧ್ಯ, ದಾಂಪತ್ಯ ಕಲಹ, ಶತ್ರುಗಳ ಕಾಟ, ಮಾಟಮಂತ್ರ, ವಾಮಾಚಾರ, ಸ್ತ್ರೀಪುರುಷ ವಶೀಕರಣ, ಚೌಡಿಮಂತ್ರ ಶಕ್ತಿಯಿಂದ ಸಶ್ಮಾನ ಕಾಳಿಯ ಬಲಿಷ್ಠ ಪ್ರಯೋಗಗಳಿಂದ 3ದಿನದಲ್ಲಿ ಶಾಶ್ವತ ಪರಿಹಾರ ಗ್ಯಾರಂಟಿ ಪ್ರಧಾನ ತಾಂತ್ರಿಕ ವೆಂಕಟೇಶ ಮೂರ್ತಿ: ಉತ್ತರಹಳ್ಳಿ ಬೆಂಗಳೂರು: 9686748656

EDUCATION CORNER

HARIPRASAD'S IAS - KAS INSTITUTE
Empowering Dreams...
‘IAS ಕನ್ನಡ ಸಾಹಿತ್ಯ’
* ಕನ್ನಡ ಸಾಹಿತ್ಯ ತರಬೇತಿಯಲ್ಲಿ 30 ವರ್ಷಗಳ ಸುದೀರ್ಘ ಬೋಧನಾ ಅನುಭವ ಹೊಂದಿರುವ
* IAS ಕನ್ನಡ ಸಾಹಿತ್ಯದಲ್ಲಿ ಅತಿಹೆಚ್ಚು ಫಲಿತಾಂಶ ನೀಡುತ್ತಾ ಬಂದಿರುವ ನಾಡಿನ ಖ್ಯಾತ ಸಾಹಿತಿ ಮತ್ತು ವಿಮರ್ಶಕರು
ಬೋಧಕರ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
97404 72728 / 72594 19067
ಹಂಪಿನಗರ, ವಿಜಯನಗರ 2ನೇ ಹಂತ, ಬೆ-104
KAS ಹೊಸ ಬ್ಯಾಚ್ ಪ್ರಾರಂಭ
Prelims Cum Mains
ಉಚಿತ ಕಾರ್ಯಾಗಾರ ಅಕ್ಟೋಬರ್ 17, ಭಾನುವಾರ ಬೆಳಿಗ್ಗೆ 10 ಗಂಟೆಗೆ

||ಉಚಿತ ಭವಿಷ್ಯ|| ಅಷ್ಟಮಂಗಳ ಪ್ರಶ್ನೆಯಿಂದ ನಿಮ್ಮ ಜೀವನದ ಸಕಲಸಂಕಷ್ಟಗಳು ನಿವಾರಣೆ, ಸ್ತ್ರೀಪುರುಷ ವಶೀಕರಣ ಕೇವಲ 1ಗಂಟೆಯಲ್ಲಿ 101% ಮಾಡಿಕೊಡುತ್ತಾರೆ. ಕರೆಮಾಡಿ.9538486472

“ವಶೀಕರಣಯಂತ್ರ” ಜನವಶೀಕರಣ, ಲಕ್ಷ್ಮಿವಶೀಕರಣ, ಸ್ತ್ರೀಪುರುಷ ವಶೀಕರಣ, ಶತ್ರು ವಶೀಕರಣ, ಕೇವಲ 2001 ರೂಪಾಯಿ ಗುರೂಜಿ ಮಹೇಶ್9686999517

★ಅಂಭಾಭವಾನಿ★ ಜ್ಯೋತಿಷ್ಯಾಲಯ ಕೊಳ್ಳೆಗಾಲದ ನಂ.1 'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್. (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೇಯಿರಲಿ 2ದಿನದಲ್ಲಿ ಪರಿಹಾರ.9886755306

★||ಶ್ರೀಚಾಮುಂಡೇಶ್ವರಿದೇವಿ ಜ್ಯೋತಿಷ್ಯರು||★ ಸ್ತ್ರೀಪುರುಷ_ವಶೀಕರಣ, ಸಂಭೋಗ_ವಶೀಕರಣ ಇನ್ನೂ ಯಾವುದೇ ಸಮಸ್ಯೆಗಳಿಗೆ 15 ನಿಮಿಷಗಳಲ್ಲಿ ಪರಿಹಾರ. ರಾಘವೇಂದ್ರ_ಗುರೂಜಿ. 8050061378

ಪ್ರವಾಸ

Travel

16-10-2021 ಮಧ್ಯಪ್ರದೇಶ, ಗುಜರಾತ್, 17-10-2021 ಬದ್ರಿನಾಥ್, ಕೇದಾರ್‌ನಾಥ್, ಗಂಗೋತ್ರಿ, ಯಮುನೋತ್ರಿ, ಕರ್ನಾಟಕ ಹೆರಿಟೇಜ್ ಟೂರ್ಸ (ಹನುಮಂತ್ ನಗರ) 9845035349, 9482435755

ಅಂಡಮಾನ್ ಹವಳದ್ವೀಪ Royal Package ಅಕ್ಟೊಬರ್, ನವೆಂಬರ್, ಡಿಸೆಂಬರ್‌ನಲ್ಲಿ 5 ದಿನಗಳು ವಿಮಾನದಲ್ಲಿ. ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್ 9739847429/ 9845560219.

ಶ್ರೇಯಸ್ ಟೂರ್ಸ್: ವಿ.ವಿ.ಪುರಂ. 06.11.2021 10ದಿನಗಳು 1)ಅಖಂಡ ಗುಜರಾತ್ ಪ್ರವಾಸ. 2)ಅಖಂಡ ರಾಜಸ್ಥಾನ್ ಪ್ರವಾಸ., 23.11.2021 13ದಿನಗಳು ಚಂದಿಗಡ್,ಸಿಮ್ಲಾ, ಕುಲು ಮನಾಲಿ,5ದೇವಿಯರು ಡಾಲ್ ಹೌಸಿ,ಜಮ್ಮು, ವೈಷ್ಣೋದೇವಿ, ಅಮೃತಸರ್, ಕುರುಕ್ಷೇತ್ರ,ದೆಹಲಿ., 06.12.2021 16ದಿನಗಳು ಅಖಂಡ ಆಂಧ್ರತೆಲಂಗಾಣ ರಾಜ್ಯಪ್ರವಾಸ., 22.12.2021 15ದಿನಗಳು ಅಖಂಡ ಮಧ್ಯಪ್ರದೇಶ ರಾಜ್ಯಪ್ರವಾಸ. 9743351212, 9902050065, 9206979202

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH ಪ್ರಜಾವಾಣಿ Classifieds
EFFECTIVE FROM JUNE 3rd, 2020
DECCAN HERALD & PRAJAVANI CLASSIFIEDS PACKAGE RATES

PUBLICATION	TEXT AD RATE PER INS FOR 15 WORDS	CLASSIFIEDS DISPLAY RATE PER SQCM
DH ALL KARNATAKA+ PV BENGALURU	1020/-	480/-
PV ALL KARNATAKA	900/-	430/-

*GST applicable

SPECIAL SCHEMES ALL CATEGORY

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details
Contact: 9880856233 | 9731810277
9901641752 | 9845114560 | 9886213331

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹430
12 ಮೊಟ್ಟೆಗೆ ₹60
ಮೈಸೂರು
100 ಮೊಟ್ಟೆಗೆ ₹440

ರಾಮನಗರ ರೇಷ್ಮೆ ಗೂಡು ಧಾರಣೆ

ಮಿಶ್ರತಳಿ (ಸಿ.ಬಿ)
₹245-478
ದ್ವಿತಳಿ (ಬಿ.ವಿ)
₹289-566

ಪರಸ್ಪರ ಅಂತರ ಕಾಯ್ದುಕೊಳ್ಳಿ

ಯಾರೊಂದಿಗೂ ಹಸ್ತಲಾಘವ ಮಾಡಬೇಡಿ

ಹೊರಗೆ ಹೋಗುವಾಗ ಮುಖಗವಸು ಧರಿಸಿ

ರಾಜ್ಯದಲ್ಲಿ ಡ್ರೀಮ್ 11 ಕಾರ್ಯಾಚರಣೆ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡ್ರೀಮ್11 ಕಂಪನಿಯು ಕರ್ನಾಟಕದಲ್ಲಿನ ತನ್ನ ಕಾರ್ಯಾಚರಣೆಗಳನ್ನು ಅಮಾನತಿನಲ್ಲಿ ಇರಿಸಿದೆ. ರಾಜ್ಯ ಸರ್ಕಾರವು ಕರ್ನಾಟಕ ಪೊಲೀಸ್ ಕಾಯ್ದೆಗೆ ತಿದ್ದುಪಡಿ ತಂದು, ಆನ್‌ಲೈನ್ ಮೂಲಕ ನಡೆಯುವ ಜೂಜನ್ನು ನಿಷೇಧಿಸಿದ ನಂತರದಲ್ಲಿ ಕಂಪನಿಯು ಈ ತೀರ್ಮಾನ ಕೈಗೊಂಡಿದೆ.

‘ಆನ್‌ಲೈನ್ ಮೂಲಕ ನಡೆಯುವ ಜೂಜು, ಬೆಟ್ಟಿಂಗ್ ಚಟುವಟಿಕೆಗಳನ್ನು ನಿಷೇಧಿಸಿ ಕರ್ನಾಟಕದಲ್ಲಿ ಪೊಲೀಸ್ ಕಾಯ್ದೆಗೆ ತಿದ್ದುಪಡಿ ತರಲಾಗಿದೆ. ಆದರೆ, ಈ ತಿದ್ದುಪಡಿಯು ತನ್ನ ಸದಸ್ಯರು ಅಭಿವೃದ್ಧಿಪಡಿಸಿರುವ ಫ್ಯಾಂಟಸಿ ಆಟಗಳಿಗೆ ಅನ್ವಯ ಆಗುವುದಿಲ್ಲ ಎಂದು ಭಾರತೀಯ ಫ್ಯಾಂಟಸಿ ಆಟಗಳ ಸಂಘವು (ಎಫ್‌ಐಎಫ್‌ಎಸ್) ನಮಗೆ ಸಲಹೆ ನೀಡಿದೆ. ಈ ವಿಚಾರವಾಗಿ ಸಂಘವು ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಯೊಬ್ಬರ ಅಭಿಪ್ರಾಯವನ್ನು ಕೂಡ ಹಂಚಿಕೊಂಡಿದೆ’ ಎಂದು ಡ್ರೀಮ್11 ಹೇಳಿದೆ.

‘ಎಫ್‌ಐಎಫ್‌ಎಸ್ ಅಭಿವೃದ್ಧಿಪಡಿಸುವ ಫ್ಯಾಂಟಸಿ ಆಟದ ಮಾದರಿಗಳು ಜೂಜು, ಬೆಟ್ಟಿಂಗ್ ಅಲ್ಲ ಎಂದು ದೇಶದ ನ್ಯಾಯಾಲಯಗಳು ಹೇಳಿವೆ. ಹೀಗಿದ್ದರೂ, ಈಚೆಗೆ ಮಾಧ್ಯಮಗಳಲ್ಲಿ ಪ್ರಕಟವಾದ, ಪ್ರಸಾರವಾದ ಕೆಲವು ವರದಿಗಳನ್ನು ಗಮನಿಸಿ ಕರ್ನಾಟಕದಲ್ಲಿನ ನಮ್ಮ ಬಳಕೆದಾರರು ತೀವ್ರ ಕಳವಳ ಮತ್ತು ತಮ್ಮ ಸುರಕ್ಷತೆ ಕುರಿತು ಆತಂಕವನ್ನು ವ್ಯಕ್ತಪಡಿಸಿದ್ದಾರೆ. ಅವರ ಆತಂಕವನ್ನು ಹೋಗಲಾಡಿಸುವ ಉದ್ದೇಶದಿಂದ ನಾವು ಕರ್ನಾಟಕದಲ್ಲಿನ ನಮ್ಮ ಕಾರ್ಯಾಚರಣೆಗಳನ್ನು ಅಮಾನತಿನಲ್ಲಿ ಇರಿಸುತ್ತಿದ್ದೇವೆ’ ಎಂದು ಕಂಪನಿ ತಿಳಿಸಿದೆ.

‘ಚಿಪ್ ಕೊರತೆ: ವಾಹನ ವಿತರಕರಿಗೆ ನಷ್ಟ’

ನವದೆಹಲಿ (ಪಿಟಿಐ): ಸೆಮಿಕಂಡಕ್ಟರ್ ಕೊರತೆಯಿಂದಾಗಿ ವಾಹನ ತಯಾರಕರು, ಡೀಲರ್‌ಗಳಿಗೆ ವಾಹನ ನೀಡಲು ಹೆಣಗಾಡುತ್ತಿದ್ದಾರೆ. ಇದರಿಂದಾಗಿ ಈ ಬಾರಿಯ ಹಬ್ಬದ ಋತುವಿನಲ್ಲಿ ವಾಹನ ವಿತರಕರು ಭಾರಿ ನಷ್ಟ ಅನುಭವಿಸಲಿದ್ದಾರೆ ಎಂದು ಭಾರತೀಯ ವಾಹನ ವಿತರಕರ ಸಂಘಟನೆಗಳ ಒಕ್ಕೂಟದ (ಎಫ್‌ಎಡಿಎ) ಅಧ್ಯಕ್ಷ ವಿಂಕೇಶ್ ಗುಲಾಟಿ ಹೇಳಿದ್ದಾರೆ.

ಸಮಸ್ಯೆಯು ಮುಂದುವರೆದಿರುವುದರಿಂದ ಕಂಪನಿಗಳು ವಾಹನ ತಯಾರಿಕೆಯಲ್ಲಿ ಸಮಸ್ಯೆ ಎದುರಿಸುತ್ತಿವೆ. ಹೀಗಾಗಿ ಅವು ತಮ್ಮ ವಿತರಕ ಪಾಲುದಾರರಿಗೆ ವಿತರಣೆ ಪ್ರಮಾಣ ಕಡಿತಗೊಳಿಸುವಂತಾಗಿದೆ. ತಕ್ಷಣಕ್ಕೆ ವಾಹನ ಸಿಗುವುದಿಲ್ಲ ಎನ್ನುವ ಕಾರಣಕ್ಕೆ ಬುಕಿಂಗ್ ರದ್ದುಪಡಿಸುವುದು ಆಗುತ್ತಿದೆ. ಸ್ಥಳದಲ್ಲಿಯೇ ಬುಕಿಂಗ್ ಮಾಡುವವರ ಸಂಖ್ಯೆ ಇಳಿಕೆ ಆಗುತ್ತಿದೆ ಎಂದಿದ್ದಾರೆ.

ಫಿನಿಷರ್ ಖ್ಯಾತಿ ಉಳಿಸಿಕೊಂಡ ಧೋನಿ; ಉತ್ತಪ್ಪ, ಋತುರಾಜ್ ಮಿಂಚು

ಫೈನಲ್‌ಗೆ ಚೆನ್ನೈ ಸೂಪರ್ ಕಿಂಗ್ಸ್

ದುಬೈ: ತಾವು ಶ್ರೇಷ್ಠ ಫಿನಿಷರ್ ಎಂಬುದನ್ನು ಮತ್ತೊಮ್ಮೆ ಸಾಬೀತು ಮಾಡಿದ ಮಹೇಂದ್ರಸಿಂಗ್ ಧೋನಿ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಫೈನಲ್‌ನತ್ತ ಮುನ್ನಡೆಸಿದರು.

ಭಾನುವಾರ ನಡೆದ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧದ ಕ್ವಾಲಿಫೈಯರ್ ಪಂದ್ಯದಲ್ಲಿ ಚೆನ್ನೈ ತಂಡವು 4 ವಿಕೆಟ್‌ಗಳ ರೋಚಕ ಜಯ ಸಾಧಿಸಲು ಧೋನಿ ಕಾರಣರಾದರು. ಅಲ್ಲದೇ ಆರಂಭಿಕ ಆಟಗಾರ ಋತುರಾಜ್ ಗಾಯಕವಾಡ್ (70 ರನ್) ಮತ್ತು ಕನ್ನಡಿಗ ರಾಬಿನ್ ಉತ್ತಪ್ಪ (63 ರನ್) ಅವರ ಅಮೋಘ ಅರ್ಧಶತಕಗಳು ವ್ಯರ್ಥವಾಗಲೂ ಧೋನಿ ಬಿಡಲಿಲ್ಲ.

ಕೊನೆಯ ಓವರ್‌ನಲ್ಲಿ ಅವರು ಹೊಡೆದ ಮೂರು ಬೌಂಡರಿಗಳು ರಿಷಭ್ ಪಂತ್ ನಾಯಕತ್ವದ ಡೆಲ್ಲಿ ತಂಡದ ಗೆಲುವಿನ ಕನಸನ್ನು ಭಗ್ನಗೊಳಿಸಿದವು. ಟಾಸ್ ಗೆದ್ದ ಚೆನ್ನೈ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಡೆಲ್ಲಿ ತಂಡವು ಪೃಥ್ವಿ ಶಾ (60;34ಎ) ಮತ್ತು ರಿಷಭ್ ಪಂತ್ (ಔಟಾಗದೆ 51) ಅವರ ಅರ್ಧಶತಕಗಳ ಬಲದಿಂದ 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 172 ರನ್ ಗಳಿಸಿತು. ಅದಕ್ಕುತ್ತರವಾಗಿ ಚೆನ್ನೈ 19.4 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 173 ರನ್ ಗಳಿಸಿತು. ಒಂಬತ್ತನೇ ಬಾರಿ ಫೈನಲ್ ಪ್ರವೇಶಿಸಿತು.

ಮಹೇಂದ್ರಸಿಂಗ್ ಧೋನಿ

ಹೋದ ವರ್ಷ ತಂಡವು ಪ್ಲೇ ಆಫ್ ಪ್ರವೇಶಿಸಲೂ ವಿಫಲವಾಗಿತ್ತು.

ಈ ಬಾರಿ ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನ ಗಳಿಸಿ ಕ್ವಾಲಿಫೈಯರ್ ಪ್ರವೇಶಿಸಿದ್ದ ಡೆಲ್ಲಿ ತಂಡವು, ಗುರಿ ಬೆನ್ನಟ್ಟಿದ್ದ ಚೆನ್ನೈಗೆ ಆರಂಭದಲ್ಲಿಯೇ ಬಲವಾದ ಪೆಟ್ಟು ಕೊಟ್ಟಿತು. ಎನ್ರಿಚ್ ನಾರ್ಕಿಯಾ ಮೊದಲ ಓವರ್‌ನಲ್ಲಿಯೇ ಫಫ್ ಡುಪ್ಲೆಸಿ ವಿಕೆಟ್ ಕಬಳಿಸಿದರು. ಆದರೆ ಆಗ ಕ್ರೀಸ್‌ಗೆ ಬಂದ ರಾಬಿನ್ ಉತ್ತಪ್ಪ ಅವರು ಋತುರಾಜ್ ಅವರೊಂದಿಗೆ ಎರಡನೇ ವಿಕೆಟ್ ಜೊತೆಯಾಟದಲ್ಲಿ 110 ರನ್ ಸೇರಿಸಿದರು. ಸುಂದರ ಹೊಡೆತಗಳ ರಸದೌತಣ ನೀಡಿದ ಕೊಡಗಿನ ಉತ್ತಪ್ಪ ತಾವಿನ್ನೂ ದಣಿದಿಲ್ಲ ಎಂಬುದನ್ನು ತೋರಿಸಿಕೊಟ್ಟರು. ಯುವ ಬ್ಯಾಟ್ಸ್‌ಮನ್ ಋತುರಾಜ್ ಅವರಿಗೆ ಸಮನಾಗಿ ಆಡಿದ ಅನುಭವಿ ರಾಬಿನ್ ಏಳು ಬೌಂಡರಿ, ಎರಡು ಸಿಕ್ಸರ್ ಸಿಡಿಸಿದರು.

ಆದರೆ 14ನೇ ಓವರ್‌ನಲ್ಲಿ ಡೆಲ್ಲಿ ಬೌಲರ್ ಟಾಮ್ ಕರನ್ ಈ ಜತೆಯಾಟ ಮುರಿದರು. ರಾಬಿನ್ ಉತ್ತಪ್ಪ ವಿಕೆಟ್ ಗಳಿಸಿದ ಅವರು ಅದೇ ಓವರ್‌ನಲ್ಲಿ ಶಾರ್ದೂಲ್ ಠಾಕೂರ್ ಅವರನ್ನೂ ಔಟ್ ಮಾಡಿದರು. ಅಂಬಟಿ ರಾಯುಡು ರನೌಟ್ ಆಗಿ ನಿರ್ಗಮಿಸಿದರು. ಇದರಿಂದಾಗಿ ಚೆನ್ನೈ ಬಳಗದಲ್ಲಿ ಆತಂಕ ಮೂಡಿತು.

7ನೇ ಕ್ರಮಾಂಕದಲ್ಲಿ ರವೀಂದ್ರ ಜಡೇಜ ಬದಲು ಕ್ರೀಸ್‌ಗೆ ಬಂದ ಧೋನಿ 19ನೇ ಓವರ್‌ನಲ್ಲಿ ಆವೇಶ್ ಖಾನ್ ಎಸೆತವನ್ನು ಸಿಕ್ಸರ್‌ಗೆ ಎತ್ತಿದರು. ಇದರಿಂದಾಗಿ ಕೊನೆಯ ಒಂದು ಓವರ್‌ನಲ್ಲಿ ಗೆಲುವಿಗಾಗಿ 13 ರನ್‌ಗಳು ಬೇಕಾದವು.ಟಾಮ್ ಕರನ್ ಹಾಕಿದ ಕೊನೆ ಓವರ್‌ನ ಮೊದಲ ಎಸೆತದಲ್ಲಿಯೇ ಮೋಯಿನ್ ಅಲಿ (16) ಔಟಾದರು. ಆದರೂ ಎದೆಗುಂದದ ಧೋನಿ ಸತತ ಮೂರು ಬೌಂಡರಿ ಬಾರಿಸಿ ತಂಡವನ್ನು ಜಯದತ್ತ ಮುನ್ನಡೆಸಿದರು.

ಡೆಲ್ಲಿ ತಂಡಕ್ಕೆ ಫೈನಲ್‌ಗೆ ಪ್ರವೇಶ ಪಡೆಯಲು ಇನ್ನೊಂದು ಅವಕಾಶ ಬಾಕಿ ಇದೆ. ಎರಡನೇ ಕ್ವಾಲಿಫೈಯರ್ ನಲ್ಲಿ ಗೆಲ್ಲಬೇಕು. ಸೋಮವಾರ ನಡೆಯಲಿರುವ ಎಲಿಮಿನೇಟರ್‌ನಲ್ಲಿ ಗೆದ್ದ ತಂಡವನ್ನು ಎರಡನೇ ಕ್ವಾಲಿಫೈಯರ್‌ನಲ್ಲಿ ಡೆಲ್ಲಿ ಎದುರಿಸುವುದು.

ಋತುರಾಜ್ ಗಾಯಕವಾಡ್ ಮತ್ತು ರಾಬಿನ್ ಉತ್ತಪ್ಪ– ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಡೆಲ್ಲಿ ಕ್ಯಾಪಿಟಲ್ಸ್ 5ಕ್ಕೆ 172 (20 ಓವರ್)

ಪೃಥ್ವಿ ಸಿ ಡುಪ್ಲೆಸಿ ಬಿ ಜಡೇಜ 60 (34 ಎ, 4x7, 6x3), ಶಿಖರ್ ಸಿ ಧೋನಿ ಬಿ ಹ್ಯಾಜಲ್‌ವುಡ್ 7 (7 ಎ, 4x1), ಶ್ರೇಯಸ್ ಸಿ ಋತುರಾಜ್ ಬಿ ಹ್ಯಾಜಲ್‌ವುಡ್ 1 (8 ಎ), ಅಕ್ಷರ್ ಸಿ ಸ್ಯಾಂಟ್ನರ್ (ಬದಲಿ) ಬಿ ಮೋಯಿನ್ 10 (11 ಎ, 4x1), ರಿಷಭ್ ಔಟಾಗದೆ 51 (35 ಎ, 4x3, 6x2), ಹೆಟ್ಮೆಯರ್ ಸಿ ಜಡೇಜ ಬಿ ಬ್ರಾವೊ 37 (24 ಎ, 4x3, 6x1), ಟಾಮ್ ಔಟಾಗದೆ 0 (1 ಎ)

ಇತರೆ : (ವೈಡ್ 6) 6

ವಿಕೆಟ್ ಪತನ: 1-36 (ಶಿಖರ್ ಧವನ್, 3.2), 2-50 (ಶ್ರೇಯಸ್ ಅಯ್ಯರ್, 5.3), 3-77 (ಅಕ್ಷರ್ ಪಟೇಲ್, 9.4), 4-80 (ಪೃಥ್ವಿ ಶಾ, 10.2), 5-163 (ಶಿಮ್ರಾನ್ ಹೆಟ್ಮೆಯರ್, 18.4),

ಬೌಲಿಂಗ್: ದೀಪಕ್ ಚಾಹರ್ 3–0–26–0, ಜೋಶ್ ಹ್ಯಾಜಲ್‌ವುಡ್ 4–0–29–2, ಶಾರ್ದೂಲ್ ಠಾಕೂರ್ 3–0–36–0, ರವೀಂದ್ರ ಜಡೇಜ 3–0–23–1, ಮೋಯಿನ್ ಅಲಿ 4–0–27–1, ಡ್ವೇನ್ ಬ್ರಾವೊ 3–0–31–1

ಚೆನ್ನೈ ಸೂಪರ್ ಕಿಂಗ್ಸ್ 6ಕ್ಕೆ 173 (19.4 ಓವರ್)

ಋತುರಾಜ್ ಸಿ ಅಕ್ಷರ್ ಬಿ ಆವೇಶ್ 70 (50 ಎ, 4x5, 6x2), ಡುಪ್ಲೆಸಿ ಬಿ ನಾರ್ಕಿಯ 1 (2 ಎ), ಉತ್ತಪ್ಪ ಸಿ ಶ್ರೇಯಸ್ ಬಿ ಟಾಮ್ 63 (44 ಎ, 4x7, 6x2), ಶಾರ್ದೂಲ್ ಸಿ ಶ್ರೇಯಸ್ ಬಿ ಟಾಮ್ 0 (1 ಎ), ಅಂಬಟಿ ರನೌಟ್ (ಶ್ರೇಯಸ್/ರಬಾಡ) 1 (3 ಎ), ಮೋಯಿನ್ ಸಿ ರಬಾಡ ಬಿ ಟಾಮ್ 16 (12 ಎ, 4x2), ಧೋನಿ ಔಟಾಗದೆ 18 (6 ಎ, 4x3, 6x1), ಜಡೇಜ ಔಟಾಗದೆ 0 (0 ಎ)

ಇತರೆ : (ಲೆಗ್ ಬೈ 1, ವೈಡ್ 3) 4

ವಿಕೆಟ್ ಪತನ: 1-3 (ಫಫ್ ಡು ಪ್ಲೆಸಿ, 0.4), 2-113 (ರಾಬಿನ್ ಉತ್ತಪ್ಪ, 13.3), 3-117 (ಶಾರ್ದೂಲ್ ಠಾಕೂರ್, 13.6), 4-119 (ಅಂಬಟಿ ರಾಯುಡು, 14.4), 5-149 (ಋತುರಾಜ್ ಗಾಯಕವಾಡ್, 18.1), 6-160 (ಮೋಯಿನ್ ಅಲಿ, 19.1)

ಬೌಲಿಂಗ್: ಆ್ಯನ್ರಿಚ್ ನಾರ್ಕಿಯ 4–0–31–1, ಆವೇಶ್ ಖಾನ್ 4–0–47–1, ಕಗಿಸೊ ರಬಾಡ 3–0–23–0, ಅಕ್ಷರ್ ಪಟೇಲ್ 3–0–23–0, ಟಾಮ್ ಕರನ್ 3.4–0–29–3, ರವಿಚಂದ್ರನ್ ಅಶ್ವಿನ್ 2–0–19–0

ಫಲಿತಾಂಶ: ಚೆನ್ನೈ ಸೂಪರ್ ಕಿಂಗ್ಸ್‌ಗೆ 4 ವಿಕೆಟ್‌ಗಳ ಜಯ

‘ಕಪ್’ ಕನಸಿಗೆ ಜೀವ ತುಂಬುವತ್ತ ಚಿತ್ತ

ಎಲಿಮಿನೇಟರ್: ವಿರಾಟ್ ಪಡೆಗೆ ಇಂದು ಕೋಲ್ಕತ್ತ ನೈಟ್ ರೈಡರ್ಸ್ ಸವಾಲು

ದುಬೈ (ಪಿಟಿಐ): ವಿರಾಟ್ ಕೊಹ್ಲಿ ನಾಯಕತ್ವದಲ್ಲಿ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಕಪ್ ಗೆಲ್ಲುವ ಕನಸು ನನಸಾಗಬೇಕಾದರೆ, ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಸೋಮವಾರದ ಎಲಿಮಿನೇಟರ್ ಪಂದ್ಯದಲ್ಲಿ ಜಯಿಸಲೇಬೇಕು.

ಮುಂದಿನ ವರ್ಷದಿಂದ ಭಾರತ ಟಿ20 ತಂಡ ಮತ್ತು ಆರ್‌ಸಿಬಿಯ ನಾಯಕತ್ವವನ್ನು ಬಿಟ್ಟುಕೊಡುವುದಾಗಿ ವಿರಾಟ್ ಈಗಾಗಲೇ ಪ್ರಕಟಿಸಿದ್ದಾರೆ. ಅವರು ನಾಯಕತ್ವ ವಹಿಸಿಕೊಂಡ ನಂತರ ಮತ್ತು ಅದಕ್ಕೂ ಮುನ್ನ ಆರ್‌ಸಿಬಿ ಐಪಿಎಲ್ ಚಾಂಪಿಯನ್ ಆಗಿಲ್ಲ. ಆದ್ದರಿಂದ ಕೋಲ್ಕತ್ತ ನೈಟ್ ರೈಡರ್ಸ್ ವಿರುದ್ಧದ ಪಂದ್ಯದಲ್ಲಿ ಜಯಿಸಿದರೆ ಮಾತ್ರ ಎರಡನೇ ಕ್ವಾಲಿಫೈಯರ್‌ಗೆ ಅವಕಾಶ ಸಿಗಲಿದೆ. ಅಲ್ಲಿಯೂ ಗೆದ್ದರೆ ಫೈನಲ್‌ನಲ್ಲಿ ಸೆಣಸಬಹುದು.

2009, 2011 ಮತ್ತು 2016ರಲ್ಲಿ ಫೈನಲ್ ತಲುಪಿದ್ದ ಆರ್‌ಸಿಬಿಗೆ ಕಪ್ ತನ್ನದಾಗಿಸಿಕೊಳ್ಳಲು ಸಾಧ್ಯವಾಗಿರಲಿಲ್ಲ. ಹೋದ ಬಾರಿ ಪ್ಲೇ ಆಫ್‌ನಲ್ಲಿ ಮುಗ್ಗರಿಸಿತ್ತು. 2008ರಿಂದಲೂ ಇರುವ ತಂಡ ಇನ್ನೂ ಒಂದು ಬಾರಿಯೂ ಪ್ರಶಸ್ತಿ ಜಯಿಸಿಲ್ಲ. ಅಪಾರ ಸಂಖ್ಯೆಯಲ್ಲಿ ಅಭಿಮಾನಿಗಳನ್ನು ಹೊಂದಿರುವ ಆರ್‌ಸಿಬಿ ತಂಡ ಈ ಬಾರಿ ಲೀಗ್ ಹಂತದಲ್ಲಿ ಉತ್ತಮವಾಗಿ ಆಡಿದೆ. ಮೂರನೇ ಸ್ಥಾನ ಪಡೆದು ಎಲಿಮಿನೇಟರ್‌ಗೆ ಬಂದಿದೆ.

ಆರಂಭಿಕ ಜೋಡಿ ವಿರಾಟ್, ದೇವದತ್ತ ಪಡಿಕ್ಕಲ್, ಶ್ರೀಕರ್ ಭರತ್ ಮತ್ತು ಗ್ಲೆನ್ ಮ್ಯಾಕ್ಸ್‌ವೆಲ್ ಭರ್ಜರಿ ಫಾರ್ಮ್‌ನಲ್ಲಿದ್ದಾರೆ. ವಿರಾಟ್, ದೇವದತ್ತ ಕೆಲವು ಪಂದ್ಯಗಳಲ್ಲಿ ನಿರಾಶೆ ಅನುಭವಿಸಿದ್ದರೂ ಮ್ಯಾಕ್ಸ್‌ವೆಲ್ ಮಾತ್ರ ರನ್‌ಗಳ ಹೊಳೆ ಹರಿಸುತ್ತಲೇ ಇದ್ದಾರೆ. ಕೊನೆಯ ಲೀಗ್ ಪಂದ್ಯದಲ್ಲಿ ಭರತ್ ಕೂಡ ಅಬ್ಬರದ ಅರ್ಧಶತಕ ಬಾರಿಸಿ ಭರವಸೆಮೂಡಿಸಿದ್ದಾರೆ. ಮಧ್ಯಮ ಕ್ರಮಾಂಕದಲ್ಲಿ ಎಬಿ ಡಿವಿಲಿಯರ್ಸ್ ಇರುವುದು ತಂಡದ ಆತ್ಮವಿಶ್ವಾಸ ಹೆಚ್ಚಿಸಿದೆ.

ಆದರೆ ತಂಡದ ಇಲ್ಲಿಯವರೆಗಿನ ಯಶಸ್ಸಿನಲ್ಲಿ ಬೌಲರ್‌ಗಳಿಗೆ ಸಿಂಹಪಾಲು ಸಲ್ಲಬೇಕು. ಅದರಲ್ಲೂ ಮಧ್ಯಮವೇಗಿ ಹರ್ಷಲ್ ಪಟೇಲ್ ಮತ್ತು ಲೆಗ್‌ಸ್ಪಿನ್ನರ್ ಯಜುವೇಂದ್ರ ಚಾಹಲ್ ಅವರದ್ದೇ ಪಾರುಪತ್ಯ. ಅವರಿಬ್ಬರಿಗೂ ತಕ್ಕ ಜೊತೆ ನೀಡುತ್ತಿರುವ ಮೊಹಮ್ಮದ್ ಸಿರಾಜ್ ಕೂಡ ಮಿಂಚುತ್ತಿದ್ದಾರೆ.

ಆದರೆ, ಕೋಲ್ಕತ್ತ ತಂಡವನ್ನು ಸುಲಭವಾಗಿ ಪರಿಗಣಿಸಿದರೆ ವಿರಾಟ್ ಬಳಗಕ್ಕೆ ಆಘಾತವಾಗಬಹುದು. ಲೀಗ್ ಹಂತದ ಎರಡನೇ ಸುತ್ತಿನ ಮೊದಲ ಪಂದ್ಯದಲ್ಲಿಯೇ ಅಂತಹದೊಂದು ಹೀನಾಯ ಸೋಲನ್ನು ಆರ್‌ಸಿಬಿಯು ಕೋಲ್ಕತ್ತ ಎದುರು ಅನುಭವಿಸಿತ್ತು. ವರುಣ ಚಕ್ರವರ್ತಿ ಸ್ಪಿನ್ ದಾಳಿಗೆ ದೂಳೀಪಟವಾಗಿತ್ತು. ನಂತರದ ಪಂದ್ಯಗಳಲ್ಲಿ ಏಳು–ಬೀಳು ಕಂಡರೂ ನಾಲ್ಕನೇ ಸ್ಥಾನದಲ್ಲಿ ಗಟ್ಟಿಯಾಗಿ ಹೆಜ್ಜೆಯೂರುವಲ್ಲಿ ತಂಡವು ಯಶಸ್ವಿಯಾಗಿದೆ. ಶುಭಮನ್ ಗಿಲ್, ನಿತೀಶ್ ರಾಣಾ, ರಾಹುಲ್ ತ್ರಿಪಾಠಿ ಮತ್ತು ನವಪ್ರತಿಭೆ ವೆಂಕಟೇಶ್ ಅಯ್ಯರ್ ಬ್ಯಾಟಿಂಗ್ ಬೆನ್ನೆಲುಬಾಗಿದ್ದಾರೆ. ಆದರೆ ನಾಯಕ ಏಯಾನ್ ಮಾರ್ಗನ್ ಮತ್ತು ಅನುಭವಿ ದಿನೇಶ್ ಕಾರ್ತಿಕ್ ತಮ್ಮ ನೈಜ ಫಾರ್ಮ್‌ಗೆ ಮರಳಿಲ್ಲ. ಸುನೀಲ್ ನಾರಾಯನ್, ಶಿವಂ ದುಬೆ ತಮ್ಮ ಆಲ್‌ರೌಂಡ್ ಆಟಕ್ಕೆ ಕುದುರಿಕೊಂಡರೆ ಆರ್‌ಸಿಬಿಗೆ ಕಷ್ಟವಾಗಬಹುದು. ಆ್ಯಂಡ್ರೆ ರಸೆಲ್ ಮತ್ತು ಬೌಲರ್ ಪ್ರಸಿದ್ಧಕೃಷ್ಣ ಅವರು ಗಾಯದಿಂದ ಚೇತರಿಸಿಕೊಂಡಿದ್ದು ಕಣಕ್ಕಿಳಿಯುವ ಸಾಧ್ಯತೆ ಇದೆ.

ಪ್ರಶಸ್ತಿ ಜಯದ ಕನಸು ಜೀವಂತವಾಗಿರಬೇಕಾದರೆ ಉಭಯ ತಂಡಗಳಿಗೂ ಇದು ಜಯಿಸಲೇಬೇಕಾದ ಪಂದ್ಯ. ಆದ್ದರಿಂದ ರೋಚಕ ರಸದೌತಣ ನೀಡುವ ಎಲ್ಲ ಸಾಧ್ಯತೆಗಳೂ ಇವೆ.



ಮಾರ್ಗನ್ ಮತ್ತು ವಿರಾಟ್ ಕೊಹ್ಲಿ

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಹರ್ಷಲ್ ಪಟೇಲ್	ಆರ್‌ಸಿಬಿ	30
ಆವೇಶ್ ಖಾನ್	ಡೆಲ್ಲಿ	23
ಬೂಮ್ರಾ	ಮುಂಬೈ	21

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಕೆ.ಎಲ್.ರಾಹುಲ್	ಪಂಜಾಬ್	626
ಋತುರಾಜ್	ಚೆನ್ನೈ	577
ಶಿಖರ್ ಧವನ್	ಡೆಲ್ಲಿ	551

ಪಂದ್ಯ ಆರಂಭ: ರಾತ್ರಿ 7.30ರಿಂದ
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಬಲಾಬಲ	
ಪಂದ್ಯಗಳು	28
ಆರ್‌ಸಿಬಿ ಜಯ	13
ಕೋಲ್ಕತ್ತ ಜಯ	15
ಹೆಚ್ಚು ರನ್ ಗಳಿಸಿದ ಬ್ಯಾಟ್ಸ್‌ಮನ್	
ಗ್ಲೆನ್ ಮ್ಯಾಕ್ಸ್‌ವೆಲ್ (ಆರ್‌ಸಿಬಿ)	498
ವಿರಾಟ್ ಕೊಹ್ಲಿ (ಆರ್‌ಸಿಬಿ)	366
ಹೆಚ್ಚು ವಿಕೆಟ್ ಗಳಿಸಿದವರು	
ಹರ್ಷಲ್ ಪಟೇಲ್ (ಆರ್‌ಸಿಬಿ)	30
ಚಾಹಲ್ (ಆರ್‌ಸಿಬಿ)	16
ವರುಣ ಚಕ್ರವರ್ತಿ (ಕೆಕೆಆರ್)	16
ಆ್ಯಂಡ್ರೆ ರಸೆಲ್ (ಕೆಕೆಆರ್)	11

ಯಜುವೇಂದ್ರ ಚಾಹಲ್

ವರುಣ ಚಕ್ರವರ್ತಿ

ವಿಶ್ವಕಪ್ ವಿಜೇತರಿಗೆ ₹ 12 ಕೋಟಿ

ದುಬೈ (ಪಿಟಿಐ): ಇದೇ ತಿಂಗಳು ನಡೆಯಲಿರುವ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ವಿಜೇತರಿಗೆ ₹ 12 ಕೋಟಿ ನಗದು ಬಹುಮಾನ ಒಲಿಯಲಿದೆ.

ರನ್ನರ್ಸ್ ಅಪ್ ತಂಡವು ಸುಮಾರು ಆರು ಕೋಟಿ ರೂಪಾಯಿ ಪಡೆಯಲಿದೆ. ಇದೇ 17 ರಿಂದ ನವೆಂಬರ್ 14ರವರೆಗೆ ಯುಎಇ ಮತ್ತು ಒಮನ್‌ನಲ್ಲಿ ನಡೆಯುವ ವಿಶ್ವಕಪ್ ಟೂರ್ನಿಗೆ ಭಾರತವು ಆತಿಥ್ಯ ವಹಿಸುತ್ತಿದೆ.

ಐಸಿಸಿಯು ಒಟ್ಟು ಬಹುಮಾನ ಮೊತ್ತವನ್ನು ₹ 42 ಕೋಟಿ ನಿಗದಿಪಡಿಸಿದೆ. ಸೆಮಿಫೈನಲ್‌ಗಳಲ್ಲಿ ಸೋತ ತಂಡಗಳೂ ತಲಾ ಮೂರು ಕೋಟಿ ರೂಪಾಯಿ ಪಡೆಯಲಿವೆ. ಪ್ರತಿಯೊಂದು ಹಂತದಲ್ಲಿಯೂ ನಗದು ಪುರಸ್ಕಾರಗಳು ತಂಡಗಳಿಗೆ ಸಿಗಲಿವೆ.

ಸೆಮಿಫೈನಲ್ ಪ್ರವೇಶಿಸುವುದನ್ನು ತಪ್ಪಿಸಿಕೊಂಡ ತಂಡಗಳಿಗೆ ₹53 ಲಕ್ಷ, ಮೊದಲ ಸುತ್ತಿನಲ್ಲಿ ಸೋತ ತಂಡಗಳಿಗೆ ₹ 30 ಲಕ್ಷ ನೀಡಲಾಗುವುದು ಎಂದು ಐಸಿಸಿಯು ಭಾನುವಾರ ತಿಳಿಸಿದೆ.2016ರ ಟೂರ್ನಿಯ ಮಾದರಿಯಲ್ಲಿ ಸೂಪರ್ 12ರಲ್ಲಿ ಜಯಿಸುವ ತಂಡಗಳಿಗೆ ಬೋನಸ್ ಕೂಡ ಇರಲಿದೆ.

ಪಾನೀಯ ವಿರಾಮ: ಟಿ20 ಪಂದ್ಯದ ಇನಿಂಗ್ಸ್‌ವೊಂದರಲ್ಲಿ ಇನ್ನು ಮುಂದೆ ಇನಿಂಗ್ಸ್‌ನಲ್ಲಿ ಎರಡು ಪಾನೀಯ ವಿರಾಮಗಳು ಇರಲಿವೆ. ಪ್ರತಿಯೊಂದು ವಿರಾಮದ ಅವಧಿಯು ಎರಡೂವರೆ ನಿಮಿಷ ಇರಲಿದೆ. ಪ್ರತಿ ಇನಿಂಗ್ಸ್‌ನ ಮಧ್ಯಂತರದಲ್ಲಿ ಈ ವಿರಾಮ ಪಡೆಯಬಹುದು. ಈ ಮೊದಲು ಇನಿಂಗ್ಸ್‌ಗೆ ಒಂದು ವಿರಾಮ ಮಾತ್ರ ಇತ್ತು. ಇದೀಗ ಅಧಿಕೃತ ಪ್ರಸಾರಕರಿಗೆ ಜಾಹೀರಾತು ಆದಾಯ ಹೆಚ್ಚಿಸಲು ಹೊಸ ನಿಯಮ ಅನುಕೂಲವಾಗಲಿದೆ ಎನ್ನಲಾಗಿದೆ.

ಆರ್‌ಎಸ್ ಪದಾರ್ಪಣೆ: ಟೂರ್ನಿಯಲ್ಲಿ ಅಂಪೈರ್ ತೀರ್ಪು ಮರುಪರಿಶೀಲನೆ ವ್ಯವಸ್ಥೆ (ಡಿಆರ್‌ಎಸ್) ಜಾರಿಗೆ ಬರಲಿದೆ. ಹಿಂದಿನ ಟಿ20 ವಿಶ್ವಕಪ್ ಸಂದರ್ಭದಲ್ಲಿ ಚುಟುಕು ಕ್ರಿಕೆಟ್‌ನಲ್ಲಿ ಡಿಆರ್‌ಎಸ್ ಬಳಕೆಯಾಗುತ್ತಿರಲಿಲ್ಲ.

ಸ್ಯಾಫ್ ಟೂರ್ನಿ: ಭಾರತಕ್ಕೆ ಮೊದಲ ಗೆಲುವು

ಮಾಲಿ (ಪಿಟಿಐ): ಭಾರತ ತಂಡ ಸ್ಯಾಫ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಕೊನೆಗೂ ಜಯ ಗಳಿಸಿತು. ಹಿಂದಿನ ಎರಡು ಪಂದ್ಯಗಳಲ್ಲಿ ಡ್ರಾಗೆ ಸಮಾಧಾನಪಟ್ಟುಕೊಂಡಿದ್ದ ತಂಡ ಭಾನುವಾರ ನಡೆದ ಪಂದ್ಯದಲ್ಲಿ ನೇಪಾಳವನ್ನು 1–0 ಅಂತರದಲ್ಲಿ ಮಣಿಸಿ ಫೈನಲ್ ಕನಸು ಜೀವಂತವಾಗಿರಿಸಿಕೊಂಡಿತು.

ಸುನಿಲ್ ಚೆಟ್ರಿ

ಮಾಲ್ದೀವ್ಸ್ ರಾಷ್ಟ್ರೀಯ ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಉಭಯ ತಂಡಗಳೂ ಜಿದ್ದಾಜಿದ್ದಿಯ ಪೈಪೋಟಿ ನಡೆಸಿದವು. ಹಿಂದಿನ ಎರಡು ಪಂದ್ಯಗಳಲ್ಲಿ ಜಯ ಗಳಿಸಿ ಭರವಸೆಯಲ್ಲಿದ್ದ ನೇಪಾಳ ನಿರಾಯಾಸವಾಗಿ ಆಡಿತು. ಫೈನಲ್ ಪ್ರವೇಶದ ಕನಸು ಜೀವಂತವಾಗಿ ಉಳಿಯಬೇಕಾದರೆ ಈ ಪಂದ್ಯದಲ್ಲಿ ಗೆಲುವು ಅನಿವಾರ್ಯವಾಗಿದ್ದ ಭಾರತ ಆಕ್ರಮಣಕ್ಕೆ ಒತ್ತು ನೀಡಿತು.

ಪಂದ್ಯದಲ್ಲಿ ಭಾರತಕ್ಕೆ ಗೋಲು ಗಳಿಸಲು ಅನೇಕ ಅವಕಾಶಗಳು ಲಭಿಸಿದ್ದವು. ಆದರೆ ಚೆಂಡನ್ನು ಗುರಿ ಮುಟ್ಟಿಸಲು ಸಾಧ್ಯವಾಗಲಿಲ್ಲ. 82ನೇ ನಿಮಿಷದಲ್ಲಿ ನಾಯಕ ಸುನಿಲ್ ಚೆಟ್ರಿ ಗೋಲು ಗಳಿಸುವಲ್ಲಿ ಯಶಸ್ವಿಯಾದರು. ಈ ಮೂಲಕ ಬ್ರೆಜಿಲ್ ದಿಗ್ಗಜ ಪೆಲೆ (77 ಗೋಲು) ದಾಖಲೆ ಸರಿಗಟ್ಟಿದರು. ಬ್ರೆಂಡನ್ ನೀಡಿದ ಪಾಸ್‌ನಲ್ಲಿ ಫಾರೂಕ್ ಚೌಧರಿ ಅವರು ಚೆಂಡನ್ನು ಹೆಡ್ ಮಾಡಿದರು. ಅದು ನೇರವಾಗಿ ಸುನಿಲ್ ಚೆಟ್ರಿ ಬಳಿಗೆ ಸಾಗಿತು. ಚೆಟ್ರಿ ಸುಲಭವಾಗಿ ಗೋಲು ಗಳಿಸಿದರು.

ನೌಕರನ ವಜಾ ಪ್ರಕರಣ: ಸಿವಿಲ್ ಕೋರ್ಟ್ ವ್ಯಾಪ್ತಿಗೆ ಬರದು –ಸುಪ್ರೀಂ

ನವದೆಹಲಿ: ಕೈಗಾರಿಕಾ ವಿವಾದ ಕಾಯ್ದೆಯಡಿ ನೌಕರನನ್ನು ವಜಾ ಮಾಡಿದ್ದ ಪ್ರಕರಣದ ವಿಚಾರಣೆಯು ಸಿವಿಲ್ ಕೋರ್ಟ್‌ನ ವ್ಯಾಪ್ತಿಗೆ ಬರುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಶನಿವಾರ ಹೇಳಿದೆ.

ನ್ಯಾಯಮೂರ್ತಿಗಳಾದ ಆರ್. ಸುಭಾಷ್ ರೆಡ್ಡಿ ಮತ್ತು ಹೃಷಿಕೇಶ್ ರಾಯ್ ಅವರಿದ್ದ ನ್ಯಾಯಪೀಠವು ಈ ಸಂಬಂಧ ಹಿಮಾಚಲ ಪ್ರದೇಶ ಹೈಕೋರ್ಟ್ ತಳೆದಿದ್ದ ನಿಲುವನ್ನು ಎತ್ತಿಹಿಡಿಯಿತು.

ನೌಕರನನ್ನು ಮರು ನೇಮಿಸುವಂತೆ ಸ್ಥಳೀಯ ಸಿವಿಲ್ ಕೋರ್ಟ್, ರಾಜ್ಯ ವಿದ್ಯುತ್ ಮಂಡಳಿಗೆ ನೀಡಿದ್ದ ನಿರ್ದೇಶನವನ್ನು ಹೈಕೋರ್ಟ್ ರದ್ದುಪಡಿಸಿತ್ತು. ‘ಈ ಪ್ರಕರಣ ಸಿವಿಲ್ ಕೋರ್ಟ್ ವ್ಯಾಪ್ತಿಗೆ ಬರುವುದಿಲ್ಲ’ ಎಂದು ಹೇಳಿತ್ತು.

ಸಿವಿಲ್ ಕೋರ್ಟ್‌ನ ನಿರ್ದೇಶನವನ್ನು ಪ್ರಶ್ನಿಸಿದ್ದ ವಿದ್ಯುತ್ ಮಂಡಳಿ, ‘ಈ ಪ್ರಕರಣವು ಕಾರ್ಮಿಕ ನ್ಯಾಯಾಲಯದ ಪರಿಧಿಗೆ ಬರುತ್ತದೆ. ಸಿವಿಲ್ ಕೋರ್ಟ್ ವ್ಯಾಪ್ತಿಗಲ್ಲ’ ಎಂದು ಪ್ರತಿಪಾದಿಸಿತ್ತು.

ದಿನಗೂಲಿ ನೌಕರನನ್ನು ವಿದ್ಯುತ್ ಮಂಡಳಿಯು ಜನವರಿ 1, 1985ರಂದು ಸೇವೆಯಿಂದ ಕೈಬಿಟ್ಟಿತ್ತು. ನೌಕರ, ತಾನು 2,778 ದಿನ ಸೇವೆ ಸಲ್ಲಿಸಿದ್ದು, ಕಾಯಂಗೊಳ್ಳುವ ಹಕ್ಕು ಹೊಂದಿದ್ದೇನೆ ಎಂದು ವಾದಿಸಿದ್ದರು. ಆದರೆ, ವಿದ್ಯುತ್ ಮಂಡಳಿಯು ‘ನೌಕರ ನಿರಂತರವಾಗಿ 240ಕ್ಕೂ ಹೆಚ್ಚು ದಿನ ಕಾರ್ಯನಿರ್ವಹಿಸಿಲ್ಲ’ ಎಂದು ಹೇಳಿತ್ತು.

ವಿಚಾರಣೆ ನಡೆಸಿದ್ದ ಸಿವಿಲ್ ಕೋರ್ಟ್ ಸೇವೆಯ ಸಕ್ರಮಕ್ಕೆ ಸೂಚಿಸಿತ್ತು.

ಇದನ್ನು ಪ್ರಶ್ನಿಸಿ ವಿದ್ಯುತ್ ಮಂಡಳಿ ಸಲ್ಲಿಸಿದ್ದ ಅರ್ಜಿಯನ್ನು ಜಿಲ್ಲಾ ಕೋರ್ಟ್ ವಜಾ ಮಾಡಿತ್ತು. ‘ವ್ಯಾಪ್ತಿಯು ಕಾಯ್ದೆ ಮತ್ತು ವಸ್ತುಸ್ಥಿತಿಯನ್ನು ಆಧರಿಸಿದೆ. ವಿಚಾರಣೆ ಆಗಲೇ ಸುದೀರ್ಘ ಕಾಲ ನಡೆದಿದೆ. ಈ ಹಂತದಲ್ಲಿ ಕಾರ್ಮಿಕ ನ್ಯಾಯಾಲಯಕ್ಕೆ ಪ್ರಕರಣವನ್ನು ವರ್ಗಾಯಿಸಲಾಗದು. ಸಿವಿಲ್ ಕೋರ್ಟ್ ಅಥವಾ ಕೈಗಾರಿಕಾ ನ್ಯಾಯಾಲಯದಿಂದ ಪರಿಹಾರ ಪಡೆಯುವ ಆಯ್ಕೆ ನೌಕರನಿಗಿದೆ’ ಎಂದೂ ಹೇಳಿತ್ತು.

ಕೈಗಾರಿಕ ವಿವಾದ ಕಾಯ್ದೆಯನ್ವಯ ಆಗಸ್ಟ್ 22, 2001ರಿಂದ ಅನ್ವಯಿಸಿ ದಿನಗೂಲಿ ನೌಕರನನ್ನು ಸೇವೆಯಿಂದ ಕೈಬಿಡಲಾಗಿತ್ತು. ವಿದ್ಯುತ್ ಮಂಡಳಿಯು ಕೆಳಹಂತದ ಗುಮಾಸ್ತ ಹುದ್ದೆಗೆ ಅವಕಾಶ ಕಲ್ಪಿಸಿದ್ದರೂ, ನೌಕರ ಸಕಾಲದಲ್ಲಿ ಸೇವೆಗೆ ವರದಿ ಮಾಡಿಕೊಂಡಿರಲಿಲ್ಲ.

ಜಾಗತಿಕವಾಗಿ ಶೇ 50ರಷ್ಟು ಶಾಲೆಗಳಲ್ಲಿ ಭೌತಿಕ ತರಗತಿ ಆರಂಭ

ನವದೆಹಲಿ (ಪಿಟಿಐ): ಕೋವಿಡ್–19 ಪಿಡುಗು ಕಾಣಿಸಿಕೊಂಡ ಒಂದೂವರೆ ವರ್ಷದ ನಂತರ ಜಾಗತಿಕವಾಗಿ ಶೇ 50ರಷ್ಟು ಶಾಲೆಗಳಲ್ಲಿ ಮಾತ್ರ ಭೌತಿಕವಾಗಿ ಕಲಿಕೆ–ಬೋಧನಾ ಪ್ರಕ್ರಿಯೆಗೆ ಚಾಲನೆ ನೀಡಲಾಗಿದೆ.

ಶೇ 34ರಷ್ಟು ಶಾಲೆಗಳು ಈಗಲೂ ‘ಹೈಬ್ರಿಡ್ ವಿಧಾನ’ದ (ಆನ್‌ಲೈನ್ ತರಗತಿ) ಕಲಿಕೆ–ಬೋಧನಾ ಪ್ರಕ್ರಿಯೆಯ ಮೊರೆ ಹೋಗಿವೆ ಎಂದು ‘ಕೋವಿಡ್–19 ಗ್ಲೋಬಲ್ ಎಜುಕೇಷನ್ ರಿಕವರಿ ಟ್ರ್ಯಾಕರ್’ನ ಅಂಕಿ–ಅಂಶಗಳು ಹೇಳುತ್ತವೆ.

ಅಮೆರಿಕದ ಜಾನ್ಸ್ ಹಾಪ್‌ಕಿನ್ಸ್ ವಿಶ್ವವಿದ್ಯಾಲಯ, ವಿಶ್ವ ಬ್ಯಾಂಕ್ ಹಾಗೂ ಯುನಿಸೆಫ್ ಜಂಟಿಯಾಗಿ ಈ ‘ಟ್ರ್ಯಾಕರ್’ ಆರಂಭಿಸಿವೆ. ಕೋವಿಡ್–19 ಪ್ರಕರಣಗಳು ಕಡಿಮೆಯಾದ ನಂತರ ಯೋಜನೆಗಳನ್ನು ರೂಪಿಸಲು, ಶಾಲೆಗಳನ್ನು ಪುನರಾರಂಭಿಸುವ ಸಂಬಂಧ ನಿರ್ಧಾರ ಕೈಗೊಳ್ಳುವುದಕ್ಕೆ ಅನುಕೂಲವಾಗಲು ವಿವಿಧ ಆಯಾಮಗಳ ಅಂಕಿ–ಅಂಶಗಳನ್ನು ಸಂಗ್ರಹಿಸಿ, ಕ್ರೋಡೀಕರಿಸಲು ಈ ‘ಟ್ರ್ಯಾಕರ್’ ರೂಪಿಸಲಾಗಿದೆ. ಸದ್ಯ, 200ಕ್ಕೂ ಅಧಿಕ ರಾಷ್ಟ್ರಗಳು ಈ ‘ಟ್ರ್ಯಾಕರ್’ನ ನೆರವು ಪಡೆಯುತ್ತಿವೆ.

ಶೇ 53ರಷ್ಟು ದೇಶಗಳು ಶಿಕ್ಷಕರಿಗೆ ಲಸಿಕೆ ನೀಡಲು ಆದ್ಯತೆ ನೀಡಿರುವುದು ಅಂಕಿ–ಅಂಶಗಳಿಂದ ತಿಳಿದುಬರುತ್ತದೆ.

ಅಸ್ಸಾಂ–ಮೇಘಾಲಯ ಗಡಿ ವಿವಾದ ಸಚಿವರಿಂದ ಜಂಟಿ ಪರಿಶೀಲನೆ

ಪಿಲಿಂಗ್‌ಕಟ, ಅಸ್ಸಾಂ (ಪಿಟಿಐ): ಅಸ್ಸಾಂ ಮತ್ತು ಮೇಘಾಲಯ ರಾಜ್ಯಗಳ ಸಚಿವರು ಶನಿವಾರ ಉಭಯ ರಾಜ್ಯಗಳ ನಡುವಣ ಗಡಿ ವಿವಾದ ಇತ್ಯರ್ಥಪಡಿಸಿಕೊಳ್ಳುವ ಕ್ರಮವಾಗಿ ಅಂತರರಾಜ್ಯದ ಗಡಿ ಭಾಗದಲ್ಲಿ ಜಂಟಿ ಪರಿಶೀಲನೆ ನಡೆಸಿದರು.

ಸುದೀರ್ಘ ಕಾಲದಿಂದ ಇರುವ ಗಡಿ ವಿವಾದ ಬಗೆಹರಿಸಿಕೊಳ್ಳುವ ಉದ್ದೇಶದಿಂದ ಗಡಿ ಭಾಗದ ಪಿಲಿಂಗ್‌ಕಟ, ಗಣೇಶ್ ನಗರ್, ಮೈಖುಲಿ, ಪಟರ್‌ಕುಚಿ ಮತ್ತು ಖಾನಾಪರ ಪ್ರದೇಶದಲ್ಲಿ ಈ ಜಂಟಿ ಪರಿಶೀಲನೆ ನಡೆಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಸ್ಸಾಂನ ಜಲಸಂಪನ್ಮೂಲ ಸಚಿವ ಪಿಜುಶ್ ಹಜಾರಿಕಾ, ಶಾಸಕ ಅತುಲ್ ಬೊರಾ, ಮೇಘಾಲಯದ ಉಪ ಮುಖ್ಯಮಂತ್ರಿ ಪ್ರೆಸ್ಟೋನ್ ಟಿನ್‌ಸೊಂಗ್ ಹಾಗೂ ಉಭಯ ರಾಜ್ಯಗಳ ಅಧಿಕಾರಿಗಳು ಹಾಜರಿದ್ದು, ಸ್ಥಳೀಯರ ಜೊತೆಗೂ ಚರ್ಚಿಸಿದರು.

ಗಡಿ ವಿವಾದ ಮತ್ತು ಆಗಬೇಕಾದ ಅಭಿವೃದ್ಧಿ ಕಾರ್ಯಗಳನ್ನು ಕುರಿತು ಸ್ಥಳೀಯ ನಿವಾಸಿಗಳ ಅಭಿಪ್ರಾಯಗಳನ್ನು ತಿಳಿಯಲು ಜಂಟಿ ಸಮೀಕ್ಷೆ ಕೈಗೊಳ್ಳಲಾಯಿತು ಎಂದು ಹಜಾರಿಕ ತಿಳಿಸಿದರು. ಉಭಯ ರಾಜ್ಯಗಳ ಮುಖ್ಯಮಂತ್ರಿಗಳಿಗೆ ವರದಿ ಸಲ್ಲಿಸಲಿದ್ದು, ಈ ಸಂಬಂಧ ಅವರು ಅಂತಿಮ ತೀರ್ಮಾನವನ್ನು ಕೈಗೊಳ್ಳುವರು ಎಂದು ತಿಳಿಸಿದರು.

ಆಗ್ರಾದ ಐತಿಹಾಸಿಕ ತಾಜ್‌ಮಹಲ್ ಎದುರು ಡೆನ್ಮಾರ್ಕ್ ಪ್ರಧಾನಿ ಮೆಟ್ಟೆ ಫ್ರೆಡೆರಿಕ್‌ಸೆನ್ ದಂಪತಿಯು ಛಾಯಾಚಿತ್ರಕ್ಕೆ ಪೋಸ್ ನೀಡಿದರು – ಪಿಟಿಐ ಚಿತ್ರ

‘ಚೀನಾ ಒತ್ತಡಕ್ಕೆ ಮಣಿಯುವುದಿಲ್ಲ’

ತೈಪೆ (ಎಎಫ್‌ಪಿ): ‘ಚೀನಾದ ಒತ್ತಡಕ್ಕೆ ಮಣಿಯುವ ಪ್ರಶ್ನೆಯೇ ಇಲ್ಲ. ದ್ವೀಪರಾಷ್ಟ್ರದ ತೈವಾನ್‌ನ ಅಸ್ತಿತ್ವವನ್ನು ರಕ್ಷಿಸಿಕೊಳ್ಳಲಾಗುವುದು’ ಎಂದು ತೈವಾನ್ ಭಾನುವಾರ ಹೇಳಿದೆ.

‘ತೈವಾನ್ ದೇಶದ ಭಾಗವಾಗಿದ್ದು, ಬಲಪ್ರಯೋಗ ಮಾಡಿಯಾದರೂ ಅದನ್ನು ವಶಕ್ಕೆ ಪಡೆಯುತ್ತೇವೆ’ ಎಂಬ ಚೀನಾದ ಪ್ರತಿಪಾದನೆಗೆ ಈ ಮೂಲಕ ಭಾನುವಾರ ತಿರುಗೇಟು ನೀಡಿದೆ.

‘ತೈವಾನ್‌ನ ರಾಷ್ಟ್ರೀಯ ದಿನ’ ಸಮಾರಂಭದಲ್ಲಿ ಮಾತನಾಡಿದ ಅಧ್ಯಕ್ಷೆ ಸೈ ಇಂಗ್ ವೆನ್, ‘ನಾವು ಸಾಧನೆ ಮಾಡಿದಷ್ಟೂ ಚೀನಾದ ಒತ್ತಡ ಹೆಚ್ಚಲಿದೆ. ಚೀನಾದ ಮಾರ್ಗದಲ್ಲಿಯೇ ಸಾಗಬೇಕು ಎಂದು ನಮ್ಮ ಮೇಲೆ ಒತ್ತಡ ಹೇರಲಾಗದು’ ಎಂದೂ ಪ್ರತಿಪಾದಿಸಿದರು.

ಚೀನಾದ ಯುದ್ಧ ವಿಮಾನಗಳು ದ್ವೀಪರಾಷ್ಟ್ರದ ವಾಯುಗಡಿ ಪ್ರವೇಶಿಸಿವೆ ಎಂಬ ವರದಿಗಳ ಹಿಂದೆಯೇ ಈ ಮಾತು ಹೇಳಿದರು. ತೈವಾನ್ ರಕ್ಷಣಾ ಸಚಿವಾಲಯದ ಪ್ರಕಾರ, ಎರಡು ಯುದ್ಧ ವಿಮಾನ ಸೇರಿದಂತೆ ಮೂರು ವಿಮಾನಗಳು ತೈವಾನ್ ವಾಯುಗಡಿಯನ್ನು ಪ್ರವೇಶಿಸಿವೆ.

‘ಚೀನಾ ಜೊತೆಗಿನ ಗೊಂದಲವು ಬಗೆಹರಿಯುವ ವಿಶ್ವಾಸವಿದೆ. ಆದರೆ, ತೈವಾನ್ ನಾಗರಿಕರು ಒತ್ತಡಕ್ಕೆ ಮಣಿಯುತ್ತಾರೆ ಎಂಬ ಭ್ರಮೆ ಬೇಡ. ತೈವಾನ್ ರಕ್ಷಣೆಗೆ ಮೊದಲ ಆದ್ಯತೆ ನೀಡಲಿದೆ’ ಎಂದು ಹೇಳಿದರು.

ನಿಧನವಾರ್ತೆ

ಪಾಕ್ ಅಣುಶಕ್ತಿ ವಿಜ್ಞಾನಿ ಅಬ್ದುಲ್ ಖಾದಿರ್ ಖಾನ್

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ‘ಅಣುಶಕ್ತಿ ಬಾಂಬ್‌ನ ಪಿತಾಮಹ’ ಎಂದೇ ಗುರುತಿಸಲಾಗುತ್ತಿದ್ದ, ಅಣುಶಕ್ತಿ ವಿಜ್ಞಾನಿ ಅಬ್ದುಲ್ ಖಾದಿರ್ ಖಾನ್ (85) ಭಾನುವಾರ ಬೆಳಿಗ್ಗೆ ನಿಧನರಾದರು.

ಅಬ್ದುಲ್ ಖಾದಿರ್ ಖಾನ್

ಕೋವಿಡ್ ಪೀಡಿತರಾಗಿದ್ದ ಅವರು ಕೆಲಕಾಲದಿಂದ ಅಸ್ವಸ್ಥರಾಗಿದ್ದರು. ಉಸಿರಾಟದ ಸಮಸ್ಯೆ ಕಾಣಿಸಿಕೊಂಡ ಕಾರಣ ಭಾನುವಾರ ಬೆಳಿಗ್ಗೆ ಇಲ್ಲಿನ ಖಾನ್ ಸಂಶೋಧನಾ ಪ್ರಯೋಗಾಲಯದ ಆಸ್ಪತ್ರೆಗೆ ದಾಖಲಿಸಲಾಗಿತ್ತು.

1936ರಲ್ಲಿ ಅವಿಭಜಿತ ಭಾರತದ ಭೋಪಾಲ್‌ನಲ್ಲಿ ಜನಿಸಿದ್ದು ದೇಶ ವಿಭಜನೆಯ ನಂತರ ಪಾಕಿಸ್ತಾನಕ್ಕೆ ವಲಸೆ ಹೋಗಿದ್ದರು.

ಸರ್ಕಾರದ ಅಸೋಸಿಯೇಟ್ ಪ್ರೆಸ್ ಪ್ರಕಾರ, ಅವರನ್ನು ಆಗಸ್ಟ್ 26ರಂದು ಆಸ್ಪತ್ರೆಗೆ ಸೇರಿಸಿದ್ದು, ಬಳಿಕ ರಾವಲ್ಪಿಂಡಿಯ ಮಿಲಿಟರಿ ಆಸ್ಪತ್ರೆಗೆ ಸ್ಥಳಾಂತರಿಸಿ ಚಿಕಿತ್ಸೆ ನೀಡಲಾಗಿತ್ತು. ಚೇತರಿಕೆ ನಂತರ ಆಸ್ಪತ್ರೆಯಿಂದ ಕಳುಹಿಸಲಾಗಿತ್ತು.

ದೇಶವು ಅಣುಶಕ್ತಿಯಲ್ಲಿ ಸಾಮರ್ಥ್ಯ ಹೊಂದುವಲ್ಲಿ ಅವರ ಕೊಡುಗೆ ಗಮನಾರ್ಹ ಎಂದು ಅಧ್ಯಕ್ಷ ಆರಿಫ್ ಅಲ್ವಿ ಟ್ವೀಟ್ ಮಾಡಿದ್ದಾರೆ. ಪ್ರಧಾನಿ ಇಮ್ರಾನ್ ಖಾನ್, ‘ಖಾನ್ ನಿಧನರಿಂದ ಬೇಸರವಾಗಿದೆ’ ಎಂದು ಪ್ರತಿಕ್ರಿಯಿಸಿದ್ದಾರೆ.

ಹಬ್ಬಗಳ ಋತು ಆರಂಭ: ಸಮೀಕ್ಷೆಯಲ್ಲಿ ಬಹಿರಂಗ

ಕೋವಿಡ್ ಪ್ರಕರಣ ಏರಿಕೆ ಸಾಧ್ಯತೆ

ನವದೆಹಲಿ: ಭಾರತದಲ್ಲಿ ಹಬ್ಬಗಳ ಋತು ಆರಂಭವಾಗಲಿದ್ದು, ಕೋವಿಡ್–19 ಮಾರ್ಗಸೂಚಿಗಳ ಕುರಿತು ಡಿಜಿಟಲ್ ಸಮುದಾಯ ಆಧಾರಿತ ವೇದಿಕೆಯೊಂದು ನಡೆಸಿರುವ ಸಮೀಕ್ಷೆಯಲ್ಲಿ ‘ಸಾರ್ವಜನಿಕ ಸ್ಥಳಗಳಲ್ಲಿ ಶೇ 13ರಷ್ಟು ಜನರು ಮಾತ್ರ ಮಾಸ್ಕ್ ಧರಿಸುವುದು ಹಾಗೂ ಶೇ 6ರಷ್ಟು ಜನರು ಮಾತ್ರ ದೈಹಿಕ ಅಂತರ ಪಾಲಿಸುವುದು ಕಂಡುಬಂದಿದೆ’ ಎಂದು ತಿಳಿಸಿದ್ದಾರೆ.

‘ಲೋಕಲ್ ಸರ್ಕಲ್ಸ್’ ನಡೆಸಿರುವ ಸಮೀಕ್ಷೆಯಲ್ಲಿ ದೇಶದ 366 ಜಿಲ್ಲೆಗಳ ಒಟ್ಟು 65 ಸಾವಿರ ನಾಗರಿಕರಿಂದ ಪ್ರತಿಕ್ರಿಯೆ ಸಂಗ್ರಹಿಸಲಾಗಿದೆ.

ನಗರ, ಜಿಲ್ಲೆಗಳಲ್ಲಿ ಬಸ್ಸು, ರೈಲು, ವಿಮಾನ ಪ್ರಯಾಣದ ವೇಳೆ ಸಾರ್ವಜನಿಕರು ಕೋವಿಡ್ ಮಾರ್ಗಸೂಚಿಗಳನ್ನು ಹೇಗೆ ಪಾಲಿಸುತ್ತಿದ್ದಾರೆ ಎನ್ನುವ ಕುರಿತು ಸಮೀಕ್ಷೆಯಲ್ಲಿ ಅಧ್ಯಯನ ನಡೆಸಲಾಗಿದೆ. ಸಮೀಕ್ಷೆಯಲ್ಲಿ ಶೇ 60ರಷ್ಟು ಪ್ರಮಾಣದಲ್ಲಿ ಪುರುಷರು ಹಾಗೂ ಶೇ 36ರಷ್ಟು ಪ್ರಮಾಣದಲ್ಲಿ ಮಹಿಳೆಯರು ಭಾಗವಹಿಸಿದ್ದರು. ಇದೇ ವರ್ಷ ಜೂನ್‌ನಲ್ಲೂ ‘ಲೋಕಲ್ ಸರ್ಕಲ್ಸ್’ ಸಮೀಕ್ಷೆ ಕೈಗೊಂಡಿತ್ತು. ಈ ಕುರಿತು ಕೇಂದ್ರ ಆರೋಗ್ಯ ಸಚಿವಾಲಯವು ಹಂಚಿಕೊಂಡಿದ್ದ ಮಾಹಿತಿಯಲ್ಲಿ ಶೇ 29ರಷ್ಟು ಮಂದಿ ಮಾಸ್ಕ್ ಧರಿಸುವುದು ಹಾಗೂ ಶೇ 11ರಷ್ಟು ಜನರು ದೈಹಿಕ ಅಂತರ ಪಾಲಿಸುವುದು ಕಂಡುಬಂದಿತ್ತು ಎಂದು ಹೇಳಿದ್ದರು.

‘ಈ ಬಾರಿ ನಡೆಸಿರುವ ಸಮೀಕ್ಷೆಯಲ್ಲಿ ಮಾಸ್ಕ್ ಧರಿಸುವಿಕೆ ಶೇ 29ರಿಂದ 13ಕ್ಕೆ ಹಾಗೂ ದೈಹಿಕ ಅಂತರ ಪಾಲಿಸುವಿಕೆಯು ಶೇ 11ರಿಂದ 6ಕ್ಕೆ ಇಳಿದಿದೆ. ಬಹುತೇಕರು ಕೋವಿಡ್–19 ಹೋಗಿದೆ ಎಂದೇ ಭಾವಿಸಿದ್ದಾರೆ. ಆದರೆ, ಸಾಲು ಸಾಲು ಹಬ್ಬಗಳು ಆರಂಭವಾಗುತ್ತಿದ್ದು, ಶಾಪಿಂಗ್ ಮಾಲ್‌ಗಳು, ಕಾರ್ಯಕ್ರಮಗಳಲ್ಲಿ ಜನರು ಭಾಗವಹಿಸುತ್ತಿರುವುದನ್ನು ನೋಡಿದರೆ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಾಗುವ ಸಾಧ್ಯತೆ ಇದೆ’ ಎಂದು ‘ಲೋಕಲ್ ಸರ್ಕಲ್ಸ್’ನ ಸಂಸ್ಥಾಪಕ ಸಚಿನ್ ಥಾಪರಿಯಾ ಎಚ್ಚರಿಕೆ ನೀಡಿದ್ದಾರೆ.

ಈ ವರ್ಷದ ಫೆಬ್ರುವರಿ ಮತ್ತು ಮಾರ್ಚ್‌ನಲ್ಲಿ ‘ಲೋಕಲ್ ಸರ್ಕಲ್ಸ್’ನಲ್ಲಿ ವರದಿಯಾದ ಪ್ರಮಾಣಕ್ಕಿಂತಲೂ ಈ ಬಾರಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸ ಕೈಗೊಳ್ಳುತ್ತಿದ್ದಾರೆ ಎಂದೂ ಅವರು ಹೇಳಿದ್ದಾರೆ.

ಅಪಘಾತಕ್ಕೀಡಾದ ವಿಮಾನದ ಅವಶೇಷ

ಮಾಸ್ಕೊ: ವಿಮಾನ ಪತನ– ಸ್ಥಳದಲ್ಲೇ 16 ಮಂದಿ ಸಾವು

ಮಾಸ್ಕೊ (ರಾಯಿಟರ್ಸ್): ಪ್ಯಾರಾಚೂಟ್ ಜಂಪರ್ಸ್‌ಗಳ ತಂಡವನ್ನು ಕರೆದೊಯ್ಯುತ್ತಿದ್ದ ವಿಮಾನವು ರಷ್ಯಾದ ಟಟರ್‌ಸ್ತಾನ್ ಬಳಿ ಭಾನುವಾರ ಅಪಘಾತಕ್ಕೀಡಾಗಿದೆ. 16 ಮಂದಿ ಸ್ಥಳದಲ್ಲಿಯೇ ಮೃತಪಟ್ಟಿದ್ದು, ಇತರೆ 6 ಮಂದಿ ಗಾಯಗೊಂಡಿದ್ದಾರೆ.

ಮೆನೆಜ್‌ಲಿಂಸ್ಕಿ ನಗರದ ಬಳಿ ಅವಘಡ ಸಂಭವಿಸಿದೆ. ಅದರಲ್ಲಿ 20 ಮಂದಿ ಪ್ಯಾರಾಚೂಟ್ ಜಂಪರ್ಸ್ ಮತ್ತು ಇಬ್ಬರು ಸಿಬ್ಬಂದಿ ಇದ್ದರು. ಗಾಯಾಳುಗಳ ಸ್ಥಿತಿ ಚಿಂತಾಜನಕವಾಗಿದೆ ಎಂದು ಆರೋಗ್ಯ ಸಚಿವಾಲಯವು ಮಾಹಿತಿ ನೀಡಿದೆ. ಎಲ್–410 ಟರ್ಬೊಲೆಟ್ ಹೆಸರಿನ ಎರಡು ಎಂಜಿನ್‌ಗಳಿದ್ದ, ಕಡಿಮೆ ಅಂತರದ ಸಂಚಾರ ಉದ್ದೇಶದ ಈ ವಿಮಾನವು ಸ್ಥಳೀಯ ಏರೋಕ್ಲಬ್ ಸಂಸ್ಥೆಗೆ ಸೇರಿದ್ದಾಗಿದೆ ಎಂದು ಟಾಸ್ ಸುದ್ದಿ ಸಂಸ್ಥೆ ವರದಿ ಮಾಡಿದೆ.

ವಿಮಾನಪತನಕ್ಕೆ ಕಾರಣ ತಿಳಿದುಬಂದಿಲ್ಲ. ಬಹುಶಃ ಒಂದು ಎಂಜಿನ್‌ನಲ್ಲಿ ದೋಷ ಕಾಣಿಸಿಕೊಂಡಿರುವುದು ಕಾರಣ ಇರಬಹುದು ಎಂದು ಸ್ಥಳೀಯ ಅಧಿಕಾರಿಗಳು ಶಂಕಿಸಿದ್ದಾರೆ. ಪ್ಯಾರಾಚೂಟ್ ಯಾತ್ರಿಗಳು ಈ ವ್ಯಾಪ್ತಿಯಲ್ಲಿ ತರಬೇತಿ ನಿರತರಾಗಿದ್ದರು. ಸ್ಥಳೀಯ ಆಡಳಿತ ಏರೋಕ್ಲಬ್ ಸ್ಥಳೀಯ, ಯೂರೋಪಿಯನ್ ಮತ್ತು ವಿಶ್ವಚಾಂಪಿಯನ್ ಸ್ಪರ್ಧೆಗಳನ್ನು ಆಯೋಜಿಸಿತ್ತು ಎಂದು ಅಧಿಕಾರಿಳು ತಿಳಿಸಿದ್ದಾರೆ. ಅಪಘಾತದ ಹಿಂದೆಯೇ, ಸ್ಥಳೀಯ ಆಡಳಿತ ಏರೋಕ್ಲಬ್ ಜೊತೆಗಿನ ತರಬೇತಿ ಸೌಲಭ್ಯ ಒಪ್ಪಂದ ರದ್ದುಪಡಿಸಿದೆ.

ನೈಜೀರಿಯಾ:ಗುಂಡಿನ ದಾಳಿ-19 ಸಾವು

ಕಾನೊ, ನೈಜೀರಿಯಾ (ಎಎಫ್‌ಪಿ): ವಾಯುವ್ಯ ನೈಜೀರಿಯಾ ಮಾರುಕಟ್ಟೆಯೊಂದರಲ್ಲಿ ಜಾನುವಾರು ಕಳ್ಳರ ಗುಂಪು ನಡೆಸಿದ ಗುಂಡಿನ ದಾಳಿಯಲ್ಲಿ ಕನಿಷ್ಠ 19 ಜನರು ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಶಸ್ತ್ರಸಜ್ಜಿತ ಗುಂಪು ನಡೆಸಿದ ದಾಳಿಯಲ್ಲಿ ಹಲವರು ಗಂಭೀರವಾಗಿ ಗಾಯಗೊಂಡಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಕಳೆದ ಗುರುವಾರ ಸ್ಥಳೀಯ ಕಣ್ಗಾವಲುಗಾರರು ನಡೆಸಿದ ಕಾರ್ಯಾಚರಣೆಯಲ್ಲಿ 11 ಡಕಾಯಿತರು ಮೃತಪಟ್ಟಿದ್ದರು. ಇದಕ್ಕೆ ಪ್ರತೀಕಾರವಾಗಿ ಈ ದಾಳಿ ನಡೆಸಿರಬಹುದು ಎಂದು ತಿಳಿಸಲಾಗಿದೆ. ವಾಯುವ್ಯ ಮತ್ತು ಮಧ್ಯ ನೈಜೀರಿಯಾದಲ್ಲಿ ಜಾನುವಾರು ಕಳ್ಳರು, ಅಪಹರಣಕಾರರು ಮತ್ತು ಕ್ರಿಮಿನಲ್ ಗ್ಯಾಂಗ್‌ಗಳ ಹಾವಳಿ ವ್ಯಾಪಕವಾಗಿದೆ. ಈ ಗ್ಯಾಂಗ್ ಸ್ಥಳೀಯರನ್ನು ಲೂಟಿ ಮಾಡುವುದರ ಜೊತೆಗೆ ಕೊಲೆ ಮತ್ತು ಅಪಹರಣ ಕೃತ್ಯಗಳನ್ನು ಅವ್ಯಾಹತವಾಗಿ ನಡೆಸುತ್ತಿದೆ.

ಊಬರ್ ಕಪ್ ಫೈನಲ್ಸ್ ಬ್ಯಾಡ್ಮಿಂಟನ್: ಗಾಯದಿಂದಾಗಿ ಹಿಂದೆ ಸರಿದ ಸೈನಾ

ಸ್ಪೇನ್ ಎದುರು ಜಯಿಸಿದ ಭಾರತ

ಆಹಸ್, ಡೆನ್ಮಾರ್ಕ್ (ಪಿಟಿಐ): ತಾರಾ ಆಟಗಾರ್ತಿ ಸೈನಾ ನೆಹ್ವಾಲ್ ಗಾಯದಿಂದ ಹೊರಗುಳಿದರೂ ಎದೆಗುಂದದ ಭಾರತ ಮಹಿಳಾ ತಂಡವು ಊಬರ್ ಕಪ್ ಫೈನಲ್ಸ್ ಬ್ಯಾಡ್ಮಿಂಟನ್ ಟೂರ್ನಿಯ ಮೊದಲ ಹಣಾಹಣಿಯಲ್ಲಿ ಸ್ಪೇನ್ ಎದುರು 3–2ರಿಂದ ಜಯ ಸಾಧಿಸಿದೆ.

ಭಾನುವಾರ ನಡೆದ ಮೊದಲ ಸುತ್ತಿನಲ್ಲಿ ಸ್ಪೇನ್ ತಂಡದ ಎದುರು ಸೈನಾ ಅವರ ಮೂಲಕವೇ ಭಾರತ ಅಭಿಯಾನ ಆರಂಭಿಸಿತು. ಸಿಂಗಲ್ಸ್ ವಿಭಾಗದಲ್ಲಿ ಕ್ಲಾರಾ ಅಜುರ್‌ಮೆಂಡಿ ಅವರಿಗೆ ಎದುರಾಗಿದ್ದ ಸೈನಾ ಮೊದಲ ಗೇಮ್‌ಅನ್ನು 20–22ರಿಂದ ಕೈಚೆಲ್ಲಿದರು. ಬಳಿಕ ತೊಡೆಯ ಮಾಂಸಖಂಡದಲ್ಲಿ ನೋವಿನಿಂದ ಬಳಲಿದ ಕಾರಣ ಅವರು ಪಂದ್ಯದಿಂದ ಹಿಂದೆ ಸರಿದರು.

‘ಪಂದ್ಯದ ಅವಧಿಯಲ್ಲಿ ನೋವು ಹೆಚ್ಚಿತು. ಆದರೂ ಲಯಕ್ಕೆ ಮರಳಲು ಯತ್ನಿಸಿದೆ; ಸಾಧ್ಯವಾಗಲಿಲ್ಲ. ಉಸಿರು ಹಿಂದೆಕ್ಕೆಳೆದುಕೊಳ್ಳುವ ಸಂದರ್ಭದಲ್ಲಿ ನೋವು ಉಲ್ಬಣಿಸುತ್ತಿತ್ತು. ಹೀಗಾಗಿ ಹಿಂದೆ ಸರಿಯಬೇಕಾಯಿತು’ ಎಂದು ಸೈನಾ ಹೇಳಿದ್ದಾರೆ.

ಮಾಳವಿಕಾ ಬಾನ್ಸೋದ್– ರಾಯಿಟರ್ಸ್ ಚಿತ್ರ

ಸಿಂಗಲ್ಸ್ ವಿಭಾಗದ ಎರಡನೇ ಸುತ್ತಿನಲ್ಲಿ ಮಾಳವಿಕಾ ಬಾನ್ಸೋದ್ ಗೆಲುವು ಸಾಧಿಸುವ ಮೂಲಕ ನಿರಾಸೆಯನ್ನು ಮರೆಸಿದರು. ಸ್ಪೇನ್‌ನ ಬೀಟ್‌ರೀಜ್ ಕೊರ್ರಾಲೆಸ್ ಎದುರು ಕಣಕ್ಕಿಳಿದಿದ್ದ ಮಾಳವಿಕಾ 21–13, 21–15ರಿಂದ ಜಯದ ನಗೆ ಬೀರಿದರು.

ತನಿಶಾ ಕ್ರಾಸ್ಟೊ–ಋತುಪರ್ಣಾ ಪಂಡಾ ಜೋಡಿಯು ಡಬಲ್ಸ್ ವಿಭಾಗದಲ್ಲಿ ಶ್ರೇಷ್ಠ ಸಾಮರ್ಥ್ಯ ತೋರಿದರು. 21–10, 21–8ರಿಂದ ಪೌಲಾ ಲೋಪೆಜ್–ಲೊರೆನಾ ಯೂಸಲ್ ಅವರನ್ನು ಮಣಿಸಿದರು. ಇದರೊಂದಿಗೆ ಐದು ಸುತ್ತುಗಳ ಪಂದ್ಯದಲ್ಲಿ ಭಾರತ 2–1ರಿಂದ ಮುನ್ನಡೆ ಗಳಿಸಿತು.

ಸೈನಾ ನೆಹ್ವಾಲ್

ಸಿಂಗಲ್ಸ್ ವಿಭಾಗದ ಮೂರನೇ ಸುತ್ತಿನಲ್ಲಿ ಅದಿತಿ ಭಟ್ ಕೂಡ ಮಿಂಚಿದರು. ಅವರು 21–16, 21–14ರಿಂದ ಸ್ಪೇನ್‌ನ ಅನಿಯಾ ಸೆಟಿನ್ ಅವರನ್ನು ಮಣಿಸಿದರು. ಆದರೆ ಡಬಲ್ಸ್ ವಿಭಾಗದಲ್ಲಿ ಕಾಮನ್‌ವೆಲ್ತ್ ಗೇಮ್ಸ್ ಕಂಚಿನ ಪದಕ ವಿಜೇತ ಜೋಡಿ ಎನ್.ಸಿಕ್ಕಿರೆಡ್ಡಿ– ಅಶ್ವಿನಿ ಪೊನ್ನಪ್ಪ ಅವರು 18-21 21-14 17-21ರಿಂದ ಅಜುರ್‌ಮೆಂಡಿ ಮತ್ತು ಕೊರಾಲೆಸ್ ಎದುರು ಸೋಲು ಅನುಭವಿಸಿದರು.

ಭಾರತವು ‘ಬಿ’ ಗುಂಪಿನ ಎರಡನೇ ಪಂದ್ಯದಲ್ಲಿ ಸ್ಕಾಟ್ಲೆಂಡ್ ತಂಡವನ್ನು ಎದುರಿಸಲಿದೆ.

ಟೆನಿಸ್: ಸುಹಿತಾ ರಾಷ್ಟ್ರೀಯ ಚಾಂಪಿಯನ್

ಸುಹಿತಾ ಮರೂರಿ

ನವದೆಹಲಿ (ಪಿಟಿಐ): ಕರ್ನಾಟಕದ ಸುಹಿತಾ ಮಾರುತಿ ಅವರು ರಾಷ್ಟ್ರೀಯ ಟೆನಿಸ್ ಚಾಂಪಿಯನ್‌ಷಿಪ್‌ನ 16 ವರ್ಷದೊಳಗಿನ ಬಾಲಕಿಯರ ವಿಭಾಗದ ಪ್ರಶಸ್ತಿ ತಮ್ಮದಾಗಿಸಿಕೊಂಡರು. ಬಾಲಕರ ವಿಭಾಗದಲ್ಲಿ ಮಧ್ಯಪ್ರದೇಶದ ದಕ್ಷ್ ಪ್ರಸಾದ್ ಚಾಂಪಿಯನ್ ಆದರು. ದೆಹಲಿ ಲಾನ್ ಟೆನಿಸ್ ಸಂಸ್ಥೆಯ ಅಂಗಣದಲ್ಲಿ ಭಾನುವಾರ ನಡೆದ ಫೈನಲ್‌ನಲ್ಲಿ ಸುಹಿತಾ 6-3, 2-6, 6-4ರಲ್ಲಿ ಮಹಾರಾಷ್ಟ್ರದ ಸೋನಲ್ ಪಾಟೀಲ್ ಎದುರು ಗೆಲುವು ಸಾಧಿಸಿದರು. ಟೂರ್ನಿಯಲ್ಲಿ ಸುಹಿತಾಗೆ ಎರಡನೇ ಶ್ರೇಯಾಂಕ ನೀಡಿದ್ದರೆ ಸೋನಲ್ 12ನೇ ಶ್ರೇಯಾಂಕ ಹೊಂದಿದ್ದರು.

ಫೈನಲ್‌ನಲ್ಲಿ ಉತ್ತರಪ್ರದೇಶದ ರುಶಿಲ್ ಖೋಸ್ಲಾ ಅವರನ್ನು 6-3, 6-2ರಲ್ಲಿ ಮಣಿಸಿ ದಕ್ಷ್ ಅವರು ಪ್ರಶಸ್ತಿ ಮುಡಿಗೇರಿಸಿಕೊಂಡರು.

ಚಿತ್ರನಟ ಪುನೀತ್ ರಾಜಕುಮಾರ್ ಅವರೊಂದಿಗೆ ಶ್ರೀಹರಿ ನಟರಾಜ್, ನಿರಂಜನ್ ಮುಕುಂದನ್ ಮತ್ತು ಸುಹಾಸ್ ಯತಿರಾಜ್ ಇದ್ದಾರೆ–ಫೇಸ್‌ಬುಕ್ ಚಿತ್ರಗಳು

ನಟ ಪುನೀತ್ ಭೇಟಿಯಿಂದ ಪುಳಕಿತರಾದ ಕ್ರೀಡಾ ಸಾಧಕರು

ಬೆಂಗಳೂರು: ‘ಲಕ್ಷಾಂತರ ಅಭಿಮಾನಿಗಳನ್ನು ಹೊಂದಿರುವ ತಾರೆ ಪುನೀತ್ ರಾಜಕುಮಾರ್ ಅವರ ಅಭಿನಯಕ್ಕೆ ಮಾರು ಹೋದವರಲ್ಲಿ ನಾನೂ ಒಬ್ಬ. ಆದರೆ ಕ್ರೀಡೆಯ ಬಗ್ಗೆ ಅವರಿಗಿರುವ ಆಸಕ್ತಿ, ನಮ್ಮನ್ನು ಆಹ್ವಾನಿಸಿ, ಸತ್ಕರಿಸಿದ ರೀತಿಯಿಂದ ಅವರ ಮೇಲಿನ ಅಭಿಮಾನ ನೂರು ಪಟ್ಟು ಹೆಚ್ಚಾಯಿತು’–

ಟೋಕಿಯೊ ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತ ತಂಡವನ್ನು ಪ್ರತಿನಿಧಿಸಿದ್ದ ಕರ್ನಾಟಕದ ನಿರಂಜನ್ ಮುಕುಂದನ್ ಈ ಮಾತುಗಳನ್ನು ಹೇಳುವಾಗ ಪುಳಕಿತರಾಗಿದ್ದರು.

ಪ್ಯಾರಾಲಿಂಪಿಕ್ಸ್ ಪದಕ ವಿಜೇತ ಬ್ಯಾಡ್ಮಿಂಟನ್ ಪಟು ಸುಹಾಸ್ ಯತಿರಾಜ್, ಪವರ್ ಲಿಫ್ಟರ್ ಸಕೀನಾ ಮತ್ತು ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಿದ್ದ ಈಜುಪಟು ಶ್ರೀಹರಿ ನಟರಾಜ್ ಮತ್ತು ನಿರಂಜನ್ ಅವರನ್ನು ಪುನೀತ್ ರಾಜಕುಮಾರ್ ತಮ್ಮ ನಿವಾಸಕ್ಕೆ ಆಹ್ವಾನಿಸಿದ್ದರು. ಈ ಸಂದರ್ಭದ ಚಿತ್ರಗಳನ್ನು ನಿರಂಜನ್ ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಪ್ರಕಟಿಸಿದ್ದಾರೆ.

ಈಜು: 2ನೇ ದಿನವೂ ಸ್ವಿಮ್ ಲೈಫ್ ಪಾರಮ್ಯ

ಬೆಂಗಳೂರು: ಸ್ವಿಮ್‌ಲೈಫ್, ರಾಜ್ಯ ಮಾಸ್ಟರ್ಸ್ ಈಜಿನಲ್ಲಿ ಪಾರಮ್ಯ ಮೆರೆದು 35 ವಿಭಾಗಗಳಲ್ಲಿ ಪ್ರಥಮ ಹಾಗೂ 19 ವಿಭಾಗಗಳಲ್ಲಿ ಎರಡನೇ ಸ್ಥಾನ ಗಳಿಸಿತು.

ಮೆಡ್ಲೆ ವಿಭಾಗಗಳಲ್ಲಿ ಬಸವನಗುಡಿ ಈಜುಕೇಂದ್ರ, ಸನ್ ಸಿಟಿ, ಸ್ವಿಮ್ಮರ್ಸ್ ಕ್ಲಬ್ ಗಮನಾರ್ಹ ಸಾಧನೆ ಮಾಡಿದವು. ಪುರುಷರ 4x50 ಮೀಟರ್ಸ್ ಮೆಡ್ಲೆಯ ‘ಎ’ ಗುಂಪಿನಲ್ಲಿ ಬಸವನಗುಡಿ ಈಜು ಕೇಂದ್ರ (2:29.65) ಮೊದಲ ಸ್ಥಾನ ಗಳಿಸಿದರೆ ಪೇಸ್ ಅಕ್ವಾಟಿಕ್ಸ್ ಮತ್ತು ಶಿವಮೊಗ್ಗ ಸ್ಪೋರ್ಟ್ಸ್ ಕಾಂಪ್ಲೆಕ್ಸ್ ಎರಡು ಹಾಗೂ ಮೂರನೇ ಸ್ಥಾನ ಗಳಿಸಿದವು.

‘ಬಿ’ ಗುಂಪು: ಸ್ವಿಮ್ ಲೈಫ್ (2:24.81)–1, ಬಸವನಗುಡಿ–2, ನೆಟ್ಟಕಲ್ಲಪ್ಪ ಈಜುಕೇಂದ್ರ–3; **‘ಸಿ’ ಗುಂಪು:** ಸನ್‌ಸಿಟಿ ಅಕ್ವಾಟಿಕ್ಸ್ (3:03.49)–1, ಬಳ್ಳಾರಿ–2, ಸ್ವಿಮ್‌ಲೈಫ್–ಎ–3; **‘ಡಿ’ ಗುಂಪು:** ಸ್ವಿಮ್ಮರ್ಸ್ ಕ್ಲಬ್ (2:38.50)–1, ಮಂಗಳಾ ಸ್ವಿಮ್ಮರ್ ಕ್ಲಬ್–2, ಬಿ.ಜೆ. ಕರ್ನಾಟಕ–3; **‘ಇ’ ಗುಂಪು:** ಬಿಬಿಎಂ (3:54.81)–1; **‘ಎಫ್’ ಗುಂಪು:** ಸ್ವಿಮ್ ಲೈಫ್ (3:48.97)–1, ಮೈಸೂರು ವಿಶ್ವವಿದ್ಯಾಲಯ–2;

ಮಹಿಳೆಯರ 4x50 ಮೀಟರ್ಸ್ ಮೆಡ್ಲೆಯ ‘ಬಿ’ ಗುಂಪಿನಲ್ಲಿ ಸ್ವಿಮ್‌ಲೈಫ್ (3:27.40) ಹಾಗೂ ಬಿ.ಬಿ.ಬಿ.ಬಿ ಕ್ರಮವಾಗಿ ಪ್ರಥಮ ಮತ್ತು ದ್ವಿತೀಯ ಸ್ಥಾನ ಗಳಿಸಿದವು. **‘ಡಿ’ ಗುಂಪು:** ಸ್ವಿಮ್‌ಲೈಫ್ (3:53.16)–1, ಸೌತ್ ಈಸ್ಟ್–2; **‘ಇ’ ಗುಂಪು:** ಸ್ವಿಮ್‌ಲೈಫ್ (4:08.23)–1;

ಪುರುಷರ 4x50 ಮೀಟರ್ಸ್ ಫ್ರೀಸ್ಟೈಲ್‌ನ ‘ಎ’ ಗುಂಪಿನಲ್ಲಿ ಸ್ಪ್ರಿಂಟ್ ಅಕಾಡೆಮಿ (2:03.50) ಮತ್ತು ವಿಜಯನಗರ ಈಜುಕೇಂದ್ರ ಕ್ರಮವಾಗಿ ಮೊದಲೆರಡು ಬಹುಮಾನ ಗಳಿಸಿದವು. **‘ಬಿ’ ಗುಂಪು:** ಪೇಸ್ ಅಕಾಡೆಮಿ (2:11.31)–1, ಸ್ವಿಮ್ ಲೈಫ್–2, ಶಿವಮೊಗ್ಗ ಸ್ಪೋರ್ಟ್ಸ್ ಕಾಂಪ್ಲೆಕ್ಸ್–3;. **‘ಸಿ’ ಗುಂಪು:** ಸ್ವಿಮ್‌ಲೈಫ್ (2:41.06)–1, ಎನ್‌ಎಂಎಸ್‌ಎ–2, ಸನ್‌ಸಿಟಿ–3; **‘ಡಿ’ ಗುಂಪು:** ಮಂಗಳ ಸ್ವಿಮ್ಮಿಂಗ್ ಕ್ಲಬ್ (2:20.25)–1, ಸ್ವಿಮ್ಮರ್ಸ್ ಕ್ಲಬ್–2, ಬಿ.ಜೆ. ಕರ್ನಾಟಕ–3; **‘ಇ’ ಗುಂಪು:** ಬೆಂಗಳೂರು ಕ್ಲಬ್ (2:28.31)–1, ಮಂಗಳ ಸ್ವಿಮ್ಮಿಂಗ್ ಕ್ಲಬ್–2.

ಮಹಿಳೆಯರ ವಿಭಾಗ: ಸ್ವಿಮ್‌ಲೈಫ್ (2:48.59)–1, ಬಿ.ಬಿ.ಬಿ.ಬಿ–2; **‘ಸಿ’ ಗುಂಪು:** ಎನ್‌ಎಂಎಸ್‌ಎ (2:43.16)–1, ಸ್ವಿಮ್‌ಲೈಫ್ ಬಿ–2, ಸ್ವಿಮ್‌ಲೈಫ್ ಎ–3; ‘ಇ’ ಗುಂಪು: ಸ್ವಿಮ್‌ಲೈಫ್ (4:42.25)–1; ‘ಎಫ್’ ಗುಂಪು: ಸ್ವಿಮ್‌ಲೈಫ್ (3:05.94)–1, ವಿಶ್ವವಿದ್ಯಾಲಯ ಈಜುಕೇಂದ್ರ–2.

ಪ್ರಶಸ್ತಿಗಳೊಂದಿಗೆ ಸಂಭ್ರಮಿಸಿದ (ಎಡದಿಂದ) ಮೊಹಸಿನ್ ನಂದಿ ನಾರಾ, ಆಯುಷಿ ಗೋಡ್ಸೆ ಮತ್ತು ಯಶಸ್ವಿನಿ ಘೋರ್ಪಡೆ

ಟಿಟಿ: ಯಶಸ್ವಿನಿ, ಆಯುಷಿಗೆ ಪ್ರಶಸ್ತಿ

ಬೆಂಗಳೂರು: ಯಶಸ್ವಿನಿ ಘೋರ್ಪಡೆ, ಮೊಹಸಿನ್ ನಂದಿ ನಾರಾ ಹಾಗೂ ಆಯುಷಿ ಬಾಲಕೃಷ್ಣ ಗೋಡ್ಸೆ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಪ್ರಶಸ್ತಿಗೆ ಮುತ್ತಿಕ್ಕಿದರು.

ಮಲ್ಲೇಶ್ವರಂ ಸಂಸ್ಥೆಯು ಆಯೋಜಿಸಿರುವ ಟೂರ್ನಿಯಲ್ಲಿ ಭಾನುವಾರ ಯಶಸ್ವಿನಿ ಅವರು 19 ವರ್ಷದೊಳಗಿನ ಜೂನಿಯರ್ ಬಾಲಕಿಯರ ವಿಭಾಗದಲ್ಲಿ, ಮೊಹಸಿನ್ ಹಾಗೂ ಆಯುಷಿ ಕ್ರಮವಾಗಿ ಕೆಡೆಟ್ ಬಾಲಕರ ಮತ್ತು ಬಾಲಕಿಯರ ವಿಭಾಗದಲ್ಲಿ ಪ್ರಶಸ್ತಿ ತಮ್ಮದಾಗಿಸಿಕೊಂಡರು.

ಜೂನಿಯರ್ ಬಾಲಕಿಯರ ವಿಭಾ ಗದ ಫೈನಲ್ ಹಣಾಹಣಿಯಲ್ಲಿ ಯಶಸ್ವಿನಿ 11-4, 11-8, 11- 6, 12-10ರಿಂದ ಸಹನಾ ಎಚ್. ಮೂರ್ತಿ ಅವರ ಸವಾಲು ಮೀರಿದರು. ಕೆಡೆಟ್ ಬಾಲಕರ ಪ್ರಶಸ್ತಿ ಸುತ್ತಿನ ಸೆಣಸಾಟದಲ್ಲಿ ಮೊಹಸಿನ್ 10–12, 11–6, 15–13, 11–7ರಿಂದ ಅರ್ನವ್ ಎನ್. ಅವರನ್ನು ಸೋಲಿಸಿದರು. ಕೆಡೆಟ್ ಬಾಲಕಿಯರ ಜಿದ್ದಾಜಿದ್ದಿನ ಫೈನಲ್‌ನಲ್ಲಿ ಆಯುಷಿ 3–11, 11–7, 11–9, 4–11, 11–4ರಿಂದ ನಿಶಿ ವಿ. ಶಾಸ್ತ್ರಿ ಎದುರು ಗೆದ್ದರು.

ಶಿಕಾಗೊ ಮ್ಯಾರಥಾನ್: ಚೆಪ್‌ಜೆಟಿಚ್, ತುರಾಗೆ ಚಿನ್ನದ ಪದಕ

ಶಿಕಾಗೊ (ರಾಯಿಟರ್ಸ್): ಕೀನ್ಯಾದ ರುತ್ ಚೆಪ್‌ಜೆಟಿಚ್ ಹಾಗೂ ಇಥಿಯೋಪಿಯಾದ ಸೈಫು ತುರಾ ಅವರು ಶಿಕಾಗೊ ಮ್ಯಾರಥಾನ್‌ನ ಕ್ರಮವಾಗಿ ಮಹಿಳಾ ಮತ್ತು ಪುರುಷರ ವಿಭಾಗದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದರು.

ಭಾನುವಾರ ನಡೆದ ಮ್ಯಾರಥಾನ್‌ನ ಮಹಿಳೆಯರ ವಿಭಾಗದಲ್ಲಿ ರುತ್ 2 ತಾಸು 22 ನಿಮಿಷ 31 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಅಮೆರಿಕದ ಎಮಾ ಬೇಟ್ಸ್ (2 ತಾಸು 24.20 ನಿ.) ಬೆಳ್ಳಿ ಗೆದ್ದರು. ಅಮೆರಿಕದ ಸಾರಾ ಹಾಲ್ (2 ತಾಸು 27.19 ನಿ.) ಕಂಚು ತಮ್ಮದಾಗಿಸಿಕೊಂಡರು.

ಪುರುಷರ ವಿಭಾಗದಲ್ಲಿ ತುರಾ 2 ತಾಸು 6.12 ನಿಮಿಷಗಳಲ್ಲಿ ಗುರಿ ಮುಟ್ಟಿದರೆ, ಬೆಳ್ಳಿ ಗೆದ್ದ ಗಾಲೆನ್ ರುಪ್ 2 ತಾಸು 6.35 ನಿಮಿಷಗಳಲ್ಲಿ ನಿಗದಿತ ಗುರಿ ತಲುಪಿದರು. ಕೀನ್ಯಾಸ ಎರಿಕ್ ಕಿಪ್ಟಾನೂಯ್ (2 ತಾಸು 6.51 ನಿ.) ಕಂಚು ಗೆದ್ದರು.

ಸೈಫು ತುರಾ (ಎಡ) ಮತ್ತು ರುತ್ ಚೆಪ್‌ಜೆಟಿಚ್– ಎಎಫ್‌ಪಿ ಚಿತ್ರ

ಮೂರನೇ ಪಂದ್ಯದಲ್ಲೂ ಭಾರತಕ್ಕೆ ಸೋಲು; ಮಂದಾನ ಅರ್ಧಶತಕ ವ್ಯರ್ಥ

ಆಸ್ಟ್ರೇಲಿಯಾ ಮಹಿಳೆಯರಿಗೆ ಸರಣಿ

ಗೋಲ್ಡ್ ಕೋಸ್ಟ್ (ಪಿಟಿಐ): ಅರ್ಧಶತಕ ಗಳಿಸಿದ ಸ್ಮೃತಿ ಮಂದಾನ ಅವರ ಅಮೋಘ ಆಟ ವ್ಯರ್ಥ ವಾಯಿತು. ಮೂರನೇ ಟಿ20 ಪಂದ್ಯ ದಲ್ಲೂ ಭಾರತ ಮಹಿಳಾ ತಂಡ ಸೋತಿತು. 14 ರನ್‌ಗಳಿಂದ ಗೆದ್ದ ಆಸ್ಟ್ರೇಲಿಯಾ ಮೂರು ಪಂದ್ಯಗಳ ಸರಣಿಯನ್ನು 2–0 ಅಂತರದಿಂದ ತನ್ನದಾಗಿಸಿಕೊಂಡಿತು.

ಭಾನುವಾರ ನಡೆದ ಕೊನೆಯ ಪಂದ್ಯದಲ್ಲಿ 150 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಹರ್ಮನ್‌ಪ್ರೀತ್ ಕೌರ್ ಬಳಗಕ್ಕೆ ಆರು ವಿಕೆಟ್ ಕಳೆದುಕೊಂಡು 135 ರನ್ ಗಳಿಸಲು ಮಾತ್ರ ಸಾಧ್ಯ ವಾಯಿತು. ಏಕದಿನ ಸರಣಿಯಲ್ಲಿ 1–2 ಸೋಲು ಕಂಡಿದ್ದ ಭಾರತ ಏಕೈಕ ಟೆಸ್ಟ್‌ನಲ್ಲಿ ಡ್ರಾ ಸಾಧಿಸಿತ್ತು.

ಸ್ಮೃತಿ ಮಂದಾನ ಅವರೊಂದಿಗೆ ಇನಿಂಗ್ಸ್ ಆರಂಭಿಸಿದ ಶಫಾಲಿ ವರ್ಮಾ ತಂಡದ ಮೊತ್ತ ಮೂರು ರನ್ ಆಗಿದ್ದಾಗ ವಾಪಸಾದರು. ಸ್ಮೃತಿ ಮತ್ತು ಜೆಮಿಮಾ ರಾಡ್ರಿಗಸ್ ಎರಡನೇ ವಿಕೆಟ್‌ಗೆ 57 ರನ್‌ಗಳ ಜೊತೆಯಾಟವಾಡಿ ನಿರೀಕ್ಷೆ ಮೂಡಿಸಿದರು. ಜೆಮಿಮಾ ಔಟಾದ ನಂತರ ಸ್ಮೃತಿ ಮತ್ತು ನಾಯಕಿ ಹರ್ಮನ್‌ಪ್ರೀತ್ ಕೌರ್ ಕೂಡ ಉತ್ತಮ ಜೊತೆಯಾಟ ಆಡಿದರು. ಸ್ಮೃತಿ 46 ಎಸೆತಗಳಲ್ಲಿ ಎಂಟು ಬೌಂಡರಿಗಳೊಂದಿಗೆ ಅರ್ಧಶತಕ ಪೂರೈಸಿದರು. ಆದರೆ 52 ರನ್ ಗಳಿಸಿದ್ದಾಗ ಔಟಾದರು.

ಕೊನೆಯ ಹಂತದಲ್ಲಿ ವಿಕೆಟ್ ಕೀಪರ್ ಬ್ಯಾಟರ್ ರಿಚಾ ಘೋಷ್ ಬೌಂಡರಿ ಮತ್ತು ಸಿಕ್ಸರ್ ಸಿಡಿಸಿ ಗೆಲುವಿಗೆ ಪ್ರಯತ್ನ ನಡೆಸಿದರು. ಆದರೆ ಕರಾರುವಾಕ್ ದಾಳಿಯ ಮೂಲಕ ಆಸ್ಟ್ರೇಲಿಯಾ ಮೇಲುಗೈ ಸಾಧಿಸಿತು.

ಬೇಥ್ ಮೂನಿ-ಮೆಗ್ರಾ ಮಿಂಚಿನ ಬ್ಯಾಟಿಂಗ್: ಟಾಸ್ ಗೆದ್ದ ಭಾರತ ಆತಿಥೇಯರನ್ನು ಬ್ಯಾಟಿಂಗ್‌ಗೆ ಆಹ್ವಾನಿಸಿತ್ತು. ಕಳೆದ ಪಂದ್ಯದಲ್ಲಿ ಮಿಂಚಿದ್ದ ಆರಂಭಿಕ ಬ್ಯಾಟರ್ ಬೇಥ್ ಮೂನಿ ಈ ಪಂದ್ಯದಲ್ಲೂ ಅಮೋಘ ಬ್ಯಾಟಿಂಗ್ ಮಾಡಿದರು. ಹಿಂದಿನ ಪಂದ್ಯದಲ್ಲಿ ತಂಡಕ್ಕೆ ಗೆಲುವಿನ ಕಾಣಿಕೆ ನೀಡಿದ್ದ ತಹಲಿಯಾ ಮೆಗ್ರಾ ಅವರು ಕೊನೆಯ ಓವರ್‌ಗಳಲ್ಲಿ ಸ್ಫೋಟಕ ಬ್ಯಾಟಿಂಗ್ ಮಾಡಿದರು. ಒಂದು ಸಿಕ್ಸರ್ ಮತ್ತು ಆರು ಬೌಂಡರಿ ಸಿಡಿಸಿದ ಅವರು 31 ಎಸೆತಗಳಲ್ಲಿ 44 ರನ್ ಗಳಿಸಿ ಸವಾಲಿನ ಮೊತ್ತ ಪೇರಿಸಲು ನೆರವಾದರು.

ಐದು ರನ್ ಗಳಿಸುವಷ್ಟರಲ್ಲಿ ತಂಡ ಮೊದಲ ವಿಕೆಟ್ ಕಳೆದುಕೊಂಡಿತ್ತು. ಮೂನಿ ಮತ್ತು ನಾಯಕಿ ಮೆಗ್ ಲ್ಯಾನಿಂಗ್ ಎರಡನೇ ವಿಕೆಟ್‌ಗೆ 39 ರನ್ ಸೇರಿಸಿದರು. ಲ್ಯಾನಿಂಗ್, ಗಾರ್ಡನರ್ ಮತ್ತು ಎಲಿಸ್ ಪೆರಿ ಔಟಾದ ನಂತರ ಮೂನಿ–ತಹಿಲಾ ಜೊತೆಗೂಡಿ ಭರ್ಜರಿ ಆಟವಾಡಿದರು. ಕೊನೆಯ 19 ಎಸೆತಗಳಲ್ಲಿ ತಂಡ 40 ರನ್ ಗಳಿಸಿ ಭಾರತ ಬೌಲರ್‌ಗಳ ಬೆವರಿಳಿಸಿತು. ಮುರಿಯದ ಆರನೇ ವಿಕೆಟ್‌ಗೆ ಮೆಗ್ರಾ ಮತ್ತು ಜಾರ್ಜಿಯಾ ವಾರೆಹಂ 32 ರನ್‌ಗಳನ್ನು ಸೇರಿಸಿದರು.

ಸ್ಕೋರ್ ಕಾರ್ಡ್

ಆಸ್ಟ್ರೇಲಿಯಾ 5ಕ್ಕೆ 149 (20 ಓವರ್)

ಅಲಿಸಾ ಸಿ ರಿಚಾ ಬಿ ರೇಣುಕಾ 4 (8 ಎ, 4x1), ಮೂನಿ ಸಿ ಹರ್ಮನ್‌ಪ್ರೀತ್ ಬಿ ರಾಜೇಶ್ವರಿ 61 (43 ಎ, 4x10), ಲ್ಯಾನಿಂಗ್ ಹಿಟ್ ವಿಕೆಟ್ ಬಿ ರಾಜೇಶ್ವರಿ 14 (14 ಎ, 4x2), ಗಾರ್ಡನರ್ ಸಿ ರಿಚಾ ಬಿ ಪೂಜಾ 1 (5 ಎ), ಎಲಿಸ್ ಸಿ ಪೂಜಾ ಬಿ ದೀಪ್ತಿ 8 (11 ಎ), ತಹಲಿಯಾ ಔಟಾಗದೆ 44 (31ಎ, 4x6, 6x1), ಜಾರ್ಜಿಯಾ ಔಟಾಗದೆ 13 (8 ಎ, 4x1)

ಇತರೆ : (ಲೆಗ್‌ಬೈ 4) 4

ವಿಕೆಟ್ ಪತನ: 1-5 (ಅಲಿಸಾ ಹೀಲಿ, 1.5), 2-44 (ಮೆಗ್ ಲ್ಯಾನಿಂಗ್, 6.6), 3-58 (ಆ್ಯಶ್ಲಿ ಗಾರ್ಡನರ್, 8.3), 4-73 (ಎಲಿಸ್ ಪೆರಿ, 11.1), 5-117 (ಬೇಥ್ ಮೂನಿ, 17.2)

ಬೌಲಿಂಗ್: ಶಿಖಾ ಪಾಂಡೆ 3–1–23–0, ರೇಣುಕಾ ಸಿಂಗ್ 4–0–23–1, ರಾಜೇಶ್ವರಿ ಗಾಯಕವಾಡ್ 4–0–37–2, ಪೂಜಾ ವಸ್ತ್ರಕಾರ್ 4–0–24–1, ಹರ್ಮನ್‌ಪ್ರೀತ್ ಕೌರ್ 1–0–14–0, ದೀಪ್ತಿ ಶರ್ಮಾ 4–0–24–1

ಭಾರತ 6ಕ್ಕೆ 135 (20 ಓವರ್)

ಸ್ಮೃತಿ ಸಿ ಲ್ಯಾನಿಂಗ್ ಬಿ ಕ್ಯಾರಿ 52 (49 ಎ, 4x8), ಶಫಾಲಿ ಸಿ ವಾಮ್ಲಿಕ್ ಬಿ ಗಾರ್ಡನರ್ 1 (3 ಎ), ಜೆಮಿಮಾ ವಾಮ್ಲಿಕ್ ಬಿ ವಾರೆಹಂ 23 (26 ಎ, 4x1), ಹರ್ಮನ್‌ಪ್ರೀತ್ ಸಿ ಲ್ಯಾನಿಂಗ್ ಬಿ ಸೂಥರ್ಲೆಂಡ್ 13 (16 ಎ, 4x1), ಪೂಜಾ ಬಿ ಕ್ಯಾರಿ 5 (3 ಎ, 4x1), ರಿಚಾ ಔಟಾಗದೆ 23 (11 ಎ, 4x2, 6x2), ಹರ್ಲೀನ್ ರನೌಟ್ (ವಾರೆಹಂ/ಹೀಲಿ) 2 (4 ಎ), ದೀಪ್ತಿ ಔಟಾಗದೆ 9 (8 ಎ, 4x1)

ಇತರೆ : (ಲೆಗ್ ಬೈ 3, ವೈಡ್ 4) 7

ವಿಕೆಟ್ ಪತನ: 1-3 (ಶಫಾಲಿ ವರ್ಮಾ, 1.2), 2-60 (ಜೆಮಿಮಾ ರಾಡ್ರಿಗಸ್, 10.4), 3-92 (ಸ್ಮೃತಿ ಮಂದಾನ, 14.5), 4-95 (ಹರ್ಮನ್‌ಪ್ರೀತ್ ಸಿಂಗ್, 15.5), 5-99 (ಪೂಜಾ ವಸ್ತ್ರಕಾರ್, 16.2), 6-102 (ಹರ್ಲೀನ್ ಡಿಯೋಲ್, 17.1)

ಬೌಲಿಂಗ್: ತಾಯ್ಲಾ ವಾಮ್ಲಿಕ್ 3–0–18–0, ಆ್ಯಶ್ಲಿ ಗಾರ್ಡನರ್ 4–0–22–1, ಸೋಫಿ ಮೋಲಿನೆಕ್ಸ್ 4–0–22–0, ಜಾರ್ಜಿಯಾ ವಾರೆಹಂ 2–0–15–1, ನಿಕೋಲಾ ಕ್ಯಾರಿ 4–0–42–2, ಅನಾಬೆಲ್ ಸೂಥರ್ಲೆಂಡ್ 3–0–13–1

ಫಲಿತಾಂಶ: ಆಸ್ಟ್ರೇಲಿಯಾಗೆ 14 ರನ್‌ಗಳ ಗೆಲುವು; 2–0ಯಿಂದ ಸರಣಿ.
ಪಂದ್ಯ ಮತ್ತು ಸರಣಿಯ ಶ್ರೇಷ್ಠ ಆಟಗಾರ್ತಿ: ತಹಲಿಯಾ ಮೆಗ್ರಾ

ವಿಶ್ವದ ನಂ. 1
100% ಮೂಲಿಕೆ
ಬಿಳಿ ಮಚ್ಚೆ

ಹೊಸದಾಗಿ ಕಂಡುಹಿಡಿದ ಔಷಧಿಗಳನ್ನು ಬಳಸಿದ ನಂತರ ಬಿಳಿ ಮಚ್ಚೆಗಳು 5-6 ಗಂಟೆಗಳಲ್ಲಿ ದೇಹದ ನೈಸರ್ಗಿಕ ಬಣ್ಣಕ್ಕೆ ತಿರುಗುತ್ತವೆ. ಮತ್ತು ಸಂಪೂರ್ಣವಾಗಿ ಗುಣಪಡಿಸಲು ಪರಿಣಾಮಕಾರಿ ಚಿಕಿತ್ಸೆಗಾಗಿ ಕರೆಮಾಡಿ.
09708473255, 09835860484

Honda Motorcycle and Scooter India Pvt. Ltd., Registered Office: Commercial Complex II, Sector - 49-50, Golf Course Extension Road, Gurugram - 122018 (Haryana), India; **Website:** www.honda2wheelersindia.com; **Customer Care:** customercare@honda2wheelersindia.com

*ಹಣಕಾಸು ಯೋಜನೆ ಆಫರ್‌ಗಳು ಆಯ್ದ ಹಣಕಾಸು ಸಹಭಾಗಿಗಳಿಂದ ಆಯ್ದ ಮಾಡೆಲ್‌ಗಳ ಮೇಲೆ ಅವರ ಸ್ವಂತ ವಿವೇಚನೆಗೆ ತಕ್ಕಂತೆ ಗ್ರಾಹಕರ ಆಯ್ದ ಪ್ರೊಫೈಲ್‌ನಲ್ಲಿ ಲಭ್ಯವಿದೆ ಮತ್ತು ಹಣಕಾಸು ಸಂಸ್ಥೆಯ ನಿಯಮವನ್ನು ಅನುಸರಿಸಿದೆ. ಎರಡು ಆಫರ್‌ಗಳನ್ನು ಜೊತೆಯಾಗಿ ಸೇರಿಸಿ ಪಡೆಯುವಂತಿಲ್ಲ. SBI ಕ್ಯಾಶ್‌ಬ್ಯಾಕ್ ಕೇವಲ ಆಯ್ದ SBI ಕ್ರೆಡಿಟ್ ಕಾರ್ಡ್‌ಗಳ ಮೂಲಕ EMI ವ್ಯವಹಾರಗಳಿಗೆ, ಆಫರ್ ಇರುವ ಅವಧಿಯಲ್ಲಿ ಪ್ರತೀ ತಿಂಗಳು ಒಂದು ಬಾರಿ ಅನ್ವಯಿಸುತ್ತದೆ. ಯೋಜನೆ ಮತ್ತು ಆಫರ್‌ಗಳು ಆಯ್ದ ಡೀಲರ್‌ಶಿಪ್‌ನಲ್ಲಿ ಮಾತ್ರವೇ ಲಭ್ಯವಿರಲಿದೆ ಮತ್ತು ಅದನ್ನು ಯಾವುದೂ ಪೂರ್ವ ಮಾಹಿತಿ ನೀಡದೆ ಯಾವ ಸಮಯದಲ್ಲಾದರು ಹಿಂಪಡೆಯಬಹುದು. ##₹5 ಲಕ್ಷ ಖಾಸಗಿ ಅಪಘಾತ ವಿಮಾ ರಕ್ಷಣೆಯು ಹೋಂಡಾ ಜಾಯ್ ಕ್ಲಬ್ ಲಾಯಲ್ಟಿ ಸದಸ್ಯತ್ವ ಖರೀದಿಯಲ್ಲಿ ಮಾತ್ರವೇ ಲಭ್ಯವಿರುತ್ತದೆ. ಎಲ್ಲಾ ಕ್ಲೇಮ್‌ಗಳು ವಿಮಾ ಸಂಸ್ಥೆಯ ನಿಯಮ ಮತ್ತು ಮಾರ್ಗಸೂಚಿಗಳಿಗೆ ಅನುಸಾರವಾಗಿ ಇತ್ಯರ್ಥವಾಗುತ್ತವೆ. ಹೆಚ್ಚಿನ ವಿವರಗಳಿಗೆ ದಯವಿಟ್ಟು HJC ಸಹಾಯವಾಣಿಗೆ 18005322555 ಕರೆಮಾಡಿ. *ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. ಚಿತ್ರದಲ್ಲಿ ತೋರಿಸಲಾಗಿರುವ ಉತ್ಪನ್ನವು ಮಾರುಕಟ್ಟೆಯಲ್ಲಿ ಲಭ್ಯವಿರುವ ವಾಸ್ತವಿಕ ಉತ್ಪನ್ನಕ್ಕಿಂತ ಭಿನ್ನವಾಗಿರಬಹುದು. ಉತ್ಪನ್ನದಲ್ಲಿ ತೋರಿಸಲಾಗಿರುವ ಬಿಡಿಭಾಗಗಳು ಸ್ಟಾಂಡರ್ಡ್ ಸಲಕರಣೆ ಉತ್ಪನ್ನದ ಭಾಗವಾಗಿರದೇ ಇರಬಹುದು.